ಸಂಪುಟ: 10 **ಸಂಚಿಕೆ:** 200 **ಪುಟಗಳು:** 12 **ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಿಂಚಿದ ಪ್ರಸಿದ್ಧ್ ಕೃಷ್ಣ, ಸಿರಾಜ್

ಕನ್ನಡಿಗ ಪ್ರಸಿದ್ಧ್ ಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ತಲಾ 4 ವಿಕೆಟ್ ಪಡೆಯುವ ಮೂಲಕ ಇಂಗ್ಲೆಂಡ್ ತಂಡವು ಭಾರತದ ವಿರುದ್ಧ ನಡೆಯುತ್ತಿರುವ ಅಂತಿಮ ಕ್ರಿಕೆಟ್ ಟೆಸ್ಟ್‌ನಲ್ಲಿ ಶುಕ್ರವಾರ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 247 ಆಲೌಟ್ ಆಗಿ, 23 ರನ್‌ಗಳ ಅಲ್ಪ ಮುನ್ನಡೆ ಗಳಿಸಿದೆ. ಭಾರತ 2ನೇ ಇನ್ನಿಂಗ್ಸ್‌ನಲ್ಲಿ 75 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದೆ.

ಸೊಂಪಾದ ಪುಟಗಳು

ಕೇಸರಿ ಭಯೋತ್ಪಾದನೆಯ ಪಿತೂರಿ ಬಯಲಾಯಿತು

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಸರ್ವರೋಗಕ್ಕೂ ಇವೇ ಕಾರಣ: ಆಗಬೇಕು ಇವುಗಳ ನಿಯಂತ್ರಣ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಈ ಜಗತ್ತಿನಲ್ಲಿ ಎಲ್ಲದಕ್ಕೂ ಬೆಲೆ ಕಟ್ಟುತ್ತಾರೆ. ಆದರೆ ನೆಮ್ಮದಿ, ನಿದ್ದೆ, ಸಂತೋಷ ಮತ್ತು ಶಾಂತಿಗೆ ಬೆಲೆ ಕಟ್ಟಲು ಆಗುವುದಿಲ್ಲ. ಮನೆಗೆ ಬಂದ ತಕ್ಷಣ ನಿಮಗೆ ನಿಶ್ಚಿಂತೆಯಿಂದ ನಿದ್ದೆ ಬಂದರೆ, ಮನಸ್ಸಿಗೆ ಶಾಂತಿ ಲಭಿಸಿದರೆ ಅದಕ್ಕೆ ಬೆಲೆ ಕಟ್ಟುವುದು ಸಾಧ್ಯವಿಲ್ಲ. ಇವನ್ನು ಸಂಪಾದಿಸಿಕೊಳ್ಳುವುದು ದೊಡ್ಡ ಸಾಧನೆ.

ವಕ್ರತುಂಡೋಕ್ತಿ



ಕೆಲವರಿಗೆ ಮೂರ್ಖರ ಜತೆ ಮಾತಾಡಬೇಕು ಅಂತ ಆಗಾಗ ಅನಿಸುತ್ತದೆ. ಆಗ ಅವರು ತಮ್ಮ ಜತೆಗೆ ಮಾತಾಡಿಕೊಳ್ಳುತ್ತಾರೆ.

ವಾಣಿಜ್ಯ ಗ್ಯಾಸ್ ಸಿಲಿಂಡರ್ ಅಗ್ಗ

ದೆಹಲಿ: ತೈಲ ಸಂಸ್ಥೆಗಳು 19 ಕೆಜಿ ತೂಕದ ಎಲ್‌ಪಿಜಿ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ 33.50ರೂ.ನಷ್ಟು ಕಡಿತ ಮಾಡಿವೆ. 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಯನ್ನು ಪ್ರತಿ ಸಿಲಿಂಡರ್‌ಗೆ 33.50 ರೂ.ಗಳಷ್ಟು ಕಡಿಮೆ ಮಾಡಲಾಗಿದೆ. ಕೋಲ್ಕತ್ತಾ ಮತ್ತು ಚೆನ್ನೈನಲ್ಲಿ ಅತಿ ಹೆಚ್ಚು ಕಡಿತ ಮಾಡಲಾಗಿದೆ. ಆದರೆ 14.2 ಕೆಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ, ಬೆಂಗಳೂರಿನಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ 1,738 ರೂ. ಇದೆ.

ಉಪನಗರ ರೈಲ್ವೆ ಎಲ್&ಟಿ ಔಟ್

ಬೆಂಗಳೂರು: ಬೆಂಗಳೂರು ಉಪನಗರ ರೈಲ್ವೆ ಯೋಜನೆಯ ಕಾರಿಡಾರ್ 2 ಮತ್ತು 4ರ ಒಪ್ಪಂದವನ್ನು ಎಲ್‌ಟಿ ರದ್ದುಗೊಳಿಸಿದ್ದು, ಯೋಜನೆಯನ್ನು ಕಾರ್ಯಗತಗೊಳಿಸಲು ರೈಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಕಂಪನಿ (ಕರ್ನಾಟಕ) ಲಿಮಿಟೆಡ್ ಯಾವುದೇ ತಕರಾರು ಇಲ್ಲದ ಭೂಮಿಯನ್ನು ಒದಗಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದೆ. ಎಲ್ ಆ್ಯಂಡ್ ಟಿ ಒಪ್ಪಂದವನ್ನು ರದ್ದುಗೊಳಿಸಿರುವುದರಿಂದ ಈಗಾಗಲೇ ವಿಳಂಬವಾಗಿರುವ ಉಪನಗರ ರೈಲ್ವೆ ಯೋಜನೆ ಮತ್ತಷ್ಟು ವಿಳಂಬವಾಗಲಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಒಂದು ಟನ್‌ಗೆ 30 ಸಾವಿರ ಕೊಟ್ಟು ಮನುಷ್ಯರ ಮಲ, ಮೂತ್ರ ಖರೀದಿಸುತ್ತಿರುವ ಟೆಕ್ ಕಂಪನಿ

ಸುದ್ದಿ

ಅತ್ಯಾಚಾರ ಪ್ರಕರಣ ಸಾಬೀತು, ಕಟಕಟೆಯಲ್ಲೇ ಅತ್ತ ಮಾಜಿ ಸಂಸದ

ಪ್ರಜ್ವಲ್ ದೋಷಿ, ಇಂದು ತೀರ್ಪು ಪ್ರಕಟ

ಇನ್ನೂ ಇದೆ 3 ಪ್ರಕರಣ

ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರವೆಸಗಿ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸಿಕೊಂಡಿರುವ ಆರೋಪ ಸಂಬಂಧ ಮೂರು ಪ್ರತ್ಯೇಕ ಪ್ರಕರಣ ಇನ್ನೂ ವಿಚಾರಣಾ ಹಂತದಲ್ಲಿ ಇವೆ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಕಟಿಸಿದ್ದು, ಶಿಕ್ಷೆಯ ಪ್ರಮಾಣದ ಆದೇಶ ಶನಿವಾರ ಹೊರಬೀಳಲಿದೆ. ಪ್ರಜ್ವಲ್ ವಿರುದ್ಧ ದಾಖಲಾಗಿರುವ ನಾಲ್ಕು ಲೈಂಗಿಕ ದೌರ್ಜನ್ಯ ಪ್ರಕರಣಗಳ ಪೈಕಿ ಒಂದರ ತೀರ್ಪನ್ನು ಮಾತ್ರ ನ್ಯಾಯಾಲಯ ಪ್ರಕಟಿಸಿದೆ. ಮನೆ ಕೆಲಸದಾಕೆಯ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ದೋಷಿ ಎಂದು ತೀರ್ಪು ನೀಡಲಾಗಿದೆ.

ಪ್ರಕರಣದ ವಾದ–ಪ್ರತಿವಾದ ಪೂರ್ಣಗೊಳಿಸಿ ತೀರ್ಪು ಕಾದಿರಿಸಿದ್ದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಶುಕ್ರವಾರ ತೀರ್ಪು ಪ್ರಕಟಿಸಿ, ಶಿಕ್ಷೆಯ ಪ್ರಮಾಣವನ್ನು ಶನಿವಾರ ಪ್ರಕಟಿಸುವುದಾಗಿ ತಿಳಿಸಿದರು. ಈ ಪ್ರಕರಣದಲ್ಲಿ ಜೀವಿತಾವಧಿವರೆಗೂ ಶಿಕ್ಷೆ ವಿಧಿಸುವ ವಿವೇಚನಾಧಿಕಾರವನ್ನು ನ್ಯಾಯಾಲಯ ಹೊಂದಿದೆ. ಪ್ರಕರಣದ ತೀರ್ಪು ಹೊರಬೀಳುತ್ತಿದ್ದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಕಟಕಟೆಯಲ್ಲೇ ಕಣ್ಣೀರಿಟ್ಟರು. ಬಳಿಕ ಪೊಲೀಸರು ಅವರನ್ನು ನ್ಯಾಯಾಲಯದ ಸಭಾಂಗಣ ದಿಂದ ಹೊರಗೆ ಕರೆದೊಯ್ದರು. ಪ್ರಕರಣದ ವಿಚಾ ರಣೆ ನಡೆಸಿದ್ದ ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರು, ಎರಡೂ ಕಡೆಯ ವಕೀಲ ರಿಂದ ಕೆಲವು ಸ್ಪಷ್ಟೀಕರಣ ಕೇಳಿದ್ದರು. ಗೂಗಲ್ ಮ್ಯಾಪ್ ಅನ್ನು ಸಾಕ್ಷಿಯಾಗಿ ಪರಿಗಣಿಸಬಹುದೇ?, ಸ್ಯಾಮ್‌ಸಂಗ್ ಕಂಪನಿಯ ಮೊಬೈಲ್ ಸೀಜ್‌ಮಾಡಿರುವ ಬಗ್ಗೆ ತಾಂತ್ರಿಕ ಮಾಹಿತಿ ಕೇಳಿ, ಸ್ಪಷ್ಟೀ ಕರಣ ಅಗತ್ಯವಿರುವುದರಿಂದ ತೀರ್ಪು ಪ್ರಕಟಿಸಲು ಸಾಧ್ಯವಿಲ್ಲ ಎಂದು ಈಚೆಗೆ ತೀರ್ಪು ಮುಂದೂಡಿದ್ದರು.

ಮುಂದಿನ ನಡೆ ಏನು?

ಪ್ರಜ್ವಲ್ ರೇವಣ್ಣ ಅವರ ಮುಂದಿನ ನಡೆ ಶನಿವಾರ ಕೋರ್ಟ್ ನೀಡುವ ಶಿಕ್ಷೆ ಪ್ರಮಾಣದ ಮೇಲೆ ನಿಂತಿದೆ. ಶಿಕ್ಷೆ ಪ್ರಮಾಣ ಘೋಷಣೆಯಾದ ಬಳಿಕ ಪ್ರಜ್ವಲ್ ರೇವಣ್ಣ ಪರ ವಕೀಲರು ಹೈಕೋರ್ಟ್ ಮೊರೆ ಹೋಗುವ ಅವಕಾಶಗಳು ಇವೆ. ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನೀಡಿರುವ ಶಿಕ್ಷೆಗೆ ತಡೆ ಅಥವಾ ರದ್ದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು. ಹಾಗೆಯೇ ಶಿಕ್ಷೆಯನ್ನು ಅಮಾನತಿನಲ್ಲಿಟ್ಟು ಜಾಮೀನು ನೀಡುವಂತೆ ಹೈಕೋರ್ಟ್ ಮೊರೆ ಹೋಗಬಹುದು.

ದಾಖಲೆ ಬರೆದ ತೀರ್ಪು

ಅತ್ಯಾಚಾರ ಪ್ರಕರಣದ ವಿಚಾರಣೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಕೇವಲ ಏಳು ತಿಂಗಳಲ್ಲೇ ತೀರ್ಪು ಪ್ರಕಟಿಸಿರುವುದು ದಾಖಲೆಯಾಗಿದೆ. ಈವರೆಗೂ ಈ ರೀತಿ ಪ್ರಕರಣದಲ್ಲಿ ಇಷ್ಟು ಬೇಗ ವಿಚಾರಣೆ ನಡೆಸಿ ತೀರ್ಪು ನೀಡಿದ ಉದಾಹರಣೆಗಳಿಲ್ಲ. ಹೀಗಾಗಿ ನ್ಯಾಯಾಧೀಶ ಗಜಾನನ ಭಟ್ ಅವರು ಈ ದಾಖಲೆ ಮಾಡಿದ್ದಾರೆ. ಅದರಲ್ಲೂ ಈ ರೀತಿಯ ಪ್ರಕರಣದಲ್ಲಿ ವಾದ ಪ್ರತಿವಾದ, ಆ ಅರ್ಜಿ , ಈ ಅರ್ಜಿ ಹಾಕಿಕೊಂಡು ವಿಚಾರಣೆ ಮುಂದೂಡಿಕೆಯಾಗುತ್ತಲೇ ಇರುತ್ತವೆ. → 4

ಎಫ್ 35 ಖರೀದಿಗೆ ನಕಾರ, ಆ.7ರಿಂದ ಅಮೆರಿಕ ಸುಂಕ ಜಾರಿ

ಟ್ರಂಪ್‌ಗೆ ಭಾರತ ತಿರುಗೇಟು

ದೆಹಲಿ: ಡೊನಾಲ್ಡ್ ಟ್ರಂಪ್ ತೆರಿಗೆ ಸಮರ ಸಾರಿದ ಬೆನ್ನಲ್ಲೇ ಅಮೆರಿಕದಿಂದ ಎಫ್–35 ಯುದ್ಧ ವಿಮಾನವನ್ನು ಖರೀದಿಸದೇ ಇರಲು ಭಾರತ ನಿರ್ಧರಿಸಿದೆ. ಮೋದಿ ಅವರ ಅಮೆರಿಕ ಪ್ರವಾಸದ ಸಮಯದಲ್ಲಿ ಭಾರತಕ್ಕೆ ಎಫ್–35 ವಿಮಾನ ನೀಡಲು ಸಿದ್ಧ ಎಂದು ಅಧ್ಯಕ್ಷ ಟ್ರಂಪ್ ಪ್ರಕಟಿಸಿದ್ದರು. ಬಳಿಕ ಈ ಸಂಬಂಧ ಖರೀದಿಗಾಗಿ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆದಿತ್ತು.

ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ ಟ್ರಂಪ್ ಶೇ.25 ತೆರಿಗೆ ವಿಧಿಸಿದ ಬೆನ್ನಲ್ಲೇ ಭಾರತ ಎಫ್–35 ಖರೀದಿಸದೇ ಇರಲು ತೀರ್ಮಾನಿಸಿದೆ ಎಂದು ಭಾರತದ ಖಚಿತ ಮೂಲಗಳನ್ನು ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ. ಈ ಹಿಂದೆ ಎಚ್‌ಎಎಲ್ ತೇಜಸ್ ವಿಮಾನಕ್ಕೆ ಎಂಜಿನ್ ನೀಡುವುದಾಗಿ ಅಮೆರಿಕದ ಹೇಳಿತ್ತು. ಆದರೆ ಸರಿಯಾದ ಸಮಯಕ್ಕೆ ಎಂಜಿನ್ ವಿತರಣೆ ಆಗಿದ ಕಾರಣ ತೇಜಸ್ ವಿಮಾನ ಉತ್ಪಾದನೆ ತಡವಾಗುತ್ತಿದೆ.

ಆ.7ರಿಂದ ಸುಂಕ ಜಾರಿ: ಟ್ರಂಪ್ ಘೋಷಿಸಿರುವ ಸುಂಕ ಆಗಸ್ಟ್ 7ರಿಂದ ಜಾರಿಗೆ ಬರಲಿದ್ದು ಭಾರತ ಸೇರಿದಂತೆ 70 ದೇಶಗಳು ಹಾಗೂ ಐರೋಪ್ಯ ಒಕ್ಕೂಟದ 27 ಸದಸ್ಯ ದೇಶಗಳಿಗೆ ಇದು ಅನ್ವಯವಾಗಲಿದೆ. ಈ ಆದೇಶದಲ್ಲಿ ಹೆಸರಿಸದ ದೇಶಗಳು ನಿಗದಿತ ಶೇಕಡ 10ರಷ್ಟು ಸುಂಕ ಎದುರಿಸಲಿವೆ ಎಂದು ಅಮೆರಿಕ ತಿಳಿಸಿದೆ. ಆಗಸ್ಟ್ ಏಳರ ಬಳಿಕ ಅಮೆರಿಕನ್ನರು ಖರೀದಿಸುವ ಭಾರತೀಯ ಉತ್ಪನ್ನಗಳು ದುಬಾರಿಯಾಗಲಿವೆ. ಈ ದಿನಾಂಕಕ್ಕೆ ಮುನ್ನ ಹಡಗುಗಳಿಗೆ ಲೋಡ್ ಮಾಡ ಲಾದ ಮತ್ತು ಅಕ್ಟೋಬರ್ 5 ರೊಳಗೆ ಅಮೆರಿಕವನ್ನು ತಲುಪುವ ಸರಕುಗಳು ಹೊಸ ದರಗಳಿಗೆ ಒಳಪಡುವು ದಿಲ್ಲ ಎಂದು ತಿಳಿಸಲಾಗಿದೆ. ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ತೈಲವನ್ನು ತರಿಸಿಕೊಳ್ಳುತ್ತಿರುವುದಕ್ಕೆ ದಂಡ ವಿಧಿಸುವುದಾಗಿ ಟ್ರಂಪ್ ಘೋಷಿಸಿದ್ದರೂ, ಅದರ ಮೊತ್ತವನ್ನು ಇನ್ನೂ ಘೋಷಿಸಿಲ್ಲ.

ಇದೇ ವೇಳೆ ಕೆನಡಾ ಮೇಲಿನ ಸುಂಕವನ್ನು ಶೇ. 25ರಿಂದ 35ಕ್ಕೆ ಹೆಚ್ಚಿಸುವುದಾಗಿ ಶ್ವೇತಭವನದ ಪ್ರಕಟಣೆ ತಿಳಿಸಿದೆ. ಈ ಆದೇಶದಡಿ ಪಾಕಿಸ್ತಾನದ ಮೇಲೆ ಶೇ.19, ಬಾಂಗ್ಲಾ ಮತ್ತು ವಿಯೆಟ್ನಾಂ ಮೇಲೆ ಶೇ.20, ಬ್ರೆಜಿಲ್ ಶೇ. 10, ಜಪಾನ್ ಶೇ.15, ಲಾವೋಸ್ ಮತ್ತು ಮ್ಯಾನ್ಮಾರ್ ತಲಾ ಶೇ.40, ಶ್ರೀಲಂಕಾ ಶೇ.20 ಮತ್ತು ಬ್ರಿಟನ್ ಮೇಲೆ ಶೇ. 10, ದಕ್ಷಿಣ ಆಫ್ರಿಕಾದ ಮೇಲೆ ಶೇ.30 ಮತ್ತು ಸ್ವಿಟ್ಜರ್ಲೆಂಡ್‌ನ ಮೇಲೆ ಶೇ.39 ರಷ್ಟು ಅತ್ಯಧಿಕ ಸುಂಕ ವಿಧಿಸಲಾಗಿದೆ. ಸಿರಿಯಾ ಮತ್ತು ಮ್ಯಾನ್ಮಾರ್ ಮೇಲೆ ಮೇಲೆ ಅತಿ ಹೆಚ್ಚು ಶೇ.40ಕ್ಕಿಂತ ಹೆಚ್ಚು ಸುಂಕ ಹೇರಲಾಗಿದೆ.

6ನೇ ಸ್ಪಾಟ್‌ನಲ್ಲಿ ಸಿಕ್ಕ ಶವದ ಅವಶೇಷ ಫೊರೆನ್ಸಿಕ್ ತನಿಖೆಗೆ

ಧರ್ಮಸ್ಥಳ: ಮತ್ತಷ್ಟು ಉತ್ಖನನ

ಬೆಂಗಳೂರು: ಧರ್ಮಸ್ಥಳದ ನೇತ್ರಾವತಿ ಸ್ನಾನ ಘಟ್ಟದ ಬಳಿಯ ಕಾಡುಪ್ರದೇಶದಲ್ಲಿ ಅನಾಮಿಕ ಗುರುತಿಸಿದ ಪಾಯಿಂಟ್ ನಂಬರ್ 6ರಲ್ಲಿ ಪತ್ತೆಯಾಗಿರುವ ಅಸ್ಥಿಪಂಜರದ ಅವಶೇಷಗಳನ್ನು ವಿಧಿ ವಿಜ್ಞಾನ ಪರಿಣತರು ಪರಿಶೀಲಿಸುತ್ತಿದ್ದು, ಗುರುತು ಪತ್ತೆ ಪ್ರಯತ್ನ ಮುಂದುವರಿದಿದೆ. ಇದೇ ವೇಳೆ ಶುಕ್ರವಾರ ಏಳು ಮತ್ತು ಎಂಟನೇ ಸ್ಥಳದಲ್ಲಿ ಶೋಧ ಕಾರ್ಯ ನಡೆದಿದ್ದು ಇಲ್ಲಿ ಯಾವುದೇ ಕಳೇಬರಗಳ ಇರುವು ಪತ್ತೆಯಾಗಿಲ್ಲ.

ವಿಶೇಷ ತನಿಖಾ ತಂಡವು ಆರನೇ ಸಮಾಧಿ ಸ್ಥಳದಲ್ಲಿ ಸಿಕ್ಕ ಅಸ್ಥಿಪಂಜರದ ಅವಶೇಷಗಳನ್ನು ಫೊರೆನ್ಸಿಕ್ ಪರೀಕ್ಷೆಗೆ ಕಳುಹಿಸಿದೆ. ಇದನ್ನು ಡಿಎನ್‌ಎ ಪ್ರೊಫೈಲಿಂಗ್‌ಗಾಗಿ ಫೊರೆನ್ಸಿಕ್ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗು ತ್ತದೆ. ದವಡೆ ಹಲ್ಲುಗಳು ಮತ್ತು ತೊಡೆಯ ಮೂಳೆ ವ್ಯಕ್ತಿಯ ಗುರುತನ್ನು ಖಚಿತಪಡಿಸಿಕೊಳ್ಳಲು ನಿರ್ಣಾಯಕವಾಗಿದೆ. ನಂತರ ಮಾದರಿಯನ್ನು ಸತ್ತವರ ರಕ್ತ ಸಂಬಂಧಿಯ ಡಿಎನ್‌ಎ ಜೊತೆ ಹೋಲಿಸಲಾಗುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.

ದಾಖಲೆಗಳ ತಲಾಶ್: ಇದೇ ವೇಳೆ ಎಸ್‌ಐಟಿ ಬೆಳ್ತಂಗಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 1995ರಿಂದೀಚೆಗೆ ಸಂಭವಿಸಿದ ಎಲ್ಲ ಅನುಮಾನಾಸ್ಪದ ಸಾವುಗಳು ಮತ್ತು ಯುಡಿಆರ್ (ಅನಾಮಿಕ ಮೃತದೇಹ) ಪ್ರಕರಣಗಳ ದಾಖಲೆಗಳನ್ನು ಕೆದಕಲು ಆರಂಭಿಸಿದೆ. ಧರ್ಮಸ್ಥಳ ಔಟ್‌ಪೋಸ್ಟ್‌ನಲ್ಲಿ ಕೆಲಸ ಮಾಡಿದ್ದ ನಿವೃತ್ತ ಪೊಲೀಸ್ ಅಧಿಕಾರಿಗಳ ಪಟ್ಟಿಯನ್ನೂ ಎಸ್‌ಐಟಿ ಪಡೆದುಕೊಂಡಿದೆ.

ಸೆ.9 ರಂದು ಉಪರಾಷ್ಟ್ರಪತಿ ಚುನಾವಣೆ

ದೆಹಲಿ: ದೇಶದ ಎರಡನೇ ಅತ್ಯುನ್ನತ ನಾಗರಿಕ ಹುದ್ದೆಯಾಗಿರುವ ಉಪರಾಷ್ಟ್ರಪತಿ ಆಯ್ಕೆಗೆ ಸೆ.9ರಂದು ಚುನಾವಣೆ ನಡೆಯಲಿದೆ. ಜಗದೀಪ್ ಧನ್‌ಕರ್ ಅವರ ರಾಜೀನಾಮೆಯಿಂದ ತೆರವಾಗಿರುವ ಸ್ಥಾನಕ್ಕೆ ಚುನಾವಣೆ ನಡೆಸಲು ಆಗಸ್ಟ್ 7ರಂದು ಚುನಾವಣಾ ಆಯೋಗದ ಅಧಿಸೂಚನೆ ಪ್ರಕಟಿಸಲಿದೆ. ಆಗಸ್ಟ್ 21 ನಾಮನಿರ್ದೇಶನಗಳನ್ನು ಸಲ್ಲಿಸಲು ಕೊನೆಯ ದಿನವಾಗಿದ್ದು, ಆ.22 ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಆಗಸ್ಟ್ 25 ಉಮೇದುವಾರಿಕೆಗಳನ್ನು ಹಿಂಪಡೆಯಲು ಕೊನೆಯ ದಿನವಾಗಿದೆ.

ಟ್ರಂಪ್ ಕುರುಡರೇ: ಎಚ್‌ಡಿಡಿ ಆಕ್ರೋಶ

ಬೆಂಗಳೂರು: ಟ್ರಂಪ್ ಕುರುಡರಾಗಿರಬೇಕು ಅಥವಾ ಅಜ್ಞಾನಿ ಆಗಿರಬೇಕು! ಹೀಗೆಂದು ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ, ಭಾರತದ ಆರ್ಥಿಕತೆ ಕುರಿತ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭಾರತದ ಆರ್ಥಿಕತೆ ಸತ್ತಿದೆ ಎಂದಿರುವ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರ ಹೇಳಿಕೆ ಬಗ್ಗೆ ತೀವ್ರ ಅಚ್ಚರಿ ವ್ಯಕ್ತಪಡಿಸಿರುವ ಮಾಜಿ ಪ್ರಧಾನಿ, ಬಹುಶಃ ಟ್ರಂಪ್ ಕುರುಡರಾಗಿರಬೇಕು ಅಥವಾ ಅಜ್ಞಾನಿ ಆಗಿರಬೇಕು ಎಂದು ಟೀಕಿಸಿದ್ದಾರೆ. ಈ ಕುರಿತಾಗಿ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಗೌಡರು, ಟ್ರಂಪ್ ಅವರ ವರ್ತನೆ, ಭಾಷೆ ಅವರ ಹೇಳಿಕೆಯ ಇನ್ನಿತರ ಅಂಶಗಳ ಬಗ್ಗೆ ಅತೀವ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ, ಮೈಸೂರು ವೈದ್ಯರ ಚಿತ್ರಕ್ಕೆ ಬೆಸ್ಟ್ ಸ್ಕ್ರಿಪ್ಟ್ ಗರಿ

12th ಫೇಲ್‌ನ ವಿಕ್ರಾಂತ್ ವ್ಯಾಸ್ಸೆ, ಶಾರುಖ್ ಖಾನ್ ಅತ್ಯುತ್ತಮ ನಟ ರಾಣಿ ಮುಖರ್ಜಿ ಅತ್ಯುತ್ತಮ ನಟಿ

ಕಂದೀಲುಗೆ ರಾಷ್ಟ್ರೀಯ ಪ್ರಶಸ್ತಿ ಗರಿ

ದೆಹಲಿ: 2023ನೇ ಸಾಲಿನ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಘೋಷಣೆಯಾಗಿದ್ದು, ಕೊಡಗಿನ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರು ನಿರ್ಮಿಸಿ, ನಿರ್ದೇಶಿಸಿರುವ 'ಕಂದೀಲು' ಚಿತ್ರವು ಫೀಚರ್ ಫಿಲ್ಮ್ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ ಗೆದ್ದಿದೆ. ನಾನ್ ಫೀಚರ್ ಫಿಲ್ಮ್ ವಿಭಾಗದಲ್ಲಿ ಮೈಸೂರಿನ ಚಿದಾನಂದ ನಾಯ್ಕ್ ಅವರ ನಿರ್ದೇಶನದ ಕಿರುಚಿತ್ರ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' (Sun flowers Were the First Ones to Know) ಬೆಸ್ಟ್ ಸ್ಕ್ರಿಪ್ಟ್ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದೆ.

12th ಫೇಲ್ ಚಿತ್ರದ ಮನೋಜ್ಞ ನಟನೆಗಾಗಿ ವಿಕ್ರಾಂತ್ ಮ್ಯಾಸ್ಸೆ ಮತ್ತು ಜವಾನ್ ಚಿತ್ರದ ನಟನೆಗಾಗಿ ಬಾಲಿವುಡ್‌ನ ಜನ ಪ್ರಿಯ ನಟ ಶಾರುಖ್ ಖಾನ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಘೋಷಿಸಲಾಗಿದೆ. Mrs. Chatterjee vs Norway ಚಿತ್ರದಲ್ಲಿನ ಅಭಿನಯಕ್ಕಾಗಿ ರಾಣಿ ಮುಖರ್ಜಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ತೀರ್ಪುಗಾರರು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಪ್ರಶಸ್ತಿ ಪುರಸ್ಕೃತರ ಪಟ್ಟಿ ಸಲ್ಲಿಸಿದ ಬೆನ್ನಿಗೇ ಅಧಿಕೃತವಾಗಿ ಪ್ರಶಸ್ತಿಗಳನ್ನು ಘೋಷಿಸಲಾಯಿತು. ಫೀಚರ್ ಫಿಲಂ ವಿಭಾಗದಲ್ಲಿ ಆಶುತೋಷ್ ಗೋವರಿಕರ್, ನಾನ್ ಫೀಚರ್ ಫಿಲಂ ವಿಭಾಗದಲ್ಲಿ ಕನ್ನಡ ಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಮುಖ್ಯ ತೀರ್ಪುಗಾರರಾಗಿ ನೂರಾರು ಸಿನಿಮಾಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ. ಕನ್ನಡ ಸೇರಿ ಒಟ್ಟು 13 ಪ್ರಾದೇಶಿಕ ಭಾಷೆಗಳ 13 ಸಿನಿಮಾಗಳಿಗೆ ರಾಷ್ಟ್ರಪ್ರಶಸ್ತಿ ಘೋಷಿಸಲಾಗಿದೆ. → 8

ರೈತನ ಕಥಾಚಿತ್ರ ಕಂದೀಲು

ಬೆಂಗಳೂರು: ಕೊಡಗು ಜಿಲ್ಲೆ ಮಡಿಕೇರಿಯ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರು ನಿರ್ಮಿಸಿ, ನಿರ್ದೇಶಿಸಿರುವ 'ಕಂದೀಲು' ಚಿತ್ರವು ಫೀಚರ್ ಫಿಲ್ಮ್ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ ಗೆದ್ದಿದೆ. ಮಡಿಕೇರಿ ನಿವಾಸಿಯಾಗಿರುವ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರು ಕೊಡಗಿನ ಮೊದಲ ಮಹಿಳಾ ಚಿತ್ರ ನಿರ್ದೇಶಕರಾಗಿದ್ದಾರೆ.

ಅಜ್ಜಿಯ ಹುಂಜ ಬೆಸ್ಟ್ ಸ್ಕ್ರಿಪ್ಟ್

ಮೈಸೂರು: ಮೈಸೂರಿನ ವೈದ್ಯ ಚಿದಾನಂದ ಎಸ್.ನಾಯ್ಕ್ ಅವರ 'ಸನ್‌ಫ್ಲವರ್ಸ್ ವೇರ್ ದಿ ಫಸ್ಟ್ ಒನ್ಸ್ ಟು ನೋ' ಬೆಸ್ಟ್ ಸ್ಕ್ರಿಪ್ಟ್ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡಿದೆ. ಈ ಚಿತ್ರ ಪ್ರತಿಷ್ಠಿತ ಕೇನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ 'ಲಾ ಸಿನೆಫ್ ಪ್ರಶಸ್ತಿ' ಮುಡಿಗೇರಿಸಿಕೊಂಡಿತ್ತು.

ನಿಗಮ–ಮಂಡಳಿ ಪಟ್ಟಿಗೆ ಅಂತಿಮ ಸ್ಪರ್ಶ ಸಂಭವ

ಸಿಎಂ–ಡಿಸಿಎಂ ಮತ್ತೆ ದೆಹಲಿಗೆ

ಬೆಂಗಳೂರು: ಬೂದಿ ಮುಚ್ಚಿದ ಕೆಂಡದಂತ ಪರಿಸ್ಥಿತಿಯಲ್ಲಿ ರಾಜ್ಯ ಕಾಂಗ್ರೆಸ್ ಇರುವ ಹೊಸ್ತಿಲಿನಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಂಗಳಲ್ಲಿ ಮೂರನೇ ಬಾರಿಗೆ ದೆಹಲಿಗೆ ತೆರಳಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿರುವ ನಾಯಕರು, ಶುಕ್ರವಾರ ಬೆಳಗ್ಗೆ ಪ್ರತ್ಯೇಕ ವಿಮಾನದಲ್ಲಿ ಪ್ರಯಾಣಿಸಿದ್ದಾರೆ. ಕಳೆದ ಒಂದು ತಿಂಗಳ ಅಂತರದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ 5ನೇ ದೆಹಲಿ ಭೇಟಿ ಇದಾಗಿದೆ. ಪಕ್ಷದ ವಿವಿಧ ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಹಾಗೂ ಸರಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದರೂ, ಹೈಕಮಾಂಡ್ ಜತೆ ಸಭೆ ನಡೆಸುವುದು ಪ್ರಮುಖ ಅಂಶವಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಬೆಂಗಳೂರಿನಲ್ಲಿ ಶಾಸಕರು, ಸಚಿವರ ಜತೆ ಪ್ರತ್ಯೇಕ ಸಭೆ ನಡೆಸಿ, ಕೆಲ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದರು. ಅದರ ಮುಂದುವರೆದ ಭಾಗವಾಗಿ ಸಿದ್ದರಾಮಯ್ಯ, ಶಾಸಕರು, ಸಚಿವರ ಬಗ್ಗೆ ಸಭೆ ನಡೆಸಿದ್ದಾರೆ. → 4

ಭಾಗವತ್ ಮೇಲೆ ಕಣ್ಣಿಟ್ಟಿದ್ದ ಸಿಟ್



ಮುಂಬೈ: 2008ರ ಮಾಲೆಗಾಂವ್ ಸ್ಫೋಟ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ಮುಖ್ಯಸ್ಥ ಮೋಹನ್ ಭಾಗವತ್‌ರನ್ನು ಬಂಧಿಸಲು ಆದೇಶ ನೀಡಲಾಗಿತ್ತು ಎಂದು ಈ ತಂಡದಲ್ಲಿದ್ದು ಈಗ ನಿವೃತ್ತರಾಗಿರುವ ಇನ್‌ಸ್ಪೆಕ್ಟರ್ ಮೆಹಬೂಬ್ ಮುಜಾವರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಖಾಸಗಿ ಸುದ್ದಿವಾಹಿನಿ ಜತೆ ಮಾತನಾಡಿದ ಅವರು, ಮಹಾರಾಷ್ಟ್ರ ಎಟಿಎಸ್ ತನಿಖೆ ವೇಳೆ ಕೆಲವು ಆರೋಪಿಗಳಿಗೆ ಆರ್‌ಎಸ್‌ಎಸ್ ಜೊತೆ ಸಂಪರ್ಕ ಇರುವುದಾಗಿ ಕಂಡುಬಂದಿತ್ತು. ಈ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್‌ರನ್ನು ಬಂಧಿಸಲು ತನಿಖಾಧಿಕಾರಿ ಪರಮ್ ಬೀರ್ ಸಿಂಗ್ ಅವರು ನಿರ್ದೇಶನ ನೀಡಿದ್ದರು ಎಂದು ತಿಳಿಸಿದ್ದಾರೆ. ಪ್ರಕರಣ ಸಂಬಂಧ ರಾಮ್ ಕಲ್ಸಂಗ್ರ, ಸಂದೀಪ್ ಡಾಂಗೆ, ದಿಲೀಪ್ ಪಾಟಿದಾರ್ ಮತ್ತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನು ಬಂಧಿಸುವಂತೆ ತನಿಖಾಧಿಕಾರಿ ಕೇಳಿಕೊಂಡಿದ್ದರು ಎಂದು ಹೇಳಿದ್ದಾರೆ.

ಡಾ.ರಾಜ್ ಸೋದರಿ ನಾಗಮ್ಮ ವಿಧಿವಶ

ಚಾಮರಾಜನಗರ: ನಟ ಸಾರ್ವಭೌಮ ಡಾ.ರಾಜ್‌ಕುಮಾರ್ ಅವರ ಸಹೋದರಿ ನಾಗಮ್ಮ ಅವರು ಶುಕ್ರವಾರ (ಆ.1) ವಿಧಿವಶರಾಗಿದ್ದಾರೆ. ಚಾಮರಾಜನಗರ ಜಿಲ್ಲೆಯ ಗಾಜನೂರಿನ ಸ್ವಗ್ರಹದಲ್ಲಿ ವಾಸಿಸುತ್ತಿದ್ದ ನಾಗಮ್ಮ ಅವರು ವಯೋಸಹಜ ಕಾಯಿಲೆ ಯಿಂದ ಬಳಲುತ್ತಿದ್ದರು. ಡಾ.ರಾಜ್ ತಲೆಮಾರಿನ ಕೊನೆಯ ಹಿರಿಯ ಸದಸ್ಯೆಯಾಗಿದ್ದ ಇವರು ತಮ್ಮ 92ನೇ ವಯಸಿನಲ್ಲಿ ಕೊನೆಯುಸಿರೆಳೆದಿದ್ದಾರೆ. ಅಸ್ವಸ್ಥರಾಗಿದ್ದ ಕಾರಣ ಪುನೀತ್ ರಾಜ್‌ಕುಮಾರ್ ನಿಧನದ ಸುದ್ದಿಯನ್ನು ಇವರಿಂದ ಮುಚ್ಚಿಡಲಾಗಿತ್ತು.

ರೇಸ್‌ನಲ್ಲಿ ಗೆದ್ದು ದಾಖಲೆ ಬರೆದ ಸಕ್ಕರೆ ನಗರಿಯ ಯುವಕನ ಪ್ರೀತಿಯ ಪಾರಿವಾಳ

ದಿಲ್ಲಿಯಿಂದ ಮಂಡ್ಯಕ್ಕೆ ಹಾರಿ ಬಂದ ಪಾರಿವಾಳ

ಮಂಡ್ಯ: 'ಇದು ಪ್ರೀತಿಯ ಪಾರಿವಾಳ ಹಾರಿ ಬಂದ' ಕಥೆ. ಸಾಕಷ್ಟು ಜನರು ಪಾರಿವಾಳವನ್ನು ಸಾಕುತ್ತಾರೆ. ರೇಸ್‌ಗಾಗಿಯೂ ಪಾರಿವಾಳವನ್ನು ಸಾಕುವವರಿದ್ದಾರೆ. ರೇಸ್‌ಗಾಗಿಯೇ ಕೋಟ್ಯಂತರ ರೂ. ಖರ್ಚು ಮಾಡಿ ಪಾರಿವಾಳವನ್ನು ಖರೀದಿಸುವವರಿದ್ದಾರೆ. ಇಂತಹದ್ದೇ ಒಂದು ರೇಸ್‌ನಲ್ಲಿ ಪಾಲ್ಗೊಂಡಿದ್ದ ಪಾರಿವಾಳ 52 ದಿನ ಗಳಲ್ಲಿ 1790 ಕಿ.ಮೀ ಕ್ರಮಿಸಿ ತನ್ನ ಮಾಲೀಕ ನನ್ನ ಹುಡುಕಿಕೊಂಡು ಬಂದು ದಾಖಲೆ ಬರೆದಿದೆ. ಇಂತಹ ಅಚ್ಚರಿ ಘಟನೆಗೆ ಮಂಡ್ಯ ನಗರ ಸಾಕ್ಷಿ ಆಗಿದೆ. ಮಾಲೀಕನನ್ನು ಹುಡುಕಿಕೊಂಡು ದೆಹಲಿಯಿಂದ ಮಂಡ್ಯಕ್ಕೆ ಬರುವ ಮೂಲಕ ಒಂದು ವರ್ಷ ವಯಸ್ಸಿನ ಅಭಿಮನ್ಯು ಹೆಸರಿನ ಪಾರಿವಾಳ ವಿಶೇಷ ದಾಖಲೆ ನಿರ್ಮಿಸಿದೆ. ಕೇವಲ ಒಂದು ವರ್ಷದ ಸಾಕು ಪಾರಿವಾಳವೊಂದು ಇಷ್ಟು ದೂರ ಕ್ರಮಿಸಿ ವಾಪಸಾಗುವ ಮೂಲಕ ದಾಖಲೆ ಪುಸ್ತಕ ಸೇರಿದೆ. ಕರ್ನಾಟಕ ಹೋಮಿಂಗ್ ಪಿಜನ್ ಫೆಡರೇಷನ್ ರಾಜಧಾನಿ ದೆಹಲಿಯಲ್ಲಿ ಪಾರಿವಾಳಗಳ ರೇಸ್ ಆಯೋಜಿಸಿದ್ದರು. ಇದರಲ್ಲಿ ಮಂಡ್ಯದ ವಿ.ಸಿ ಫಾರಂನ ಶ್ರೀಧರ್ ಅವರಿಗೆ ಸೇರಿದ ಅಭಿಮನ್ಯು ಹೆಸರಿನ ಪಾರಿವಾಳ ಸತತ 52 ದಿನಗಳ ಹಾರಾಟ ನಡೆಸಿ ದೆಹಲಿಯಿಂದ ಮಂಡ್ಯಕ್ಕೆ ಬಂದಿದೆ. ಈ ಸ್ಪರ್ಧೆ ಯಲ್ಲಿ ಕರ್ನಾಟಕ, ತಮಿಳುನಾಡಿನ ಮೂಲದ ಒಟ್ಟು 22 ಪಾರಿವಾಳ ಭಾಗವಹಿಸಿದ್ದವು. ಪಾರಿವಾಳಗಳಿಗೆ ರೇಸ್‌ಗೂ ಮುನ್ನ ರಿಂಗ್ ಅಳವಡಿಕೆ ಮಾಡಲಾಗಿತ್ತು. ಏ.5ರಂದು ಎಲ್ಲಾ ಪಾರಿವಾಳಗಳನ್ನು ಹಾರಿಬಿಡಲಾ ಗಿತ್ತು. ಅಂದಿನಿಂದ ಒಟ್ಟು 1790 ಕಿ.ಮೀ ಹಾರಾಟ ನಡೆಸಿ ಮೇ.28ರಂದು ಅಭಿಮನ್ಯು ಮಾಲೀಕನ ಬಳಿಗೆ ಬಂದಿದೆ. ಒಟ್ಟು 22 ಪಾರಿವಾಳಗಳ ಪೈಕಿ 14 ಪಾರಿವಾಳ ಗಳು ತಮ್ಮ ನೆಲೆಗೆ ವಾಪಸ್ಸಾಗಿದ್ದು, ಅದ ರಲ್ಲಿ ಅತಿ ಚಿಕ್ಕ ವಯಸ್ಸಿನ ಮಂಡ್ಯದ ಅಭಿಮನ್ಯು ದಾಖಲೆ ನಿರ್ಮಿಸಿದೆ.

ಮಾಲೀಕ ಶ್ರೀಧರ್ ಕೈಯಲ್ಲಿರುವ ದೆಹಲಿಯಿಂದ ಹಾರಿಬಂದ ಅಭಿಮನ್ಯು ಹೆಸರಿನ ಪಾರಿವಾಳ.

ಪಿಎಂ ಪ್ರೊಫೆಸರ್‌ಶಿಪ್: ಬೆಂವಿವಿ ನೋಡಲ್ ಸಂಸ್ಥೆ

ಬೆಂಗಳೂರು: ಅನುಸಂಧಾನ್ ನ್ಯಾಷನಲ್ ರಿಸರ್ಚ್ ಆಂಡ್ ಫೌಂಡೇಶನ್ ಅಡಿಯಲ್ಲಿ ಪ್ರತಿಷ್ಠಿತ ಪ್ರೈಮ್ ಮಿನಿಸ್ಟರ್ ಪ್ರೊಫೆಸರ್‌ಶಿಪ್ ಯೋಜನೆಯ ನೋಡಲ್ ಸಂಸ್ಥೆಯಾಗಿ ಬೆಂಗಳೂರು ವಿವಿ ಆಯ್ಕೆಯಾಗಿದ್ದು, ಈ ಗೌರವವನ್ನು ಪಡೆದಿರುವ ಕರ್ನಾಟಕದ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಬೆಂಗಳೂರು ವಿವಿಯ ಶೈಕ್ಷಣಿಕ ಶ್ರೇಷ್ಠತೆ ಹಾಗೂ 3.75 ಸಿಜಿಪಿಎ ಅಂಕದೊಂದಿಗೆ ನ್ಯಾಕ್ ಎ++ ಮಾನ್ಯತೆ ಪಡೆದಿರುವ ಆಧಾರದಲ್ಲಿ ಈ ಯೋಜನೆ ದೊರೆತಿದ್ದು, ಸಂಶೋಧನೆ ಹಾಗೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರದ ಮುಂಚೂಣಿ ಸಂಸ್ಥೆಯಾಗಿ ಬೆಳೆಯುತ್ತಿರುವ ಪ್ರತೀಕವಾಗಿದೆ. ಪ್ರೈಮ್ ಮಿನಿಸ್ಟರ್ ಪ್ರೊಫೆಸರ್‌ಶಿಪ್ ಯೋಜನೆಯು ಎಎನ್‌ಆರ್‌ಎಫ್‌ನ ಕಾರ್ಯಕ್ರಮವಾಗಿದ್ದು, ಕಡಿಮೆ ಮೂಲಸೌಕರ್ಯ ಹೊಂದಿರುವ ಸಂಸ್ಥೆಗಳಲ್ಲಿಯೂ ಸಂಶೋಧನೆ ಮತ್ತು ಅಭಿವೃದ್ಧಿ ಬಲಪಡಿಸುವ ಉದ್ದೇಶವನ್ನು ಹೊಂದಿದೆ. ಈ ಯೋಜನೆಯಡಿ ಆಯ್ಕೆಯಾದ ಪ್ರಾಧ್ಯಾಪಕರಿಗೆ ಪ್ರತಿ ವರ್ಷ 30 ಲಕ್ಷ ರು. ವೇತನ ಭತ್ಯೆ ನೀಡಲಾಗುವುದು. ಜತೆಗೆ 24 ಲಕ್ಷ ರು. ಸಂಶೋಧನಾ ಅನುದಾನ ಮತ್ತು ಸಂಸ್ಥೆಗೆ ಪ್ರತಿ ವರ್ಷ 1 ಲಕ್ಷ ರು.ಗಳಷ್ಟು ಮೇಲು ವೆಚ್ಚವನ್ನು ಭರಿಸುತ್ತದೆ. ಈ ಸಹಾಯಧನದ ಅವಧಿ ಐದು ವರ್ಷಗಳವರೆಗೆ ಇರುತ್ತದೆ. ಭಾರತದ ಪ್ರತಿಷ್ಠಿತ ಸಂಸ್ಥೆಗಳ ನಿವೃತ್ತ ಅಧ್ಯಾಪಕರು ಅಥವಾ ವಿಜ್ಞಾನಿಗಳು, ಸಂಶೋಧಕರು ಮತ್ತು ಸಂಶೋಧನೆ ಹಾಗೂ ನವೋದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರೊಫೆಸರ್ ಆಫ್ ಪ್ರಾಕ್ಟೀಸ್‌ಗಳು ಪ್ರೈಮ್ ಮಿನಿಸ್ಟರ್ ಪ್ರೊಫೆಸರ್‌ಶಿಪ್‌ಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸುವ ವಿಧಾನ, ಷರತ್ತುಗಳು ಹಾಗೂ ಅರ್ಹತೆಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಎಎನ್‌ಆರ್‌ಎಫ್ ವೆಬ್‌ಸೈಟ್ https://www.anrfonline.in/ANRF/HomePage ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ಪ್ರೊ. ಅಶೋಕ್ ಡಿ. ಹಂಜಗಿ, 9845634196 ಸಂಪರ್ಕಿಸಿ.

ಹಣದಾಸೆಗೆ ಟ್ಯೂಷನ್‌ಗೆ ಹೋಗಿದ್ದ ಮಾಲೀಕನ ಮಗನ ಅಪಹರಣ, ಬನ್ನೇರುಘಟ್ಟ ಅರಣ್ಯದಲ್ಲಿ ಬರ್ಬರ ಹತ್ಯೆ

ಬಾಲಕನ ಹತ್ಯೆಗೈದ ಆರೋಪಿಗಳಿಗೆ ಗುಂಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಟ್ಯೂಷನ್ ಮುಗಿಸಿ ಮನೆಗೆ ಬರುತ್ತಿದ್ದ 13 ವರ್ಷದ ಬಾಲಕ ನಿಶ್ಚಿತ್‌ನನ್ನು ಅಪಹರಿಸಿ, ಬರ್ಬರವಾಗಿ ಹತ್ಯೆಗೈದ ಇಬ್ಬರು ಆರೋಪಿಗಳ ಕಾಲಿಗೆ ಹುಳಿಮಾವು ಠಾಣೆ ಪೊಲೀಸರು ಗುಂಡು ಹಾರಿಸಿ, ಹೆಡೆಮುರಿ ಕಟ್ಟಿದ್ದಾರೆ.

ಗುರುಮೂರ್ತಿ ಹಾಗೂ ಗೋಪಾಲಕೃಷ್ಣ ಎಂಬ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಗುರುವಾರ ತಡರಾತ್ರಿ ಕಗ್ಗಲೀಪುರ ರಸ್ತೆಯ ಬಳಿಯಿದ್ದ ಆರೋಪಿಗಳನ್ನು ವಶಕ್ಕೆ ಪಡೆಯಲು ಹುಳಿಮಾವು ಠಾಣೆ ಪೊಲೀಸರು ತೆರಳಿದ್ದರು. ಈ ವೇಳೆ ಮಾರಕಾಸ್ತ್ರಗಳನ್ನು ಬಳಸಿ ಆರೋಪಿಗಳು ಪೊಲೀಸರ ಮೇಲೆ ದಾಳಿಗೆ ಮುಂದಾದಾಗ, ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ಹಾಗೂ ಪಿಎಸ್‌ಐ ಅರವಿಂದ್ ಕುಮಾರ್ ಆರೋಪಿಗಳ ಕಾಲಿಗೆ ಗುಂಡು ಹಾರಿಸುವ ಮೂಲಕ ವಶಕ್ಕೆ ಪಡೆದಿದ್ದಾರೆ. ಘಟನೆಯಲ್ಲಿ ಗುರುಮೂರ್ತಿಯ ಎರಡು ಕಾಲುಗಳು ಹಾಗೂ ಗೋಪಾಲಕೃಷ್ಣನ ಒಂದು ಕಾಲಿಗೆ ಗುಂಡು ತಗುಲಿದ್ದು, ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಕರಣದ ವಿವರ: ಅರಕೆರೆಯ ಶಾಂತಿ ನಿಕೇತನ ಲೇಔಟ್‌ನಲ್ಲಿ ನಿಶ್ಚಿತ್ ಮತ್ತು ಆತನ ಪೋಷಕರು ವಾಸವಾಗಿದ್ದರು. ನಗರದ ಪ್ರತಿಷ್ಠಿತ ಕಾಲೇಜ್‌ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದ ನಿಶ್ಚಿತ್ ತಂದೆಯ ಬಳಿ ಆರೋಪಿ ಗುರುಮೂರ್ತಿ ಹೆಚ್ಚುವರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ. ಆಗಾಗ ಮನೆಗೆ ಹೋಗಿ ಬರುತ್ತಿದ್ದ ಗುರುಮೂರ್ತಿ, ನಿಶ್ಚಿತ್‌ನನ್ನು ಅಪಹರಿಸಿ ಹಣಕ್ಕೆ ಬೇಡಿಕೆಯಿಡುವ ಸಂಚು ರೂಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಬುಧವಾರ ಸಂಜೆ ಟ್ಯೂಷನ್ ಮುಗಿಸಿ ಸೈಕಲ್‌ನಲ್ಲಿ ಮನೆಯತ್ತ ಬರುತ್ತಿದ್ದ ನಿಶ್ಚಿತ್‌ನನ್ನು ಆರೋಪಿಗಳು ಅಪಹರಿಸಿದ್ದರು. ಟ್ಯೂಷನ್ ಮುಗಿದು ಸುಮಾರು ಗಂಟೆಗಳಾದರೂ ಮನೆಗೆ ಬಾರದ ಮಗನ ಬಗ್ಗೆ ಪೋಷಕರು ಆತಂಕದಿಂದ ಹುಡುಕಾಟ ನಡೆಸಿದ್ದರು.

ಬಾಲಕನ ಕೊಲೆಗೈದ ಸ್ಥಳಕ್ಕೆ ಎಲೆಕ್ಟ್ರಾನಿಕ್ ಸಿಟಿ ಉಪವಿಭಾಗದ ಡಿಸಿಪಿ ನಾರಾಯಣ್ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌ಪಿ ಸಿ.ಕೆ. ಬಾಬಾ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಪರಾಧ ಹಿನ್ನೆಲೆ ಹೊಂದಿರುವ ಗುರುಮೂರ್ತಿ ಈ ಅಪಹರಣಕ್ಕೆ ಸಂಚು ರೂಪಿಸಿದ್ದ ಎಂದು ತಿಳಿದು ಬಂದಿದೆ. ಆದರೆ ಕೃತ್ಯಕ್ಕೆ ಕಾರಣವೇನು, ಇನ್ನೂ ಯಾರಾದರೂ ಭಾಗಿಯಾಗಿದ್ದಾರಾ ಎಂಬುದರ ಕುರಿತು ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳಿಂದ 5 ಲಕ್ಷಕ್ಕೆ ಬೇಡಿಕೆ

ನಿರಂತರ ಶೋಧದ ಬಳಿಕವೂ ಮಗನ ಸುಳಿವು ಸಿಗದಿದ್ದಾಗ ಹುಳಿಮಾವು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅಷ್ಟೊತ್ತಿಗಾಗಲೇ ಬಾಲಕನ ತಂದೆಗೆ ಕರೆ ಮಾಡಿದ್ದ ಆರೋಪಿಗಳು 'ಮಗನನ್ನ ಜೀವಂತವಾಗಿ ನೋಡುವ ಆಸೆಯಿದ್ದರೆ, 5 ಲಕ್ಷ ರು. ನೀಡುವಂತೆ ಬೇಡಿಕೆ ಇಟ್ಟಿದ್ದರು. ಹಣ ನೀಡುವುದಾಗಿ ಪೋಷಕರೂ ಸಹ ಒಪ್ಪಿಕೊಂಡಿದ್ದರು. ಇತ್ತ ವಿಷಯ ತಿಳಿದ ಪೊಲೀಸರು ಅಪಹರಣಕಾರರ ಫೋನ್ ಕರೆ ಆಧರಿಸಿ ತನಿಖೆ ಆರಂಭಿಸಿದ್ದರು. ಆದರೆ ಅಷ್ಟರಲ್ಲಾಗಲೇ ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿ ಕತ್ತು ಕೊಯ್ದು, ಸುಟ್ಟ ಸ್ಥಿತಿಯಲ್ಲಿ ಬಾಲಕನ ಶವ ಪತ್ತೆಯಾಗಿದೆ. ಮುಖ ಚಹರೆ ತಿಳಿಯದಿರಲು ಪೆಟ್ರೋಲ್ ಸುರಿದ ಬೆಂಕಿ ಹಚ್ಚಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿತ್ತು.

> ಅರಕೆರೆ ಶಾಂತಿನಿಕೇತನ್ ಬಡಾವಣೆಯಿಂದ ಟ್ಯೂಷನ್‌ಗೆ ತೆರಳಿದ್ದ ಬಾಲಕ ನಾಪತ್ತೆ ಆಗಿದ್ದ. ಈ ಸಂಬಂಧ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರು ಆಧರಿಸಿ ಎಲ್ಲಾ ಕಡೆ ಬಾಲಕನಿಗಾಗಿ ಹುಡುಕಾಟ ನಡೆಸಿದ್ದೆವು. ಗುರುವಾರ ಮಧ್ಯಾಹ್ನ ಬನ್ನೇರುಘಟ್ಟ ಕಗ್ಗಲೀಪುರ ರಸ್ತೆಯ ನಿರ್ಜನ ಪ್ರದೇಶದಲ್ಲಿ ಸುಟ್ಟ ಸ್ಥಿತಿಯಲ್ಲಿ ಬಾಲಕನ ಮೃತದೇಹ ಪತ್ತೆಯಾಗಿದೆ. ಯಾವ ವಿಚಾರಕ್ಕೆ ಈ ಕೃತ್ಯ ನಡೆದಿದೆ ಎನ್ನುವುದು ತನಿಖೆಯಿಂದ ತಿಳಿದುಬರಲಿದೆ.
>
> -ರಮೇಶ್ ಬಾನೋತ್, ಪೂರ್ವ ವಲಯ ಜಂಟಿ ಪೊಲೀಸ್ ಆಯುಕ್ತ

1ನೇ ತರಗತಿ ಓದಿ ಚಾಲಕ ಹುದ್ದೆ ಪಡೆದಿದ್ದ ಪ್ರಕರಣ

ಬಿಎಂಟಿಸಿ ವಜಾ ಕ್ರಮ ಎತ್ತಿಹಿಡಿದ ಹೈ

ಬೆಂಗಳೂರು: ನಕಲಿ ದಾಖಲೆಗಳನ್ನು ಸಲ್ಲಿಸಿ ಚಾಲಕನ ಹುದ್ದೆ ಗಿಟ್ಟಿಸಿಕೊಂಡಿದ್ದ ವ್ಯಕ್ತಿ ಯೊಬ್ಬರನ್ನು 17 ವರ್ಷಗಳ ಸೇವೆಯ ಬಳಿಕ ವಜಾಗೊಳಿಸಿದ್ದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಕ್ರಮ ಹೈಕೋರ್ಟ್ ಎತ್ತಿ ಹಿಡಿದಿದೆ.

ಹೈಕೋರ್ಟ್ ಸುದ್ದಿಗಳು

1988ರಲ್ಲಿ ನಕಲಿ ದಾಖಲೆ ಸಲ್ಲಿಸಿ ಬದಲಿ ಚಾಲಕ ಹುದ್ದೆಗೆ ಸೇರ್ಪಡೆಗೊಂಡಿದ್ದ ಬೆಂಗಳೂರು ಪೂರ್ವ ತಾಲೂಕಿನ ದೊಡ್ಡ ಗುಬ್ಬಿ ಬಳಿಯ ಯರಪ್ಪನಹಳ್ಳಿಯ ನಿವಾಸಿ ಮಾಲೂರಪ್ಪ ಎಂಬವರನ್ನು ವಜಾಗೊಳಿಸಿದ್ದ ಬಿಎಂಟಿಸಿ ಕ್ರಮದಲ್ಲಿ ಯಾವುದೇ ದೋಷವಿಲ್ಲ ಎಂಬುದಾಗಿ ಏಕಸದಸ್ಯ ಪೀಠ ಹೊರಡಿಸಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ನ್ಯಾಯಪೀಠ ಎತ್ತಿಹಿಡಿದು ಆದೇಶ ನೀಡಿದೆ. ಅಲ್ಲದೆ, ಮಾಲೂರಪ್ಪ ಬದಲಿ ಚಾಲಕನ ಹುದ್ದೆಗೆ ಅನರ್ಹರಾಗಿದ್ದೂ, ನಕಲಿ ದಾಖಲೆ ಸಲ್ಲಿಸಿ ಆ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ. ಈ ಅಂಶವನ್ನು ಪರಿಗಣಿಸಿ ಅವರನ್ನು ಸೇವೆಯಿಂದ ವಜಾಗೊಳಿಸಿರುವುದನ್ನು ಅತಿ ಯಾದ ಕಠಿಣ ಕ್ರಮ ಎನ್ನಲಾಗದು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಒಂದು ದಶಕದ ಕಾಲ ವಿಚಾರಣೆ

ಸುಮಾರು ಒಂದು ದಶಕಕ್ಕೂ ಹೆಚ್ಚು ಕಾಲ ವಿಚಾರಣೆ ನಡೆಸಿದ್ದ ಬಿಎಂಟಿಸಿ 2002 ರಲ್ಲಿ ಪೂರ್ಣಗೊಳಿಸಿ, 2005ರಲ್ಲಿ ಮಾಲೂರಪ್ಪ ಅವರನ್ನು ಸೇವೆಯಿಂದ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಕಾರ್ಮಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಇದಾದ 11 ವರ್ಷ ಗಳ ಕಾಲ ಬಳಿಕ ಅಂದರೆ 2016ರಲ್ಲಿ ಕಾರ್ಮಿಕ ನ್ಯಾಯಾಲಯ ಅರ್ಜಿದಾರರ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಹೀಗಾಗಿ, ಅವರನ್ನು ಸೇವೆಯಿಂದ ವಜಾಗೊಳಿಸುವುದು ಅತ್ಯಂತ ಕಠಿಣ ಕ್ರಮ. ಹೀಗಾಗಿ, ಯಾವುದೇ ಹಿಂಬಾಕಿ ಪಾವತಿ ಮಾಡದೆ, ಮೂರು ವರ್ಷಗಳ ಕಾಲ ವೇತನ ಹೆಚ್ಚಳ ಮಾಡದೆ, ಸೇವೆಯಲ್ಲಿ ಮುಂದುವರೆಸುವುದಕ್ಕೆ ನಿರ್ದೇಶನ ನೀಡಿತ್ತು. ಕಾರ್ಮಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಬಿಎಂಟಿಸಿ 2017ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಬದಲಿ ಚಾಲಕನ ಹುದ್ದೆಗೆ 4ನೇ ತರಗತಿ ನಿಗದಿ

1990ರಲ್ಲಿ ಬದಲಿ ಚಾಲಕನ ಹುದ್ದೆಗೆ ಕನಿಷ್ಠ ನಾಲ್ಕನೇ ತರಗತಿಯವರೆಗೆ ಶಿಕ್ಷಣ ಪಡೆದಿರಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಆದರೆ ಕೇವಲ 1ನೇ ತರಗತಿಯವರೆಗೂ ಮಾತ್ರ ಅಧ್ಯಯನ ಮಾಡಿದ್ದ ಮಾಲೂರಪ್ಪ, ತಾನು 9ನೇ ತರಗತಿ ಅಧ್ಯಯನ ಮಾಡಿರುವುದಾಗಿ ನಕಲಿ ಶಾಲಾ ವರ್ಗಾವಣೆ ಪ್ರಮಾಣಪತ್ರ (ಟಿಸಿ) ಸಲ್ಲಿಸಿದ್ದರು. ಈ ಆರೋಪ ಸಂಬಂಧ ಬಿಎಂಟಿಸಿ ಅವರ ವಿರುದ್ಧ ಇಲಾಖಾ ವಿಚಾರಣೆ ಆರಂಭಿಸಿತ್ತು.

ಸರಕಾರಕ್ಕೆ ಹೈಕೋರ್ಟ್ ಮಹತ್ವದ ನಿರ್ದೇಶನ

ಅನುಕಂಪದ ಅರ್ಜಿ ಇತ್ಯರ್ಥಕ್ಕೆ 90 ದಿನ

ಬೆಂಗಳೂರು: ಅನುಕಂಪದ ಆಧಾರದ ಮೇಲೆ ಸಲ್ಲಿಸಲಾಗುವ ಉದ್ಯೋಗದ ಅರ್ಜಿಗಳನ್ನು 90 ದಿನಗಳೊಳಗೆ ಇತ್ಯರ್ಥಪಡಿಸಬೇಕು ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ಮಹತ್ವದ ನಿರ್ದೇಶನ ನೀಡಿದೆ. ಈ ಮೂಲಕ ನೇಮಕಾತಿ ಪ್ರಕ್ರಿಯೆಯಲ್ಲಿನ ಅನಗತ್ಯ ವಿಳಂಬ ತಪ್ಪಿಸುವ ಉದ್ದೇಶದಿಂದ ನ್ಯಾಯಾಲಯ ಹೊಸ ಮಾರ್ಗಸೂಚಿ ರೂಪಿಸಿದೆ.

ಕಲಬುರಗಿಯ ಜೇವರ್ಗಿ ತಹಸೀಲ್ದಾರ್ ಕಚೇರಿಯಲ್ಲಿ ಜವಾನರಾಗಿದ್ದ ರಾಜಾ ಪಟೇಲ್ ಬಂಡಾ ಅವರ ನಿಧನದ ನಂತರ, ಅವರ ಕುಟುಂಬಕ್ಕೆ ಅನುಕಂಪದ ನೌಕರಿ ನೀಡುವಲ್ಲಿ ಸರಕಾರ ವಿಳಂಬ ಮಾಡಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ಹೊರಡಿಸಿದೆ. ಅಲ್ಲದೆ, ಮೃತ ನೌಕರನ ಪುತ್ರ ಮಹಬೂಬ್‌ಗೆ ಎಂಟು ವಾರಗಳೊಳಗೆ ಉದ್ಯೋಗ ನೀಡುವಂತೆ ಸರಕಾರಕ್ಕೆ ನಿರ್ದೇಶನ ನೀಡಿದೆ. ಈ ಪ್ರಕರಣದ ತೀರ್ಪಿನ ಜತೆಗೆ ನ್ಯಾಯಾಲಯವು ಕೆಲವು ಹೊಸ ನಿಯಮ ಜಾರಿಗೆ ತಂದಿದೆ. ಅದರಂತೆ, ಇಲಾಖೆಗಳು ಅರ್ಜಿಯನ್ನು 30 ದಿನಗಳೊಳಗೆ ಲಿಖಿತವಾಗಿ ಸ್ವೀಕರಿಸಬೇಕು ಮತ್ತು ಮೃತ ನೌಕರರ ಅವಲಂಬಿತರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅರ್ಜಿ ಸ್ವೀಕರಿಸಿದ ನಂತರ 90 ದಿನಗಳೊಳಗೆ ಸರಕಾರ ಅಂತಿಮ ನಿರ್ಧಾರ ಕೈಗೊಳ್ಳಬೇಕು. ಒಂದು ವೇಳೆ ಅರ್ಜಿ ತಿರಸ್ಕರಿಸಿದಲ್ಲಿ ಅದಕ್ಕೆ ಸಮಂಜಸವಾದ ಕಾರಣ ಸ್ಪಷ್ಟವಾಗಿ ನಮೂದಿಸಬೇಕು. ಈ ಪ್ರಕ್ರಿಯೆ ಸುಗಮಗೊಳಿಸಲು ಏಕರೂಪದ ಕಾರ್ಯಾಚರಣಾ ವಿಧಾನ ಜಾರಿಗೆ ತರಬೇಕು ಮತ್ತು ಅನುಕಂಪದ ನೇಮಕಾತಿಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ವಿಶೇಷ ತರಬೇತಿ ನೀಡಬೇಕು ಎಂದು ಹೈಕೋರ್ಟ್ ಸೂಚಿಸಿದೆ.

ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲೇ ಮಗುವಿಗೆ ಜನ್ಮ

ಬೆಂಗಳೂರು: ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ ಮೇಲೆಯೇ ಒಬ್ಬ ಮಹಿಳೆ ಗಂಡು ಮಗುವಿಗೆ ಜನ್ಮ ನೀಡಿರುವ ಘಟನೆ ಬೆಂಗಳೂರಿನ ಸರ್‌ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ನಡೆದಿದೆ. ರೈಲ್ವೆ ಮತ್ತು ಪೊಲೀಸ್ ಸಿಬ್ಬಂದಿಗಳು ಸಹಾಯ ಮಾಡಿದ್ದು, ಅವರ ಸಮಯಪ್ರಜ್ಞೆಯಿಂದ ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ.

ರೈಲಿಗಾಗಿ ಕಾಯುತ್ತಿದ್ದ ಮಹಿಳೆಗೆ ಏಕಾಏಕಿ ಹೆರಿಗೆ ನೋವು ಆರಂಭವಾಯಿತು. ಪರಿಸ್ಥಿತಿಯನ್ನು ಅರಿತ ರೈಲ್ವೆ ಮಹಿಳಾ ಸಿಬ್ಬಂದಿ ಮತ್ತು ಪೊಲೀಸರು ತಕ್ಷಣ ಸಹಾಯಕ್ಕೆ ಸ್ಪಂದಿಸಿದ್ದಾರೆ. ಸ್ಥಳದಲ್ಲಿಯೇ ತಾತ್ಕಾಲಿಕ ವ್ಯವಸ್ಥೆ ಮಾಡಿ, ಮಹಿಳೆಗೆ ಸಹಾಯ ಮಾಡಿದರು. ನಂತರ ಪ್ಲಾಟ್‌ಪಾರ್ಮ್ ಮೇಲೆಯೇ ಮಹಿಳೆ ಮಗುವಿಗೆ ಜನ್ಮ ನೀಡಿದರು. ಈ ಘಟನೆಯಲ್ಲಿ ರೈಲ್ವೆ ಸಿಬ್ಬಂದಿಗಳ ಸಮಯಪ್ರಜ್ಞೆ ಮತ್ತು ಧೈರ್ಯವನ್ನು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹೆರಿಗೆಯ ನಂತರ, ತಾಯಿ ಮತ್ತು ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಸಮೀಪದ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ವೈದ್ಯಕೀಯ ತಪಾಸಣೆಯ ನಂತರ, ಇಬ್ಬರೂ ಆರೋಗ್ಯವಾಗಿರುವುದು ದೃಢಪಟ್ಟಿದೆ.

ದಲಿತ ಅಧಿಕಾರಿ ವಿರುದ್ಧ ಆರೋಪಕ್ಕೆ ಖಂಡನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಮಹದೇವಪುರ ವಲಯದ ನೂತನ ಆರೋಗ್ಯ ಅಧಿಕಾರಿ ಡಾ.ಎಸ್.ಕೆ.ಸವಿತಾ ದಲಿತ ಸಮುದಾಯಕ್ಕೆ ಸೇರಿದ್ದಾರೆ ಎನ್ನುವ ಒಂದೇ ಕಾರಣಕ್ಕೆ ಕೆಲ ಸಂಘಟಕರು ಪದೇ ಪದೇ ಸುಳ್ಳು ಆರೋಪ ಮಾಡುತ್ತಿದ್ದು, ಇದನ್ನು ಪರಿಗಣಿಸದೆ ವರ್ಗಾವಣೆಯನ್ನು ನಗರಾಭಿವೃದ್ಧಿ ಇಲಾಖೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಮಾದಿಗ ದಂಡೋರ (ಎಂಆರ್‌ಪಿಎಸ್) ಹಾಗೂ ಮಾದಿಗ ಮೀಸಲಾತಿ ಹೋರಾಟ ರಾಜ್ಯ ಸಮಿತಿ ಆಗ್ರಹಿಸಿದೆ.

ಈ ಸಂಬಂಧ ನಗರಾಭಿವೃದ್ಧಿ ಇಲಾಖೆಗೆ ರಾಜ್ಯ ಸಮಿತಿ ರಾಜ್ಯ ವಕ್ತಾರ ವೆಂಕಟೇಶ್ ಕತ್ತಿ ಪತ್ರ ಬರೆದಿದ್ದು, ಬಿಬಿಎಂಪಿಯ ಕೆಲ ಸಂಘಟಕರು ಮಹದೇವಪುರ ವಲಯದ ನೂತನ ಆರೋಗ್ಯ ಅಧಿಕಾರಿ ಡಾ.ಎಸ್.ಕೆ. ಸವಿತಾ ವಿರುದ್ಧ ಇಲ್ಲದ ಸುಳ್ಳು ಆರೋಪ ಮಾಡುತ್ತಿದ್ದು, ಇದನ್ನು ಪರಿಗಣಿಸದೆ ನಗರಾಭಿವೃದ್ಧಿ ಇಲಾಖೆ ವರ್ಗಾವಣೆ ಆದೇಶವನ್ನು ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಬಿಬಿಎಂಪಿಯಲ್ಲಿ ಹಲವು ವರ್ಷಗಳಿಂದ ಆರೋಗ್ಯ ವಿಭಾಗದಲ್ಲಿ ಸೇವೆ ಸಲ್ಲಿಸಿರುವ ಡಾ.ಎಸ್.ಕೆ.ಸವಿತಾ ಅವರು ಕಾನೂನಾತ್ಮಕವಾಗಿ 1971 ಸಿ ಆಂಡಡ್ ಆರ್ ನಿಯಮಗಳಲ್ಲಿ ಸೂಚಿಸಿರುವ ನೇಮಕಾತಿ ಹಾಗೂ ಭಡ್ತಿಗೆ ಸಂಬಂಧಿಸಿದಂತೆ ಪಿಎಚ್‌ಡಿ ಪದವಿ ಪ್ರಮಾಣ ಪಡೆದು ಸಂಬಂಧಿಸಿದ ಮಂಡಳಿಯಲ್ಲಿ ನೋಂದಣಿಯಾಗಿದ್ದಾರೆ. ಬಡ್ತಿ ವರ್ಗಾವಣೆಗೆ ಸಂಪೂರ್ಣವಾಗಿ ಅರ್ಹರಾಗಿದ್ದಾರೆ.

ಆದರೂ, ದಲಿತ ಸಮುದಾಯಕ್ಕೆ ಸೇರಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಬಿಬಿಎಂಪಿ ಹೆಸರಿನಲ್ಲಿರುವ ಕೆಲ ಸಂಘಟಕರು ಅವರನ್ನು ಉನ್ನತ ಸ್ಥಾನಕ್ಕೆ ಹೋಗಲು ಹಾಗೂ ಕರ್ತವ್ಯ ನಿರ್ವಹಿಸಲು ಅಡಚಣೆ ಉಂಟುಮಾಡಿ ಜಾತಿ ತಾರತಮ್ಯ ಎಸಗಲು ಸಂಚು ರೂಪಿಸುತ್ತಿರುವುದು ಖಂಡನೀಯ. ಪ್ರಮುಖವಾಗಿ ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತರಾಜ್ ಮತ್ತು ಪೌರ ಕಾರ್ಮಿಕ ಅವಲಂಬಿತರ ಒಕ್ಕೂಟ ಅಧ್ಯಕ್ಷ ಮೋಹನ್ ಎಂಬುವವರು ಡಾ.ಎಸ್.ಕೆ. ಸವಿತಾ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸವಿತಾ ಅವರನ್ನು ಮಹದೇವಪುರ ವಲಯಕ್ಕೆ ವರ್ಗಾವಣೆ ಮಾಡಿರುವುದನ್ನು ರದ್ದುಪಡಿಸುವಂತೆ ಪತ್ರ ಬರೆದಿರುವುದು ಅಚ್ಚರಿ ತಂದಿದೆ ಎಂದು ವೆಂಕಟೇಶ್ ಹೇಳಿದ್ದಾರೆ.

ಅಖಿಲ ಭಾರತ ಕರಾಟೆ ಸ್ಪರ್ಧೆಯಲ್ಲಿ ಚಾಂಪಿಯನ್

ಬೆಂಗಳೂರು: ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಎರಡನೇ ಅಖಿಲ ಭಾರತ ಓಪನ್ ಕರಾಟೆ 2025ರ ಸ್ಪರ್ಧೆಯಲ್ಲಿ ಸುಡೋಕನ್ ಮಾರ್ಷಲ್ ಆರ್ಟ್ ಅಕಾಡೆಮಿಯ ರೆನ್ಸಿ ಜೈನುಲ್ ಅಬಿದೀನ್ ನೇತೃತ್ವದ ತಂಡವು ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಚಾಂಪಿಯನ್‌ಶಿಪ್ ತಮ್ಮದಾಗಿಸಿಕೊಂಡಿದೆ.

ವಿಸ್ಡಮ್ ಮಾರ್ಷಲ್ ಆರ್ಟ್ಸ್ ಕರಾಟೆ ಅಕಾಡೆಮಿಯು ಆಯೋಜಿಸಿದ್ದ ಈ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ದೇಶದಾದ್ಯಂತ ಉತ್ತಮ ಮಾರ್ಷಲ್ ಆರ್ಟ್ ಪಟುಗಳನ್ನು ಒಂದೆಡೆ ಸೇರಿಸಿತ್ತು. ಬಾಲ್ಡ್ವಿನ್ ಬಾಯ್ಸ್ ಹೈಸ್ಕೂಲ್, ಲೆಗಸಿ ಇಂಟರ್‌ನ್ಯಾಷನಲ್ ಸ್ಕೂಲ್, ಪ್ಲೇ ಅರೇನಾ, ಏಕಂ ಸ್ಟುಡಿಯೋ ಮತ್ತು ಏಮ್ಸ್ ಪ್ರಿ ಸ್ಕೂಲ್‌ಜನಲ್ಲಿ ತರಬೇತಿ ಪಡೆಯುತ್ತಿರುವ ಸುಡೋಕನ್ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ವಿದ್ಯಾರ್ಥಿಗಳು ಕಟಾ ಮತ್ತು ಕುಮಿಟೆ ಎರಡೂ ವಿಭಾಗಗಳಲ್ಲಿ ತಮ್ಮ ಅಪ್ರತಿಮ ಕೌಶಲ್ಯ ಪ್ರದರ್ಶಿಸಿದರು. ಸ್ಪರ್ಧೆಯಲ್ಲಿ ಸುಡೋಕನ್ ಮಾರ್ಷಲ್ ಆರ್ಟ್ ಅಕಾಡೆಮಿಯ ತಂಡವು 5 ಚಿನ್ನ, 8 ಬೆಳ್ಳಿ ಮತ್ತು 12 ಕಂಚಿನ ಪದಕಗಳನ್ನು ಗೆಲ್ಲುವ ಮೂಲಕ ಹೆಚ್ಚಿನ ಗೆಲುವನ್ನು ತನ್ನದಾಗಿಸಿಕೊಂಡಿದೆ. ಈ ಮೂಲಕ ತಂಡಕ್ಕೆ ಚಾಂಪಿಯನ್ಶಿಪ್ ಟ್ರೋಫಿ ಸಿಕ್ಕಿದೆ. ಕರಾಟೆ ಕಲಿಕೆಯಲ್ಲಿನ ಶಿಸ್ತು, ಏಕಾಗ್ರತೆ ಮತ್ತು ಶ್ರಮವು ಈ ವಿಜಯದ ಮೂಲಕ ವ್ಯಕ್ತವಾಗಿದೆ.ಮ ಸ್ಪರ್ಧೆಯಲ್ಲಿನ ಗೆಲುವಿಗೆ ನಿರಂತರವಾಗಿ ಬೆಂಬಲ ನೀಡಿ ಪ್ರೋತ್ಸಾಹಿಸಿದ ಅಖಿಲ ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಸಿಯೇಷನ್ ಹನ್ಸಿ ಅರುಣ್ ಮಾಚಯ್ಯ (ಅಧ್ಯಕ್ಷರು) ಮತ್ತು ಭಾರ್ಗವ್ ರೆಡ್ಡಿ (ಪ್ರಧಾನ ಕಾರ್ಯದರ್ಶಿ) ಹಾಗೂ ಶಾಲೆಯ ಪ್ರಾಂಶುಪಾಲರಾದ ಡಾ. ಏಂಜೆಲ್ ಮೇರಿ ಅವರಿಗೆ ಅಕಾಡೆಮಿಯು ಧನ್ಯವಾದ ತಿಳಿಸಿದೆ.

2 ಲಕ್ಷ ರು. ವಂಚನೆ: ದೂರು ದಾಖಲು

ಬೆಂಗಳೂರು: ಸೈಬರ್ ವಂಚಕರು ಪರಿವಾಹನ್ ಹೆಸರಿನಲ್ಲಿ ಎಪಿಕೆ ಫೈಲ್ ಕಳಿಸಿ, ಒಟಿಪಿ ಕೇಳಿ, ನಂತರ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ದೋಚಿದ ಘಟನೆ ಮಲ್ಲಸಂದ್ರದ ಕಲ್ಯಾಣನಗರದಲ್ಲಿ ಬೆಳಕಿಗೆ ಬಂದಿದೆ.

ಶ್ರೀಕೃಷ್ಣ ಡ್ರೈವಿಂಗ್ ಸ್ಕೂಲ್‌ನ ಮಾಲೀಕ ರಾಘವೇಂದ್ರ ಎಂಬವರು ವಂಚಿತರಾಗಿದ್ದು, ಇತ್ತೀಚೆಗೆ ತಮ್ಮ ವಾಹನಗಳ ಚಾಲನೆ ಸಂಬಂಧಿತ ದಂಡವನ್ನು ಪರಿಶೀಲಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಅವರ ಮೊಬೈಲ್‌ಗೆ ಪರಿವಾಹನ್ ಹೆಸರಿನಲ್ಲಿ ಸಂದೇಶ ಬಂದು, ಅಪರಿಚಿತ ಎಪಿಕೆ ಫೈಲ್ ಅನ್ನು ಡೌನ್ಲೋಡ್ ಮಾಡಲು ಸೂಚನೆ ನೀಡಲಾಯಿತು. ಅವರು ಫೈಲ್ ಓಪನ್ ಮಾಡಿ ಒಟಿಪಿ ನಮೂದಿಸಿದ ತಕ್ಷಣವೇ, ಬ್ಯಾಂಕ್ ಖಾತೆಯಿಂದ ಎರಡು ಲಕ್ಷ ರೂಪಾಯಿ ಹಣವನ್ನು ಶಾಪಿಂಗ್ ಖರೀದಿಗೆ ಬಳಸಲಾಗಿದೆ. ಸೈಬರ್ ಅಪರಾಧಿಗಳು ರಾಘವೇಂದ್ರ ಅವರ ಹೆಸರಿನಲ್ಲಿ ಫ್ಲಿಪ್ಕಾರ್ಟ್ ಮೂಲಕ ಮೊಬೈಲ್ ಫೋನ್ ಸೇರಿದಂತೆ ಇತರ ವಸ್ತುಗಳನ್ನು ಖರೀದಿಸಿ ವಂಚನೆ ಮಾಡಿದ್ದಾರೆ. ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸೈಬರ್ ಕ್ರೈಂ ವಿಭಾಗ ತನಿಖೆ ಆರಂಭಿಸಿದ್ದಾರೆ. ಸಾರ್ವಜನಿಕರು ಈ ರೀತಿಯ ಎಪಿಕೆ ಫೈಲ್ ಗೆ ಸ್ಪಂದಿಸುವ ಮೊದಲು ಖಚಿತತೆ ದೃಢಪಡಿಸಿಕೊಳ್ಳಬೇಕೆಂದು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಹನುಮಂತರಾಜು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.278/2025

ಅರ್ಜಿದಾರರು: ಶ್ರೀಮತಿ. ಗೌರಮ್ಮ ಕೋಂ ಲೇಟ್ ರಾಮಯ್ಯ ವಯಸ್ಸು 76 ವರ್ಷ ವಾಸ: ಕೊಳ್ಳಿಗನಹಳ್ಳಿ ಗ್ರಾಮ, ಕೊಳ್ಳಿಗನಹಳ್ಳಿ ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳ್ಳಿಗನಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ಮಾವ, 2,5,8&9ನೇ ಅರ್ಜಿದಾರರ ತಾತ ಮತ್ತು 3,4,6&7ನೇ ಅರ್ಜಿದಾರರ ಮುತ್ತಾತನವರಾದ ಶ್ರೀ ಚಿಕ್ಕನಂಜಯ್ಯ ಬಿನ್ ಲೇಟ್ ಶೊಂಭಯ್ಯರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಳ್ಳಿಗನಹಳ್ಳಿ ಗ್ರಾಮದಲ್ಲಿ ದಿನಾಂಕ: 23.10.1985ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 06/09/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025ರ ಜುಲೈ 28ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ವಿನೋದ್.ಕೆ, ವಕೀಲರು
ಕನಕಪುರ
ಸ್ಥಳ : ಕನಕಪುರ
ದಿನಾಂಕ: 19/07/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.277/2025

ಅರ್ಜಿದಾರರು: ಶ್ರೀಮತಿ. ಗೌರಮ್ಮ ಕೋಂ ಲೇಟ್ ರಾಮಯ್ಯ ವಯಸ್ಸು 76 ವರ್ಷ ವಾಸ: ಕೊಳ್ಳಿಗನಹಳ್ಳಿ ಗ್ರಾಮ, ಕೊಳ್ಳಿಗನಹಳ್ಳಿ ಅಂಚೆ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ಹಾರೋಹಳ್ಳಿ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳ್ಳಿಗನಹಳ್ಳಿ ವೃತ್ತ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ಗಂಡ, 2 ಮತ್ತು 5ನೇ ಅರ್ಜಿದಾರರ ಮಾವ, 3,4,6&7ನೇ ಅರ್ಜಿದಾರರ ತಾತ, 8 ಮತ್ತು 9ನೇ ಅರ್ಜಿದಾರರ ತಂದೆಯವರಾದ ಶ್ರೀ ಪಿ.ಯು.ರಾಮಯ್ಯ ಬಿನ್ ಲೇಟ್ ಚಿಕ್ಕನಂಜಯ್ಯರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕೊಳ್ಳಿಗನಹಳ್ಳಿ ಗ್ರಾಮದಲ್ಲಿ ದಿನಾಂಕ: 17.10.1994ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 06/09/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜುಲೈ 28ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ವಿನೋದ್.ಕೆ, ವಕೀಲರು
ಕನಕಪುರ
ಸ್ಥಳ : ಕನಕಪುರ
ದಿನಾಂಕ: 19/07/2025

PUBLIC NOTICE

The General Public is hereby informed that my client **Sri. Asadulla Khan S/o late Amanulla Khan** R/a No. 36, 4th Cross, Pipe Line West, K.B. Nagar, Bangalore-560026 is intending to purchase the immovable vacant Site property bearing No. 1682, 4th Block, Sir M. Visveswaraiah Layout, Bangalore measuring East to West 9 meters and North to South 12 meters from its absolute owner Sri. P. Ganesh Babu S/o C. Ponguruswamy R/a No. 619, 4th 'B' Cross, 8th Main Road, RPC Layout, Vijayanagar, Bengaluru-40.

If anybody is having any objection, claim, interests, dispute for the above intended sale transaction he/she may contact the undersigned with the relevant documents to substantiate his/her/their objections/ claims/details of disputes **within 5 days** from the date of this publication. Failing which the purchaser named above will proceed to complete the sale transaction with the above owners as if there are no third party claims/objections/dispute in respect of the aforesaid property and thereafter no claims/objections/ dispute will be entertained.

K.N. Subba Reddy Associates, Advocates,
OFFICE: No. 200, 11th Cross, Wilson Garden, Bangalore-560027, Contact: 9886075362

ಸಾರ್ವಜನಿಕ ಸೂಚನೆ
ಕೇಂದ್ರ ಸರ್ಕಾರದ ಎದುರು
ರಿಜಿಸ್ಟ್ರಾರ್ ಆಫ್ ಕಂಪನೀಸ್
ಬೆಂಗಳೂರು ಇವರ ಎದುರು
ಎಲ್‌ಎಲ್‌ಪಿ ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾಯಿಸುವುದರ ಬಗ್ಗೆ ಜಾಹೀರಾತು
ಉಪ ಸೆಕ್ಷನ್ (3) ರ ಸೆಕ್ಷನ್ 13ರ ಸೀಮಿತ ಭಾಧ್ಯತಾ ಪಾಲುದಾರಿಕೆ ಕಾಯಿದೆ, 2008 ಮತ್ತು ನಿಯಮ 17 ರ ಸೀಮಿತ ಭಾಧ್ಯತಾ ಪಾಲುದಾರಿಕೆ ನಿಯಮ, 2009 ರ ವಿಷಯವಾಗಿ
ಮತ್ತು
ಇದರ ವಿಷಯವಾಗಿ
ಎಂಪಿಸಿ ಇಕಾಮ್ ಗ್ಲೋಬಲ್ ಎಲ್‌ಎಲ್‌ಪಿ
(LLPIN: ACK-1084)
ನೋಂದಾಯಿತ ಕಚೇರಿ: ಬ್ಲಾಕ್ 2 ಕೆಂಚೇನಹಳ್ಳಿ, ಮೈಸೂರು ರಸ್ತೆ, ಆರ್‌ವಿ ನಿಕೇತನ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ–560059
........ಅರ್ಜಿದಾರ

ಸಾರ್ವಜನಿಕರಿಗೆ ಈ ಸೂಚನೆಯು ಮೂಲಕ ತಿಳಿಯಪಡಿಸು ವುದೇನೆಂದರೆ, ಎಂಪಿಸಿ ಇಕಾಮ್ ಗ್ಲೋಬಲ್ ಎಲ್‌ಎಲ್‌ಪಿ ಸೆಕ್ಷನ್ 13(3)ರ ಸೀಮಿತ ಭಾಧ್ಯತಾ ಪಾಲುದಾರಿಕಾ ಕಾಯಿದೆ 2008 ರಂತೆ ರಿಜಿಸ್ಟ್ರಾರ್ ಆಫ್ ಕಂಪನಿಗಳ ಎದುರು ಕಂಪನಿಯ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯ"** ದಿಂದ **"ಪಶ್ಚಿಮ ಬಂಗಾಳ"** ಕ್ಕೆ ವರ್ಗಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗುವುದು.

ಯಾವುದೇ ವ್ಯಕ್ತಿಗೆ ಈ ಎಲ್‌ಎಲ್‌ಪಿ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್‌ನ್ನು, ಎಂಸಿಎ–21 ಪೋರ್ಟಲ್ (www.mca.gov.in) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ ಪೂರಕ ದಾಖಲೆಗಳೊಂದಿಗೆ **ರಿಜಿಸ್ಟ್ರಾರ್ ಆಫ್ ಕಂಪನೀಸ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು, ಕರ್ನಾಟಕ–560034** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಇಪ್ಪತ್ತ ಒಂದು (21) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಎಲ್‌ಎಲ್‌ಪಿ ಕಂಪನಿಯ ನೋಂದಾಯಿತ ಕಛೇರಿಯ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಬ್ಲಾಕ್ 2, ಕೆಂಚೇನಹಳ್ಳಿ, ಮೈಸೂರು ರಸ್ತೆ, ಆರ್‌ವಿ ನಿಕೇತನ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ–560059.

ಎಂಪಿಸಿ ಇಕಾಮ್ ಗ್ಲೋಬಲ್ ಎಲ್‌ಎಲ್‌ಪಿ ಪರವಾಗಿ
ಸಹಿ/–
ಗೌತಮ್ ಫತೇಹ್‌ಪುರಿಯ
(ಪದೋನ್ನತ ಪಾಲುದಾರ)
ಡಿಪಿಐಎನ್: 07801742
ದಿನಾಂಕ : 01.08.2025 ಸ್ಥಳ : ಬೆಂಗಳೂರು

THE SOUTH INDIA PAPER MILLS LIMITED
CIN : L85110KA1959PLC001352
Regd. Office: Chikkayana Chatra, Nanjangud - 571 302 Karnataka State
₹. In Lakhs except per share data

STATEMENT OF UNAUDITED FINANCIAL RESULTS FOR THE QUARTER ENDED 30TH JUNE 2025

Sl No	Particulars	Quarter Ended 30-06-2025	Previous Year ending 31-03-2025	Quarter Ended 30-06-2024
1.	Total income from operations	10,688.84	36,931.47	8,982.61
2.	Net profit for the period (before Tax, Exceptional and / or Extraordinary Items)	131.21	(1,366.38)	(380.17)
3.	Net profit for the period before Tax, (after Exceptional and / or Extraordinary Items)	131.21	(1,278.49)	(380.17)
4.	Net Profit for the period after tax,(after exceptional and / or extraordinary items)	98.16	(964.07)	(284.48)
5.	Total comprehensive Income for the period [comprising profit for the period (after tax) and other comprehensive income (after tax)]	98.16	(926.11)	(284.48)
6.	Equity Share Capital	1,875.00	1,875.00	1,875.00
7.	Reserves (excluding Revaluation Reserve as shown in the Balance Sheet of previous the year) i.e., Other Equity	19,103.33 (as on 31-03-2025)	19,103.33 (as on 31-03-2025)	20,067.42 (as on 31-03-2024)
8.	Earnings Per Share (of ₹ .10/- each) in ₹ . Basic :	0.52	(5.14)	(1.52)
	Diluted :	0.52	(5.14)	(1.52)

Note: 1. The above is an extract of the detailed format of Quarterly Financial Results filed with the Stock Exchange under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the website of BSE Limited at www.bseindia.com & Company's website www.sipaper.com and can be accessed by using the QR Code provided below

Place: Bangalore
Date: 31-07-2025

By Order of the Board
Sd/-
MANISH M PATEL
MANAGING DIRECTOR
DIN: 00128179

ಸ್ಪೇಸ್‌ವಿಜನ್ ಇಂಪೆಕ್ಸ್ ಪ್ರೈವೇಟ್ ಲಿಮಿಟೆಡ್ (ದಿವಾಳಿತನದಲ್ಲಿ)
ಲಿಕ್ವಿಡೇಟರ್‌ರವರ ಕಚೇರಿ: ಇ–504, ಇಸ್ಪಾಟಿಕ ಅಪಾರ್ಟ್‌ಮೆಂಟ್ಸ್, ಪ್ಲಾಟ್ –29, ಸೆಕ್ಟರ್–4, ದ್ವಾರಕ, ನವದೆಹಲಿ–110078
ಇ–ಮೇಲ್: liq.spacevision@gmail.com | ದೂ.ಸಂ./ಮೊಬೈಲ್ ಸಂ. 9995678610.

ಐಬಿಸಿ, 2016 ರ ಅಡಿ ಸ್ವತ್ತುಗಳ ಇ–ಹರಾಜು ಮಾರಾಟದ ಸೂಚನೆ

ಸ್ಪೇಸ್‌ವಿಜನ್ ಇಂಪೆಕ್ಸ್ ಪ್ರೈವೇಟ್ ಲಿಮಿಟೆಡ್ (ದಿವಾಳಿತನದಲ್ಲಿ) ಒಡೆತನದ ಸ್ವತ್ತುಗಳನ್ನು ಐಬಿಸಿ, 2016 ರ ಸೆಕ್ಷನ್ 35(ಎಫ್) ನಿಯಂತ್ರಣ 32 ಮತ್ತು 33ನ್ನು ಓದಿಕೊಂಡಂತೆ ಐಬಿಬಿಐ (ಲಿಕ್ವಿಡೇಶನ್ ಪ್ರಕ್ರಿಯೆ) ನಿಯಂತ್ರಣ 2016, ರ ಅಡಿ ಲಿಕ್ವಿಡೇಶನ್ ಎಸ್ಟೇಟ್ ರಚಿಸಿ "ಎಲ್ಲಿ ಏನಿದೆಯೋ ಹಾಗೆ", "ಯಾವುದು ಇದೆಯೋ ಹಾಗೆ", ಮತುತ "ಯಾವುದೇ ಅವಲಂಬನೆ ಇಲ್ಲದೆ", ಮಾರಾಟ ಮಾಡಲಾಗುವುದು.

ಮಾರಾಟಕ್ಕಿರುವ ಆಸ್ತಿಗಳ ಮೂಲ ವಿವರ:

ಸ್ವತ್ತಿನ ವಿಧ	ಸ್ಥಳ / ವಿಳಾಸ / ಪ್ರದೇಶ	ಮೀಸಲು ಬೆಲೆ (ರೂ.)	ಇಎಂಡಿ (ರೂ.)	ಹೆಚ್ಚಳ ಮೌಲ್ಯ (ಐಎನ್‌ಆರ್)
ಅಂಗಡಿ/ ಕಚೇರಿ	ಅಂಗಡಿ/ಕಚೇರಿಯು ಮುನ್ಸಿಪಲ್ ಉಪ ಸಂ. 84/47 ಎಫ್4, 5ನೇ ಮಹಡಿ, ಆಸ್ತಿ ನಂ. 84 (ಹಳೆ ನಂ. 12), ಜಂಚಾಮರಾಜೇಂದ್ರ ರಸ್ತೆ, ಬೆಂಗಳೂರು ಇಲ್ಲಿದ್ದು, ಸುಪರ್ ಬಿಲ್ಟಪ್ ಪ್ರದೇಶ 1293 ಚದರ ಅಡಿಗಳು ಮತ್ತು 8250ಚದರ ಅಡಿಗಳಲ್ಲಿ ಭಾಗ ಮಾಡಲಾಗದ ಪಾಲು 196.21 ಚದರ ಅಡಿಗಳು ಮತ್ತು ಚಕ್ಕುಬಂದಿ: ಉತ್ತರಕ್ಕೆ: ಬಿ. ಹೆಚ್. ಕೆ. ಷರೀಫ್ ಭೂಮಿ ದಕ್ಷಿಣಕ್ಕೆ: ಶಕೂರ್ ಸಹೋದರರ ಕಟ್ಟಡ, ಪೂರ್ವಕ್ಕೆ: ಜೆ. ಸಿ. ರಸ್ತೆ ಪಶ್ಚಿಮಕ್ಕೆ: ಕಾರ್ಪೊರೇಷನ್ ರಸ್ತೆ.	ರೂ. 58,00,000/ (ಐವತ್ತೆಂಟು ಲಕ್ಷ ರೂಪಾಯಿ ಮಾತ್ರ)	ರೂ. 5,80,000/ (ಐದು ಲಕ್ಷ ಎಂಭತ್ತು ಸಾವಿರ ರೂಪಾಯಿ ಮಾತ್ರ)	ರೂ. 50,000/– (ಐವತ್ತು ಸಾವಿರ ರೂಪಾಯಿ ಮಾತ್ರ)

ಸೈಟ್ ಭೇಟಿ/ಪರಿಶೀಲನೆ ಅವಧಿ	ಸೋಮವಾರದಿಂದ, 18.08.2025 ರಿಂದ ಶುಕ್ರವಾರ, 25.08.2025
ಬಿಡ್ ದಾಖಲೆ ಸಲ್ಲಿಸಲು ಮತ್ತು ಇಎಂಡಿ ಠೇವಣಿಗೆ ಕೊನೆಯ ದಿನಾಂಕ	ಸೋಮವಾರ, 25.08.2025 ಸಂಜೆ 7:00 ರವರೆಗೆ
ಇ–ಹರಾಜಿನ ದಿನಾಂಕ ಮತ್ತು ಸಮಯ	ಗುರುವಾರ, 28.08.2025 ರಿಂದ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30(ಪ್ರತಿಯೊಂದಕ್ಕೂ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ)

ಟಿಪ್ಪಣಿ:

1. ಉದ್ದೇಶಿತ ಬಿಡ್‌ದಾರರು ಅಗತ್ಯ ದಾಖಲೆಗಳನ್ನು ಅರ್ಹತಾ ಘೋಷಣೆ ಸೇರಿದಂತೆ ಸೆಕ್ಷನ್ 29ಎ ಯ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕರಪ್ಸಿ ಕೋಡ್ ಮೂಲಕ ಎಲೆಕ್ಟ್ರಾನಿಕ್ ಹರಾಜು ಫ್ಲ್ಯಾಟ್‌ಫಾರಂ ಮೂಲಕ ಸಲ್ಲಿಸಬೇಕು.
2. ಉದ್ದೇಶಿತ ಬಿಡ್ಡುದಾರರು ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಯನ್ನು ಬ್ಯಾಂಕ್‌ನೆಟ್ ಹರಾಜು ಫ್ಲ್ಯಾಟ್‌ಫಾರಂ ಮೂಲಕ ಸಲ್ಲಿಸಬೇಕು. ಒಂದು ವೇಳೆ ಬಿಡ್‌ದಾರರು ಅನರ್ಹವೆಂದು ಕಂಡು ಬಂದಲ್ಲಿ ಇಎಂಡಿ ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಒಂದು ವೇಳೆ ಯಾವುದೇ ಸ್ಪಷ್ಟೀಕರಣಕ್ಕಾಗಿ ಫ್ರೀಕ್ವೆಂಟ್ಲಿ ಆಸ್ಕ್‌ಡ್ ಕ್ವೆಶ್ಚನ್ಸ್ (ಎಫ್‌ಎಕ್ಯು) ಮತ್ತು ಮಾರ್ಗದರ್ಶಿ ದಾಖಲೆಗಳು www.ibbi.gov.in ನ್ನು ಆಧಾರ ಮಾಡಿಕೊಳ್ಳಬಹುದು. ಮುಂದುವರಿದು, ನೀವು ದೂ. ಸಂ. +91 8291220220 ಅಥವಾ ಶ್ರೀ ಅನಿಮೇಶ್ +91 9327493420 ಅಥವಾ ಇ–ಮೇಲ್ ಐಡಿ: support.baanknet@psballiance.com.
4. ಇ–ಹರಾಜಿನ ನಿಯಮ ಮತ್ತು ನಿಬಂಧನೆಗಳನ್ನು ಮತ್ತು ಕಾರ್ಪೊರೇಟ್ ಸಾಲಗಾರನ 'ಇ–ಹರಾಜು ಪ್ರಕ್ರಿಯೆ ಮೆಮರಾಂಡಮ್' ನ್ನು ವೆಬ್‌ಸೈಟ್ https://ibbi.baanknet.com ನಲ್ಲಿ ಲಭ್ಯವಿರುತ್ತದೆ. ಅಥವಾ ನೀವು liq.spacevision@gmail.com, ರವರಿಗೆ ಮನವಿ ಸಲ್ಲಿಸಬಹುದು, ಮೊಬೈಲ್ ಸಂ. 9995678610.

ಸಹಿ/–
ರಾಕೇಶ್ ಪ್ರಸಾದ್ ಖಂಡೇಲ್‌ವಾಲ್
ಸ್ಪೇಸ್‌ವಿಜನ್ ಇಂಪೆಕ್ಸ್ ಪ್ರೈ. ಲಿ.,ನ ಲಿಕ್ವಿಡೇಟರ್ (ಲಿಕ್ವಿಡೇಶನ್‌ನಲ್ಲಿ)
ದಿನಾಂಕ: 02.08.2025
ಸ್ಥಳ: ನವದೆಹಲಿ
BI Reg. No: IBBI/IPA-002/IP-N00639/2018-19/11950
ಮಾನ್ಯತೆ : 31.12.2025 ರವರೆಗೆ

indegene®
INDEGENE LIMITED
CIN No. L73100KA1998PLC102040
Regd Office: Aspen Block G4, 3rd Floor, Manyata Embassy Business Park, Outer Ring Road, Nagawara, Bengaluru - 560 045

EXTRACT OF UNAUDITED CONSOLIDATED FINANCIAL RESULTS FOR THE QUARTER ENDED 30 JUNE 2025

(All amounts in ₹ millions, except per share data)

Sl. No.	Particulars	Quarter ended 30 June 2025 Unaudited	Year ended 31 March 2025 Audited	Quarter ended 30 June 2024 Unaudited
1	Revenue from operations	7,608	28,393	6,765
2	Net profit for the period (before tax and exceptional items)	1,521	5,393	1,196
3	Net profit for the period before tax (after exceptional items)	1,521	5,393	1,196
4	Net profit for the period after tax (after exceptional items)	1,164	4,067	877
5	Total comprehensive income for the period	1,331	4,323	869
6	Equity share capital (Face value of ₹ 2 each)	479	479	479
7	Other equity		25,677	
8	Earnings per share (EPS) for the period (face value of ₹ 2 each) (Not annualised for interim periods)			
	(a) Basic EPS	4.86	17.15	3.79
	(b) Diluted EPS	4.82	17.02	3.76

Notes:
1. The above results have been reviewed by the Audit Committee meeting held on 29 July 2025 and approved by the Board of Directors at its meeting held on 31 July 2025. The statutory auditors have performed a limited review of the Consolidated Financial Results for the quarter ended 30 June 2025 and have issued an unmodified review report on the same.
2. The above Consolidated Financial Results of the Group have been prepared in accordance with Indian Accounting Standards ("Ind AS") 34 - Interim Financial Reporting, recognition and measurement principles of Indian Accounting Standards ("Ind AS") prescribed under Section 133 of the Companies Act, 2013, as amended, read with the relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015.
3. Standalone Information:

(All amounts in ₹ millions, except per share data)

Sl. No.	Particulars	Quarter ended 30 June 2025 Unaudited	Year ended 31 March 2025 Audited	Quarter ended 30 June 2024 Unaudited
1	Revenue from operations	2,556	10,936	2,586
2	Profit before tax	598	2,385	451
3	Net profit for the period	451	1,813	326
4	Other comprehensive income / (losses)	9	(13)	7
5	Total comprehensive income for the period	460	1,800	333

4. The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The detailed format of consolidated and standalone results of the Company are available on the National Stock Exchange of India Limited (URL: www.nseindia.com), the BSE Limited website (URL: www.bseindia.com) and on the Company's website (URL: www.indegene.com/investor-relations). The same can be accessed by scanning the QR code provided below.

Bengaluru
31 July 2025

For and on behalf of the Board of Directors
INDEGENE LIMITED

Manish Gupta
Chief Executive Officer and Executive Director

Adfactors 323/25

ಸಮಾಚಾರ ಸಣ್ಣದಲ್ಲ

ಜನರನ್ನು ಕಾಂಗ್ರೆಸ್ ಕೊಳ್ಳೆ ಹೊಡೆಯುತ್ತಿದೆ

ಬೆಂಗಳೂರು: ತೆರಿಗೆ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಬೆಂಗಳೂರು ನಗರದ ಜನರನ್ನು ಕೊಳ್ಳೆ ಹೊಡೆಯುತ್ತಿದೆ ಎಂದು ಜೆಡಿಎಸ್ ಆರೋಪಿಸಿದೆ. ಪಕ್ಷದ ಕಚೇರಿಯಲ್ಲಿ ಮಾತ ನಾಡಿದ ಮಾಜಿ ಶಾಸಕ ಎಚ್.ಎಂ. ರಮೇಶ್ ಗೌಡ, ಗ್ರೇಟರ್ ಬೆಂಗಳೂರು ಹೆಸರಿ ನಲ್ಲಿ ನಗರದಲ್ಲಿ ತೆರಿಗೆ ರಾಜ್ ಸೃಷ್ಟಿ ಮಾಡಲಾಗುತ್ತಿದೆ. ಈ ಲೂಟಿ ವಿರುದ್ಧ ನಮ್ಮ ಪಕ್ಷ ಹೋರಾಟ ನಡೆಸಲಿದೆ. ಕಾಂಗ್ರೆಸ್ ಸರಕಾರ ಎರಡು ವರ್ಷ ಪೂರೈಸಿದರೂ, ಒಂದೇ ಒಂದು ಕಾರ್ಯಕ್ರಮ ರೂಪಿಸಿಲ್ಲ. ಅದನ್ನು ಬಿಟ್ಟು ಜನರನ್ನು ಕಿತ್ತು ತಿನ್ನುವ ಕೆಲಸ ಮಾಡುತ್ತಿದೆ ಎಂದರು. ಪಕ್ಷದ ವತಿಯಿಂದ ಕಾನೂನು ಹೋರಾಟ ಮಾಡುತ್ತೇವೆ. ಬೆಂಗಳೂರು ನಗರ ಹಾಗೆಯೇ ಉಳಿಯಬೇಕು. ಬೆಂಗಳೂರು ನಗರವನ್ನು ಐದು ಭಾಗವನ್ನಾಗಿ ಮಾಡಿದ್ದೇ ಇಂಥ ಸುಲಿಗೆ ಮಾಡಲು. ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ಬಿಬಿಎಂಪಿ ಛಿದ್ರ ಮಾಡಿದ್ದು ಬೆಂಗಳೂರಿಗರಿಗೆ ಎಸಗಿದ ಅನ್ಯಾಯ. ರಿಯಲ್ ಎಸ್ಟೇಟ್ ದಂಧೆಗೆ ಬೆಲೆ ಬರಬೇಕು ಎಂದು ಗ್ರೇಟರ್ ಬೆಂಗಳೂರು ಮಾಡಿದ್ದಾರೆ. ಇದಕ್ಕೆ ಜೆಡಿಎಸ್ ಒಪ್ಪಲ್ಲ. ಇದು ಸರಕಾರದ ಬೇಜವಾಬ್ದಾರಿ ನಡೆ ಎಂದು ಟೀಕಿಸಿದರು.

ಪುಸ್ತಕಗಳಿಗೆ ರಿಯಾಯಿತಿ

ಬೆಂಗಳೂರು: ಆಗಸ್ಟ್ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ.50ರಷ್ಟು ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ, ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಪ್ರಾಧಿಕಾರದ ಪುಸ್ತಕಗಳನ್ನು ಶೇ.50ರಷ್ಟು ರಿಯಾಯಿತಿ ದರಗಳಲ್ಲಿ ಮಾರಾಟ ಮಾಡಲಾಗುತ್ತಿದೆ, ಅಲ್ಲದೆ ಕನ್ನಡ ಪುಸ್ತಕ ಪ್ರಾಧಿಕಾರದ ಆನ್ ಲೈನ್ https://kpp.karnataka.gov.in ನಲ್ಲಿ ಕೂಡ ಶೇ.50ರಷ್ಟು ರಿಯಾಯಿತಿ ಲಭ್ಯವಿದ್ದು, ಪುಸ್ತಕ ಪ್ರಿಯರು ಈ ಅವಕಾಶ ಬಳಸಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಕೋರಿದೆ.

ನಿವೃತ್ತಿ ಯೋಜನೆ ಮಾರ್ಗದರ್ಶಿ ಅವಶ್ಯ

ಬೆಂಗಳೂರು: ಜೀವನದಲ್ಲಿ ಉತ್ತಮ ಜೀವನ ನಿರೂಪಿಸಿಕೊಳ್ಳಲು ಯುವ ಹೂಡಿಕೆದಾರರಿಗೆ ನಿವೃತ್ತಿ ಯೋಜನೆ ಮಾರ್ಗದರ್ಶಿ ಅವಶ್ಯಕ ಎಂದು ಜಿಯೋಜಿತ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಕೆ.ವಿ. ಸುನಿಲ್ ಕುಮಾರ್ ಅವರು ತಿಳಿಸಿದ್ದಾರೆ.

ಹೆಚ್ಚಿನ ಯುವಜನರಿಗೆ, ನಿವೃತ್ತಿಯ ನಂತರ ಹಲವು ಆಲೋಚನೆಗಳು ಇರುತ್ತದೆ. ಭಾರತೀಯರು ಹೆಚ್ಚು ಕಾಲ ಬದುಕುತ್ತಿರುವುದರಿಂದ, ಕುಟುಂಬಗಳು ಚಿಕ್ಕದಾಗುತ್ತಿವೆ ಮತ್ತು ಹಣದುಬ್ಬರದೊಂದಿಗೆ ಆರೋಗ್ಯ ವೆಚ್ಚಗಳು ಏರುತ್ತಿವೆ. ನಿವೃತ್ತಿ ಯೋಜನೆ ಮಾಡುವ ದಿಕ್ಕಿನಲ್ಲಿ ಮೊದಲ ಹೆಜ್ಜೆ ಗುರಿ ಎಂದು ತಿಳಿಸಿದ್ದಾರೆ. ಜೀವನಶೈಲಿಯ ಆಕಾಂಕ್ಷೆಗಳು, ಆರ್ಥಿಕ ಗುರಿಗಳು ಮತ್ತು ಆರೋಗ್ಯ ದೃಷ್ಟಿಕೋನವನ್ನು ಅವಲಂಬಿಸಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ನಿವೃತ್ತಿಯ ನಂತರ ಅಪೇಕ್ಷಿತ ಜೀವನಶೈಲಿಯನ್ನು ನಿರ್ಧರಿಸುವುದು. ಸ್ವಯಂಸೇವಕರಾಗಲು ಅಥವಾ ನಿಮ್ಮ ಉತ್ಸಾಹವನ್ನು ಅನುಸರಿಸಲು ಬಯಸಲಾಗುತ್ತದೆ. ದೂರದೃಷ್ಟಿ ಇದ್ದರೆ ಹಣಕಾಸಿನ ಮಾರ್ಗಸೂಚಿ ಹೆಚ್ಚು ನಿಖರವಾಗಿರುತ್ತದೆ. ಮತ್ತು ಅಂದರೆ, ಪ್ರಸ್ತುತ ವೆಚ್ಚಗಳು ಮತ್ತು ಹಣದುಬ್ಬರ ಸೇರಿದಂತೆ ಭವಿಷ್ಯದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡು ಆ ಜೀವನಶೈಲಿ ಎಷ್ಟು ವೆಚ್ಚವಾಗುತ್ತದೆ ಎಂದು ನೀವು ಅಂದಾಜು ಮಾಡಬೇಕು, ಇದು ಕಾಲಾನಂತರದಲ್ಲಿ ಖರೀದಿ ಶಕ್ತಿಯನ್ನು ಕಡಿಮೆ ಮಾಡುತ್ತದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ವೇಶ್ಯಾವಾಟಿಕೆ: ಮೂವರ ಬಂಧನ

ಬೆಂಗಳೂರು: ಹೊರ ರಾಜ್ಯದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ಜಾಲಕ್ಕೆ ದೂಡಿದ್ದ ಆರೋಪದ ಮೇಲೆ ಮಹಿಳೆ ಸೇರಿ ಮೂವರನ್ನು ಕೆಂಗೇರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ಹರ್ಷ ಲೇಔಟ್‌ನ ನಾಲ್ಕನೇ ಕ್ರಾಸ್‌ನ ಮನೆಯೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಮನೆಯ ಮೇಲೆ ದಾಳಿ ನಡೆಸಿ ಪ್ರಮುಖ ಆರೋಪಿ ಗೌರಮ್ಮ ಸೇರಿ ಮೂವರನ್ನು ಬಂಧಿಸಲಾಯಿತು.

ಹೊರ ರಾಜ್ಯದ ಯುವತಿಯರನ್ನು ರಕ್ಷಿಸಲಾಗಿದೆ. ಆರೋಪಿಗಳು ಯುವತಿಯರಿಗೆ ಹಣದ ಆಮಿಷವೊಡ್ಡಿ ವೇಶ್ಯಾವಾಟಿಕೆ ಜಾಲಕ್ಕೆ ದೂಡುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು. ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ ಅಶ್ವತ್ಥ ನಾರಾಯಣ } ಮಾಜಿ ಡಿಸಿಎಂ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇದೆ. ಅಧಿಕಾರಿಗಳು ರಾಜ್ಯ ಸರಕಾರದ ಅಡಿಯಲ್ಲಿದ್ದಾರೆ. ಲೋಕಸಭೆ ಚುನಾವಣೆ ನಡೆದ ವೇಳೆ ರಾಜ್ಯದಲ್ಲಿ ಅವರದ್ದೆ ಸರಕಾರ ಇತ್ತು. ಚುನಾವಣೆ ವೇಳೆ ಇವರ ಅಧಿಕಾರಿಗಳೇ ರಿಟರ್ನಿಂಗ್ ಆಫೀಸರ್ಸ್ ಇದ್ದರು. ಈಗ ಸಾಕ್ಷಿ ಮಾತ್ರ ರಾಹುಲ್ ಗಾಂಧಿ ಬಳಿ ಅಂತಾರೆ.

ಫೇಕ್‌ನ್ಯೂಸ್, ದ್ವೇಷ ಭಾಷಣ ವಿರುದ್ಧ ಮುಂದಿನ ಅಧಿವೇಶನದೊಳಗೆ ಕಾನೂನು ಕ್ರಮ: ಗೃಹ ಸಚಿವ ಪರಮೇಶ್ವರ್

ಸುಳ್ಳು ಸುದ್ದಿ ಪ್ರಚಾರದ ವಿರುದ್ಧ ಕಠಿಣ ಕ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂದಿನ ಅಧಿವೇಶನದ ವೇಳೆಗೆ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮಕ್ಕೆ ಅಗತ್ಯ ಕ್ರಮವಹಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ, ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಾಂತಿ ಸೇರಿದಂತೆ ಇತರ ಅಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಿದರು.

ದೇಶಾದ್ಯಂತ ತಲೆನೋವಾಗಿರುವ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕುವುದು, ಆನ್‌ಲೈನ್ ಬೆಟ್ಟಿಂಗ್ ಆ್ಯಪ್, ದ್ವೇಷ ಭಾಷಣ ಹಾಗೂ ಭಾವನಾತ್ಮಕ ಪ್ರಚೋದನೆಗಳ ವಿರುದ್ಧ ಕಠಿಣ ಕಾನೂನುಗಳನ್ನು ತರಲು ರಾಜ್ಯ ಸರಕಾರ ಮುಂದಾಗಿದೆ. ಈ ಹಿಂದೆ ನಡೆದ ವಿಧಾನಸಭೆ ಅಧಿವೇಶನದಲ್ಲಿ ಶಾಸಕರು ಆನ್‌ಲೈನ್ ಗೇಮ್‌ಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅನಂತರ ಕೆಲವು ಘಟನೆಗಳಲ್ಲಿ ಆನ್‌ಲೈನ್ ಗೇಮ್ ಚಟಕ್ಕೆ ಒಳಗಾದ ಕೆಲವರು ಆತಹತ್ಯೆ ಮಾಡಿಕೊಂಡಿದ್ದ ಪ್ರಕರಣಗಳು ವರದಿಯಾಗಿದ್ದವು. ಮುಂದಿನ ಅಧಿವೇಶನದ ಒಳಗೆ ಕಠಿಣ ಕಾನೂನುಗಳನ್ನು ರೂಪಿಸಲು ಸರಕಾರ ಮುಂದಾಗಿದೆ. ಅದೇ ರೀತಿ ಸುಳ್ಳು ಸುದ್ದಿಗಳು ವದಂತಿಗಳು ಸಾರ್ವಜನಿಕ ವಲಯದಲ್ಲಿ ಶಾಂತಿ ಭಂಗಕ್ಕೆ ಅವಕಾಶ ಮಾಡಿಕೊಡುತ್ತಿವೆ. ಅವುಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲೂ ಸಭೆಯಲ್ಲಿ ಚರ್ಚೆಗಳಾಗಿವೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸಾಮಾಜಿಕ ಮಾಧ್ಯಮದ ಮೇಲೆ ನಿಗಾ: ಇನ್ನು ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ. ಪರಮೇಶ್ವರ, ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳ ಮೇಲೆ ನಿರಂತರ ನಿಗಾ ಇರಿಸಲಾಗಿದ್ದು, ಸುಳ್ಳು ಸುದ್ದಿ ಹರಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಭೇಟಿ

ಇದೇ ವೇಳೆ ಧರ್ಮಸ್ಥಳ ಪ್ರಕರಣದ ತನಿಖೆಯ ನೇತೃತ್ವ ವಹಿಸಿರುವ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಶುಕ್ರವಾರ ರಾಜ್ಯ ಗೃಹ ಸಚಿವರನ್ನು ಅವರ ನಿವಾಸದಲ್ಲಿ ಭೇಟಿಯಾದರು. ಕೇಂದ್ರ ಸರಕಾರದ ಹುದ್ದೆಗಳಿಗೆ ಪರಿಗಣಿಸಲಾಗುತ್ತಿರುವ ಮಹಾನಿರ್ದೇಶಕರ ಶ್ರೇಣಿಯ ಅಧಿಕಾರಿಗಳ ಪಟ್ಟಿಯಲ್ಲಿ ಅವರ ಹೆಸರು ಕಾಣಿಸಿಕೊಂಡ ನಂತರ ಅವರನ್ನು ಬದಲಾಯಿಸಬಹುದು ಎಂಬ ಊಹಾಪೋಹಗಳ ಎದ್ದಿವೆ. ಇದರ ನಡುವೆಯೇ ಮೊಹಂತಿ ಅವರ ಭೇಟಿ ಸಾಕಷ್ಟು ಕುತೂಹಲ ಕೆರಳಿಸಿದೆ. ಮೊಹಂತಿ ಪ್ರಸ್ತುತ ಕರ್ನಾಟಕದಲ್ಲಿ ಪೊಲೀಸ್ ಮಹಾನಿರ್ದೇಶಕ (ಆಂತರಿಕ ಭದ್ರತಾ ವಿಭಾಗ) ಆಗಿದ್ದಾರೆ. ಸಭೆಯ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ಧರ್ಮಸ್ಥಳ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಇದು ಅಲ್ಲ, ಏಕೆಂದರೆ ಅದನ್ನು ಚರ್ಚಿಸುವುದು ಸೂಕ್ತವಲ್ಲ ಎಂದು ಸ್ಪಷ್ಟಪಡಿಸಿದರು.

- ಸುಳ್ಳು ಸುದ್ದಿಗಳು ಸಾರ್ವಜನಿಕ ವಲಯದಲ್ಲಿ ಶಾಂತಿ ಭಂಗಕ್ಕೆ ಅವಕಾಶ ಮಾಡಿಕೊಡುತ್ತಿವೆ.
- ಕಡಿವಾಣ ಹಾಕುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ
- ಸಾಮಾಜಿಕ ಮಾಧ್ಯಮಗಳ ಮೇಲೆ ನಿರಂತರ ನಿಗಾ

ಕಳೆದ ಎರಡು ದಶಕಗಳಲ್ಲಿ ಧರ್ಮಸ್ಥಳದಲ್ಲಿ ನಡೆದ ಸಾಮೂಹಿಕ ಕೊಲೆ, ಅತ್ಯಾಚಾರ ಮತ್ತು ಸಾಮೂಹಿಕ ಅಂತ್ಯಕ್ರಿಯೆಗಳ ಆರೋಪಗಳನ್ನು ಪರಿಶೀಲಿಸಲು ರಾಜ್ಯ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಈ ಸಂಬಂಧ ಅನಾಮಧೇಯ ಮಾಜಿ ನೌಕರನೊಬ್ಬ ನೀಡಿದ ಮಾಹಿತಿ ಮೇರೆಗೆ ಅಸ್ಥಿಪಂಜರಗಳ ಹೊರತೆಗೆಯುವ ಕೆಲಸ ಮಾಡಲಾಗುತ್ತದೆ. ಇದೇ ವಿಚಾರವಾಗಿ ಸಾಕಷ್ಟು ಊಹಾಪೋಹಗಳು ಹರಿದಾಡುತ್ತಿದ್ದು, ನಾವು ಇದನ್ನು ಗಮನಿಸುತ್ತಿದ್ದೇವೆ.

-ಪರಮೇಶ್ವರ್, ಗೃಹ ಸಚಿವ

ಮೆಟ್ರೋ ಹಳದಿ ಮಾರ್ಗಕ್ಕೆ ನಾಲ್ಕನೇ ರೈಲಿನ ಆಗಮನ

ಬೆಂಗಳೂರು: ನಮ್ಮ ಮೆಟ್ರೋದ ಬಹು ನಿರೀಕ್ಷಿತ ಹಳದಿ ಮಾರ್ಗದ ಕಾರ್ಯಾಚರಣೆಗೆ ಈಗಾಗಲೇ ಮೂರನೇ ರೈಲು ಸಂಚಾರಕ್ಕೆ ಸಿದ್ಧವಾಗಿದ್ದು, ನಾಲ್ಕನೇ ರೈಲುಗಳ ಪೂರೈಕೆ ಆರಂಭವಾಗಿದೆ.

ಪಶ್ಚಿಮ ಬಂಗಾಳದಲ್ಲಿರುವ ಟಿಟಾಗರ್ ಮೆಟ್ರೋ ರೈಲು ಉತ್ಪಾದನಾ ಘಟಕದಿಂದ ರೈಲು ಪೂರೈಕೆ ಈವರೆಗೆ ವಿಳಂಬವಾಗಿತ್ತು. ಇದೀಗ ಒಪ್ಪಂದದಂತೆ ಸೋಮವಾರ ಹಾಗೂ ಮಂಗಳವಾರ ರಾತ್ರಿ ನಾಲ್ಕನೇ ಚಾಲಕರಹಿತ ಮೆಟ್ರೋ ಬೋಗಿಗಳನ್ನು ರವಾನಿಸಲಾಗಿದ್ದು, ಅಲ್ಲಿಂದ ಪ್ರಯಾಣ ಆರಂಭವಾಗಿದೆ ಎಂದು ಟಿಟಾಗರ್ ರೈಲು ವ್ಯವಸ್ಥೆ ಲಿಮಿಟೆಡ್ ಮುಖ್ಯಸ್ಥರು ಬೆಂಗಳೂರು ಮೆಟ್ರೋ ರೈಲು ನಿಗಮಕ್ಕೆ ಮಾಹಿತಿ ನೀಡಿದ್ದಾರೆ. ಐಟಿ ಕಾರಿಡಾರ್‌ಗೆ ಸಂಪರ್ಕ ಕಲ್ಪಿಸುವ ಆರ್‌ವಿ. ರಸ್ತೆ-ಬೊಮ್ಮಸಂದ್ರ ಹಳದಿ ಮಾರ್ಗವು 19.15 ಕಿಮೀ. ಇದ್ದು, ಈ ಮಾರ್ಗದ ಕಾರ್ಯಾಚರಣೆ ಆರಂಭಕ್ಕೆ ರೈಲುಗಳು ಅಗತ್ಯವಾಗಿದೆ. ಸದ್ಯ ನಾಲ್ಕನೇ ರೈಲಿನ ಬೋಗಿಗಳು ಮಳೆ ಹಾಗೂ ಇತರ ಕಾರಣದಿಂದ ರವಾನಿಸುವುದು ವಿಳಂಬವಾಗಿದೆ. ಒಟ್ಟು ಆರು ಬೋಗಿಗಳನ್ನು ಹೊತ್ತ ಲಾರಿಯು ಬೆಂಗಳೂರಿನತ್ತ ಬರುತ್ತಿದ್ದು, ಇವೆಲ್ಲವು ಚಾಲಕ ರಹಿತ ಬೋಗಿಗಳಾಗಿವೆ.

ಮಾರ್ಗ ಕಾರ್ಯಾಚರಣೆ ಯಾವಾಗ?: ನಾಲ್ಕನೇ ರೈಲು ಸೆಟ್ ಮುಂದಿನ ಎರಡು ವಾರಗಳಲ್ಲಿ ಬೆಂಗಳೂರು ಮೆಟ್ರೋ ಡಿಪೋ ತಲುಪಲಿದ್ದು, ನಡುವೆ ಮಳೆ, ರಸ್ತೆ ಸಮಸ್ಯೆ ಎದುರಾದರೆ ಎರಡು ದಿನ ತಡವಾಗಬಹುದು. ಮೆಟ್ರೋ ಕೋಚ್ ಭಾರದ ಆಧಾರದಲ್ಲಿ ಲಾರಿಗಳು ನಿಗದಿತ ವೇಗದಲ್ಲಿ ಮಾತ್ರ ಚಲಿಸುತ್ತವೆ. ಸಂಚಾರ ದಟ್ಟಣೆ ಜತೆಗೆ ಸಾಗಿಬರುವುದರಿಂದ ಒಂದೆರಡು ದಿನ ಹೆಚ್ಚು ಕಡಿಮೆ ಆಗುವ ನಿರೀಕ್ಷೆ ಇದೆ.

ಆಗಸ್ಟ್ 3ಕ್ಕೆ ಚರಣ್ ಸಹಕಾರಿ ಬ್ಯಾಂಕ್ ಸರ್ವ ಸದಸ್ಯರ ಸಭೆ

ಬೆಂಗಳೂರು: ನಗರದ ಬಸವನಗುಡಿಯಲ್ಲಿರುವ ಶ್ರೀ ಚರಣ್ ಕೋ-ಅಪರೇಟೀವ್ ಬ್ಯಾಂಕ್‌ನ 29ನೇ ಸರ್ವ ಸದಸ್ಯರ ಸಭೆ ಆಗಸ್ಟ್ 3ರ ಭಾನುವಾರ ನಡೆಯಲಿದೆ. ನಗರದ ಶಂಕರಪುರ ಪಂಪ ಮಹಾಕವಿ ರಸ್ತೆಯಲ್ಲಿರುವ ವಿದ್ಯಾಶ್ರೀ ವಿದ್ಯಾವಿಹಾರ ಸಭಾಂಗಣದಲ್ಲಿ ಸರ್ವ ಸದಸ್ಯರ ಸಭೆ ನಡೆಯಲಿದ್ದು, ನಿಮ್ಹಾನ್ಸ್ ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕರೂ ಆಗಿರುವ ಮಾನಸಿಕ ರೋಗಿಗಳಿಗೆ ಉಚಿತ ಸಮಾಲೋಚನೆ ನೀಡುತ್ತಿರುವ ಸಮಾಧಾನ ಸಂಸ್ಥೆಯ ಸಂಸ್ಥಾಪಕ ಪದ್ಮಶ್ರೀ ಡಾ.ಸಿ.ಆರ್.ಚಂದ್ರಶೇಖರ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಎಸ್‌ಎಸ್‌ಎಲ್ ಸಿ ಮತ್ತು ಪಿಯುಸಿಯಲ್ಲಿ ಶೇ. 95ಕ್ಕಿತ ಹೆಚ್ಚ ಅಂಕ ಪಡೆದ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಇದೇ ವೇಳೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಸಭೆಯಲ್ಲಿ ಭಾಗವಹಿಸಿ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡಬೇಕು ಎಂದು ಚರಣ್ ಕೋ ಅಪರೇಟೀವ್ ಬ್ಯಾಂಕ್‌ನ ಸಂಸ್ಥಾಪಕ ಹಾಗೂ ಅಧ್ಯಕ್ಷ ಬಿ.ವಿ. ದ್ವಾರಕಾನಾಥ್ ಅವರು ಸದಸ್ಯರಲ್ಲಿ ಮನವಿ ಮಾಡಿದ್ದಾರೆ.

40 ಕೋಟಿ ಅವ್ಯವಹಾರ: ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿ ವತಿಯಿಂದ ವಿವಿಧ ಕಾಮಗಾರಿಗಳಲ್ಲಿ ಬಿಬಿಎಂಪಿ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಸುಮಾರು 40 ಕೋಟಿ ರು. ಅಕ್ರಮ ಎಸಗಿದ್ದ ಪರಿಣಾಮ ಕ್ಷೇತ್ರದ ಶಾಸಕರಾದ ಮುನಿರತ್ನ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇದರ ಪರಿಣಾಮವಾಗಿ ಶುಕ್ರವಾರ ಕಾಮಗಾರಿ ನಡೆದ ಸ್ಥಳಕ್ಕೆ ಭೇಟಿ ನೀಡಿದ ಲೋಕಾಯುಕ್ತ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಶಾಸಕರಾದ ಮುನಿರತ್ನ ಹಾಜರಿದ್ದರು.

ದೆಹಲಿಯಲ್ಲಿ ನಡೆದ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ, ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ವಿವಿಧ ಖಾಸಗಿ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಪುಷ್ಪ ಪ್ರದರ್ಶನದಲ್ಲಿ ರಾಣಿ ಚೆನ್ನಮ್ಮ, ರಾಯಣ್ಣ

ಬೆಂಗಳೂರು: ವೀರನಾರಿ ಕಿತ್ತೂರು ರಾಣಿ ಚೆನ್ನಮ ಹಾಗೂ ವೀರಸೇನಾನಿ ಸಂಗೊಳ್ಳಿ ರಾಯಣ್ಣ ಅವರು ಹೂವಿನಲ್ಲಿ ಅರಳಲಿದ್ದಾರೆ. ಅ. 7 ರಿಂದ 15ರ ವರೆಗೆ ನಗರದ ಲಾಲ್‌ಬಾಗ್‌ನಲ್ಲಿ ಆಯೋಜಿಸಲಾಗಿರುವ ಫಲಪುಷ್ಪ ಪ್ರದರ್ಶನದಲ್ಲಿ ಚೆನ್ನಮ್ಮ ಹಾಗೂ ರಾಯಣ್ಣ ಅವರು ಬ್ರಿಟಿಷರ ವಿರುದ್ಧ ಹೋರಾಡಿದ್ದ ವಿಷಯಾಧಾರಿತ ಕಥೆಯನ್ನು ಹೂವಿನಲ್ಲಿ ಬಿಡಿಸಲು ತೀರ್ಮಾನಿಸಲಾಗಿದೆ.

218ನೇ ಪ್ರದರ್ಶನದಲ್ಲಿ ಹೊಸ ಥೀಮ್‌ನಲ್ಲಿ ಹೂವಿನ ಲೋಕವನ್ನು ಧರೆಗಿಳಿಸಲು ಯೋಜಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆ ನಿರ್ದೇಶಕ ಜಗದೀಶ್ ತಿಳಿಸಿದ್ದಾರೆ. ಸ್ವಾತಂತ್ರ್ಯ ದಿನದ ಅಂಗವಾಗಿ ಫಲಪುಷ್ಪ ಪ್ರದರ್ಶನಕ್ಕೆ ತೋಟಗಾರಿಕೆ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಆಗಸ್ಟ್ 7ರಿಂದ ಆಗಸ್ಟ್ 18ರ ವರೆಗೆ ಪುಷ್ಪ ಪ್ರದರ್ಶನ ನಡೆಯಲಿದೆ. 218ನೇ ಫ್ಲವರ್ ಶೋನಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ ಪ್ರದರ್ಶನ ಇರಲಿದೆ ಎಂದರು. ಚೆನ್ನಮ್ಮ ಮತ್ತು ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿದ ಕಥೆ ಪ್ರದರ್ಶನ ಹೂವಿನಲ್ಲಿ ಅರಳಲಿದೆ.

ರಕ್ಷಕ್ ಕಾರು ಅಪಘಾತ: ಬೈಕ್ ಸವಾರನಿಗೆ ಗಾಯ

ಬೆಂಗಳೂರು: ಬಿಗ್ ಮಾಜಿ ಸ್ಪರ್ಧಿ ರಕ್ಷಕ್ ಬುಲೆಟ್ ಅವರಿದ್ದ ಕಾರು ಹಾಗೂ ಬೈಕ್ ನಡುವೆ ಮಾನ್ಯತಾ ಟೆಕ್‌ಪಾರ್ಕ್ ಬಳಿ ಗುರುವಾರ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಗಾಯಗೊಂಡಿದ್ದಾರೆ. ಶಿಡ್ಲಘಟ್ಟದ ವೇಣುಗೋಪಾಲ ಅವರ ಕಾಲು ಮುರಿದಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾನ್ಯತಾ ಟೆಕ್‌ಪಾರ್ಕ್ ಬಳಿಯ ತಿರುವಿನಲ್ಲಿ ಗುರುವಾರ ಬೆಳಗ್ಗೆ 11.30ರ ಸುಮಾರಿಗೆ ಅಪಘಾತ ಸಂಭವಿಸಿತ್ತು. ರಕ್ಷಕ್ ಬುಲೆಟ್ ಅವರು ಕಾರಿನಲ್ಲಿ ಬರುತ್ತಿದ್ದರು. ಅದೇ ರಸ್ತೆಯಲ್ಲಿ ವೇಣುಗೋಪಾಲ ಮತ್ತು ಅವರ ಸ್ನೇಹಿತೆ ಬೈಕ್ನಲ್ಲಿ ಬರುತ್ತಿದ್ದರು. ಆಗ ರಕ್ಷಕ್, ಅವರಿದ್ದ ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಕೆಳಕ್ಕೆ ಬಿದ್ದ ವೇಣುಗೋಪಾಲ ಅವರ ಕಾಲಿಗೆ ತೀವ್ರ ಪೆಟ್ಟಾಗಿದೆ.



ಬೆಂಗಳೂರಿನ ಗಿರಿನಗರದ ಶ್ರೀರಾಮಚಂದ್ರಾಪುರಮಠದ ಶಾಖಾಮಠದಲ್ಲಿ ಶ್ರೀರಾಮಚಂದ್ರಾಪುರಮಠದ ನೂತನ ಆಡಳಿತ ವ್ಯವಸ್ಥೆ ಶಾಸನತಂತ್ರದ ಕಾರ್ಯಾಗಾರ ನಡೆಯಿತು. ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ ತಿಮ್ಮಪ್ಪಯ್ಯ ಮಡಿಯಾಲ್ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಈ ವೇಳೆ ಶಾಸನತಂತ್ರದ ಅಧ್ಯಕ್ಷರಾದ ಮೋಹನ ಭಾಸ್ಕರ ಹೆಗಡೆ, ವಿದ್ವಾನ್ ಜಗದೀಶಶರ್ಮಾ ಸಂಪ, ಸೇರಿ ಹಲವರು ಇದ್ದರು.

100 ಕೋಟಿ ಹೂಡಿಕೆಗೆ ಉದ್ಯಮಿ ಪಾಲ್‌ಪು ಸಿದ್ಧ | ಸಚಿವ ಶಿವಾನಂದ್ ಪಾಟೀಲ್ ಜತೆ ಚರ್ಚೆ

ಕರ್ನಾಟಕದ ಜವಳಿ ಕ್ಷೇತ್ರಕ್ಕೆ ಚೀನಾ ಬಲ

ಬೆಂಗಳೂರು: ರಾಜ್ಯದ ಜವಳಿ ಕ್ಷೇತ್ರಕ್ಕೆ ದೊಡ್ಡ ಉತ್ತೇಜನ ಸಿಗುವ ಲಕ್ಷಣಗಳು ಗೋಚರಿಸಿದ್ದು, ಚೀನಾದ ಖ್ಯಾತ ಜವಳಿ ಉದ್ಯಮಿ ಪಾಲ್ ಪು ಅವರು ಕರ್ನಾಟಕದಲ್ಲಿ 100 ಕೋಟಿ ರು. ಬಂಡವಾಳ ಹೂಡಲು ಮುಂದೆ ಬಂದಿದ್ದಾರೆ. ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿದರೆ ತಕ್ಷಣವೇ ಹೂಡಿಕೆ ಮಾಡಲು ಸಿದ್ಧ ಎಂದು ಅವರು ರಾಜ್ಯ ಸರಕಾರಕ್ಕೆ ಭರವಸೆ ನೀಡಿದ್ದಾರೆ.

ಶುಕ್ರವಾರ ವಿಧಾನಸೌಧದಲ್ಲಿ ಜವಳಿ ಸಚಿವ ಶಿವಾನಂದ ಪಾಟೀಲ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಪಾಲ್ ಪು, ತಮ್ಮ ಹೂಡಿಕೆ ಯೋಜನೆ ವಿವರಿಸಿದರು. ಮೊದಲ ಹಂತದಲ್ಲಿ 100 ಕೋಟಿ ರು. ಹೂಡಿಕೆ ಮಾಡುವ ಮೂಲಕ ಹಳೆಯ ಮೈಸೂರು ಭಾಗದಲ್ಲಿ ಉದ್ಯಮ ಸ್ಥಾಪಿಸಲಾಗುವುದು.

ಈ ಯೋಜನೆಯಿಂದ ಸುಮಾರು ಐದು ಸಾವಿರ ಜನರಿಗೆ ನೇರ ಉದ್ಯೋಗ ದೊರೆ ಯಲಿದೆ ಎಂದು ತಿಳಿಸಿದರು. ಈ ಯೋಜನೆಗೆ ತಕ್ಷಣವೇ 20 ಎಕರೆ ಭೂಮಿಯ ಅಗತ್ಯವಿದೆ. ಕರ್ನಾಟಕ ಸರಕಾರದ ಸಂಪೂರ್ಣ ಸಹಕಾರವನ್ನು ನಿರೀಕ್ಷಿಸುವುದಾಗಿಯೂ ಅವರು ಹೇಳಿದರು.

ತಕ್ಷಣವೇ ಕಾರ್ಯಪ್ರವೃತ್ತರಾದ ಸಚಿವರು, ಉದ್ಯಮ ಸ್ಥಾಪನೆಗೆ ಸೂಕ್ತವಾದ ಸ್ಥಳಗಳನ್ನು ಪಾಲ್ ಪು ಅವರಿಗೆ ತೋರಿಸುವಂತೆ ಮತ್ತು ಅವರು ಒಪ್ಪಿದ ನಿವೇಶನವನ್ನು ಮಂಜೂರು ಮಾಡಲು ಶೀಘ್ರ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆ ನೀಡಿದರು. ಈ ಯೋಜನೆಯ 2ನೇ ಹಂತವನ್ನು ಉತ್ತರ ಕರ್ನಾಟಕದಲ್ಲಿ ವಿಸ್ತರಿಸುವ ಬಗ್ಗೆಯೂ ಮಾತುಕತೆಯಲ್ಲಿ ಪ್ರಸ್ತಾಪಿಸಲಾಯಿತು.

ಚೀನಾದ ಉದ್ಯಮಿ ಪಾಲ್ ಪು ಅವರು ವಿಧಾನಸೌಧದಲ್ಲಿ ಜವಳಿ ಸಚಿವ ಶಿವಾನಂದ ಪಾಟೀಲ್ ಅವರನ್ನು ಭೇಟಿ ಮಾಡಿದರು. ಜವಳಿ ಅಭಿವೃದ್ಧಿ ಆಯುಕ್ತರಾದ ಕೆ.ಜ್ಯೋತಿ ಅವರು ಇದ್ದರು.

ಅಗತ್ಯ ಭೂಮಿ ಒದಗಿಸಲು ಬದ್ಧ

ಉದ್ಯಮಿಯ ಪ್ರಸ್ತಾಪವನ್ನು ಸ್ವಾಗತಿಸಿದ ಸಚಿವ ಶಿವಾನಂದ ಪಾಟೀಲ್, ರಾಜ್ಯದಲ್ಲಿ ಬಂಡವಾಳ ಹೂಡಲು ಇರುವ ವಿಪುಲ ಅವಕಾಶಗಳ ಬಗ್ಗೆ ವಿವರಿಸಿದರು. ಉತ್ತರ ಕರ್ನಾಟಕದಲ್ಲಿ ಉದ್ಯಮಕ್ಕೆ ಅಗತ್ಯವಿರುವ ಎಲ್ಲಾ ಮೂಲ ಸೌಕರ್ಯಗಳನ್ನು ಹೊಂದಿದ ಭೂಮಿ ಲಭ್ಯವಿದೆ. ವರ್ಷದ 365 ದಿನವೂ ನೀರು, ಸಮರ್ಪಕ ವಿದ್ಯುತ್, ರಾಷ್ಟ್ರೀಯ ಹೆದ್ದಾರಿ ಮತ್ತು ವಿಮಾನಯಾನ ಸಂಪರ್ಕ ವಿರುವ ಸ್ಥಳದಲ್ಲಿ ಅಗತ್ಯ ಪ್ರಮಾಣದ ಭೂಮಿ ಒದಗಿಸಲು ಸರಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಲು ತೀರ್ಮಾನಿಸಲಾಗಿದೆ : ಸಚಿವ ಸಂತೋಷ್ ಲಾಡ್

12 ಸಾವಿರ ಲೇ ಆಫ್: ಟಿಸಿಎಸ್‌ಗೆ ನೋಟಿಸ್

ಬೆಂಗಳೂರು: ಕಾಸ್ಟ್ ಕಟ್ಟಿಂಗ್ ನೆಪದಲ್ಲಿ ಸುಮಾರು 12 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ತೆಗದು ಹಾಕಿರುವ ಟಿಸಿಎಸ್ ಕಾರ್ಮಿಕ ಇಲಾಖೆ ನೋಟಿಸ್ ನೀಡಲು ಮುಂದಾಗಿದೆ.

ದೇಶದ ಪ್ರಮುಖ ಐಟಿ ಕಂಪನಿ ಎನಿಸಿರುವ ಟಿಸಿಎಸ್ ಕೆಲ ದಿನಗಳ ಹಿಂದೆ ಸುಮಾರು 12 ಸಾವಿರ ಜನರನ್ನು ವಜಾಗೊಳಿಸಿರುವ ಬಗ್ಗೆ ಸುದ್ದಿಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕಾರ್ಮಿಕ ಇಲಾಖೆ, ಈ ಪ್ರಮಾಣದಲ್ಲಿ ಉದ್ಯೋಗಿಗಳನ್ನು ಕೆಲಸದಿಂದ ತೆಗೆದು ಹಾಕಲು ಕಾರಣವೇನು ಎಂದು ಸಮನ್ಸ್ ಜಾರಿಗೊಳಿಸಿದೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಅಪಾರ ಸಂಖ್ಯೆಯಲ್ಲಿ ಉದ್ಯೋಗಿಗಳನ್ನು ಕೆಲಸದಿಂದ ವಜಾ ಮಾಡುವ ಬಗ್ಗೆ ಕಾರಣಗಳನ್ನು ರಾಜ್ಯ ಸರಕಾರಕ್ಕೆ ತಿಳಿಸುವಂತೆ ಸೂಚಿಸಲಾಗಿದೆ. ಅಲ್ಲದೆ, ಟಿಸಿಎಸ್ ಅಧಿಕಾರಿಗಳ ಸಭೆಯನ್ನು ಸಹ ಕರೆಯಲಾಗಿದೆ. ಅಪಾರ ಸಂಖ್ಯೆಯಲ್ಲಿ ಉದ್ಯೋಗಿಗಳನ್ನು ಕೆಲಸ ದಿಂದ ವಜಾ ಮಾಡುವ ಸಂದರ್ಭದಲ್ಲಿ ಕಂಪನಿಗಳು ರಾಜ್ಯ ಸರಕಾರಕ್ಕೆ ಮಾಹಿತಿ ನೀಡಬೇಕಾಗುತ್ತದೆ. ಟಿಸಿಎಸ್‌ನಂತಹ ಐಟಿ ಕಂಪನಿಗಳಿಗೆ ಕಾರ್ಮಿಕ ಕಾನೂನುಗಳಿಂದ ವಿನಾಯಿತಿ ನೀಡಲಾಗಿದೆಯಾದರೂ, ಕೆಲವೊಂದು ಷರತ್ತುಗಳು ಅನ್ವಯವಾಗುತ್ತವೆ ಎಂದರು.

ಕೆಲಸದ ಅವಧಿ ಹೆಚ್ಚಳಕ್ಕೆ ಸಹಮತವಿಲ್ಲ

ಕಾರ್ಮಿಕರ ಕೆಲಸ ಅವಧಿಯನ್ನು ಈಗಿರುವ 8 ತಾಸಿನಿಂದ 9 ರಿಂದ 10 ತಾಸಿನ ತನಕ ಹೆಚ್ಚಿಸುವ ಕೇಂದ್ರ ಸರಕಾರದ ಪ್ರಸ್ತಾವನೆಗೆ ತಮ್ಮ ಸಹಮತ ಇಲ್ಲ. ಕೆಲಸದ ಅವಧಿಯನ್ನು 9 ರಿಂದ 10 ಗಂಟೆಗಳ ವರೆಗೆ ಹೆಚ್ಚಿಸುವ ಕ್ರಮ ವೈಜ್ಞಾನಿಕವಾಗಿ ಸಮಂಜಸವಾಗಿಲ್ಲ. ಆದ್ದರಿಂದ ಈ ಸಂಬಂಧ ಕೇಂದ್ರದ ಪ್ರಸ್ತಾವನೆಗೆ ರಾಜ್ಯ ಸರಕಾರದ ಒಪ್ಪಿಗೆಯಿಲ್ಲ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಲೋಕಕಲ್ಯಾಣಕ್ಕಾಗಿ ಕಲ್ಯಾಣೋತ್ಸವ ಇಂದು

ಬೆಂಗಳೂರು: ವಿಜಯನಗರದ ಬಂಟರ ಸಂಘದಲ್ಲಿ ಲೋಕಕಲ್ಯಾಣಾರ್ಥಕ್ಕಾಗಿ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಆಗಸ್ಟ್ 2ರಂದು ಸಂಜೆ 5ಗಂಟೆಗೆ ಏರ್ಪಡಿಸಲಾಗಿದೆ ಎಂದು ನಿಕಟಪೂರ್ವ ಬಿಬಿಎಂಪಿ ಸದಸ್ಯ ಡಾ. ಎಸ್ ರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮನುಷ್ಯನ ಪ್ರಯತ್ನ ಎಷ್ಟೇ ಇದ್ದರೂ ಕೂಡಾ ದೈವ ಕೃಪೆ ಇದ್ದಾಗ ಮಾತ್ರ ಜೀವನದಲ್ಲಿ ಸಾಧನೆ, ಯಶಸ್ಸಿ ಲಭಿಸಲು ಸಾಧ್ಯ. ಎಲ್ಲರಿಗೂ ತಿರುಪತಿಗೆ ಹೋಗಿ ಕಲ್ಯಾಣೋತ್ಸವ ನೋಡಲು ಸಾಧ್ಯವಾಗುವುದಿಲ್ಲ, ಎಲ್ಲರಿಗೂ ಶ್ರೀನಿವಾಸನ ಕೃಪೆ ಸಿಗಲಿ ಎಂಬ ಉದ್ದೇಶದಿಂದ ಶ್ರೀನಿವಾಸ ಕಲ್ಯಾಣೋತ್ಸವ ಅಯೋಜಿಸಲಾಗಿದೆ.

ತಿರುಮಲ ತಿರುಪತಿಯಲ್ಲಿ ಜರುಗುವ ಮಾದರಿಯಲ್ಲಿ ಕಲ್ಯಾಣೋತ್ಸವವನ್ನು ಇಲ್ಲಿ ನಡೆಸಲಾಗುವುದು.

ಅಗಮ, ಪಂಡಿತರು, ಡೊಳ್ಳು ವಾದ್ಯ, ಗಂಡು, ಹೆಣ್ಣಿನ ಕಡೆಯವರು ಹಾಗೂ ಶ್ರೀನಿವಾಸ ದೇವರ ಕಲ್ಯಾಣೋತ್ಸವ ಸಂಪೂರ್ಣವಾಗಿ ದೇವರರುಗಳ ಮೂರ್ತಿ ಪ್ರತಿಷ್ಠಾಪನೆ ಮಾಡಿ ಸಂಪೂರ್ಣ ಶಾಸ್ತ್ರ ಬದ್ಧವಾಗಿ ಮದುವೆ ಕಾರ್ಯ ನೇರವೇರಿಸುತ್ತಾರೆ ಎಂದರು.

ಸಮಾವೇಶದಲ್ಲಿ 1,951ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗಿ | ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಭೋಸರಾಜು ಹೇಳಿಕೆ

ಪ್ರತಿವರ್ಷ ಕ್ವಾಂಟಮ್ ಇಂಡಿಯಾ ನಡೆಸಲು ಚಿಂತನೆ

ಬೆಂಗಳೂರು: ವಿಶ್ವ ಕ್ವಾಂಟಮ್ ಭೂಪಟದಲ್ಲಿ ವಿಶಿಷ್ಟ ಮೈಲುಗಲ್ಲು ನೆಡುವಲ್ಲಿ ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮಾವೇಶ - 2025 ಯಶಸ್ವಿಯಾಗಿದೆ. ಪ್ರಥಮ ಆವೃತ್ತಿಯ ಯಶಸ್ಸು ಹಾಗೂ ಪರಿಣಾಮಗಳನ್ನು ಕಂಡು, ಮುಂದಿನ ವರ್ಷಗಳಲ್ಲಿ ಈ ಸಮಾವೇಶವನ್ನು ವಾರ್ಷಿಕ ಕಾರ್ಯಕ್ರಮವಾಗಿ ಆಯೋಜಿಸಲು ಚಿಂತನೆ ನಡೆಸಲಾಗುತ್ತಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಭೋಸರಾಜು ತಿಳಿಸಿದರು.

ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮಾವೇಶ - 2025ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಎರಡು ದಿನಗಳ ಈ ಸಮಾವೇಶಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. 1,951ಕ್ಕೂ ಹೆಚ್ಚು ಪ್ರತಿನಿಧಿಗಳೂ ದೇಶ ಹಾಗೂ ವಿದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದಾರೆ. ನೊಬೆಲ್ ಪ್ರಶಸ್ತಿ ಪುರಸ್ಕೃತರು ಕ್ವಾಂಟಮ್ ಕ್ಷೇತ್ರದಲ್ಲಿರುವ ಅವಕಾಶಗಳು, ಅವುಗಳನ್ನು ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಿದ್ದಾರೆ. ರಾಜ್ಯದಲ್ಲಿ ಕ್ವಾಂಟಮ್ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಈಗಾಗಲೇ ಅಗತ್ಯ ಭೂಮಿ, ಕೌಶಲ್ಯಾಭಿವೃದ್ಧಿಗೆ ಅಗತ್ಯವಾಗಿರುವ ಪಠ್ಯಕ್ರಮಗಳ ಅಳವಡಿಕೆ ಹಾಗೂ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧವಾಗಿರುವುದನ್ನು ತಿಳಿಸಿದ್ದಾರೆ. ಅಲ್ಲದೇ, 2035 ವೇಳೆಗೆ ಕ್ವಾಂಟಮ್ ಬೇಸ್ಡ್ ಆರ್ಥಿಕತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಬೇಕಾದ ಕೌಶಲ್ಯ, ಮೂಲಸೌಕರ್ಯ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಸಾವಿರ ಕೋಟಿ ನಿಧಿಯನ್ನು ಮೀಸಲಿರಿಸಿ ಕರ್ನಾಟಕ ಕ್ವಾಂಟಮ್ ಮಿಷಯ್ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದರು.

ಜಾಗತಿಕ ಕ್ವಾಂಟಮ್ ಪವರ್‌ಹೌಸ್ ಆಗಿ ಕರ್ನಾಟಕವನ್ನು ಕೊಂಡೊಯ್ಯಲು ಹಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಟ್ರೀಮ್ ಲ್ಯಾಬ್ಸ್ ಯೋಜನೆಯ ಮೂಲಕ ಕ್ವಾಂಟಮ್ ಪಠ್ಯಕ್ರಮ ಪರಿಚಯಿಸಲಾಗುವುದು. ವಿದ್ಯಾರ್ಥಿಗಳಿಗೆ ಮೀಸಲಾದ ಪಿಎಚ್‌ಡಿ ಫೆಲೋಶಿಪ್‌ಗಳನ್ನು ವಿಸ್ತರಿಸಲಾಗುವುದು. ಈ ಫೆಲೋಶಿಪ್ ಗಳು ಕ್ವಾಂಟಮ್ ಕಂಪ್ಯೂಟಿಂಗ್, ಕ್ವಾಂಟಮ್ ಸಂವಹನ ಮತ್ತು ಕ್ವಾಂಟಮ್ ಸೆನ್ಸಿಂಗ್, ಕ್ವಾಂಟಮ್ ಸಾಧನಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದರು.



ಕ್ವಾಂಟಮ್ ಇಂಡಿಯಾ ಬೆಂಗಳೂರು ಸಮಾವೇಶ – 2025ದ ಸಮಾರೋಪ ಸಮಾರಂಭ ನಡೆಯಿತು.

19 ದೇಶದ 1951 ಪ್ರತಿನಿಧಿಗಳು ಭಾಗಿ

ಕೇವಲ 500 ಪ್ರತಿನಿಧಿಗಳನ್ನು ನಿರೀಕ್ಷಿಸಿದ್ದ ಸಮಾವೇಶಕ್ಕೆ 1951 ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಒಟ್ಟಾರೆಯಾಗಿ ಆಯೋಜಿಸಲಾಗಿದ್ದ 24 ಸೆಷನ್‌ಗಳಲ್ಲಿ 75 ಸ್ಪೀಕರ್ಸ್ ಭಾಗವಹಿಸಿ ಕ್ವಾಂಟಮ್ ಕ್ಷೇತ್ರದ ಬೆಳವಣಿಗೆಗಳು ಹಾಗೂ ಹೊಸ ಸಾಧ್ಯತೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆಸ್ಟ್ರೇಲಿಯಾ, ಆಸ್ಟ್ರಿಯಾ, ಬಾಂಗ್ಲಾದೇಶ, ಕೆನಡಾ, ಡೆನ್ಮಾರ್ಕ್, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಇಸ್ರೇಲ್, ಇಟಲಿ, ಜಪಾನ್, ನೇಪಾಳ, ನೆದರ್‌ಲ್ಯಾಂಡ್, ಒಮನ್, ಸೌದಿ ಅರೇಬಿಯಾ, ಸಿಂಗಾಪುರ ಸೇರಿದಂತೆ 19 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನಾಪತ್ತೆಯಾಗಿದ್ದ ಯುವಕನ ಶವ ಪತ್ತೆ

ಬಂಟ್ವಾಳ: ಕಳೆದ ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದ ಬಂಟ್ವಾಳ ತಾಲೂಕಿನ ಕಡೇಶಿವಾಲಯ ನಿವಾಸಿ ಹೇಮಂತ್ ಆಚಾರ್ಯ (21) ಎಂಬಾತನ ಮೃತದೇಹ ನೇತ್ರಾವತಿ ನದಿಯಲ್ಲಿ ಪತ್ತೆಯಾಗಿದೆ. ಕಂಕನಾಡಿ ಠಾಣಾ ವ್ಯಾಪ್ತಿಯ ಬಜಾಲ್ ಮುಗೇರು ಎಂಬಲ್ಲಿ ನೇತ್ರಾವತಿ ನದಿ ಮಧ್ಯ ಭಾಗದಲ್ಲಿ ತೇಲಾಡುವ ಸ್ಥಿತಿಯಲ್ಲಿ ಪತ್ತೆಯಾಗಿದೆ. ಜುಲೈ 27ರಂದು ಹೇಮಂತ್ ಮನೆಯಿಂದ ನಾಪತ್ತೆಯಾಗಿದ್ದ, ಈ ಬಗ್ಗೆ ಜುಲೈ 28 ರಂದು ಸೋಮವಾರ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜುಲೈ 29 ರಂದು ಮಂಗಳವಾರ ಮಧ್ಯಾಹ್ನದ ವೇಳೆ ಬಂಟ್ವಾಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜಕ್ರಿಬೆಟ್ಟು ಡ್ಯಾಂ ಬಳಿ ಈತನ ದ್ವಿಚಕ್ರ ವಾಹನ ಹಾಗೂ ಮೊಬೈಲ್ ಅನಾಥವಾಗಿ ಪತ್ತೆಯಾಗಿತ್ತು.

ಟ್ರಂಪ್ ಬೆದರಿಕೆಗೆ ಭಾರತ ಹೆದರುವುದಿಲ್ಲ

ಭಾರತದ ಆರ್ಥಿಕತೆ ಸತ್ತಿದೆ ಎಂದ ಡೋನಾಲ್ಡ್ ಟ್ರಂಪ್ ಹೇಳಿಕೆಗೆ ಎಚ್‌ಡಿಡಿ ತೀವ್ರ ಆಕ್ಷೇಪ

ಬೆಂಗಳೂರು: ಭಾರತದ ಆರ್ಥಿಕತೆ ಬಗ್ಗೆ ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ

- ಟ್ರಂಪ್ ಹೇಳಿಕೆ ಒಪ್ಪಿದ ಪ್ರತಿಪಕ್ಷಗಳ ವಿರುದ್ಧ ಆಕ್ರೋಶ
- ಬೆದರಿಕೆಗಳಿಂದ ಭಾರತ ಎಂದಿಗೂ ಇನ್ನೊಬ್ಬರ ತಾಳಕ್ಕೆ ತಕ್ಕಂತೆ ನಡೆಯುವುದಿಲ್ಲ

ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ, ಬಹುಶಃ ಟ್ರಂಪ್ ಕುರುಡರಾಗಿರಬೇಕು ಅಥವಾ ಅಜ್ಞಾನಿ ಆಗಿರಬೇಕು ಎಂದು ಟೀಕಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಟ್ರಂಪ್ ಅವರ ವರ್ತನೆ, ಭಾಷೆ ಅವರ ಹೇಳಿಕೆಯ ಇನ್ನಿತರ ಅಂಶಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಭಾರತದಲ್ಲಿ ಒಬ್ಬ ಸಣ್ಣ ವ್ಯಾಪಾರಿ ಮತ್ತು ಬಡರೈತ ಕೂಡ ತನ್ನ ವ್ಯವಹಾರವನ್ನು ಘನತೆ, ಸಮಗ್ರತೆ ಮತ್ತು ಪ್ರಾಮಾಣಿಕತೆಯಿಂದ ನಡೆಸುತ್ತಿದ್ದಾನೆ. ಈ ಮೂಲಕ ಟ್ರಂಪ್ ಅವರಿಗೆ ಅನೇಕ ಪಾಠ ಕಲಿಸಬಹುದು. ಆಧುನಿಕ ಇತಿಹಾಸದಲ್ಲಿ ಇಷ್ಟೊಂದು ಅಸ್ಥಿರ, ಅನಾಗರಿಕ ಮತ್ತು ಬೇಜವಾಬ್ದಾರಿಯುತ ರಾಷ್ಟ್ರ ಮುಖ್ಯಸ್ಥರನ್ನು ನಾನು ಕಂಡಿಲ್ಲ ಎಂದಿದ್ದಾರೆ.

ಟ್ರಂಪ್ ಭಾರತದೊಂದಿಗೆ ಮಾತ್ರವಲ್ಲ, ಜಗತ್ತಿನ ಪ್ರತೀ ದೇಶದೊಂದಿಗೆ ಕೆಟ್ಟದಾಗಿ ವರ್ತಿಸಿದ್ದಾರೆ. ಅವರು ತಮ್ಮ ದೀರ್ಘಕಾಲದ ಮಿತ್ರರಾಷ್ಟ್ರಗಳನ್ನು ಸಹ ಬಿಟ್ಟಿಲ್ಲ. ಅವರಲ್ಲಿ ಮೂಲ ಸಮಸ್ಯೆ ಇದೆ. ರಾಜತಾಂತ್ರಿಕತೆ ಅಥವಾ ರಾಜಕೀಯದ ಮೂಲಕ ಅದನ್ನು ಪತ್ತೆ ಹಚ್ಚಲು ಅಥವಾ ಪರಿಹರಿಸಲು ಸಾಧ್ಯವಿಲ್ಲ. ಅವರ ಕೋಪದ ಸ್ವಭಾವದ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಹೇಳುವುದು ಸರಿಯಲ್ಲ. ಏಕೆಂದರೆ, ಅದು ನಮ್ಮ ತತ್ವಾದರ್ಶಗಳಿಗೆ, ಬದ್ಧತೆ ಕಡಿಮೆ ಎನಿಸುತ್ತದೆ ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ನಮ್ಮ ರಾಷ್ಟ್ರೀಯ ಹಿತಾಸಕ್ತಿ ರಾಜಿ ಮಾಡಿಕೊಂಡಿಲ್ಲ ಎಂಬ ಬಗ್ಗೆ ನನಗೆ ಅತೀವ ಸಂತೋಷ ಮತ್ತು ಹೆಮ್ಮೆ ಇದೆ. ಟ್ರಂಪ್ ಅವರ ಬೆದರಿಕೆಗೆ ಭಾರತ ಹೆದರುವುದಿಲ್ಲ ಮತ್ತು ಅಂಥ ಬೆದರಿಕೆಗಳಿಂದ ಭಾರತ ಎಂದಿಗೂ ಇನ್ನೊಬ್ಬರ ತಾಳಕ್ಕೆ ತಕ್ಕಂತೆ ನಡೆಯುವುದಿಲ್ಲ ಎಂದು ಈಗಾಗಲೇ ತೋರಿಸಿಕೊಟ್ಟಿದೆ. ಇದಕ್ಕೆ ವಿರುದ್ಧವಾಗಿ ರಾಷ್ಟ್ರದ ಅರ್ಧಕ್ಕಿಂತ ಹೆಚ್ಚು ಜನಸಂಖ್ಯೆ ಅವಲಂಬಿಸಿರುವ ಕೃಷಿ ವಲಯ ಮತ್ತು ಸಣ್ಣ ಮತ್ತು ಮಧ್ಯಮ ವ್ಯವಹಾರಗಳನ್ನು ಸಂರಕ್ಷಿಸಲು ಮೋದಿ ಅವರ ಸರಕಾರ ಪರಿಪೂರ್ಣ ಪ್ರಯತ್ನ ಮಾಡಿದೆ. ಸರಕಾರ ಕೈಕೊಂಡ ದೃಢ ನಿಲುವು ಅಭೂತಪೂರ್ವ ರಾಷ್ಟ್ರೀಯ ಅಭಿವೃದ್ಧಿಯ ಪುನರುಜ್ಜೀವನಕ್ಕೆ ಕಾರಣವಾಗಿದೆ ಎಂದಿದ್ದಾರೆ.

ಟ್ರಂಪ್ ಅವರು ಕುರುಡರಾಗಿರಬೇಕು

ಭಾರತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಮತ್ತು ಜಗತ್ತಿನ ಐದನೇ ಅತೀದೊಡ್ಡ ಆರ್ಥಿಕತೆ ಆಗಿದೆ. ನಮ್ಮ ಆರ್ಥಿಕತೆಯನ್ನು ಸತ್ತಿದೆ ಎಂದು ಹೇಳಲು ಟ್ರಂಪ್ ಅವರು ಕುರುಡರಾಗಿರಬೇಕು ಇಲ್ಲವೇ ಅಜ್ಞಾನಿಗಳಾಗಿರಬೇಕು. ಅವರ ಹೇಳಿಕೆ ಆನಂದಿಸಿ ಭಾರತದಲ್ಲಿ ಅವರ ಭ್ರಮೆಯ ವಕ್ತಾರರಾಗಲು ಹೊರಟಿರುವ ವಿರೋಧ ಪಕ್ಷದ ಕೆಲ ನಾಯಕರ ಹತಾಶೆ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ಅವರು ತಮ್ಮನ್ನು ಮತ್ತು ತಮ್ಮ ಪಕ್ಷಗಳಿಗೆ ಹಾನಿ ಮಾಡಿಕೊಳ್ಳಬಾರದು ಮತ್ತು ಟ್ರಂಪ್ ಅವರೊಂದಿಗೆ ಇತಿಹಾಸದ ಕಸದಬುಟ್ಟಿಗೆ ಬಹುಬೇಗನೆ ಸೇರಬಾರದು ಎಂದಿದ್ದಾರೆ.

123 ಕೆ.ಜಿ. ಗಾಂಜಾ ಜಪ್ತಿ: ಮೂವರ ಸೆರೆ

ಮಂಗಳೂರು: ಸಿಸಿಬಿ ಪೊಲೀಸ್ ತಂಡವು ಮಾದಕ ವಸ್ತುಗಳ ಅಕ್ರಮ ಸಾಗಣೆ ವಿರುದ್ಧ ಸಮರ ಸಾರಿರುವ ಮಂಗಳೂರು ಸಿಸಿಬಿ ಪೊಲೀಸರು ಭಾರೀ ಪ್ರಮಾಣದ ಗಾಂಜಾ ಜಪ್ತಿ ಮಾಡಿದ್ದಾರೆ.

ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, ಒಟ್ಟು 123 ಕೆಜಿ ಗಾಂಜಾ, ವಾಹನಗಳನ್ನು ಸಿಸಿಬಿ ಪೊಲೀಸರು ದಸ್ತಗಿರಿ ಮಾಡಲಾಗಿದೆ. 2 ಕಾರುಗಳಲ್ಲಿ ಗಾಂಜಾ ಸಾಗಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿಯನ್ನು ಪಡೆದು, ಮೂಡಬಿದಿರೆಯ ಬೆಳುವಾಯಿಯ ಕಾಂತಾವರ ಕ್ರಾಸ್ ನ ಮಠದಕೆರೆ ಎಂಬಲ್ಲಿ

ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಗಾಂಜಾ ಸಮೇತ 2 ವಾಹನಗಳನ್ನು ಪತ್ತೆಹಚ್ಚಿದ್ದಾರೆ. ಮಸೂದ್ ಎಂಕೆ (45) ಮೊಹಮ್ಮದ್ ಆಶಿಕ್ (24) ಮತ್ತು ಸುಬೇರ್(30) ಬಂಧಿತ ಆರೋಪಿಗಳು. ಮೂವರೂ ಕಾಸರಗೋಡು ಮೂಲದವರು. ಆರೋಪಿಗಳಿಂದ 123 ಕೆಜಿ ಗಾಂಜಾ, ಎರಡು ವಾಹನಗಳು, 5 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಸೊತ್ತುಗಳ ಒಟ್ಟು ಮೌಲ್ಯ 46 ಲಕ್ಷದ 20 ಸಾವಿರ ರು. ಎಂದು ಅಂದಾಜಿಸಲಾಗಿದೆ. ಮೂಡಬಿದಿರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇರಳ ಗಡಿ ಅರಣ್ಯದಲ್ಲಿ ಭೂ ಕುಸಿತ

ಸ್ಥಳಕ್ಕೆ ಅರಣ್ಯ, ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ, ಪರಿಶೀಲನೆ

ಮಡಿಕೇರಿ: ವ್ಯಾಪಕ ಮಳೆಯಿಂದ ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕರ್ನಾಟಕ ಮತ್ತು ಕೇರಳ ಗಡಿಯಲ್ಲಿ ಹರಡಿರುವ ದಟ್ಟ ಅರಣ್ಯ ಪ್ರದೇಶದಲ್ಲಿ ಭಾರೀ ಪ್ರಮಾಣದ ಭೂ ಕುಸಿತ ಸಂಭವಿಸಿರುವುದು ಬೆಳಕಿಗೆ ಬಂದಿದೆ.

ಕೆದಮುಳ್ಳೂರು ಪಂಚಾಯ್ತಿಗೆ ಒಳಪಟ್ಟ ಪಾಲಂಗಾಲ ಗ್ರಾಮದ ಮಲೆತಿರಿಕೆ ದೇವಸ್ಥಾನದಿಂದ ಸುಮಾರು 5 ರಿಂದ 10 ಕಿ.ಮೀ. ದೂರದಲ್ಲಿ ಕೇರಳದ ಗಡಿಗೆ ಒತ್ತಿಕೊಂಡಂತೆ ಅರಣ್ಯ ಇದೆ. ಇದರ ನಡುವಿನ ಗುಡ್ಡ ಪ್ರದೇಶದಿಂದ ಭಾರೀ ಪ್ರಮಾಣದ ಭೂ ಕುಸಿತ ಸಂಭವಿಸಿದೆ. ಈ ಘಟನೆ ಕೆಲವು ದಿನಗಳ ಹಿಂದೆ ನಡೆದಿದ್ದು, ಇದೀಗ ಬೆಳಕಿಗೆ ಬಂದಿದೆ.



ವಿಷಯ ತಿಳಿದ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖಾ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಮತ್ತೆ ಭೂಕುಸಿತ: ಐದು ವರ್ಷಗಳ ಹಿಂದೆ ಕೆದಮುಳ್ಳೂರು ಬಳಿಯ ತೋರ ಗ್ರಾಮದಲ್ಲಿ ಭಾರೀ ಗುಡ್ಡ ಕುಸಿತ ಸಂಭವಿಸಿ ಜೀವ ಹಾನಿಯಾಗಿತ್ತು. ಈ ಘಟನೆಯ ಬಳಿಕ ಇದೀಗ ಅರಣ್ಯ ಪ್ರದೇಶದಲ್ಲಿ ಭೂ ಕುಸಿತ ಉಂಟಾಗಿದೆ. ಈ ಬಾರಿ ಮುಂಗಾರು ಮಳೆ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ. ಇದರಿಂದ ಒತ್ತಡ ಹೆಚ್ಚಿ ಭೂ ಕುಸಿತ ಸಂಭವಿಸಿರಬಹುದು ಎಂದು ಅಂದಾಜಿಸಲಾಗಿದ್ದು, ಈ ಬಗ್ಗೆ ತಜ್ಞರು ಹೆಚ್ಚಿನ ಅಧ್ಯಯನ ನಡೆಸಬೇಕಿದೆ.

ಹೆದ್ದಾರಿ ತಡೆಗೋಡೆ ಬಿರುಕು ತಜ್ಞರಿಂದ ಪರಿಶೀಲನೆ

ಮಡಿಕೇರಿ ನಗರ ಸಮೀಪದ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಬಿರುಕು ಬಿಟ್ಟಿರುವ ತಡೆಗೋಡೆಯನ್ನು ಕ್ಷೇತ್ರದ ಶಾಸಕ ಡಾ. ಮಂತರ್ ಗೌಡ ಅವರು ಶುಕ್ರವಾರ ಪರಿಶೀಲಿಸಿದರು. ಅತಿಹೆಚ್ಚು ಮಳೆಯಾಗುವ ಈ ಪ್ರದೇಶಕ್ಕೆ ಪೂರಕವಾಗಿ ತಜ್ಞ ಎಂಜಿನಿಯರ್ ಗಳಿಂದ ವೈಜ್ಞಾನಿಕ ರೂಪದ ಪರಿಹಾರ ಕಂಡುಕೊಳ್ಳುವಂತೆ ಸೂಚನೆ ನೀಡಿದರು. ಬಿರುಕು ಬಿಟ್ಟಿರುವ ತಡೆಗೋಡೆ ಕುಸಿದು ಬಿದ್ದರೆ ಇಡೀ ಹೆದ್ದಾರಿಯೇ ಬಂದ್ ಆಗಲಿದೆ. ಆದ್ದರಿಂದ ತಜ್ಞ ಎಂಜಿನಿಯರ್‌ಗಳನ್ನು ಆಹ್ವಾನಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಹೆದ್ದಾರಿ ವಿಭಾಗದ ಎಂಜಿನಿಯರ್‌ಗೆ ಶಾಸಕರು ಸೂಚಿಸಿದರು.

ಪ್ರಜ್ವಲ್ ದೋಷಿ, ಇಂದು ತೀರ್ಪು ಪ್ರಕಟ

← ಮೊದಲಪುಟದಿಂದ

ಆದರೆ, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಕೋರ್ಟ್ ತ್ವರಿತಗತಿಯಲ್ಲಿ ಸಾಕ್ಷಿಗಳ ವಿಚಾರಣೆ ನಡೆಸಿ ಏಳು ತಿಂಗಳಲ್ಲಿ ತೀರ್ಪು ನೀಡಿರುವುದು ದಾಖಲೆಯಾಗಿದೆ.

ಏನಿದು ಪ್ರಕರಣ ?

ಪ್ರಜ್ವಲ್ ವಿರುದ್ಧ ಹಲವು ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ರಾಜ್ಯ ಮಹಿಳಾ ಆಯೋಗ ಪ್ರಕರಣದ ವಿಶೇಷ ತನಿಖೆ ನಡೆಸುವಂತೆ ಸರಕಾರಕ್ಕೆ ಒತ್ತಾಯಿಸಿತ್ತು. ಈ ಹಂತದಲ್ಲೇ 2024ರ ಏಪ್ರಿಲ್ 28ರಂದು ಹೊಳೆನರಸೀಪುರ ಠಾಣೆಯಲ್ಲಿ ಮೊದಲ ಪ್ರಕರಣ ದಾಖಲಾಗಿತ್ತು. ಮೈಸೂರಿನ ಕೆ.ಆರ್. ನಗರದ ಸಂತ್ರಸ್ತ ಮಹಿಳೆ ಈ ಸಂಬಂಧ ದೂರು ನೀಡಿದ್ದರು. ಮಹಿಳೆ ನೀಡಿದ್ದ ದೂರಿನ ಮೇರೆಗೆ ಸೈಬರ್ ಅಪರಾಧ ಠಾಣೆಯಲ್ಲಿ ಐಪಿಸಿ ಸೆಕ್ಷನ್‌ಗಳಾದ 376(2)(ಎನ್), 376(2)(ಕೆ), 506, 354ಎ, 354(ಎ), 354(ಬಿ), 354(ಸಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 66ಸಿ ಅಡಿ ಪ್ರಕರಣ ಪ್ರಜ್ವಲ್ ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಬಳಿಕ ಈ ಪ್ರಕರಣದ ತನಿಖೆಗಾಗಿ ರಾಜ್ಯ ಸರಕಾರ ವಿಶೇಷ ತನಿಖಾ ತಂಡ ರಚಿಸಿತ್ತು. ಈ ತಂಡದ ಅಧಿಕಾರಿಗಳು 123 ಸಾಕ್ಷ್ಯಗಳನ್ನು ಸಂಗ್ರಹಿಸಿ, ಸುಮಾರು 2,000 ಪುಟಗಳ ಆರೋಪ ಪಟ್ಟಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. 2024ರ ಅಂತ್ಯದಲ್ಲಿ ಈ ಚಾರ್ಜ್‌ಶೀಟ್ ಸಲ್ಲಿಕೆಯಾಗಿತ್ತು.

ಸಿಎಂ-ಡಿಸಿಎಂ ಮತ್ತೆ ದೆಹಲಿಗೆ

← ಮೊದಲಪುಟದಿಂದ

ಇದರ ವರದಿಯನ್ನು ಹೈಕಮಾಂಡ್‌ಗೆ ಮುಖ್ಯಮಂತ್ರಿಗಳು ಸಲ್ಲಿಸುವ ಸಾಧ್ಯತೆ ಯಿದೆ. ಇದರೊಂದಿಗೆ ನಿಗಮ ಮಂಡಳಿ ಪಟ್ಟಿಯನ್ನು ಘೋಷಿಸುವುದಕ್ಕೆ ಒಪ್ಪಿಗೆಯನ್ನು ಪಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ. ಶುಕ್ರವಾರ ಸಂಜೆ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮದಲ್ಲಿ ಭಾಗವಹಿಸಿರುವ ನಾಯಕರು, ಶನಿವಾರ ಎಐಸಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಇದಾದ ಬಳಿಕ ಆ.5ರಂದು ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಪ್ರತಿಭಟನೆಗೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಹೋರಾಟ ಪ್ರತಿಭಟನೆಗೆ ಸೀಮಿತ: ಇನ್ನು ರಾಹುಲ್ ಗಾಂಧಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆಯ ಬಳಿಕ ವಾಹನದ ಮೂಲಕವೇ ತೆರಳಿ ಮುಖ್ಯಚುನಾವಣಾಧಿಕಾರಿಗಳಿಗೆ ಮತಗಳ್ಳತನಕ್ಕೆ ಸಂಬಂಧಿಸಿದಂತೆ ದೂರು ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಹೋರಾಟಕ್ಕೆ ಸಂಬಂಧಿಸಿದಂತೆ ಕೆಲ ಗೊಂದಲಗಳಿದ್ದ ಕಾರಣ, ಗುರುವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪ್ರಮುಖರು ಸಭೆ ನಡೆಸಿ ತೀರ್ಮಾನಿಸಲಾಗಿದೆ. ಮಂಗಳವಾರ ಬೆಳಗ್ಗೆ ಬೆಂಗಳೂರಿಗೆ ಆಗಮಿಸಲಿರುವ ರಾಹುಲ್ ಗಾಂಧಿ ಅವರು ಪ್ರತಿಭಟನೆಯಲ್ಲಿ ಭಾಗವಹಿಸಿ, ಕೆಲವೇ ಗಂಟೆಯಲ್ಲಿ ದೆಹಲಿಗೆ ವಾಪಸಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಮಿಡಿ ಕಿಲಾಡಿ ಚಂದ್ರಶೇಖರ್ ಸಿದ್ದಿ ಆತ್ಮಹತ್ಯೆ

ಯಲ್ಲಾಪುರ: ತಾಲೂಕಿನ ಚಿಮನಳ್ಳಿಯ ನಿವಾಸಿ ಕಾಮಿಡಿ ಕಿಲಾಡಿ ಖ್ಯಾತಿಯ ನಟ ಚಂದ್ರಶೇಖರ ನಾಗಪ್ಪ ಸಿದ್ದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹುಟ್ಟೂರು ಯಲ್ಲಾಪುರದ ಕಟ್ಟಿಗೆ ಗ್ರಾಮದ ಅರಣ್ಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಶುಕ್ರವಾರ ಕಂಡು ಬಂದಿದೆ. ಅವರಿಗೆ 31 ವರ್ಷ ವಯಸಾಗಿತ್ತು.

ನಾಟಕ ತರಬೇತಿ ಪಡೆದುಕೊಂಡು ರಿಯಾಲಿಟಿ ಶೋನಲ್ಲಿ ಭಾಗಿಯಾದ ಬಳಿಕ ಧಾರಾವಾಹಿಗಳಲ್ಲಿಯೂ ಪಾತ್ರ ಮಾಡಿ ಜನಪ್ರಿಯತೆ ಪಡೆದಿದ್ದರಾದರೂ ಯಾವುದೇ ಸಿನಿಮಾಗಳಲ್ಲಿ ನಟನೆಗೆ ಅವಕಾಶ ಸಿಗದೇ ನೊಂದುಕೊಂಡಿದ್ದರು. ಜೀವನೋಪಾಯಕ್ಕೆ ಕೂಲಿ ಕೆಲಸ ಮಾಡುತ್ತಿದ್ದರು. ತೀವ್ರವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಚಂದ್ರಶೇಖರ ಅವರು ತೇಲಂಗಾರಿನ ಮೈತ್ರಿ ಕಲಾ ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು. ಚಿಮನಳ್ಳಿಯ ಕಾಡಿನಲ್ಲಿ ಶವವಾಗಿ ದೊರೆಕಿದ್ದಾರೆ. ಆಶಾ ಕಾರ್ಯಕರ್ತೆಯಾಗಿರುವ ತಾಯಿ ಲಕ್ಷ್ಮೀ ನಾಗಪ್ಪ ಸಿದ್ದಿ ಪೊಲೀಸ್ ದೂರು ನೀಡಿದ್ದು, ಸಾವಿನಲ್ಲಿ ಸಂಶಯವಿದೆ ಎಂದು ಹೇಳಿಕೆ ನೀಡಿ ತನಿಖೆಗೆ ಆಗ್ರಹಿಸಿದ್ದಾರೆ.

ಎಸ್‌ಸಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಬೀದರ್ ನಗರದಲ್ಲಿ ಶುಕ್ರವಾರ ಅರೆಬೆತ್ತಲಾಗಿ ಪ್ರತಿಭಟನೆ ನಡೆಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಎಂ. ಪಿ. ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ. ರಾಮನಗರ.
ದೂ. : 080–2978 2259. ಇ–ಮೇಲ್ : eempdrmgm@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 06/2025–26 ದಿನಾಂಕ : 01–08–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆ ಮತ್ತು 2701 ಯೋಜನೆಯಡಿಯಲ್ಲಿ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಡಿ ವಿವಿಧ ಕಾಮಗಾರಿಗಳು / ಸರ್ವಿಸ್‌ಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪ್ರೀ ಬಿಡ್ ಸಭೆಯ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ಡಿಐಪಿಆರ್/ರಾಮನಗರ/273/ಮಣಿಪಾಲ್/2025–26

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕೇಂದ್ರ ಉಗ್ರಾಣ ಶಾಖೆ
ಬನುಮಯ್ಯ ಕಾಲೇಜ್ ಹತ್ತಿರ, ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570024.
E-mail:- store.mcc@gmail.com

ಸಂಖ್ಯೆ: ಮೈನಪಾ/ಕೇ.ಉ.ಶಾ/ಪಿ.ಆರ್/05/06/2025–26 ದಿನಾಂಕ: 31.07.2025

ಟೆಂಡರ್ ಪ್ರಕಟಣೆ

ಕೇಂದ್ರ ಉಗ್ರಾಣ ಶಾಖೆಗೆ ಸಂಬಂಧಿಸಿದಂತೆ ಟೈರ್ಸ್ ಮತ್ತು ಟ್ಯೂಬ್‌ಗಳು ಮತ್ತು ಕಚೇರಿ ಪೀಠೋಪಕರಣಗಳ ವಿಷಯಗಳಿಗೆ ದಿನಾಂಕ: 31.07.2025 ರಂದು ಟೆಂಡರ್ ಆಹ್ವಾನಿಸಿದ್ದು, https://kpppkarnataka.gov.in ಪೋರ್ಟಲ್‌ನ ಮುಖಾಂತರ ವಿವರಗಳನ್ನು ಪಡೆದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕೇಂದ್ರ ಉಗ್ರಾಣ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಉಪ ಆಯುಕ್ತರು (ಆಡಳಿತ),
ಮೈಸೂರು ಮಹಾನಗರ ಪಾಲಿಕೆ, ಮೈಸೂರು.
ವಾಸಾಸಂಇ/ಮೈಸೂರು/ಶಿರಡಿ ಸಾಯಿ/740/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–5/ಟೆಂಡರು ಪ್ರಕಟಣೆ ಸಂ.09/2025–26/1981 ದಿನಾಂಕ: 31.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ: ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1 ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪ್ರವರ್ಗ I ಗುತ್ತಿಗೆದಾರರು, ಪ್ರವರ್ಗ II(ಎ) ಗುತ್ತಿಗೆದಾರರು & ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆದು ನೀರಾವಾರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 8 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.5.08 (ಕನಿಷ್ಠ) & ರೂ.25.39 (ಗರಿಷ್ಠ)**
ಇಎಂಡಿ: **ರೂ.6,400/– (ಕನಿಷ್ಠ) & ರೂ.50,800/– (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವಧಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **01.08.2025 ಸಂಜೆ 16.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **08.08.2025 ಸಂಜೆ 15.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **08.08.2025 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **11.08.2025 ಬೆಳಗ್ಗೆ 11.30** ಗಂಟೆಯವರೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/2144/ಎಸ್‌ಎಸ್‌ಸಿ/2025–26

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂ.: ಮೈಅಪ್ರಾ:ನಯೋಶಾ:ಭೂಉಬ:ನಯೋ–1:2025–26 ದಿನಾಂಕ: 31.07.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, **ಶ್ರೀರಾಂಪುರ ಗ್ರಾಮದ** ಸ.ನಂ.66/1ರ 00ಎಕರೆ 26ಗುಂಟೆ ಮತ್ತು 67/3ರ 01ಎಕರೆ 00ಗುಂಟೆ **ಒಟ್ಟು 01ಎಕರೆ 26ಗುಂಟೆ** ವಿಸ್ತೀರ್ಣದ ಜಮೀನುಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ **1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಸೂರಜ್.ಆರ್.ಕೃಷ್ಣಂ ಮತ್ತು ಶ್ರೀ ರವಿಕುಮಾರ್.ಕೆ.ವಿ ಇವರು ಅರ್ಜಿ** ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **"ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN NTS

ಸಹಿ/–
ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/MYS/747/SA/2025-26

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/AE-1/2025–26/1563 ದಿ:– 29.07.2025

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	THIS WORK IS RESERVED FOR SC CATOGERY	
1	PWD/2025-26/RD/WORK_INDENT18063/CALL-2	50.00
	THIS WORK IS RESERVED FOR CAT-2A CATOGERY	
2	PWD/2025-26/RD/WORK_INDENT21863/CALL-2	70.00
	General Works	
3	PWD/2025-26/IND0103	32.00
4	PWD/2025-26/IND0134	8.00
5	PWD/2025-26/IND0136	128.00
6	PWD/2025-26/IND0135	72.00
7	PWD/2025-26/IND0137	144.00
8	PWD/2025-26/BD/WORK_INDENT22232	36.00

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **11.08.2025(16.00 ಗಂಟೆಗೆ)**. 3.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **12.08.2025(16.30 ಗಂಟೆಗೆ)**. 4.ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಅರ್ಥಿಕ ಬಿಡ್ ತೆರೆಯುವ ದಿನಾಂಕ: **KPP Portal** ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೊಡಿಕೊಳ್ಳಬಹುದು

ವಾ.ಸಾ.ಸಂ.ಇ/ವಿಜಯನಗರ/2025–26/ ಕೆವಿಸ್‌ಎಂಸಿಎ/ಆರ್.ಓ.ಸಂಖ್ಯೆ/176
ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಕಾರ್ಯನಿವಾಹಕ ಇಂಜನೀಯರವರ ಕಚೇರಿ,

(ಲೋಕೋಪಯೋಗಿ ಇಲಾಖೆ)
ಧಾರವಾಡ ವಿಭಾಗ, ಧಾರವಾಡ

ಕ್ರಸಂ: ಕಾನಿಇಂಧಾ/ಗುತ್ತಿಗೆ/2025–26/1874 ದಿನಾಂಕ : 31.07.2025

ಟೆಂಡರ್ ಪ್ರಕಟಣೆ – I.F.T – KW – 4
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ–4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. kppp.karnataka.gov.in ಪೋರ್ಟಲ್ ಮೂಲಕ **ಟೆಂಡರ್ ಪ್ರಕಟಣೆ.** ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ದತಿಯಲ್ಲಿ **ಲೆಕ್ಕಶೀರ್ಷಿಕೆ: ರಾಜ್ಯ ವಿಪತ್ತು ಉಪಶಮನ ನಿಧಿ(SDMF) ಕಾಮಗಾರಿಗೆ ಮೊತ್ತ ರೂ. 1000.00 ಲಕ್ಷದ ಕಾಮಗಾರಿಗೆ** ಟೆಂಡರ್‌ನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಧಾರವಾಡ ಜಿಲ್ಲೆ, ಧಾರವಾಡ ರವರ ಪತ್ರ ಸಂಖ್ಯೆ: ಕ್ರಸಿಎಎಲ್/ಸಿಆರ್–176/2024–25/E–308973 **ದಿನಾಂಕ: 28.07.2025** ರಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬೆಂಗಳೂರು ಇವರು ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಶೇಕಡಾ 60 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿ, ಅನುದಾನ ಬಳಕೆಯಾದ ನಂತರ ಬಾಕಿ ಅನುದಾನವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿ ಟೆಂಡರ್ ಪ್ರಕ್ರಿಯೇಯನ್ನು ಪ್ರಾರಂಬಿಸಲು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬೆಂಗಳೂರು ರವರ ಟಿಪ್ಪಣಿ **ದಿನಾಂಕ: 16.07.2025** ರಲ್ಲಿರುವ ನಿರ್ದೇಶನಗಳನ್ನು ನೀಡಿರುವ ಷರತ್ತಿಗೊಳಪಟ್ಟು ಸದರಿ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸಾಮಾನ್ಯ:
PWD/2025-26/BR/WORK_INDENT22215

Calander of Events: (1) ಪ್ರಿಬಿಡ್ ಮಿಟಿಂಗ್/ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ **ದಿನಾಂಕ: 25.08.2025 ಬೆಳಿಗ್ಗೆ 12:30** ಗಂಟೆಯವರೆಗೆ. (2) ಗುತ್ತಿಗೆ ಪತ್ರಗಳನ್ನು ಸ್ವಿಕರಿಸುವ ಕೊನೆಯ **ದಿನಾಂಕ : 01.09.2025 ಸಾಯಂಕಾಲ 04:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 02.09.2025 ಸಾಯಂಕಾಲ 04:30** ಗಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ : 09.09.2025 ಸಾಯಂಕಾಲ 04:30** ಗಂಟೆಯ ನಂತರ

ಈ ಮೇಲ್ಕಾಣಿಸಿದ ಎಲ್ಲಾ ಕಾಮಗಾರಿಗಳಿಗೆ ಸಂಬಂದಿಸಿದ ವಿವರಗಳನ್ನು ಅಂತರಜಾಲ ವಿಳಾಸ kppp.karnataka.gov.in ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ,ಧಾರವಾಡ ವಿಭಾಗ,
ಧಾರವಾಡ.
ವಾ.ಸಾ.ಇ/ಧಾರವಾಡ/487/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

No.EE/MID/VJP/AE-1,2,4/4702/TND/2025-26/ 1171 Date: 01.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702–ಪ್ರಧಾನ ಕಾಮಗಾರಿಗಳು :– ಒಟ್ಟು 7 ಕಾಮಗಾರಿಗಳು, ಅಂದಾಜು ಮೊತ್ತ **ರೂ.846.00 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಒಂದು(1) ತಿಂಗಳಿನಿಂದ ಒಂಭತ್ತು(9) ತಿಂಗಳುಗಳು.**

4702–ಎಸ್.ಸಿ.ಪಿ. ಕಾಮಗಾರಿಗಳು :– ಒಟ್ಟು 7 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಅಂದಾಜು ಮೊತ್ತ **ರೂ.39.60 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702–ಟಿ.ಎಸ್.ಪಿ. ಕಾಮಗಾರಿಗಳು :– ಒಟ್ಟು 11 ಕಾಮಗಾರಿಗಳು/ಪ್ಯಾಕೇಜ ಕಾಮಗಾರಿಗಳು, ಅಂದಾಜು ಮೊತ್ತ **ರೂ.184.47 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳಿಂದ ಆರು(6) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **06.08.2025** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ(ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **14.08.2025** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ:**11.08.2025** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **13.08.2025** ರ 17–30ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/228/ಕೆವಿಸ್ಎಂಸಿಎ/2025–26

ಸಮಾಚಾರ ಸಣ್ಣದಲ್ಲ

ಹಾವೇರಿ: ಕಾಂಗ್ರೆಸ್ ಮುಖಂಡನ ಹತ್ಯೆ

ಹಾವೇರಿ: ಹುಟ್ಟುಹಬ್ಬದ ದಿನವೇ ಕಾಂಗ್ರೆಸ್ ಯುವ ಕಾರ್ಯಕರ್ತ ಹತ್ಯೆಯಾಗಿರುವ ಘಟನೆ ಹಾವೇರಿಯಲ್ಲಿ ನಡೆದಿದೆ. ಹಾನಗಲ್ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ನಿವಾಸಿ ಮನೋಜ್ ಪ್ರಕಾಶ್ ಉಡಗಣ (28) ಹತ್ಯೆಯಾದ ಯುವಕ.



ಮನೋಜ್‌ಗೆ ಕಂಠಪೂರ್ತಿ ಮದ್ಯ ಕುಡಿಸಿ, ವರದಾ ನದಿ ಬ್ರಿಡ್ಜ್ ಮೇಲಿಂದ ಆರೋಪಿಗಳು ನೂಕಿ ಹತ್ಯೆ ಮಾಡಿದ್ದಾರೆನ್ನಲಾಗಿದೆ. ನನ್ನ ಸಹೋದರನನ್ನು ಕಿಡ್ನ್ಯಾಪ್ ಮಾಡಿ ಹತ್ಯೆ ಮಾಡಿದ್ದಾರೆಂದು ಕೆಲವರ ವಿರುದ್ಧ ಮೃತ ಮನೋಜ್‌ನ ಸಹೋದರ ಶಂಭು ಗಂಭೀರ ಆರೋಪ ಮಾಡಿದ್ದಾರೆ. ಮದುವೆ ಯಾದ ಗೃಹಿಣಿಗೆ ಮೆಸೇಜ್ ಮಾಡುತ್ತಿದ್ದ ಕಾರಣಕ್ಕೆ ಹತ್ಯೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ. ಮನೋಜ್, ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಆದರೆ, ಆಕೆಗೆ ಬೇರೊಬ್ಬರ ಜೊತೆ ಮದುವೆಯಾಯಿತು. ಆದರೂ, ಮನೋಜ್ ಆಕೆಗೆ ಮೆಸೇಜ್ ಮಾಡುತ್ತಿದ್ದ. ಇದರಿಂದ ಆಕೆಯ ಪತಿ ಕೋಪಗೊಂಡು ಕಾಂಗ್ರೆಸ್ ಯುವ ಕಾರ್ಯಕರ್ತನನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಕಳೆದ ಜು.26 ರಂದು ಮನೋಜ್ ಹುಟ್ಟುಹಬ್ಬ ಇತ್ತು. ಹುಟ್ಟುಹಬ್ಬದ ದಿನವೇ ಆತನನ್ನು ಅಪಹರಿಸಿ ಹತ್ಯೆ ಮಾಡಲಾಗಿದೆ.

ಶಾರ್ಟ್ ಸರ್ಕ್ಯೂಟ್: ದಾಖಲೆಗಳು ಭಸ್ಮ

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರು ನಾಡ ತಹಸೀಲ್ದಾರ ಕಚೇರಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ಮಹತ್ವದ ದಾಖಲೆಗಳು, ಲಕ್ಷಾಂತರ ರು. ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿವೆ. ರಾತ್ರಿ ವೇಳೆ ಅಗ್ನಿ ಅವಘಡ ನಡೆದಿದ್ದು ಕಂಪ್ಯೂಟರ್,

ಸಾರ್ವಜನಿಕರ ಮಹತ್ವದ ದಾಖಲೆಗಳು, ಪೀಠೋಪಕರಣಗಳು ಸುಟ್ಟು ಕರಕಲಾಗಿವೆ. ಮಳೆಯಿಂದ ಹಳೆಯ ಕಟ್ಟಡದ ಗೋಡೆಗಳು ಒದ್ದೆಯಾಗಿದ್ದು ಅಲ್ಲಲ್ಲಿ ಸೋರಿದ್ದರಿಂದ ಶಾರ್ಟ್ ಸರ್ಕ್ಯೂಟ್ ಉಂಟಾಗಿದೆ. ಇನ್ವೆರ್ಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಸ್ಫೋಟಗೊಂಡಿದೆ. ಇದರಿಂದ ಕಚೇರಿಯಲ್ಲಿನ ವಸ್ತುಗಳೆಲ್ಲಾ ಸುಟ್ಟು ಕರಕಲಾಗಿವೆ. ಎರಡನೇ ಬಾರಿ ನಾಡ ತಹಸೀಲ್ದಾರ್ ಕಚೇರಿ ಅಗ್ನಿದುರಂತಕ್ಕೆ ಈಡಾಗಿದೆ. ಮಹತ್ವದ ದಾಖಲೆಗಳು ಸುಟ್ಟು ಹೋಗಿರುವುದರಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗಬ್ಬೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಹೃದಯಾಘಾತದಿಂದ ಚಾಲಕ ಸಾವು

ಮಣಿಪಾಲ: ವಿದ್ಯಾರ್ಥಿಗಳನ್ನು ಟಿ.ಟಿ. ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಚಾಲಕ ಹೃದಯಾಘಾತದಿಂದ ಮೃತಪಟ್ಟ ಘಟನೆ ಶುಕ್ರವಾರ ಬೆಳಗ್ಗೆ ಸಂಭವಿಸಿತು. ಕಾರ್ಕಳ ನೀರೆ ಬೈಲೂರಿನ ನಿವಾಸಿ ಮೊಯ್ದಿನ್ ಬಾವ (65) ಮೃತಪಟ್ಟವರು.

ಮಣಿ ಪಾಲದ ಪ್ರಗತಿನಗರದ ಕೇಂದ್ರೀಯ ವಿದ್ಯಾಲ ಯದ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿ ದ್ದಾಗ ಘಟನೆ ಸಂಭವಿಸಿದೆ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗಿಲ್ಲ. ಸಮಾಜ ಸೇವಕ ನಿತ್ಯಾನಂದ ಒಳಕಾಡು ಅವರನ್ನು ಕಂಡು ವಾಹನ ನಿಲ್ಲಿಸಿದ ಮೊಯ್ದಿನ್ ಬಾವ ಎದೆನೋವಿನ ವಿಚಾರ ಹೇಳಿಕೊಂಡಿದ್ದಾರೆ. ತಕ್ಷಣ ಅವರು ತಮ್ಮ ಆಂಬ್ಯುಲೆನ್ಸ್‌ನಲ್ಲಿ ಅಜ್ಜರಕಾಡು ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ವೈದ್ಯರು ಪರೀಕ್ಷಿಸಿ ಚಾಲಕ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಅಪರೂಪದ ಪಿಟ್ ವೈಫರ್ ಉರಗ ಪತ್ತೆ

ಚಿಕ್ಕಮಗಳೂರು: ಉರಗ ಸಂತತಿಯಲ್ಲೇ ಅತಿ ಅಪರೂಪವಾದ ಉರಗವೊಂದು ಕಾಫಿನಾಡಿನಲ್ಲಿ ಪತ್ತೆಯಾಗಿದೆ. ಕಳಸ ತಾಲೂಕಿನ ಬೇಡಕ್ಕಿ ಗ್ರಾಮದಲ್ಲಿ ಕೇವಲ ಮೂರೇ ಮೂರು ಅಡಿ ಉದ್ದದ ಮಲಬಾರ್ ಪಿಟ್ ವೈಫರ್ ಹಾವು ಸೆರೆಯಾಗಿದೆ.

ಕಾಳಿಂಗ ಸರ್ಪಗಳೇ ಹೆಚ್ಚಿರೋ ಮಲೆನಾಡಲ್ಲಿ ಮಲಬಾರ್ ಪಿಟ್ ವೈಫರ್ ಅತೀ ಅಪರೂಪವೇ ಸರಿ. ಇದರ ವಿಷ ಮಾರಣಾಂತಿಕ ವಲ್ಲದಿದ್ದರೂ ತೀವ್ರ ನೋವು, ಕಚ್ಚಿದ ಜಾಗ ಊದಿಕೊಳ್ಳುತ್ತದೆ ಅಲ್ಲದೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯದಿದ್ದರೆ ಕಚ್ಚಿದ ಜಾಗ ಗ್ಯಾಂಗ್ರಿನ್ ಆಗಿ ಕೊಳೆಯುತ್ತದೆ. ಮಲಬಾರ್ ಪಿಟ್ ವೈಫರ್ ಹಾವನ್ನ ರಿಜ್ವಾನ್ ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ತರಲು ಮತ್ತೆ ಪ್ರವಾಸ

ಶಿವಮೊಗ್ಗ: ಬಿಜೆಪಿ ಅಧಿಕಾರಕ್ಕೆ ತರಲು ಮತ್ತೊಮ್ಮೆ ರಾಜ್ಯಾದ್ಯಂತ ಪ್ರವಾಸ ಮಾಡಲಾಗುವುದು ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಬದಲಾವಣೆ ಗಾಳಿ ಬೀಸಬೇಕಿದೆ. ಒಮ್ಮೆ ಸಂಸದನಾಗಿ, 4 ಬಾರಿ ಸಿಎಂ ಆಗಿ, 7 ಬಾರಿ ಶಾಸಕನಾಗಿ ಕೆಲಸ ಮಾಡಲು ಜಿಲ್ಲೆಯ ಜನ ಅವಕಾಶ ಮಾಡಿಕೊಟ್ಟಿದ್ದಾರೆ. ನಾನು ಶಿಕಾರಿಪುರ ಮತ್ತು ಶಿವಮೊಗ್ಗದ ಜನರಿಗೆ ಚಿರಋಣಿ. ಜಿಲ್ಲೆಯ ಜನರ ಋಣ ತೀರಿಸಲು ಆಗುವುದಿಲ್ಲ. ರಾಜ್ಯದ ಬಹುತೇಕ ಜಲಾಶಯಗಳು ತುಂಬಿ ತುಳುಕುತ್ತಿವೆ. ರೈತ ಗೌರವದಿಂದ ಬದುಕುವ ಸ್ಥಿತಿಯಿದೆ. ರೈತನ ಶ್ರಮಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ. ಆತನ ಶ್ರಮದ ಕಾರಣ ನಮ್ಮ ನೆಮ್ಮದಿ ಜೀವನಕ್ಕೆ ಕಾರಣವಾಗಿದೆ ಎಂದರು.

ರಾಜ್ಯದಲ್ಲಿ ಅಂಗಾಂಗ ಕಸಿಗಾಗಿ ಕಾಯುತ್ತಿವೆ 5,387 ಜೀವಗಳು

ಅಂಗಾಂಗ ದಾನದಲ್ಲಿ ದೇಶದಲ್ಲೇ ರಾಜ್ಯಕ್ಕೆ 3ನೇ ಸ್ಥಾನ | ಜೀವಸಾರ್ಥಕತೆ ಸಂಸ್ಥೆ ಅವಿರತ ಶ್ರಮ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗಗಳಿಗೆ ಬೇಡಿಕೆ ಹೆಚ್ಚುತ್ತಲೇ ಇದ್ದು, ಸದ್ಯ 5,387 ಮಂದಿ ಅಂಗಾಂಗಗಳಿಗಾಗಿ ಎದುರು ನೋಡುತ್ತಿದ್ದಾರೆ.

ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜೀವಸಾರ್ಥಕತೆ ಸಂಸ್ಥೆ ಅಂಗಾಂಗಗಳ ಕೊರತೆ ನೀಗಿಸಲು ಶ್ರಮಿಸುತ್ತಿದೆ. ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸುವ ಜತೆಗೆ ಅಂಗಾಂಗ ವೈಫಲ್ಯ ಆಗಿರುವ ರೋಗಿಗಳಿಗೆ ಅಂಗಾಂಗಗಳನ್ನು ಒದಗಿಸಲು ನೆರವಾಗುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯಿಂದ ಪಡೆಯಲಾದ ಅಂಗಾಂಗಗಳನ್ನು ಸಂಸ್ಥೆಯಡಿ ಹೆಸರು ನೋಂದಾಯಿಸಿದವರಿಗೆ ಒದಗಿಸಲಾಗುತ್ತಿದೆ. ದಾನಿಗಳ ಕೊರತೆ, ಹೊಂದಾಣಿಕೆ ಆಗದಿರುವುದು ಇತ್ಯಾದಿ ಕಾರಣಗಳಿಂದ ಹಲವರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

ವಿಶ್ವವಾಣಿ ವಿಶೇಷ

ಅಂಗಾಂಗ ಕಸಿ ಚಿಕಿತ್ಸೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಆರೋಗ್ಯ ಇಲಾಖೆ 82 ಆಸ್ಪತ್ರೆಗಳಿಗೆ ಮಾನ್ಯತೆ ನೀಡಿದೆ. ಅವುಗಳಲ್ಲಿ ಬೆಂಗಳೂರು ನಗರದಲ್ಲಿಯೇ 51 ಆಸ್ಪತ್ರೆಗಳಿವೆ. ಮೈಸೂರು 8, ಹುಬ್ಬಳ್ಳಿ/ಧಾರವಾಡದಲ್ಲಿ 7, ಕಲಬುರಗಿ 4, ಮಂಗಳೂರು 12 ಆಸ್ಪತ್ರೆ ಅಂಗಾಂಗ ಕಸಿಗೆ ನೋಂದಣಿಯಾಗಿವೆ. ಬೆಂಗಳೂರಿನಲ್ಲಿಯೇ ಅಧಿಕ ಆಸ್ಪತ್ರೆಗಳು ನೋಂದಣಿಯಾಗಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ರಾಜಧಾನಿಗೆ ಕಸಿ ಶಸ್ತ್ರಚಿಕಿತ್ಸೆಗೆ ಬರುತ್ತಿದ್ದಾರೆ. ಜೀವಸಾರ್ಥಕತೆಯಡಿ ಅಂಗಾಂಗ ಕಸಿಗೆ ಹೆಸರು ನೋಂದಾಯಿಸಿಕೊಂಡವರಲ್ಲಿ ಬಹುತೇಕರು ಬೆಂಗಳೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳೇ ಆಗಿದ್ದಾರೆ.

ಜನರಲ್ಲಿ ಅರಿವಿನ ಕೊರತೆಯು ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಕಾಲಕ್ಕೆ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಇಲಾಖೆಯಡಿ ಕಸಿಗೆ ಮಾನ್ಯತೆ ಪಡೆದ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಿದ ಅಂಗಾಂಗವನ್ನು ನೋಂದಾಯಿತ ರೋಗಿಗಳಿಗೆ ಕಸಿ ಮಾಡುತ್ತಿದ್ದಾರೆ. ಇಷ್ಟಾಗಿಯೂ ಅಂಗಾಂಗಗಳ ಬೇಡಿಕೆ ಪೂರೈಕೆ ನಡುವಿನ ಅಂತರವು ಹೆಚ್ಚುತ್ತಲೇ ಇದೆ.

ಮೂತ್ರಪಿಂಡಕ್ಕೆ ಬೇಡಿಕೆ: ಜೀವಸಾರ್ಥಕತೆ ಸಂಸ್ಥೆಯ ಪ್ರಕಾರ, ಅಂಗಾಂಗ ವೈಫಲ್ಯ ಕಾರಣ ಹೆಸರು ನೋಂದಾಯಿಸಿದವರಲ್ಲಿ ಅರ್ಧಕ್ಕೂ ಅಧಿಕ ಮಂದಿ ಮೂತ್ರಪಿಂಡ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದವರಾಗಿದ್ದಾರೆ. ಬದಲಾದ ಜೀವನ ಶೈಲಿ ಸೇರಿ ವಿವಿಧ ಕಾರಣಗಳಿಂದ ಅಂಗಾಂಗ ವೈಫಲ್ಯಕ್ಕೆ ಒಳಪಡುವವರ ಸಂಖ್ಯೆ ಹೆಚ್ಚುತ್ತಿದ್ದು, ಯಕೃತ್ತು, ಹೃದಯ, ಶ್ವಾಸಕೋಶ ಕಸಿಗೂ ಅಧಿಕ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಮಾನವ ಅಂಗಾಂಗ ದಾನ ಕಸಿ ಕಾಯಿದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಇದು ಕಾನೂನು ಬದ್ಧವಾಗಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಅಂಗಾಂಗಗಳಿಗೆ ಕಾಯುತ್ತಿರುವ ರೋಗಿಗಳ ಸಂಖ್ಯೆ

ಅಂಗಾಂಗಗಳು	ಕಾಯುತ್ತಿರುವವರು
ಮೂತ್ರಪಿಂಡಗಳು	4582
ಯಕೃತ್	583
ಹೃದಯ	133
ಶ್ವಾಸಕೋಶಗಳು	31
ಹೃದಯ ಮತ್ತು ಶ್ವಾಸಕೋಶಗಳು	13
ಯಕೃತ್ ಮತ್ತು ಮೂತ್ರಪಿಂಡ	23
ಮೂತ್ರಪಿಂಡ ಮತ್ತು ಮೇದೋಜೀರಕ ಗ್ರಂಥಿ	21
ಹೃದಯ ಮತ್ತು ಮೂತ್ರಪಿಂಡ	1
ಸಣ್ಣಕರುಳು	0

121 ಮಂದಿ ಅಂಗಾಂಗ ದಾನ

ಜೀವಸಾರ್ಥಕತೆ ಪ್ರಕಾರ ರಾಜ್ಯದಲ್ಲಿ ಈ ವರ್ಷ 121 ಮಂದಿ ಅಂಗಾಂಗ ದಾನ ಮಾಡಿದ್ದಾರೆ. ಇವರಿಂದ 195 ಮೂತ್ರಪಿಂಡ ಸೇರಿ 200ಕ್ಕೂ ಹೆಚ್ಚು ಅಂಗಾಂಗಗಳನ್ನು ಸ್ವೀಕರಿಸಲಾಗಿದೆ. ಚರ್ಮ ಹೃದಯದ ಕವಾಟ ಸೇರಿ 180ಕ್ಕೂ ಹೆಚ್ಚು ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ. ಐದು ವರ್ಷಗಳಲ್ಲಿ 6829 ಮಂದಿ ದಾನ ಮಾಡಿದ್ದಾರೆ. ಸಂಸ್ಥೆಯ ಪ್ರಕಾರ ಒಬ್ಬ ದಾನಿಯು ಹೃದಯ ಮೂತ್ರಪಿಂಡ, ಶ್ವಾಸಕೋಶ, ಯಕೃತ್, ಸಣ್ಣ ಕರುಳು, ಮೇದೋಜೀರಕ ಗ್ರಂಥಿ, ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ ಹಲವು ಮಂದಿಗೆ ನೆರವಾಗಬಹುದಾಗಿದೆ.

ಅಂಗಾಂಗದಾನಕ್ಕೆ ಪ್ರತಿಜ್ಞೆ: ರಾಜ್ಯಕ್ಕೆ ಮೂರನೇ ಸ್ಥಾನ

ವ್ಯಕ್ತಿಯು ಬದುಕಿದ್ದಾಗಲೇ ಅಂಗಾಂಗದಾನಕ್ಕೆ ಪ್ರತಿಜ್ಞೆ ಮಾಡಬಹುದು. 2025ರ ಜುಲೈ 30ರವರೆಗೆ ಒಟ್ಟಾರೆಯಾಗಿ 43,221 ಮಂದಿ ಸಾರ್ವಜನಿಕರು ಅಂಗಾಂಗದಾನಕ್ಕಾಗಿ ಪ್ರತಿಜ್ಞೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯವು ರಾಷ್ಟ್ರ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆಯಲ್ಲಿ 11,186 ಮಂದಿ ಪ್ರತಿಜ್ಞೆ ಮಾಡಿ, ಜಿಲ್ಲಾಮಟ್ಟದಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಅಂತಿಮ ಹಂತದ ಅಂಗ ವೈಫಲ್ಯದಿಂದ ಬಳಲುತ್ತಿರುವ ವ್ಯಕ್ತಿಗಳ ಜೀವವನ್ನು ಉಳಿಸಲು ಬೇಕಾಗುವ ಅವಶ್ಯಕತೆಗೆ ಹೋಲಿಸಿದರೆ ಮಾನವ ಅಂಗಗಳು ಮತ್ತು ಅಂಗಾಂಶಗಳ ತೀವ್ರ ಕೊರತೆಯಿದೆ. ಕಾರ್ನಿಯಾಗಳು, ಹೃದಯ ಕವಾಟಗಳು, ಚರ್ಮ ಮತ್ತು ವಿವಿಧ ಅಂಗಾಂಶಗಳ ಅಗತ್ಯವಿರುವ ಹಲವಾರು ವ್ಯಕ್ತಿಗಳು ಕೂಡ ಇದಕ್ಕೆ ಸೇರಿದ್ದಾರೆ.

ಮುಡಾ ಹಗರಣವೇ ನಡೆದಿಲ್ಲದ್ದಕ್ಕೆ ಕ್ಲೀನ್ ಚಿಟ್: ಡಾ. ಯತೀಂದ್ರ

ನಮ್ಮ ತಾಯಿ ವಿರುದ್ಧವೂ ಕುತಂತ್ರ ನಡೆದಿತ್ತು

ಮೈಸೂರು: ಮುಡಾದಲ್ಲಿ ಹಗರಣವೇ ನಡೆದಿಲ್ಲವಾದ್ದರಿಂದ ದೇಸಾಯಿ ಆಯೋಗ ಕೂಡ ಕ್ಲೀನ್ ಚಿಟ್ ಕೊಟ್ಟಿದೆ. ಹೀಗಾಗಿ ಯಾರೇ ತನಿಖೆ ಮಾಡಿದರೂ ಕ್ಲೀನ್ ಚಿಟ್ ಸಿಗುತ್ತದೆ ಎಂದು ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣ ಕುರಿತಂತೆ ಪಿ.ಎನ್.ದೇಸಾಯಿ ಆಯೋಗ ಕ್ಲೀನ್‌ಚಿಟ್ ನೀಡಿರುವುದು ಸ್ವಾಗತಾರ್ಹ. ಈ ಹಿಂದೆ ಸುಪ್ರೀಂಕೋರ್ಟ್ ಕೂಡ ಇಡಿಗೆ ಛಾಟಿ ಬೀಸಿತ್ತು. ಮುಡಾದಲ್ಲಿ ಯಾವ ಹಗರಣವಾಗಿಲ್ಲ ಎಂದು ಹೈಕಮಾಂಡ್‌ಗೂ ಸ್ಪಷ್ಟವಾಗಿ ಗೊತ್ತಿದೆ. ರಾಜಕೀಯದಲ್ಲಿ ಇಲ್ಲದಿದ್ದರೂ, ನಮ್ಮ ತಾಯಿಯ ವಿರುದ್ಧವೂ ಕುತಂತ್ರ ನಡೆದಿತ್ತು. ಪರಿಣಾಮ ಸ್ವಾಭಾವಿಕವಾಗಿ ಅವರ ಮನಸ್ಸಿಗೆ ನೋವಾಗಿತ್ತು. ಇನ್ನು ಸಂಪೂರ್ಣ ತನಿಖೆ ಆಗಲಿ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರನ್ನು ಸಿಲುಕಿಸುವ ಕುತಂತ್ರ ನಡೆದಿತ್ತು, ಈಗ ಸತ್ಯ ಹೊರ ಬರುತ್ತಿದೆ ಎಂದರು.

ಡಾ.ಜಿ. ಪರಮೇಶ್ವರ್ ಮತ್ತು ಡಿ.ಕೆ. ಶಿವಕುಮಾರ್ ಪ್ರತ್ಯೇಕವಾಗಿ ಸಭೆ ನಡೆಸಿದ ವಿಚಾರದ ಬಗ್ಗೆ ಮಾತನಾಡಿದ ಅವರು, ಯಾರೇ ಸಭೆ ಮಾಡಿದರೂ ಪಕ್ಷಕ್ಕಾಗಿ ಅಷ್ಟೇ, ನಮ್ಮ ತಂದೆ 45 ವರ್ಷಗಳ ಸುದೀರ್ಘ ರಾಜಕೀಯ ಮಾಡಿದ್ದಾರೆ. ವಿಪಕ್ಷಗಳು ಏನೇ ಕುತಂತ್ರ ಮಾಡಿದರೂ ಏನು ಆಗುವುದಿಲ್ಲ ಎಂದರು.

ಮೈಸೂರಿನಲ್ಲಿ ಡ್ರಗ್ಸ್ ಹಾವಳಿ ಜಾಸ್ತಿಯಾಗಿದೆ ಎಂದು ಜನ ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಪೊಲೀಸರು ಕೂಡ ಅವರ ಕೆಲಸ ಮಾಡುತ್ತಿದ್ದಾರೆ. ಆದರೆ ಮಹಾರಾಷ್ಟ್ರ ಪೊಲೀಸರು ನಮ್ಮವರಿಗಿಂತ ಚುರುಕಾಗಿ ಡ್ರಗ್ಸ್ ಜಾಲ ಭೇದಿಸಿದರು. ಡ್ರಗ್ಸ್ ತೊಲಗಿಸುವ ನಿಟ್ಟಿನಲ್ಲಿ ಪೊಲೀಸರು ಹೆಚ್ಚಿನ ಕೆಲಸ ಮಾಡಬೇಕಿದೆ.

-ಡಾ. ಯತೀಂದ್ರ ಸಿದ್ದರಾಮಯ್ಯ ಎಂಎಲ್‌ಸಿ

ಕೀಳುತನದ ಮಾತುಗಳು ನನಗೆ ಹೊಸದಲ್ಲ

ಮಂಡ್ಯ: ಸಾಮಾಜಿಕ ಜಾಲತಾಣದಲ್ಲಿನ ಟ್ರೋಲ್, ಕೀಳುತನದ ಮಾತುಗಳು ನನಗೆ ಹೊಸದಲ್ಲ, ಐದಾರು ವರ್ಷಗಳಿಂದ

ಅನುಭವಿಸುತ್ತಾ ಬಂದಿದ್ದೇನೆ. ಮೈಸೂರು ಜಿಲ್ಲೆ ಕೆ.ಆರ್. ನಗರದಲ್ಲಿ ನನ್ನ ಮೇಲೆ ಹಲ್ಲೆ ಆಗಿತ್ತು. ನಾನು ಪೊಲೀಸರಿಗೆ ದೂರು ನೀಡಿದ್ದೆ. ಇಲ್ಲಿಯವರೆಗೆ ಯಾರನ್ನೂ ಬಂಧಿಸಿಲ್ಲ. ನನಗೆ ನ್ಯಾಯವೂ ಸಿಕ್ಕಿಲ್ಲ' ಎಂದು ಮಾಜಿ ಸಂಸದೆ, ನಟಿ ಸುಮಲತಾ ಅಂಬರೀಷ್ ದೂರಿದರು.

ಚಿತ್ರನಟಿ ರಮ್ಯಾ ವಿರುದ್ಧ ಟ್ರೋಲ್ ಮಾಡುತ್ತಿರುವ ಬಗ್ಗೆ ನಗರದಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹೆಣ್ಣು ಮಕ್ಕಳಿಗೆ ಕೆಟ್ಟ ರೀತಿಯ ಕಮೆಂಟ್ ಮಾಡಬಾರದು. ನಾನು ರಮ್ಯಾ ಅವರ ಸೋಶಿಯಲ್ ಮೀಡಿಯಾ ನೋಡಿಲ್ಲ. ಪೊಲೀಸ್ ತನಿಖೆ ಮಾಡಿ ತಪ್ಪು ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆ. ನ್ಯಾಯ ಅನ್ನೋದು ಪ್ರತಿಯೊಬ್ಬರಿಗೂ ಸಿಗಬೇಕು' ಎಂದರು.

ಕೋರ್ಟ್ ಆದೇಶ ಪಾಲಿಸಬೇಕು

ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಯಾರೇ ಆಗಲಿ ನ್ಯಾಯಾಲಯದ ಆದೇಶ ಪಾಲಿಸಬೇಕು. ಕೋರ್ಟ್ ದೋಷಿ ಅಂತ ತೀರ್ಪು ಕೊಟ್ಟ ಮೇಲೆ ಮಾತಾಡೋಕೆ ಏನೂ ಇಲ್ಲ. ಶಿಕ್ಷೆ ಏನು ಪ್ರಕಟವಾಗುತ್ತೆ ಅನ್ನೋದನ್ನು ನೋಡೋಣ' ಎಂದರು.

ಕೆಲವರು ಅನಾಮಿಕರಾಗಿ ಪೋಸ್ಟ್ ಹಾಕುತ್ತಿದ್ದೇವೆ ಅಂದುಕೊಂಡಿದ್ದಾರೆ. ಇದನ್ನು ತಂತ್ರಜ್ಞಾನದಿಂದ ಪತ್ತೆ ಹಚ್ಚಬಹುದಾಗಿದೆ. ಸೋಷಿಯಲ್ ಮೀಡಿಯಾವನ್ನು ಹೇಗೆ ಬಳಸಬೇಕೆಂದು ಯುವ ಸಮೂಹ ಯೋಚಿಸಬೇಕು. ಬೇರೆಯವರನ್ನು ಟಾರ್ಗೆಟ್ ಮಾಡುವ ಅಸ್ತ್ರ ಅಂತ ಅಂದುಕೊಂಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ನಾಡ ಕಚೇರಿ ಸೇವೆ ಕಲಬುರಗಿ ನಂಬರ್ 1

ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ಮೊದಲ 3 ಸ್ಥಾನ | ಅಧಿಕಾರಿಗಳ ಕಾರ್ಯವೈಖರಿಗೆ ಮೆಚ್ಚುಗೆ

ಕಲಬುರಗಿ: ಸರಕಾರದ ನಾನಾ ಸೌಲಭ್ಯ ಹಾಗೂ ಸೇವೆ ಕೋರಿ ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳನ್ನು ಅತಿವೇಗವಾಗಿ ವಿಲೇವಾರಿ ಮಾಡಿರುವ ಜಿಲ್ಲೆಗಳ ಪೈಕಿ ಕಲಬುರಗಿ ನಂಬರ್-1 ಸ್ಥಾನ ಪಡೆದುಕೊಂಡಿದೆ.

ಕಳೆದ ಜುಲೈ ತಿಂಗಳಿನಲ್ಲಿ ಕಲಬುರಗಿ ಜಿಲ್ಲೆಯ ಅಟಲ್ ಜೀ ಜನಸ್ನೇಹಿ ಹಾಗೂ ನಾಡ ಕಚೇರಿ ಕೇಂದ್ರಗಳಲ್ಲಿ 58,647 ಅರ್ಜಿಗಳು ಸಲ್ಲಿಕೆ ಆಗಿದ್ದವು. ಈ ಪೈಕಿ 55,981 ಅರ್ಜಿಗಳನ್ನು ಕಾಲಮಿತಿಯಲ್ಲಿಯೇ ವಿಲೇವಾರಿ ಮಾಡಿ ಶೇ.96 ಪ್ರಗತಿ ಸಾಧಿಸಿಸುವ ಮೂಲಕ ರಾಜ್ಯದಲ್ಲಿಯೇ ಕಲಬುರಗಿ ಜಿಲ್ಲೆ ನಂಬರ್-1 ಸ್ಥಾನ ಪಡೆದಿದೆ.

ನಾಡ ಕಚೇರಿಯಿಂದ ಕಂದಾಯ ಇಲಾಖೆಯ 41 ಸೇವೆ ನೀಡಲು ಜುಲೈ-2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳನ್ನು ನಿಗಧಿತ ಅವಧಿಯಲ್ಲಿ 8.93 ವಿಲೇವಾರಿ ಸೂಚ್ಯಂಕದ ಪ್ರಕಾರ ವಿಲೇವಾರಿ ಮಾಡುವ ಮೂಲಕ ಕಲಬುರಗಿ ರಾಜ್ಯದ ಗಮನ ಸೆಳೆದಿದೆ.

ಜಿಲ್ಲೆಯಲ್ಲಿನ ಈ ಕಾರ್ಯ ಸಾಧನೆಗೆ ನಾಡ ಕಚೇರಿ ಮತ್ತು ಆಟಲ್ ಜೀ ಜನಸ್ನೇಹಿ ಕೇಂದ್ರದ ಸಿಬ್ಬಂದಿಗಳ ಸಹಕಾರ, ಕಾರ್ಯತತ್ಪರತೆ ಕಾರಣವಾಗಿರುತ್ತದೆ. ಇದಕ್ಕಾಗಿ ಶ್ರಮಿಸಿದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿರುವ ಡಿ.ಸಿ ಬಿ.ಫೌಜಿಯಾ ತರನ್ನುಮ್ ಅವರು, ಮುಂದಿನ ದಿನಗಳಲ್ಲಿ ಇದೇ ರೀತಿಯ ಸಾಧನೆ ಮಾಡುವಂತೆ ಸಿಬ್ಬಂದಿಗಳನ್ನು ಹುರಿದುಂಬಿಸಿದ್ದಾರೆ.

ಟಾಪ್ 10ರಲ್ಲಿ ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳಿಗೆ ಸ್ಥಾನ

ಜಿಲ್ಲಾವಾರು ಅರ್ಜಿ ವಿಲೇವಾರಿ ಪಟ್ಟಿ ವೀಕ್ಷಿಸಿದಾಗ ಅಗ್ರ ಮೂರು ಸ್ಥಾನಗಳನ್ನು ಕ್ರಮವಾಗಿ ಕಲಬುರಗಿ, ವಿಜಯನಗರ ಹಾಗೂ ರಾಯಚೂರು ಪಡೆದುಕೊಂಡಿವೆ. ಉಳಿದಂತೆ 6ನೇ ಮತ್ತು 9ನೇ ಕ್ರಮಾಂಕದಲ್ಲಿ ಕ್ರಮವಾಗಿ ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆ ಗಳಿಸಿದ್ದು, ಒಟ್ಟಾರೆ ಕಲ್ಯಾಣದ 5 ಜಿಲ್ಲೆಗಳು ಟಾಪ್ 10ರಲ್ಲಿರುವುದು ಅಧಿಕಾರಿಗಳು ಹಾಗೂ ಸಾರ್ವಜನಿಕರಲ್ಲಿ ಸಂತಸ ತಂದಿದೆ.

ಕಳಚಿದ ದೊಡ್ಮನೆ ಹಿರಿಯ ಕೊಂಡಿ

ಡಾ.ರಾಜ್ ಸಹೋದರಿ ನಾಗಮ್ಮ ನಿಧನ | ಇಂದು ಗಾಜನೂರಿನಲ್ಲಿ ಅಂತ್ಯಕ್ರಿಯೆ

ಚಾಮರಾಜನಗರ : ಕನ್ನಡ ಸಿನಿರಂಗದ ದೊಡ್ಮನೆ ಖ್ಯಾತಿಯ ಅಣ್ಣಾವ್ರ ಕುಟುಂಬದ ಹಿರಿ ಕೊಂಡಿಯೊಂದು ಶುಕ್ರವಾರ ಕಳಚಿದ್ದು ವರನಟ ಡಾ.ರಾಜ್‌ಕುಮಾರ್ ಮನೆಯಲ್ಲಿ ನೀರವ ಮೌನ ಆವರಿಸಿದೆ. ರಾಜ್ ಪರಿವಾರದ ಮಕ್ಕಳನ್ನು ಎತ್ತಿ ಆಡಿಸಿ ಬೆಳೆಸಿದ ನಾಗಮ್ಮ ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ.

ತಮಿಳುನಾಡಿನ ತಾಳವಾಡಿ ತಾಲೂಕಿನ ದೊಡ್ಡಗಾಜನೂರಿನಲ್ಲಿ ವಾಸವಿದ್ದ ಡಾ.ರಾಜ್ ಸಹೋದರಿ ನಾಗಮ್ಮ (93) ಶುಕ್ರವಾರ ಬೆಳಗ್ಗೆ 11 ರ ಸುಮಾರಿಗೆ ನಿಧನರಾಗಿದ್ದಾರೆ. ನಾಗಮ್ಮ ಅಣ್ಣಾವ್ರ ಅಚ್ಚುಮೆಚ್ಚಿನ ಸಹೋದರಿಯಾಗಿದ್ದರು. ಜತೆಗೆ ಇಡೀ ರಾಜ್ ಪರಿವಾರಕ್ಕೆ ಅಕ್ಕರೆಯ ನಾಗತ್ತೆಯಾಗಿ ಎಲ್ಲರ ಪ್ರೀತಿ ಪಾತ್ರರಾಗಿದ್ದರು.

ಅಣ್ಣಾವ್ರು ಮದ್ರಾಸ್ ನಲ್ಲಿದ್ದಾಗ ಮಕ್ಕಳ ಲಾಲನೆ-ಪಾಲನೆ ಮಾಡಿದ್ದ ನಾಗಮ್ಮ ಎಲ್ಲರನ್ನೂ ಎತ್ತಿ ಆಡಿಸಿ ಬೆಳೆಸಿದ್ದರು. ಗಾಜನೂರಿಗೆ ಬಂದು ನೆಲೆ ನಿಂತಾಗಲೂ ತಂಗಿ ಹಾಗೂ ಕುಟುಂಬದ ಜತೆ ವಿರಾಮದ ಕಾಲವನ್ನು ಕಳೆಯಬೇಕೆಂದು ಅಣ್ಣಾವ್ರು ಗಾಜನೂರಿನಲ್ಲಿ ಮನೆಯನ್ನೂ ಕಟ್ಟಿಸಿದ್ದರು. ಅಷ್ಟರಲ್ಲಿ, ವೀರಪ್ಪನ್ ನಿಂದ ಅಪಹರಣಕ್ಕೊಳಗಾದ ಬಳಿಕ ಅನಿವಾರ್ಯವಾಗಿ ಗಾಜನೂರಿನಲ್ಲಿ ನೆಲೆ ನಿಲ್ಲುವ ಆಸೆ ಕೈ ಬಿಟ್ಟಿದ್ದರು ಡಾ.ರಾಜ್ ಕುಮಾರ್. ನಟ ಪುನೀತ್ ರಾಜ್ ಕುಮಾರ್ ಕಂಡರೇ ನಾಗಮ್ಮಗೆ ಎಲ್ಲಿಲ್ಲದ ಅಕ್ಕರೆ. ತಾನು ಎತ್ತಿ ಆಡಿಸಿದ ಅಪ್ಪುವನ್ನು ಕಂಡಾಗ ಮನತುಂಬಿ ಮುತ್ತು ಕೊಟ್ಟು ಹಾರೈಸುತ್ತಿದ್ದರು ಎಂದು ನಾಗಮ್ಮರ ಮಗ ಗೋಪಾಲ್ ಹೇಳಿದ್ದಾರೆ.

ಗುರುವಾರ ರಾತ್ರಿಯೇ ಶಿವಣ್ಣ, ರಾಘಣ್ಣ ಸೇರಿ ಅಣ್ಣಾವ್ರ ಇಡೀ ಕುಟುಂಬ ಗಾಜನೂರಿಗೆ ಆಗಮಿಸಿದ್ದು, ಶನಿವಾರ ಬೆಳಗ್ಗೆ ಗಾಜನೂರಿನ ಅವರ ಸ್ವಂತ ತೋಟದಲ್ಲಿ ಪತಿ ಸಮಾಧಿ ಪಕ್ಕದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಗನ ಸಾವೂ ತಿಳಿಯಲಿಲ್ಲ

ನಾಗಮ್ಮಗೆ ಐವರು ಪುತ್ರರು, ಮೂವರು ಪುತ್ರಿಯರು ಸೇರಿ ಒಟ್ಟು 8 ಜನ ಮಕ್ಕಳಿದ್ದು ಹಿರಿ ಮಗ ಗೋಪಾಲ್ ಜತೆ ಗಾಜನೂರಿನಲ್ಲಿ ವಾಸವಿದ್ದರು. ಕಳೆದ 20 ದಿನದ ಹಿಂದೆಯಷ್ಟೇ ಚೆನ್ನೈ ನಲ್ಲಿ ವಾಸವಿದ್ದ ಪುತ್ರ ಭರತ್‌ರಾಜ್ ಎಂಬವರು ಅನಾರೋಗ್ಯದಿಂದ ನಿಧನರಾಗಿದ್ದರು. ವಯೋಸಹಜ ಕಾರಣಕ್ಕಾಗಿ ಮಗನ ಸಾವಿನ ಸುದ್ದಿಯನ್ನು ಕೂಡ ನಾಗಮ್ಮಗೆ ತಿಳಿಸಿರಲಿಲ್ಲ.

ಅಪ್ಪು ಸಾವಿನ ಸುದ್ದಿಯೂ ಗೌಪ್ಯ

ಅಣ್ಣಾವ್ರ ಕುಟುಂಬಕ್ಕಷ್ಟೇ ಅಲ್ಲದೇ ಇಡೀ ಚಿತ್ರರಂಗಕ್ಕೆ ಬರಸಿಡಿಲಿನಂತೆ

ಅಪ್ಪಳಿಸಿದ ಅಪ್ಪು ನಿಧನದ ಸುದ್ದಿಯನ್ನು ಕುಟುಂಬಸ್ಥರು ಗೌಪ್ಯವಾಗಿ ಇಟ್ಟಿದ್ದರು. ಮನೆಗೇ ಯಾರೇ ಬಂದರೂ ಅಪ್ಪು ವಿಚಾರ ಮಾತಾನಾಡಬೇಡಿ ಎಂದು ತಾಕೀತು ಮಾಡುತ್ತಿದ್ದರು. ಕಳೆದ ಮಾರ್ಚ್‌ನಲ್ಲಿ ಅಪ್ಪು ಹುಟ್ಟುಹಬ್ಬಕ್ಕೆ ಶುಭ ಕೋರಿ, ಬಹಳ ದಿನವಾಯ್ತು ನೋಡಿ ಬಾ ಮಗನೇ ಎಂದು ಕರೆದಿದ್ದ ವಿಡಿಯೊ ಸಾಕಷ್ಟು ವೈರಲ್ಲಾಗಿತ್ತು.

ಪ್ರಜಾಪ್ರಭುತ್ವ ಉಳಿವಿಗೆ ನಿರಂತರ ಹೋರಾಟ

ಬೀದರ್: ಬೆಂಗಳೂರು ಸೆಂಟ್ರಲ್ ಕ್ಷೇತ್ರದಲ್ಲಿ ಮತಗಳ ಏರುಪೇರು ನಡೆದಿರುವುದು ಸಂಶೋಧನೆಯಲ್ಲಿ ತಿಳಿದು ಬಂದಿದೆ. ಹಾಗಾಗಿ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಆ. 5ರಂದು ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು

ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಕೇಂದ್ರದ ಬಿಜೆಪಿ ಸರಕಾರ ಚುನಾವಣಾ ಆಯೋಗ ಹಾಗೂ ಸ್ವಾಯತ್ತ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಮತಗಳನ್ನು ಕದ್ದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವ ಕೆಲಸ ಮಾಡಿದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವಿಗಾಗಿ ನಾವು ನಿರಂತರ ಹೋರಾಟ ಮಾಡುತ್ತೇವೆ. ಪಾರದರ್ಶಕವಾಗಿ ಚುನಾವಣೆ ನಡೆದರೆ ಜಾತ್ಯತೀತ ಶಕ್ತಿಗಳು ಹಾಗೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಧರ್ಮಸ್ಥಳದ ಅರಣ್ಯ ಪ್ರದೇಶದಲ್ಲಿ ಶವಕ್ಕಾಗಿ ಹುಡುಕಾಟ ಬಗ್ಗೆ ಮಾತನಾಡಿದ ಖಂಡ್ರೆ, ಈ ಕುರಿತು ತನಿಖೆ ನಡೆಯುತ್ತಿದೆ. ವರದಿ ಬಂದ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ತನಿಖೆಯಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ. ಈ ಪ್ರಕರಣ ತಾರ್ಕಿಕ ಅಂತ್ಯ ಕಾಣಲಿದೆ ಎಂದರು.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಇದು ತುಘಲಕ್ ದರ್ಬಾರು

ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ' ಎಂಬ ಜಾಣನುಡಿಯನ್ನು ಯಾರಿಗಾದರೂ ಸರಿಯಾಗಿ ಅರ್ಥಮಾಡಿಸಬೇಕೆಂದರೆ, ಅಂಥವರಿಗೆ ಅಮೆರಿಕವನ್ನು ತೋರಿಸಬೇಕು. ಕಾರಣ, ಕಳೆದ ಕೆಲವು ದಶಕಗಳಿಂದ ಇಂಥದ್ದೇ ಕೆಲಸವನ್ನು ಮಾಡಿಕೊಂಡು ಬಂದಿರುವಂಥ ರಾಷ್ಟ್ರ ಅಮೆರಿಕ. ಅದರಲ್ಲೂ ನಿರ್ದಿಷ್ಟವಾಗಿ, ಅಖಂಡ ಭಾರತದ ವಿಭಜನೆಯಾಗಿ ಪಾಕಿಸ್ತಾನ ಹುಟ್ಟಿಕೊಂಡ ನಂತರ, ಉಭಯ ದೇಶಗಳ ನಡುವೆ ಕಾಲಾನುಕಾಲಕ್ಕೆ ತಲೆದೋರುವ ವೈಮನಸ್ಸು, ಭುಗಿಲೇಳುವ ಕದನಕ್ಕೆ ಪೆಟ್ರೋಲ್ ಸುರಿದು, ಆ ಬೆಂಕಿಯಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳುವ ಕೆಲಸವನ್ನು ಮಾಡಿಕೊಂಡೇ ಬಂದಿದೆ ಅಮೆರಿಕ. ಮಾತ್ರವಲ್ಲ, ಭಾರತ ಮತ್ತು ರಷ್ಯಾದ ನಡುವೆ ಗಟ್ಟಿ ತಳಹದಿಯ ದ್ವಿಪಕ್ಷೀಯ ಬಾಂಧವ್ಯ ರೂಪುಗೊಳ್ಳುತ್ತಲೇ ಬಂದಿರುವುದನ್ನು ಕೆಂಗಣ್ಣಿನಿಂದಲೇ ನೋಡಿಕೊಂಡು ಬರುತ್ತಿದ್ದ ಅಮೆರಿಕವು, ಭಾರತವನ್ನು ಧೈರ್ಯಗೆಡಿಸಬೇಕೆಂಬ ಉದ್ದೇಶದೊಂದಿಗೆ ಹಿಂದೆಲ್ಲಾ ಪಾಕಿಸ್ತಾನಕ್ಕೆ ಆರ್ಥಿಕ ನೆರವು ನೀಡುತ್ತಿತ್ತು, ಯುದ್ಧೋಪಕರಣ ಗಳನ್ನು ಸರಬರಾಜು ಮಾಡುತ್ತಲೇ ಬಂದಿತ್ತು. ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ತರುವಾಯದಲ್ಲೊಮ್ಮೆ ಭಾರತ ಮತ್ತು ಅಮೆರಿಕದ ಬಾಂಧವ್ಯ ಸುಧಾರಿಸಿತ್ತು ಕೂಡ. ಆದರೆ ಡೊನಾಲ್ಡ್ ಟ್ರಂಪ್ ಮಹಾಶಯರು ಎರಡನೇ ಅವಧಿಗೆ ಅಧ್ಯಕ್ಷಗಾದಿಗೆ ಏರಿದ ನಂತರ ಮೈಯೊಳಗೆ 'ತೊಣಚಿ ಹೊಕ್ಕಂತೆ' ಆಡುತ್ತಿದ್ದಾರೆ. ಒಂದಿಡೀ ವಿಶ್ವವೇ ಪಾಕ್-ಪ್ರೇರಿತ ಪಹಲ್ಗಾಮ್ ಹತ್ಯಾಕಾಂಡವನ್ನು ಖಂಡಿಸುತ್ತಿರುವ ಈ ಹೊತ್ತಲ್ಲಿ, 'ಊರಿಗೇ ಒಂದು ದಾರಿಯಾದರೆ, ಎಡವಟ್ಟನದೇ ಮತ್ತೊಂದು ದಾರಿ' ಎಂಬಂತೆ ಪಾಕಿಸ್ತಾನಕ್ಕೆ 'ಧೃತರಾಷ್ಟ್ರ ಆಲಿಂಗನ' ನೀಡಲು ಮುಂದಾಗಿದ್ದಾರೆ ಟ್ರಂಪ್. ಪಾಕಿಸ್ತಾನದಲ್ಲಿ ಬೃಹತ್ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಪಡಿಸಲು ಆ ದೇಶದೊಂದಿಗೆ ಪಾಲುದಾರಿಕೆ ಒಡಂಬಡಿಕೆ ಮಾಡಿಕೊಳ್ಳುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಸಾಲದೆಂಬಂತೆ, 'ಭಾರತ ಮತ್ತು ರಷ್ಯಾ ದೇಶಗಳು ಸದ್ಯದಲ್ಲೇ ನಿರ್ಜೀವ ಆರ್ಥಿಕತೆ ಸಾಕ್ಷಿಯಾಗಲಿವೆ' ಎಂಬ ಬುರುಡೆ-ಭವಿಷ್ಯವನ್ನೂ ನುಡಿದುಬಿಟ್ಟಿದ್ದಾರೆ! ಆದರೆ, 'ರಾಷ್ಟ್ರೀಯ ಹಿತಾಸಕ್ತಿ'ಯ ರಕ್ಷಣೆಗೆ ಕಟಿಬದ್ಧರಾಗಿರುವ ಆಳುಗರು ಕೇಂದ್ರದಲ್ಲಿ ಇರುವ ತನಕವೂ ಭಾರತಕ್ಕೆ ಯಾವ ಅಪಾಯವೂ ಇಲ್ಲ ಎಂಬುದನ್ನು ಟ್ರಂಪ್ ಮರೆತಂತಿದೆ...

ಸೊಂಪಾದಕೀಯ

ಪುಕಾರು ಸುದ್ದಿ

ಇವತ್ತು ಸಾಮಾಜಿಕ ಜಾಲತಾಣಗಳು ಮತ್ತು ಕೆಲವು ಮಿಸ್‌ಲೀಡಿಂಗ್ ನ್ಯೂಸ್ ಪೋರ್ಟಲ್‌ಗಳನ್ನು ನೋಡಿದಾಗ ಒಂದು ವಿಷಯ ಖಂಡಿತಾ ಗಮನಕ್ಕೆ ಬರುತ್ತೆ. ಅದೇನಪ್ಪಾ ಅಂತೀರಾ? ಈ ನಮ್ಮ ಸಮಾಜದಲ್ಲಿ ಅತಿ ಮುಖ್ಯವಾಗಿ ಆಗಬೇಕಿರುವ, ಅತಿ ಶೀಘ್ರದಲ್ಲೇ ಆಗಬೇಕಾಗಿರುವ ಎರಡು ಸಂಗತಿಗಳು ಅಂದರೆ, ಒಂದು ಆ್ಯಂಕರ್ ಅನುಶ್ರೀ ಮದುವೆ, ಇನ್ನೊಂದು ಐಶ್ವರ್ಯಾ ರೈ ಡಿವೋರ್ಸ್. ಅದರಲ್ಲಿ ಒಂದು ಈಗ ಫಿಕ್ಸ್ ಆಗಿದೆ. ಇದ್ಯಾಕೆ ಹಿಂಗೆ ಅಂದ್ರೆ ಅದಕ್ಕೆ ಉತ್ತರ, ಪ್ರತಿನಿತ್ಯ ಜಾಲತಾಣಗಳಲ್ಲಿ ಕಾಣಬರುತ್ತಿರೋ ಫೇಕ್ ನ್ಯೂಸ್‌ಗಳು ಮತ್ತು ಊಹಾತ್ಮಕ ಸುದ್ದಿಗಳ ಹಾವಳಿ. ಬಹುಶಃ ಈ ಸಾಮಾಜಿಕ ಜಾಲತಾಣಗಳ ಅಡ್ಮಿನ್‌ಗಳು, ನ್ಯೂಸ್ ಪೇಜುಗಳ ಬರಹಗಾರರು ಬೆಳಗ್ಗೆ ಎದ್ದು ಇವತ್ತು ಬರೆಯೋಕೆ ಏನೂ ಸುದ್ದಿ ಸಿಗ್ತಾ ಇಲ್ಲ ಅಂದಕೂಡಲೇ ತಿರುಗಿ ನೋಡೋದು ಸೆಲೆಬ್ರಿಟಿಗಳ ಕಡೆಗೆ. ಅವರ ವಿಷಯದಲ್ಲಿ ಏನಾದರೂ ಸಣ್ಣ ಸುದ್ದಿ ಇದ್ದರೆ ಅದನ್ನೇ ದೊಡ್ಡದು ಮಾಡೋದು ಅಥವಾ ಸುದ್ದಿ ಇರದಿದ್ದರೂ ಕ್ರಿಯೇಟ್ ಮಾಡೋದು. ಇಲ್ಲವೇ, ಯಾವುದೋ ಸುದ್ದಿಯನ್ನು ಇನ್ಯಾವುದೋ ಸುದ್ದಿಗೆ ಲಿಂಕ್ ಮಾಡೋದು. ಇದೇ ಅವರ ಕೆಲಸ. ಅದರಲ್ಲೂ ನಮ್ಮ ಆ್ಯಂಕರ್ ಅನುಶ್ರೀ ಅವರಿಗಂತೂ, ಈಗ ಮದುವೆ ಫಿಕ್ಸ್ ಆಗುವ ಮುನ್ನ ಈ ಪೇಜು ಮತ್ತು ಜಾಲತಾಣಗಳಲ್ಲಿ ಅದೆಷ್ಟು ಬಾರಿ, ಅದ್ಯಾರ್ ಯಾರ ಜತೆಗೆ ಮದುವೆ ಆಗಿದೆಯೋ ಬಹುಶಃ ಅವರಿಗೇ ಗೊತ್ತಿಲ್ಲ. 'ವಾರಕ್ಕೆ ಮೂರು ಬಾರಿ ಬಂದು ಹೋಗಾಂವ' ಅನ್ನುವಂಥ ಸುದ್ದಿ ಇದು. ಅಂತೂ ಅನುಶ್ರೀ ಮದುವೆ ಫಿಕ್ಸ್ ಅನ್ನೋ ಸುದ್ದಿ ವಾರಕ್ಕೆ ಮೂರು ಸಾರಿ ಇಂಟರ್‌ನೆಟ್‌ನಲ್ಲಿ ಕಾಣಸಿಗುತ್ತಿತ್ತು. ಇದರ ಜತೆಗೆ ಪಾಪ ಪಾಪರಾಜಿಗಳು ಸೇರಿದಂತೆ ಅನೇಕ ನೆಟ್ಟಿಗರು ದುರ್ಬಳಕೆ ಮಾಡ್ತಾ ಇರೋ ಇನ್ನೊಂದು ವಿಷಯ ಅಂದ್ರೆ, ಅದು ಅಭಿಷೇಕ್ ಬಚ್ಚನ್ ಮತ್ತು ಐಶ್ವರ್ಯಾ ರೈ ಡಿವೋರ್ಸ್. ಇಬ್ಬರೂ ಇನ್ನೇನು ಡಿವೋರ್ಸ್ ಕೊಟ್ಟೇ ಬಿಟ್ರು ಅನ್ನೋ ಸುದ್ದಿ ಕಳೆದ ಒಂದು ವರ್ಷದಿಂದ ಅಭಿಷೇಕ್ ಅವರನ್ನೇ ಶೇಕ್ ಮಾಡುವ ನಿತ್ಯದ ಶೇಕಿಂಗ್ ನ್ಯೂಸ್ ಆಗಿ ಕಾಡುತ್ತಿದೆ. ಪಬ್ಲಿಕ್ ಆಗಿ ಈ ಜೋಡಿಯಲ್ಲಿ ಯಾರಾದರೂ ಕಾಣಿಸಿಕೊಂಡರೆ, ಅಲ್ಲಿ ಅವರು ಅವರು ಒಂದು ಸಣ್ಣ ಸನ್ನೆ ಮಾಡಿದರೂ, ಸೊನ್ನೆಯಿಂದ ಏನು ಬೇಕಾದರೂ ಸೃಷ್ಟಿ ಮಾಡ್ತೀವಿ ಎನ್ನುವಂತೆ ಈ ಇಂಟರ್‌ನೆಟ್ಟಿಗರು ಅದನ್ನು ಡಿವೋರ್ಸ್‌ಗೆ ಲಿಂಕ್ ಮಾಡ್ತಾ ಇರೋದನ್ನು ನೋಡಿ ಎಲ್ಲರಿಗೂ ಈ ಎರಡು ಕೆಲಸ ಬೇಗ ಆಗಿ ಹೋಗಲಪ್ಪಾ ಅನ್ನಿಸಿದ್ದು ಸುಳ್ಳಲ್ಲ.

ಸಂಪಾದಕರ ಸದ್ಯಶೋಧನೆ

ದೇಶದ ಪ್ರಪ್ರಥಮ ಮತದಾರ

ಯಾರು ಆ ಶ್ಯಾಮ್ ಸರನ್ ನೇಗಿ? ಅವರ ಹೆಸರನ್ನು ಎಷ್ಟು ಮಂದಿ ಕೇಳಿದ್ದಾರೋ ಗೊತ್ತಿಲ್ಲ. ಆದರೆ ಆತ ಸ್ವತಂತ್ರ ಭಾರತದ ಪ್ರಪ್ರಥಮ ಮತದಾರ ಅಂದ್ರೆ ಅಚ್ಚರಿಯಾದೀತು. 1951ರಲ್ಲಿ ನಡೆದ ಮೊದಲ ಲೋಕಸಭಾ ಚುನಾವಣೆಯಲ್ಲಿ ನೇಗಿ ಮೊದಲು ಮತಗಟ್ಟೆಗೆ ಹೋಗಿ ಮತ ಚಲಾಯಿಸಿದರು. ಹಿಮಾಚಲ ಪ್ರದೇಶದ ಕಿನೌರ್ ಜಿಲ್ಲೆಯ ಕಲ್ಪಾ ಎಂಬ ಊರಿನವರಾದ ನೇಗಿಯವರು, ಮತದಾನ ಆರಂಭವಾಗುತ್ತಿದಂತೆ ಮೊದಲು ಸಾಲಿನಲ್ಲಿ ನಿಂತಿದ್ದರು. ಮೊದಲ ಚುನಾವಣೆ 1952ರಲ್ಲಿ ನಡೆದರೂ, ಹಿಮಾಚಲ ಪ್ರದೇಶದಲ್ಲಿ ಮಾತ್ರ ಆರು ತಿಂಗಳು ಮೊದಲೇ ಚುನಾವಣೆ ನಡೆದಿತ್ತು. ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಪ್ರತಿಕೂಲ ವಾತಾವರಣವಿರುವುದರಿಂದ, ವಿಪರೀತ ಹಿಮಪಾತವಾಗುವ ಸಾಧ್ಯತೆ ಇರುವುದರಿಂದ, ಆ ಸಮಯದಲ್ಲಿ ಚುನಾವಣೆಯನ್ನು ನಡೆಸಿದರೆ ಮತದಾನದಲ್ಲಿ ಭಾಗವಹಿಸುವುದು ಕಷ್ಟವಾಗುವುದರಿಂದ, ಆರು ತಿಂಗಳು ಮೊದಲೇ ಚುನಾವಣೆಯನ್ನು ಏರ್ಪಡಿಸಲಾಗಿತ್ತು. ಮೂಲತಃ ಶಾಲಾ ಶಿಕ್ಷಕರಾಗಿದ್ದ ನೇಗಿಯವರು, ಮತಗಟ್ಟೆ ಅಧಿಕಾರಿಗಳ ಪೈಕಿ ಒಬ್ಬರಾಗಿದ್ದರು. ಮತದಾನ ಆರಂಭವಾಗುತ್ತಿದ್ದಂತೆ, ಮೊದಲು ಮತದಾನ ಮಾಡಿ, 'ಭಾರತದ ಪ್ರಪ್ರಥಮ ಮತದಾರ' ಎಂಬ ಅಭಿದಾನಕ್ಕೆ ಪಾತ್ರರಾದರು. 1951ರಿಂದ ಶುರುಮಾಡಿ ಅವರು ತಮ್ಮ 105ನೇ ವಯಸ್ಸಿನಲ್ಲಿ 2022ರಲ್ಲಿ ನಿಧನರಾಗುವ ತನಕ ಪ್ರತಿ ಚುನಾವಣೆಯಲ್ಲೂ ಮತ ಹಾಕಿದ್ದಾರೆ. ಅದು ಲೋಕಸಭಾ ಚುನಾವಣೆಯೇ ಆಗಿರಲಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯೇ ಆಗಿರಲಿ, ನೇಗಿ ಮತದಾನ ಮಾಡುವುದನ್ನು ಮರೆಯುತ್ತಿರಲಿಲ್ಲ. ಅವರು ಪ್ರಥಮ ಮತದಾರರಷ್ಟೇ ಅಲ್ಲ, ದೇಶದ ಅತ್ಯಂತ ಹಿರಿಯ ಮತದಾರ ಎಂದೂ ಕರೆಯಿಸಿಕೊಂಡಿದ್ದರು. 34ನೇ ಸಲ ಚುನಾವಣೆಯಲ್ಲಿ ಮತ ಹಾಕಿದ ಮೂರು ದಿನಗಳ ನಂತರ ಅವರು 2022ರ ನವೆಂಬರ್ 5ರಂದು ಅಸುನೀಗಿದರು. ಭಾರತ ಸರಕಾರ ಅವರ ಅಂತ್ಯಕ್ರಿಯೆಯನ್ನು ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿಸಿತ್ತು. 2010ರಲ್ಲಿ ಭಾರತದ ಚುನಾವಣಾ ಆಯೋಗದ ವಜ್ರ ಮಹೋತ್ಸವದ ಸಂದರ್ಭದಲ್ಲಿ ಆಯೋಗದ ಅಂದಿನ ಚುನಾವಣಾ ಆಯುಕ್ತರಲ್ಲಿ ಒಬ್ಬರಾದ ನವೀನ ಚಾವ್ಲಾ ಖುದ್ದಾಗಿ ನೇಗಿಯವರ ನಿವಾಸಕ್ಕೆ ತೆರಳಿ ಸನ್ಮಾನಿಸಿದ್ದರು. 'ಆ ದಿನಗಳಲ್ಲಿ ಚುನಾವಣೆ ಅಂದ್ರೆ ಜಾತ್ರೆಯ ಸಂಭ್ರಮವಿರುತ್ತಿತ್ತು. ದೇಶದ ಪ್ರತಿ ಊರಿನಲ್ಲೂ ಹಬ್ಬದ ವಾತಾವರಣವಿರುತ್ತಿತ್ತು. ಆದರೆ ಈ ದಿನಗಳಲ್ಲಿ ಚುನಾವಣೆ ಬಂದಿದ್ದೇ ಗೊತ್ತಾಗುವುದಿಲ್ಲ. ಹಾಗಂತ ಆಗಿನ ದಿನಗಳಿಗಿಂತ ಈಗ ಹಣ ಹೆಚ್ಚು ಖರ್ಚಾಗುತ್ತಿದೆ. ಚುನಾವಣಾ ಆಯೋಗ ಚುನಾವಣೆಯನ್ನು ನೀರಸಗೊಳಿಸಿಬಿಟ್ಟಿದೆ. ಈಗಿನ ಚುನಾವಣೆಯಲ್ಲಿ ಸಂಭ್ರಮ ಹೊರಟುಹೋಗಿದೆ. ಅಂತ್ಯಸಂಸ್ಕಾರದಂತೆ ಭಾಸವಾಗುತ್ತದೆ' ಎಂದು ನೇಗಿ ಆ ಸಂದರ್ಭದಲ್ಲಿ ಹೇಳಿದ್ದರು. 2014ರಲ್ಲಿ ಹಿಮಾಚಲ ಪ್ರದೇಶ ಚುನಾವಣಾ ಆಯೋಗವು ನೇಗಿಯವರನ್ನು ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿತ್ತು. ಮತದಾರರಲ್ಲಿ ಜಾಗೃತಿಯನ್ನುಂಟುಮಾಡುವ ಕಾಯಕದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. 'ಮತದಾನ ಅಂದ್ರೆ ಮತಗಳನ್ನು ದಾನ ಮಾಡುವುದಲ್ಲ. ನಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದು. ಅದೊಂದು ಪರಮಪವಿತ್ರ ಕಾರ್ಯ. ಯಾವ ಕಾರಣಕ್ಕೂ ಮತದಾನದಲ್ಲಿ ಭಾಗವಹಿಸುವ ಅವಕಾಶವನ್ನು ತಪ್ಪಿಸಿಕೊಳ್ಳಬಾರದು' ಎಂದು ನೇಗಿ ಹೇಳುತ್ತಿದ್ದರು. ಯಾರಾದರೂ ಮತದಾನದಲ್ಲಿ ಭಾಗವಹಿಸದಿರುವ ಸಂಗತಿ ಅವರಿಗೆ ಗೊತ್ತಾದರೆ ಅವರ ಮನೆಗೆ ಹೋಗಿ, ಮತದಾನದಲ್ಲಿ ಭಾಗವಹಿಸದೇ ಇದ್ದಿದ್ದು ಯಾಕೆ ಎಂಬ ಕಾರಣವನ್ನು ತಿಳಿದುಕೊಳ್ಳಲು ಬಯಸುತ್ತಿದ್ದರು. ಮತದಾರರಲ್ಲಿ ಜಾಗೃತಿಯನ್ನುಂಟುಮಾಡಲು 'ಗೂಗಲ್ ಇಂಡಿಯಾ' ನೇಗಿಯವರ ಸೇವೆಯನ್ನು ಬಳಸಿಕೊಂಡಿತ್ತು.

ಕೇಸರಿ ಭಯೋತ್ಪಾದನೆಯ ಪಿತೂರಿ ಬಯಲಾಯಿತು

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

camohanbn@gmail.com

2008 ನವೆಂಬರ್ 26ರ ರಾತ್ರಿ ಮುಂಬೈ ಕಡಲತೀರಕ್ಕೆ ಬಂದಿಳಿದ ಪಾಕಿಸ್ತಾನದ ಭಯೋತ್ಪಾದಕರು, ದೇಶದ ಆರ್ಥಿಕ ರಾಜಧಾನಿಯ ಜನನಿಬಿಡ ಪ್ರದೇಶಗಳ ಮೇಲೆ ಎಕೆ-47 ಬಂದೂಕಿನ ಮೂಲಕ ದಾಳಿ ನಡೆಸಿ 168 ಜನರನ್ನು ಕೊಂದರು. ಅಷ್ಟಕ್ಕೂ ಏನಾಗುತ್ತಿದೆಯೆಂದು ಪೊಲೀಸರಿಗೆ ತಿಳಿಯುವಷ್ಟರಲ್ಲಿ ಮುಂಬೈ ನಗರ ಶೋಕದಲ್ಲಿ ಮುಳುಗಿತ್ತು. ಮುಂಬೈನಲ್ಲಿ ಭೂಗತ ಪಾತಕಿಗಳ ಗ್ಯಾಂಗ್ ವಾರ್ ನಡೆಯುತ್ತಿದೆಯೆಂದು ಪೊಲೀಸರು ಅಂದುಕೊಂಡಿದ್ದರು. ಆದರೆ ಛತ್ರಪತಿ ಶಿವಾಜಿ ರೈಲು ನಿಲ್ದಾಣ, ಲಿಯೋ ಪೋಲ್ಡ್ ಕೆಫೆ, ತಾಜ್ ಹೋಟೆಲುಗಳ ಮೇಲೆ ದಾಳಿ ನಡೆಸಿದ ಭಯೋತ್ಪಾದಕರು ಅಮಾಯಕರನ್ನು ಕೊಂದುಬಿಟ್ಟಿದ್ದರು. ಪೊಲೀಸರು ಮುಂಬೈ ನಗರದ ಬೀದಿಗಳಲ್ಲಿ ನಾಕಾಬಂದಿ ಹಾಕಿ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ, ಪ್ರಾಣವನ್ನೂ ಲೆಕ್ಕಿಸದೆ ಪಾಕಿಸ್ತಾನಿ ಭಯೋತ್ಪಾದಕ ಅಜ್ಮಲ್ ಕಸಬ್‌ನನ್ನು ಬಂಧಿಸಿದರು ಪೊಲೀಸ್ ಪೇದೆ ತುಕಾರಾಂ ಓಂಬ್ಳೆ. 2008ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ, ಬಂಧಿತ ಅಜ್ಮಲ್ ಕಸಬ್‌ನನ್ನು ವಿಚಾರಣೆಗೊಳಪಡಿಸಿದಾಗ ಆತ ಪಾಕಿಸ್ತಾನದ ಪ್ರಜೆ ಎಂಬ ವಿಷಯ ತಿಳಿಯಿತು. ಆದರೆ ಆತ ತನ್ನ ಕೈಗೆ ಕೇಸರಿ ಬಣ್ಣದ ದಾರವನ್ನು ಕಟ್ಟಿಕೊಂಡಿದ್ದ. ಪಾಕಿಸ್ತಾನದ ಐಎಸ್‌ಐ ಆತನಿಗೆ ಉಗ್ರ ತರಬೇತಿ ನೀಡುವಾಗ, ಆತ ನಡೆಸುವ ಭಯೋತ್ಪಾದಕ ಕೃತ್ಯವನ್ನು ಹಿಂದೂಗಳ ತಲೆಗೆ ಕಟ್ಟಲು ಕೈಗೆ ಕೇಸರಿ ದಾರವನ್ನು ಕಟ್ಟಿತ್ತು.

ಅಜ್ಮಲ್ ಕಸಬ್ ಬಂಧನದ ನಂತರ, ಪಾಕಿಸ್ತಾನದ ಐಎಸ್‌ಐಗಿಂತಲೂ ಅಪಾಯಕಾರಿಯಾಗಿ ನಡೆದುಕೊಂಡ ಕಾಂಗ್ರೆಸ್, ಅಜ್ಮಲ್ ಕಸಬ್‌ನನ್ನು ಹಿಂದೂವನ್ನಾಗಿ ಬಿಂಬಿಸುವ ಕೆಲಸ ಮಾಡಿತು. ಕಾಂಗ್ರೆಸ್ಸಿನ ದಿಗ್ವಿಜಯ ಸಿಂಗ್ 'ಕೇಸರಿ ಭಯೋತ್ಪಾದನೆ' ಎಂಬ ನೂತನ ಪದವನ್ನು ಬಳಸಿದರು. ಹಿಂದೂ ಸಂಘಟನೆಗಳ ಜನರನ್ನು ರಾತ್ರೋರಾತ್ರಿ ಭಯೋತ್ಪಾದಕರಂತೆ ಬಿಂಬಿಸುವ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಾಂಗ್ರೆಸ್ಸಿನ ದಿಗ್ವಿಜಯ್ ಸಿಂಗ್ ''26/11ರ ಭಯೋತ್ಪಾದಕ ಕೃತ್ಯದಲ್ಲಿ ಪಾಕಿಸ್ತಾನದ ಕೈವಾಡ ಕಾಣುತ್ತಿಲ್ಲ'' ಎಂದು ಹೇಳುವ ಮೂಲಕ ಐಎಸ್‌ಐಗೆ ಕ್ಲೀನ್ ಚಿಟ್ ನೀಡಿಬಿಟ್ಟರು. ದೇಶದಾದ್ಯಂತ ಹಿಂದೂ ಭಯೋತ್ಪಾದನೆ ಎಂಬ ಹೊಸದೊಂದು ವ್ಯಾಖ್ಯಾನವನ್ನು ಪ್ರಾರಂಭಿಸಿದರು. ಕಾಂಗ್ರೆಸ್ಸಿಗರು ಹೀಗೆ ಹೇಳಿದ ಮೇಲೆ, ಎಡಚರರಿಗೆ ಆನೆಬಲ ಬಂದಂತಾಯಿತು. ಅವರು ಯಥಾಪ್ರಕಾರ ತಮ್ಮ ಸಿಂಡಿಕೇಟ್ ಮೂಲಕ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಅದರ ಮಿತ್ರ ಸಂಘಟನೆಗಳ ಮೇಲೆ ತಲೆಬುಡವಿಲ್ಲದ ಆರೋಪಗಳ ಸುರಿಮಳೆಯನ್ನು ಸುರಿಸಿದರು. ಬಹುಸಂಖ್ಯಾತ ಹಿಂದೂಗಳ ಮನೋಸ್ಥೈರ್ಯವನ್ನು ಕುಗ್ಗಿಸುವ ದೊಡ್ಡ ಷಡ್ಯಂತ್ರವನ್ನು ಕಾಂಗ್ರೆಸ್ ಮಾಡಿತ್ತು.

2008ರಲ್ಲಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೇಗಾಂವ್‌ನಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಪ್ರಕರಣವನ್ನು ಹಿಂದೂಗಳ ತಲೆಗೆ ಕಟ್ಟಿದ್ದ ಕಾಂಗ್ರೆಸ್ ಪಕ್ಷ, ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಶ್ರೀಕಾಂತ್ ಪುರೋಹಿತ್, ಮೇಜರ್ ರಮೇಶ್ ಮತ್ತಿತರನ್ನು ಬಂಧಿಸಿ ಜೈಲಿಗೆ ಕಳುಹಿಸಿತ್ತು. ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್ ಅವರಿಗೆ ಜೈಲಿನಲ್ಲಿ ಚಿತ್ರಹಿಂಸೆ ನೀಡಲಾಯಿತು. ಕೇಸರಿ ಭಯೋತ್ಪಾದನೆ ಎಂಬ ನಿರೂಪಣೆಯನ್ನು ದೇಶದಲ್ಲಿ ಹರಿಬಿಡಲಾಗಿತ್ತು. ಆದರೆ ಸುದೀರ್ಘವಾಗಿ ವಿಚಾರಣೆ ನಡೆಸಿದ ಎನ್‌ಐಎ ವಿಶೇಷ ನ್ಯಾಯಾಲಯ ಅಷ್ಟೂ ಜನರನ್ನು ನಿರಪರಾಧಿಗಳು ಎಂದು ಖುಲಾಸೆ ಮಾಡಿದೆ. ಪೊಲೀಸರು ಮತ್ತು ಎಟಿಎಸ್‌ನವರು ಕಾಂಗ್ರೆಸ್ ನಾಯಕರ ಅಪ್ಪಣೆಯ ಮೇರೆಗೆ ಸಾಧ್ವಿಯವರನ್ನು ಅಪರಾಧಿಯನ್ನಾಗಿಸಿದ್ದರು. ನ್ಯಾಯಾಲಯದಲ್ಲಿ ಪೊಲೀಸರು ಮತ್ತು ಎಟಿಎಸ್‌ನವರು ಮಾಡಿದ ಆರೋಪಕ್ಕೆ ಸಾಕ್ಷಿ ಒದಗಿಸಲಾಗಲಿಲ್ಲ, ಸಾಧ್ವಿಯವರ ಬೈಕ್‌ನಲ್ಲಿ ಬಾಂಬ್ ಇಡಲಾಗಿತ್ತೆಂದು ಹೇಳಿದ್ದ ಪೊಲೀಸರಿಗೆ ನ್ಯಾಯಾಲಯ ಛೀಮಾರಿ ಹಾಕಿ ಸಾಕ್ಷಿ ಇಲ್ಲವೆಂದು ಹೇಳಿದೆ. ಬಾಂಬ್ ಬ್ಲಾಸ್ಟ್ ಆದ ನಂತರ ಅಲ್ಲಿಗೆ ಬೈಕ್ ತರಲಾಗಿದೆಯೆಂದು ಹೇಳಿದೆ. ಮೇಜರ್ ರಮೇಶ್ ಅವರ ಮನೆಯಲ್ಲಿ ಆರ್‌ಡಿಎಕ್ಸ್ ಸಂಗ್ರಹಿಸಿದ್ದಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ. ಮಾಲೇಗಾಂವ್‌ನಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಪ್ರಕರಣವನ್ನು ಸಾಧ್ವಿ ಪ್ರಜ್ಞಾ ಸಿಂಗ್ ಅವರ ತಲೆಗೆ ಕಟ್ಟಿ, ಹಿಂದೂ ಭಯೋತ್ಪಾದನೆ ಎಂಬ ನಿರೂಪಣೆಯನ್ನು ಗಟ್ಟಿಗೊಳಿಸಲು ಕಾಂಗ್ರೆಸ್ ಸತತವಾಗಿ ಪ್ರಯತ್ನಿಸಿತ್ತು. ಕೊನೆಗೂ ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ. ಪ್ರಕರಣದಲ್ಲಿ ಸಾಕ್ಷಿಗಳನ್ನು ಒದಗಿಸದ ಕಾರಣ ಎಲ್ಲರನ್ನೂ ಖುಲಾಸೆ ಮಾಡಲಾಗಿದೆ.

ಸಾಧ್ವಿ ಪ್ರಜ್ಞಾ ಸಿಂಗ್ ಪ್ರಕರಣದಲ್ಲಿ ಬಂಧಿತರನ್ನು ಹಿಂದೂ ಭಯೋತ್ಪಾದಕರೆಂದು ಕರೆದದ್ದು ಕಾಂಗ್ರೆಸ್ಸಿನ ಘಟಾನುಘಟಿ ನಾಯಕರು. ಬಂಧಿತರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜತೆ ಗುರುತಿಸಿಕೊಂಡಿದ್ದರೆಂದು ಅವರು ಹೇಳಿದ್ದರು. ಕಾಂಗ್ರೆಸ್ಸಿನ ಸುಶೀಲ್ ಕುಮಾರ್ ಶಿಂದೆಯವರು, ''ರಾಷ್ಟ್ರೀಯ ಸ್ವಯಂಸೇವಕ ಸಂಘವು ಹಿಂದೂ ಭಯೋತ್ಪಾದಕ ತರಬೇತಿ ನೀಡುವ ಕೇಂದ್ರಗಳನ್ನು ಸ್ಥಾಪಿಸಿದೆ'' ಎಂದಿದ್ದರು. ಪಿ.ಚಿದಂಬರಂ ಅವರು, ''ಕೇಸರಿ ಭಯೋ

ತ್ಪಾದನೆ ದೇಶದಲ್ಲಿದೆ'' ಎಂದು ಹೇಳಿದ್ದರು. ರಾಹುಲ್ ಗಾಂಧಿಯವರು, ''ದೇಶಕ್ಕೆ ಹಿಂದೂ ಸಂಘಟನೆಗಳು ಅಪಾಯಕಾರಿ'' ಎಂದಿದ್ದರು. ಅಲ್ಪಸಂಖ್ಯಾತರನ್ನು ಓಲೈಸಿ ತನ್ನ ಮುಸ್ಲಿಂ ಮತಬ್ಯಾಂಕನ್ನು ಗಟ್ಟಿಮಾಡಿಕೊಳ್ಳಲು ಕೇಸರಿ ಭಯೋತ್ಪಾದನೆ ಎಂಬ ದೊಡ್ಡ ಪಿತೂರಿಯೊಂದನ್ನು ಮಾಲೇಗಾಂವ್ ಬ್ಲಾಸ್ಟ್ ಪ್ರಕರಣದಲ್ಲಿ ಕಾಂಗ್ರೆಸ್ ಮಾಡಿತ್ತು. ಮಾಲೇಗಾಂವ್ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಸುಳ್ಳುಸಾಕ್ಷಿಗಳನ್ನು ಸೃಷ್ಟಿಸುವ ಮೂಲಕ ಸಾಧ್ವಿ ಪ್ರಜ್ಞಾ ಸಿಂಗ್ ಅವರನ್ನು ಬಲಿಪಶು ಮಾಡಲಾಗಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಹ ಈ ಪ್ರಕರಣವು ಚರ್ಚೆಗೆ ಗ್ರಾಸವಾಗುವಂತೆ ಅದು ಮಾಡಿದ್ದು ಪಿತೂರಿಯ ಮತ್ತೊಂದು ಭಾಗ. ವಿದೇಶಿ ಪತ್ರಿಕೆಗಳಲ್ಲಿ ಕೇಸರಿ ಭಯೋತ್ಪಾದನೆ ಎಂಬ ಸುಳ್ಳು ನಿರೂಪಣೆಯ ಬಗ್ಗೆ ಅಂಕಣಗಳು ಪ್ರಕಟವಾಗುವಂತೆ ನೋಡಿಕೊಳ್ಳಲಾಯಿತು. ಕಾಲೇಜುಗಳಲ್ಲಿ ಚರ್ಚೆಗಳಾಗುವಂತೆ ಮಾಡಲಾಯಿತು. ದೆಹಲಿಯ ಜೆಎನ್‌ಯು ವಿಶ್ವವಿದ್ಯಾಲಯದಲ್ಲಿ ಕೇಸರಿ ಭಯೋತ್ಪಾದನೆ ಎಂಬ ನಿರೂಪಣೆಯ ಮೂಲಕ ವಿದ್ಯಾರ್ಥಿಗಳ ಬ್ರೈನ್ ವಾಶ್ ಮಾಡಲಾಯಿತು.

ಮಾಲೇಗಾಂವ್ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಮಹಾರಾಷ್ಟ್ರದ ಎಟಿಎಸ್ ತಾನು ಮಾಡಿದ ಆರೋಪಗಳಿಗೆ ಸಾಕ್ಷಿಗಳನ್ನು ಒದಗಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಿಶೇಷ 'ರಾಷ್ಟ್ರೀಯ ತನಿಖಾ ದಳ' ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ. ಘಟನೆ ನಡೆದ 18 ವರ್ಷಗಳ ನಂತರ ತೀರ್ಪು ಹೊರಬಿದ್ದಿದೆ. ಆದರೆ ಈ 18 ವರ್ಷಗಳಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್ ಮತ್ತು ತಂಡ ಅನುಭವಿಸಿದ ಮಾನಸಿಕ ಹಿಂಸೆಗೆ ಯಾರು ಹೊಣೆ? ಹಿಂದೂಗಳನ್ನು ಟಾರ್ಗೆಟ್ ಮಾಡಿ ಕೇಸರಿ ಭಯೋತ್ಪಾದನೆ ಎಂಬ ಪಿತೂರಿ ನಡೆಸಿ ಜನರ ತಲೆಯಲ್ಲಿ ಸುಳ್ಳು ನಿರೂಪಣೆ ತುಂಬಿದ ಕಾಂಗ್ರೆಸ್ ಪಕ್ಷಕ್ಕೆ ಎನ್‌ಐಎ ತೀರ್ಪು ಕಪಾಲಮೋಕ್ಷ ಮಾಡಿದಂತಾಗಿದೆ. ಮುಸಲ್ಮಾನರನ್ನು ಓಲೈಸಲು ಬಹುಸಂಖ್ಯಾತ ಹಿಂದೂಗಳ ಹಣೆಗೆ ಭಯೋತ್ಪಾದಕರ ಪಟ್ಟಕಟ್ಟುವಷ್ಟು ಕೆಳಮಟ್ಟಕ್ಕೆ ಇಳಿದ ಕಾಂಗ್ರೆಸ್ ಪಕ್ಷದ ಡಿಎನ್‌ಎನಲ್ಲಿ ಹಿಂದೂ ವಿರೋಧಿ ಧೋರಣೆ ಇದೆ. 'ಕೇಸರಿ ಭಯೋತ್ಪಾದನೆ' ಎಂದು ಕಾಂಗ್ರೆಸ್ ನಡೆಸಿದ ನಿರೂಪಣೆಯು ಸ್ವತಂತ್ರ ಭಾರತದ ಇತಿಹಾಸದಲ್ಲಿನ ಅತಿ ದೊಡ್ಡ ಪಿತೂರಿಯಾಗಿದೆ. ಹಿಂದೂ ಧರ್ಮದಲ್ಲಿ ಆಯುಧಪೂಜೆಯಂದು ನಡೆಸುವ ಆಯುಧಗಳ ಪೂಜೆಯನ್ನು ಕಾಂಗ್ರೆಸ್ಸಿಗರು ಟೀಕಿಸಿದರು. ಆತ್ಮರಕ್ಷಣೆಗಾಗಿ ಹೆಣ್ಣುಮಕ್ಕಳಿಗೆ ಹೇಳಿಕೊಡುವ ದಂಡದ ಅಭ್ಯಾಸವನ್ನು ಟೀಕಿಸಿದರು. ಹಿಂದೂ ಧರ್ಮದ ಸಾವಿರಾರು ವರ್ಷದ ಆಚರಣೆಗಳನ್ನು ಟೀಕಿಸಿ ಜಗತ್ತಿನ ಭಯೋತ್ಪಾದಕ ಸಂಘಟನೆಗಳ ಜತೆಗೆ ಹೋಲಿಕೆ ಮಾಡಿದರು. ಹಿಂದೂಗಳ ಧಾರ್ಮಿಕ ಕೇಂದ್ರಗಳನ್ನು ಟಾರ್ಗೆಟ್ ಮಾಡಿ ಹಲವು ಕಡೆ ಸುಳ್ಳು ನಿರೂಪಣೆಗಳ ಷಡ್ಯಂತ್ರ ಮಾಡಿಸಿದರು. ಭಗವದ್ಗೀತೆ, ರಾಮಾಯಣ, ಮಹಾಭಾರತ ಎಲ್ಲಿಯೂ ಇತರ ಧರ್ಮದವರನ್ನು ಶತ್ರುಗಳಂತೆ ಕಾಣಬೇಕೆಂದು ಹೇಳಿಲ್ಲ. ಹಿಂದೂ ಧರ್ಮದ ಆಚರಣೆಗಳನ್ನು ಆಚರಿಸದವರನ್ನು ಕೊಲ್ಲಬೇಕೆಂದು ಹೇಳಿಲ್ಲ. ಹಿಂದೂ ಧರ್ಮಗ್ರಂಥಗಳನ್ನು ಓದುವಾಗ ಗೌರವದ ಭಾವನೆ ಮೂಡುತ್ತದೆಯೇ ಹೊರತು ಭಯವಾಗುವುದಿಲ್ಲ.

ಮಾಲೇಗಾಂವ್ ಬ್ಲಾಸ್ಟ್ ಪ್ರಕರಣದಲ್ಲಿ ಕೇಸರಿ ಭಯೋತ್ಪಾದನೆಯ ಸುಳ್ಳು ನಿರೂಪಣೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಯಾವ ಮಟ್ಟಕ್ಕೆ ಹೋಗಲಾಗಿತ್ತೆಂದರೆ, ಎಟಿಎಸ್ ಅಧಿಕಾರಿಯಾಗಿದ್ದ ಮೆಹಬೂಬ್ ಮುಜಾವರ್ ಅವರಿಗೆ ಅವರ ಉನ್ನತಾಧಿಕಾರಿಗಳು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾಗಿದ್ದ ಮೋಹನ್ ಭಾಗವತ್ ಅವರನ್ನು ಬಂಧಿಸಲು ಒತ್ತಾಯಿಸಿದ್ದರೆಂದು ಸ್ವತಃ ಮೆಹಬೂಬ್ ಮುಜಾವರ್ ಮಾಧ್ಯಮಗಳ ಮುಂದೆ ಹೇಳಿದ್ದಾರೆ. ಹತ್ತು ಜನ ಪೊಲೀಸರ ತಂಡವನ್ನು ಅವರಿಗೆ ನೀಡಿ ಮೋಹನ್ ಭಾಗವತ್ ಅವರನ್ನು ಬಂಧಿಸುವಂತೆ ಹೇಳಲಾಗಿತ್ತೆಂದು ಹೇಳಿದ್ದಾರೆ. ಆದರೆ ಮೆಹಬೂಬ್ ಮುಜಾವರ್ ಆ ಕೆಲಸ ಮಾಡಲು ಒಪ್ಪಿರಲಿಲ್ಲ,ಪರಿಣಾಮ ಅವರ ಮೇಲೆ ಸುಳ್ಳು ಕೇಸನ್ನು ದಾಖಲಿಸಿ 40 ವರ್ಷಗಳ ಜೀವನವನ್ನು ಹಾಳುಮಾಡಲಾಗಿದೆ. ಮಾಲೇಗಾಂವ್ ಬ್ಲಾಸ್ಟ್ ಪ್ರಕರಣದಲ್ಲಿ ಹಿಂದೂ ನಾಯಕರನ್ನು ಟಾರ್ಗೆಟ್ ಮಾಡಿದ್ದು ಕೇವಲ ಹಗರಣವಲ್ಲ; ಅದು ಅಧಿಕಾರದ ದುರುಪಯೋಗ ಮತ್ತು ಮತಬ್ಯಾಂಕ್ ಓಲೈಕೆಯ ಪರಮಾವಧಿ.

26/11ರಂದು ಮುಂಬೈನಲ್ಲಿ ನಡೆದ ದಾಳಿಯಲ್ಲಿ ಅಜ್ಮಲ್ ಕಸಬ್ ಅಪ್ಪಿತಪ್ಪಿ ಸತ್ತಿದ್ದರೆ, ಇವರೆಲ್ಲಾ ಅಷ್ಟೂ ಭಯೋತ್ಪಾದಕರನ್ನು ಹಿಂದೂಗಳು ಎಂದು ಕರೆದು ಅವರನ್ನು ಯಾವುದಾದರೂ ಒಂದು ಹಿಂದೂ ಸಂಘಟನೆಯ ಸದಸ್ಯರೆಂಬಂತೆ ಸುಳ್ಳು ಸಾಕ್ಷಿ ಸೃಷ್ಟಿಸಿ ಕೇಸರಿ ಭಯೋತ್ಪಾದನೆ ಎಂಬ ಸುಳ್ಳು ನಿರೂಪಣೆಯನ್ನು ಸಮಾಜದಲ್ಲಿ ಗಟ್ಟಿಗೊಳಿಸಿಬಿಡುತ್ತಿದ್ದರು. ಮಾಲೇಗಾಂವ್ ಬಾಂಬ್ ಬ್ಲಾಸ್ಟ್ ಕೇಸಿನಲ್ಲಿ 'ಅಭಿನವ ಭಾರತ' ಸಂಘಟನೆಯ ಹೆಸರನ್ನು ಸೇರಿಸಲಾಗಿತ್ತು. ಕಾರಣ ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಥಾಪಿಸಿದ ಸಂಘಟನೆ ಇದು. ಸಾವರ್ಕರ್ ವಿಚಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನೆಹರು ಕಾಲದಿಂದಲೂ ದ್ವೇಷವಿದೆ. ಇಲ್ಲಸಲ್ಲದ ಸುಳ್ಳುಗಳನ್ನು ಅವರ ವಿರುದ್ಧ ಹಬ್ಬಿಸಿ ಇತಿಹಾಸದ ಪುಟಗಳಲ್ಲಿ ಬರೆಸಲಾಗಿದೆ. ಮಾಲೇಗಾಂವ್‌ನಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಕೇಸಿನಲ್ಲಿ ವೀರ ಸಾವರ್ಕರ್ ಸ್ಥಾಪಿಸಿದ ಸಂಘಟನೆಯ ಹೆಸರನ್ನು ಸೇರಿಸಿ, ಮತ್ತೊಮ್ಮೆ ಸಾವರ್ಕರ್ ಅವರ ಹೆಸರಿಗೆ ಮಸಿ ಬಳಿಯುವ ಷಡ್ಯಂತ್ರ ನಡೆದಿತ್ತು. ಮತಬ್ಯಾಂಕ್ ಓಲೈಕೆಗಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 'ಕೇಸರಿ ಭಯೋತ್ಪಾದನೆ' ಎಂಬ ಸುಳ್ಳು ನಿರೂಪಣೆಯನ್ನು ಸೃಷ್ಟಿಸಿದ ಕಾಂಗ್ರೆಸ್ ಪಕ್ಷದ ಷಡ್ಯಂತ್ರವು ಎನ್‌ಐಎ ನ್ಯಾಯಾಲಯದ ಮುಂದೆ ಬಟಾಬಯಲಾಗಿದೆ. ಆದ್ದರಿಂದ, ಪ್ರತಿಯೊಬ್ಬ ಹಿಂದೂ ಕೂಡ ಎದೆತಟ್ಟಿ ಹೇಳಬೇಕಾದ ಮಾತೆಂದರೆ- ''ಹಿಂದೂಗಳು ಎಂದಿಗೂ ಭಯವನ್ನು ಸೃಷ್ಟಿಸುವುದಿಲ್ಲ''.

ಪ್ರಬುದ್ಧ ಚಿಂತನೆಗಳನ್ನು ಪ್ರೋತ್ಸಾಹಿಸುವ ಸಹೃದಯಿ

ಸರಕು ಸಾಗಣೆ, ಪ್ರಯಾಣಿಕರ ಬಸ್ ಸೇವೆ, ಕೊರಿಯರ್ ಸೇವೆ, ರಾಜಕಾರಣ, ಸುದ್ದಿ ಮಾಧ್ಯಮ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕೈಯಾಡಿಸಿ ತಮ್ಮದೇ ಆದ ಛಾಪುಮೂಡಿಸಿದ ಧೀಮಂತ ಉದ್ಯಮಿ ಡಾ. ವಿಜಯ ಸಂಕೇಶ್ವರರು. ಇಂದು (ಆಗಸ್ಟ್ 2) 74ನೇ ವರ್ಷಕ್ಕೆ ಕಾಲಿಡುತ್ತಿರುವ ಅವರಿಗೆ ಹೀಗೊಂದು ಶುಭಹಾರೈಕೆ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅವರಿಂದ.

ಶುಭಾಶೀರ್ವಾದ

ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು, ಬಾಳೆಹೊನ್ನೂರು ಪೀಠ

vveditoped@gmail.com

ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಹೊಸ ಸಂಸ್ಥೆಯನ್ನು ಹುಟ್ಟು ಹಾಕುವುದು ದೊಡ್ಡ ವಿಷಯವೇನಲ್ಲ. ಆದರೆ ಸಾಮಾನ್ಯ ಕುಟುಂಬದಲ್ಲಿ ಜನಿಸಿ, ಸಣ್ಣ ಕಂಪನಿಯ ಮೂಲಕ ಸಾರಿಗೆ ಕ್ಷೇತ್ರಕ್ಕೆ ಕಾಲಿಟ್ಟು, ಇಂದು ಇಡೀ ದೇಶವೇ ಬೆರಗುಗಣ್ಣಿನಿಂದ ನೋಡುವಂತೆ ಒಂದು ಸಂಸ್ಥೆಯನ್ನು ಬೆಳೆಸುವುದು ಸಣ್ಣ ಮಾತಲ್ಲ. ದೇಶದ ಯಾವುದೇ ಭಾಗಕ್ಕೂ ಹೋದರೂ, ತಮ್ಮ ಸಂಸ್ಥೆಯ ವಾಹನವಿರಬೇಕು ಎನ್ನುವ 'ಗುರಿ'ಯೊಂದಿಗೆ ಆರಂಭಿಸಿದ ಲಾಜಿಸ್ಟಿಕ್ ಸಂಸ್ಥೆ ಕೆಲವೇ ವರ್ಷದ ಅವಧಿಯಲ್ಲಿ ಆ ಗುರಿಯನ್ನು ಸಾಧಿಸಿದ್ದು ಸಣ್ಣ ಮಾತಲ್ಲ. ಅಂಥ ಅಸಾಧ್ಯವಾದದ್ದನ್ನು ಸಾಧಿಸಿ ತೋರಿಸಿದ್ದು ವಿಜಯ್ ಸಂಕೇಶ್ವರ ಅವರು ಎಂದರೆ ತಪ್ಪಾಗುವುದಿಲ್ಲ.

ಒಂದು ಲಾರಿಯೊಂದಿಗೆ ಆರಂಭಗೊಂಡ ವಿಆರ್‌ಎಲ್ ಸಮೂಹ ಸಂಸ್ಥೆ ಇಂದು ದೇಶದ ಯಾವುದೇ ಮೂಲೆಯಲ್ಲಾದರೂ ಕಾಣಸಿಗುತ್ತದೆ. ಈ ಯಶಸ್ಸಿಗೆ ವಿಆರ್‌ಎಲ್ ಸಮೂಹ ಸಂಸ್ಥೆಯ ಅಧ್ಯಕ್ಷರು, ರಾಜ್ಯಸಭಾ ಮಾಜಿ ಸದಸ್ಯರಾದ ಡಾ.ವಿಜಯ್ ಸಂಕೇಶ್ವರ ಅವರ ದೂರ ದೃಷ್ಟಿ ಹಾಗೂ ಕ್ರಿಯಾಶೀಲ ವ್ಯಕ್ತಿತ್ವವೇ ಕಾರಣ. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಸಂಕೇಶ್ವರ ಅವರು ತಮ್ಮ ಸಾಧನೆ, ಸಾಹಸ ಹಾಗೂ ಶ್ರಮದಿಂದ ದೇಶದ ಬಹುದೊಡ್ಡ ಲಾಜಿಸ್ಟಿಕ್ ಸಾಮ್ರಾಜ್ಯವನ್ನು ಕಟ್ಟಿದ್ದಾರೆ. ಸದಾ ಕ್ರಿಯಾಶೀಲ ಚಿಂತನೆಯಲ್ಲಿರುವ ಅವರು, ನುಡಿದಂತೆ ನಡೆಯುವ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಗುಣಾತ್ಮಕ ಮತ್ತು ರಚನಾತ್ಮಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಾರ್ಯನಿರ್ವಹಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಸಾರಿಗೆ ವಲಯದಲ್ಲಿ ಸಣ್ಣದಾಗಿ ಆರಂಭಿಸಲ್ಪಟ್ಟ ಈ ಸಂಸ್ಥೆಯು ರಾಷ್ಟ್ರಾದ್ಯಂತ ವಿಸ್ತರಣೆಯಾದ ರೀತಿಯೇ ಸೋಜಿಗ. ಇದು ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಸಾಕ್ಷಿ ಎಂದರೆ ತಪ್ಪಾಗುವುದಿಲ್ಲ. ಸಾರಿಗೆ ಕ್ಷೇತ್ರದಲ್ಲಿ ಇಂಥ ದೊಡ್ಡ ಸಾಮ್ರಾಜ್ಯವನ್ನು ಸೃಷ್ಟಿಸಿರುವ ಅವರು, ತಮ್ಮ ಸಂಸ್ಥೆಯಲ್ಲಿ ದುಡಿಯುವ ಶ್ರಮಿಕ ವರ್ಗವನ್ನು ಹಾಗೂ ದಕ್ಷ ಸಿಬ್ಬಂದಿಗಳನ್ನು ಎಂದಿಗೂ ಮರೆಯುವುದಿಲ್ಲ. ಅಂಥ ಅರ್ಹರನ್ನು ಗುರುತಿಸಿ, ಹೆಚ್ಚಿನ ಪುರಸ್ಕಾರ ಹಾಗೂ ಪ್ರೋತ್ಸಾಹ ನೀಡುವ ಮನೋಭಾವವನ್ನು ಹೊಂದಿದ್ದಾರೆ. ಈ ಎಲ್ಲದರ ಪ್ರತಿಫಲವೇ ಸಾರಿಗೆ ಕ್ಷೇತ್ರದಲ್ಲಿನ ಅವರ ಇಂದಿನ ಯಶಸ್ಸು.

ಸಾರಿಗೆ ಕ್ಷೇತ್ರದಲ್ಲಿದ್ದ ವಿಜಯ್ ಸಂಕೇಶ್ವರ ಅವರು 'ವಿಜಯ ಕರ್ನಾಟಕ' ಪತ್ರಿಕೆಯ ಮೂಲಕ ಮಾಧ್ಯಮ ಕ್ಷೇತ್ರಕ್ಕೂ ಕಾಲಿಟ್ಟರು. ಆರಂಭದಲ್ಲಿ, ಪತ್ರಿಕೋದ್ಯಮದಲ್ಲಿ ಇವರು ಯಾವ ರೀತಿಯಲ್ಲಿ ಮುನ್ನಡೆಯುತ್ತಾರೆ ಎನ್ನುವ ಸಂಶಯ ಅನೇಕರನ್ನು ಕಾಡಿತ್ತು. ಆದರೆ ಆರಂಭಿಸಿದ ಕೆಲವೇ ವರ್ಷದಲ್ಲಿ 'ವಿಜಯ ಕರ್ನಾಟಕ'ವನ್ನು ರಾಜ್ಯದ ನಂಬರ್ 1 ಪತ್ರಿಕೆಯಾಗಿ ಹೊರಹೊಮ್ಮುವಂತೆ ಮಾಡಿದ್ದರು. ಅದಾದ ಬಳಿಕ ಆರಂಭಿಸಿದ 'ವಿಜಯವಾಣಿ'ಯನ್ನೂ 'ನಂಬರ್ 1' ಪತ್ರಿಕೆ ಮಾಡುವುದರಲ್ಲಿ ಸಂಕೇಶ್ವರ ಅವರ ಕೊಡುಗೆ ದೊಡ್ಡ ಪ್ರಮಾಣದಲ್ಲಿದೆ ಎನ್ನುವುದು ಸ್ಪಷ್ಟ.

ಸಂಕೇಶ್ವರ ಅವರ ಮುಂದಾಳತ್ವದಲ್ಲಿ ಬರುವ ಪತ್ರಿಕೆಗಳಲ್ಲಿ ಪ್ರಮುಖವಾಗಿ ಭಾರತದ ಸಂಸ್ಕೃತಿಯನ್ನು, ಆದರ್ಶ ಪರಂಪರೆಯನ್ನು ಜನರಿಗೆ ಮುಟ್ಟಿಸುವ ಅನೇಕ ಲೇಖನಗಳು ಬರುತ್ತವೆ. ಇದರೊಂದಿಗೆ ಸಾಮಾಜಿಕ ಚಿಂತನೆಗೆ

ಳಿರುವ ಅನೇಕ ಪ್ರಬುದ್ಧ ಲೇಖನಗಳನ್ನು ಪ್ರಕಟಿಸುವ ಮೂಲಕ ನಾಡಿನ ಜನರಿಗೆ ಜ್ಞಾನಾಭಿವೃದ್ಧಿಗೆ ಸಹಕಾರಿಯಾಗುವಂತೆ ಮಾಡಿದ್ದಾರೆ. ಈ ಮೂಲಕ ನಾಡಿನ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ.

ಸಾಮಾನ್ಯವಾಗಿ ಉದ್ಯಮಿಗಳು ಲಾಭಾಂಶದ ದುಡ್ಡಿನಲ್ಲಿ ಮತ್ತೊಂದು ಉದ್ಯಮ ಆರಂಭಿಸುವುದಕ್ಕೋ ಅಥವಾ ಇರುವ ಉದ್ಯಮವನ್ನು ಮತ್ತಷ್ಟು ವಿಸ್ತರಿಸುವುದಕ್ಕೋ ಯೋಚಿಸುತ್ತಿರುತ್ತಾರೆ. ಆದರೆ ವಿಜಯ್ ಸಂಕೇಶ್ವರ ಅವರು, ತಮ್ಮ ಶ್ರಮದ ಫಲದಿಂದ ಬಂದಂಥ ಲಾಭಾಂಶವನ್ನು ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸುವುದನ್ನು ನೋಡಿದ್ದೇವೆ. ಅನೇಕ ಧಾರ್ಮಿಕ ಕೇಂದ್ರಗಳು, ಮಠಗಳ ಅಭಿವೃದ್ಧಿಗೆ ಅವರು ಹೀಗೆ ಹಣವನ್ನು ವಿನಿಯೋಗಿಸಿದ್ದಾರೆ. ಸಮಾಜದ ಉನ್ನತಿಗೆ ಪೂರಕವಾದ ವಿಚಾರಗಳನ್ನು ಜನಮನಕ್ಕೆ ಮುಟ್ಟಿಸುವ ಆದರ್ಶ ವ್ಯಕ್ತಿಯಾಗಿ ನಿಲ್ಲುತ್ತಾರೆ ಅವರು.

74ನೇ ವರ್ಷಕ್ಕೆ ಕಾಲಿಡುತ್ತಿರುವ ವಿಜಯ್ ಸಂಕೇಶ್ವರ ಅವರು ಇಂದಿಗೂ ತಮ್ಮ ಉತ್ಸಾಹವನ್ನು ಕಳೆದುಕೊಂಡಿಲ್ಲ. ಎಂದಿಗೂ ಆಲಸ್ಯಕ್ಕೆ ಒಳಗಾಗಿ 'ನೋಡಿದರಾಯಿತು..' ಎನ್ನುವ ಮನಸ್ಥಿತಿಯಲ್ಲಿರುವುದಿಲ್ಲ. ಒಂದು ವೇಳೆ ಯಾವುದಾದರೂ ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಅವರು ಮಾತು ಕೊಟ್ಟರೆ, ಯಾವುದೇ ಕಾರಣಕ್ಕೂ ಅದನ್ನು ತಪ್ಪಿಸುವುದಿಲ್ಲ. ಶ್ರೀ ಜಗದ್ಗುರು ರಂಭಾಪುರಿ ಪೀಠದೊಂದಿಗೆ ಸದಾ ಅನ್ಯೋನ್ಯ ಸಂಬಂಧ ಹೊಂದಿರುವ ಸಂಕೇಶ್ವರ ಅವರು, ಮಠದ ಅನೇಕ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಾಜಕ್ಕೆ, ನಾಡಿಗೆ ಸಾಕ್ಷಿ ಪ್ರಜ್ಞೆಯ ಚಿಂತನೆಗಳನ್ನು ಕೊಡಮಾಡುತ್ತಿರುವುದಕ್ಕೆ ಅವರು ಪಡೆದ ಸಂಸ್ಕಾರದ ಬಲವೇ ಕಾರಣ ಎಂದರೆ ತಪ್ಪಾಗುವುದಿಲ್ಲ.

ಇಂಥ ಆದರ್ಶ ವ್ಯಕ್ತಿಗೆ ಜಗದ್ಗುರು ರಂಭಾಪುರಿ ಪೀಠದಿಂದ ನೀಡುವ ಜಗದ್ಗುರು ರೇಣುಕಾಚಾರ್ಯ ಅತ್ಯುನ್ನತ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ಮರೆಯಲಾರದ ಅಪೂರ್ವ ಗಳಿಗೆ. ಅವರ ವ್ಯಕ್ತಿತ್ವದ ಬಗ್ಗೆ ಹೇಳುವುದಾದರೆ, ಅವರು ಶಿಸ್ತಿನ ಸಿಪಾಯಿ ಹಾಗೂ ಸಮಯ ಪಾಲನೆಗೆ ಅತಿಹೆಚ್ಚು ಒತ್ತುನೀಡುತ್ತಾರೆ. ಉದಾಹರಣೆಗೆ, ಯಾವುದಾದರೂ ಕಾರ್ಯಕ್ರಮಕ್ಕೆ 11 ಗಂಟೆಗೆ ಆಗಮಿಸುವುದಾಗಿ ಅವರು ಮಾತು ಕೊಟ್ಟಿದ್ದರೆ, ಏನಾದರೂ ಸರಿ 11 ಗಂಟೆಗೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿರುತ್ತಾರೆ. ಅವರು ಉದ್ಯಮ ಕ್ಷೇತ್ರದೊಂದಿಗೆ ರಾಜಕೀಯವಾಗಿಯೂ ಸಕ್ರಿಯರಾಗಿದ್ದರು, ರಾಜ್ಯಸಭಾ ಸದಸ್ಯರಾಗಿದ್ದರು, ವಿಧಾನಸಭಾ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದರು. ಆದರೆ ರಾಜಕೀಯದ 'ವ್ಯವಸ್ಥೆ' ಅವರಿಗೆ ಹಿಡಿಸದೇ ಇದ್ದುದರಿಂದ ಅಲ್ಲಿಂದ ಹೊರಬಂದು ವಿಆರ್‌ಎಲ್‌ನಂಥ ಅದ್ಭುತ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ.

ಅವರಲ್ಲಿರುವ ಒಂದು ವಿಶೇಷ ಗುಣವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಅದೇನೆಂದರೆ, ವಿಜಯ್ ಸಂಕೇಶ್ವರ ಅವರಲ್ಲಿ ಜಾತಿಯ ಸೋಂಕಿಲ್ಲ. ಸಂಕುಚಿತ ಭಾವನೆಗಳಿಲ್ಲ. ಆದರ್ಶ ಹಾಗೂ ಪ್ರಬುದ್ಧ ಚಿಂತನೆಗಳಿಗಷ್ಟೇ ಆದ್ಯತೆ ನೀಡಿ ಪ್ರೋತ್ಸಾಹಿಸುವ ಸಹೃದಯ ಅವರಿಗಿದೆ. ಅವರ ಕ್ರಿಯಾಶಕ್ತಿಯ ಬಗ್ಗೆ ಹೇಳುತ್ತಾ ಹೋದರೆ ಅದು ದೊಡ್ಡ ಗ್ರಂಥವಾಗುತ್ತದೆ ಎನ್ನುವ ಭಾವನೆ ನಮ್ಮದಾಗಿದೆ. ಅವರಿಗೆ ಭಗವಂತ ನೂರಾರು ವರ್ಷ ಆರೋಗ್ಯ ಆಯುಷ್ಯವನ್ನು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ನೀಡಿ ಕಾಪಾಡಲಿ. ಅವರಿಂದ ನಾಡು ನುಡಿಗೆ, ಧರ್ಮ ಸಂಸ್ಕೃತಿಗೆ ಇನ್ನಷ್ಟು ಅಮೂಲ್ಯವಾದ ಕೊಡುಗೆ ಸಿಗಲಿ ಎಂದು ಹಾರೈಸುತ್ತೇವೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಮ್ಮವರೇ ಮುಳ್ಳಾದರೆ ಹೇಗೆ?

ರಾಹುಲ್ ಗಾಂಧಿಯವರು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರೋ ಅಥವಾ ಭಾರತ-ವಿರೋಧಿ ನಾಯಕರೋ ಎಂಬುದೇ ತಿಳಿಯುತ್ತಿಲ್ಲ. ಇವರು ನಿಜವಾಗಿಯೂ ಭಾರತದ ಪ್ರಜ್ಞಾವಂತ ಮತ್ತು ಜವಾಬ್ದಾರಿಯುತ ನಾಯಕರೇ? ಎಂಬ ಸಂಶಯ ಕಾಡುತ್ತದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಇನ್ನಿಲ್ಲದಂತೆ ಪ್ರಯೋಗಿಸುತ್ತಿರುವ ಅಸ್ತ್ರಗಳಿಗೆ ರಾಹುಲ್ ಗಾಂಧಿಯವರು ಸಮ್ಮತಿಸುತ್ತಿರುವುದೇ ಇದಕ್ಕೆಲ್ಲ ಕಾರಣ. ಭಾರತದ ಆರ್ಥಿಕತೆಯನ್ನು 'ನಿರ್ಜೀವ ಆರ್ಥಿಕತೆ' ಎಂದ ಟ್ರಂಪ್ ಹೇಳಿಕೆಯನ್ನು ಅನುಮೋದಿಸಿರುವ ರಾಹುಲ್, 'ಸರಿಯಾದ ವಿಚಾರ ಹೇಳಿದ್ದಕ್ಕೆ ನನಗೆ ಸಂತಸವಾಗಿದೆ' ಎಂದಿರುವುದನ್ನು ಯಾವೊಬ್ಬ ದೇಶಪ್ರೇಮಿ ಭಾರತೀಯನೂ ಒಪ್ಪಲಾರ. ರಾಹುಲ್‌ರದ್ದು ಇದೆಂಥ ಮನಸ್ಥಿತಿ?

ರಾಜಕೀಯ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ಅವರು ವಿಪಕ್ಷ ನಾಯಕನಾಗಿ ಏನೋ ಒಂದು ಹೇಳಿಕೆ ಕೊಟ್ಟರೆ ಪರವಾಗಿಲ್ಲ; ಆದರೆ ಭಾರತದ ವಿಷಯದಲ್ಲಿ ಯಾರೋ 'ಕಡ್ಡಿ ಆಡಿಸಲು' ಬಂದಾಗಲೂ ಅದನ್ನು ಸಮರ್ಥಿಸುವ ಪರಿಪಾಠವನ್ನು ಎಳ್ಳಷ್ಟೂ ಒಪ್ಪಿಕೊಳ್ಳಲಾಗದು. ಕಾರಣ ಇದು ರಾಷ್ಟ್ರದ ಹಿತದೃಷ್ಟಿಯ ವಿಷಯ. ಇಲ್ಲಿ ವೈಯಕ್ತಿಕ/ರಾಜಕೀಯ ದ್ವೇಷವನ್ನು ಸಾಧಿಸಲು ಮುಂದಾಗಬಾರದು. ಭಾರತದ ಆರ್ಥಿಕ ಸ್ಥಿತಿ ಸಾಕಷ್ಟು ಗಟ್ಟಿಯಾಗಿದೆ ಎಂಬುದನ್ನು ವಿಶ್ವವೇ ಒಪ್ಪಿಕೊಂಡಿದ್ದರೂ ಕೆಲವರಿಗೆ ಈ ಪ್ರಗತಿಯನ್ನು ಸಹಿಸಲಾಗುತ್ತಿಲ್ಲ. ಹೀಗಾಗಿ ಬಾಯಿಗೆ ಬಂದಂತೆ ಮಾತಾಡಿ ಒಂಥರಾ ಮಾನಸಿಕ ನೆಮ್ಮದಿಯನ್ನು ಅವರು ಪಡೆಯುತ್ತಿದ್ದಾರೆ. ಭಾರತದ ಮೇಲೆ ಟ್ರಂಪ್ ಇಷ್ಟೊಂದು ಕೆಂಡ ಕಾರುತ್ತಿರುವುದರ ಹಿಂದಿರುವ ಕಾರಣಗಳು ತಿಳಿದದ್ದೇ. ತಾನೇ ಶ್ರೇಷ್ಠ, ತಾನು ಹೇಳಿದ್ದೇ ವೇದವಾಕ್ಯ, ಅದನ್ನು ಜಗತ್ತು ನಂಬಿ ಸ್ವೀಕರಿಸುತ್ತದೆ ಎಂದುಕೊಂಡಿದ್ದ ಟ್ರಂಪ್‌ಗೆ ಭ್ರಮನಿರಸನವಾಗಿಬಿಟ್ಟಿದೆ. ಅದರಲ್ಲೂ, ಪಾಕಿಸ್ತಾನದ ವಿಚಾರವಾಗಿ ಅವರು ಅನವಶ್ಯಕವಾಗಿ ಮೂಗು ತೂರಿಸಲು ಯತ್ನಿಸಿದಾಗ ವಿಶ್ವದ ಅರಿವಿಗೆ ಬರುವ ರೀತಿಯಲ್ಲಿ ಭಾರತವು ಅದನ್ನು ಖಂಡಿಸಿದೆ. ಹೀಗಾಗಿ, ಅತಿರೇಕದ ಸುಂಕ ವಿಧಿಸುವ, ಭಾರತದ 6 ತೈಲ ಕಂಪನಿಗಳಿಗೆ ನಿರ್ಬಂಧ ಹೇರುವ, ಪಾಕಿಸ್ತಾನದ ಜತೆಗೆ ತೈಲ ಒಪ್ಪಂದ ಮಾಡಿಕೊಳ್ಳುವ ಹರಸಾಹಸಕ್ಕೆ ಟ್ರಂಪ್ ಮುಂದಾಗಿದ್ದಾರೆ. ಒಟ್ಟಾರೆಯಾಗಿ ಭಾರತಕ್ಕೆ ಆಘಾತ ತರುವಂಥ ಹೆಜ್ಜೆಗಳೆಲ್ಲವನ್ನೂ ಟ್ರಂಪ್ ಇಡುತ್ತಿದ್ದಾರೆ. ಅವರೆಷ್ಟೇ ಬೊಬ್ಬೆ ಹೊಡೆದರೂ ಭಾರತ ಮಾತ ಜಗ್ಗದೆ ಕುಗ್ಗದೆ, ಎದುರಾದ ಸಮಸ್ಯೆ-ಸವಾಲನ್ನೆಲ್ಲಾ ಸ್ವೀಕರಿಸಿ ಒಂದೊಂದಾಗಿ ಪರಿಹರಿಸುತ್ತಾ ಬಂದಿದೆ. ಇದೇ ಟ್ರಂಪ್ ಅವರ ಸಿಟ್ಟಿಗೆ ಕಾರಣ. ತಾವೇನೇ ಮಾಡಿದರೂ ಭಾರತವನ್ನು ಮಣಿಸಲಾಗುತ್ತಿಲ್ಲವಲ್ಲ ಎಂಬ ಪೇಚಾಟ ಅವರದ್ದು!

ರಷ್ಯಾ-ಉಕ್ರೇನ್ ವಿಷಯವಿರಲಿ, ಪಾಕಿಸ್ತಾನದ ವಿಚಾರವೇ ಇರಲಿ, ರಾಷ್ಟ್ರದ ಹಿತದೃಷ್ಟಿಯಿಂದ ಎಲ್ಲೆಲ್ಲಿ ಯಾವ ಹೆಜ್ಜೆಯನ್ನು ಇಡಬೇಕೆಂಬ ಸ್ಪಷ್ಟತೆಯನ್ನು ಭಾರತದ ವಿದೇಶಾಂಗ ನೀತಿಯು ಹೊಂದಿದೆ. ಇದನ್ನು ಕೆಲ ಅನ್ಯದೇಶೀಯರಿಗೆ ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ಆದರೆ ಕೆಲವರು ಭಾರತದ ವಾಸಿಯಾಗಿದ್ದುಕೊಂಡು, ಇಲ್ಲಿನ ಎಲ್ಲ ಸೌಲಭ್ಯಗಳನ್ನು ಪಡೆಯುತ್ತ, ಭಾರತವನ್ನೇ ಹಳಿಯುವುದು ವಿಚಿತ್ರವಲ್ಲವೇ? ನಮ್ಮ ಶತ್ರುರಾಷ್ಟ್ರ ಪಾಕಿಸ್ತಾನಕ್ಕೆ ಅಮೆರಿಕ ನೆರವಾಗಲು ಹೊರಟಿದ್ದನ್ನು ಅನುಮೋದಿಸುವ ಇಂಥ 'ಕೆಲವರಿಗೆ' ದೇಶದ ಜನ ತಕ್ಕ ಪಾಠ ಕಲಿಸಿಯೇ ತೀರುತ್ತಾರೆ. ಇದರಲ್ಲಿ ಎಳ್ಳಷ್ಟೂ ಅನುಮಾನ ಬೇಡ. ಅದಕ್ಕೆ ಸಮಯ ಕೂಡಿಬರಬೇಕು, ಅದು ಬಂದೇ ಬರುತ್ತದೆ ಎಂಬ ವಿಶ್ವಾಸವಿದೆ.

- ಶಂಕರನಾರಾಯಣ ಭಟ್, ಮಾಡಗೇರಿ

ಯೂಟ್ಯೂಬ್ ಎಂಬ ಅಮೃತ

ಶಿಶಿರ್ ಹೆಗಡೆಯವರು ತಮ್ಮ 'ಶಿಶಿರಕಾಲ' ಅಂಕಣದಲ್ಲಿ (ಆಗಸ್ಟ್ 1) 'ಯೂಟ್ಯೂಬ್ ಎಂಬ ಸಸ್ತಾ ನಶೆ'ಯ ಕುರಿತು ಬರೆದಿದ್ದಾರೆ. ಇದನ್ನು ಓದಿದ ನನಗೆ, ಇದೇ ಯೂಟ್ಯೂಬ್ ನನ್ನ ಪಾಲಿಗೆ ಹೇಗೆ ಅಮೃತವಾಗಿ ಪರಿಣಮಿಸಿತು ಎಂದು ಹೇಳಲೇಬೇಕು ಎನಿಸಿತು. 2000ನೇ ಇಸವಿಯ ಜನವರಿಯಲ್ಲಿ ನನಗೆ ಕೆಲವು ಆರೋಗ್ಯದ ಸಮಸ್ಯೆಗಳು ಉಂಟಾಗಿ ಗರ್ಭಕೋಶವನ್ನು ತೆಗೆದುಹಾಕಲಾಯಿತು.

ವೈದ್ಯರು ನೀಡಿದ ಸಲಹೆಯಂತೆ ನಾನು ಪ್ರತಿವರ್ಷವೂ ಮ್ಯಾಮೋಗ್ರಫಿ ಮಾಡಿಸಿಕೊಳ್ಳಬೇಕಿತ್ತು. ಅದನ್ನು ನಾನು 2016ನೇ ಇಸವಿಯವರೆಗೂ ಚಾಚೂ ತಪ್ಪದೆ ಮಾಡಿಸಿಕೊಳ್ಳುತ್ತಿದ್ದೆ. ಆ ಸಮಯದಲ್ಲೇ ನಾನು ಡಾ. ಬಿ.ಎಂ. ಹೆಗ್ಡೆಯವರ ಸಂದರ್ಶನಗಳನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸಲು ಶುರುಮಾಡಿದ್ದು. ಅದರಲ್ಲಿ ಅವರು, 'ಮ್ಯಾಮೋಗ್ರಫಿಯು ಬ್ರೆಸ್ಟ್ ಕ್ಯಾನ್ಸರ್ ಬಗ್ಗೆ ಎಲ್ಲಾ ಸಮಯದಲ್ಲೂ ಮುನ್ಸೂಚನೆ ನೀಡುವುದಿಲ್ಲ ಹಾಗೂ ಪ್ರತಿಯೊಬ್ಬರಲ್ಲೂ ಸ್ವಲ್ಪ ಮಟ್ಟಿನ ಕ್ಯಾನ್ಸರ್ ಕೋಶಗಳು ಇದ್ದೇ ಇರುತ್ತವೆ, ಅದಕ್ಕಾಗಿ ಯಾರೂ ಹೆದರಬೇಕಿಲ್ಲ' ಎಂದು ಹೇಳಿದ್ದರು. ಅಪಾರ ವೈದ್ಯಕೀಯ ಅನುಭವವನ್ನು ಹೊಂದಿರುವ ಅವರ ಮಾತುಗಳನ್ನು ನಂಬಿ ನಾನು ಮ್ಯಾಮೋಗ್ರಫಿ ಮಾಡಿಸಿಕೊಳ್ಳುವುದನ್ನು ನಿಲ್ಲಿಸಿದೆ. ಇದರಿಂದ ನನಗಾದ ಲಾಭ ಅಷ್ಟಿಷ್ಟಲ್ಲ. ನನ್ನ ಹಣ ಮತ್ತು ಸಮಯ ಉಳಿತಾಯವಾಗಿದ್ದರ ಜತೆಗೆ, ನನ್ನ ಮಾನಸಿಕ ಕ್ಲೇಶವೂ ಕಡಿಮೆಯಾಗಿದ್ದು ಸುಳ್ಳಲ್ಲ.

ಈಗ ಹೇಳಿ, ಯೂಟ್ಯೂಬ್ ಅಮೃತವಲ್ಲವೇ? ಆದರೆ, 'ಅತಿಯಾದರೆ ಅಮೃತವೂ ವಿಷ' ಎಂಬ ಗಾದೆಮಾತಿನಂತೆ ಅದನ್ನು ಅತಿಯಾಗಿ ಬಳಸಬಾರದಷ್ಟೇ.

- ಶೈಲಜಾ ವಾಸುಕಿ, ಬೆಂಗಳೂರು

ನಿರ್ಲಕ್ಷ್ಯವೇ ಪರಿಹಾರ

ಇಂದಿನ ಸಾಮಾಜಿಕ ಮಾಧ್ಯಮದ ಯುಗದಲ್ಲಿ ಪ್ರತಿಯೊಂದು ವಿಷಯದಲ್ಲೂ, ಕ್ಷೇತ್ರದಲ್ಲೂ ಟ್ರೋಲ್‌ನ ಅಟ್ಟಹಾಸ ಹೆಚ್ಚುತ್ತಿದೆ. ಪ್ರಾರಂಭದ ದಿನಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗುತ್ತಿದ್ದ, ಸಮಾಜದ ಸಾಮರಸ್ಯವನ್ನು ಕದಡುವಂಥ ಮತ್ತು ವಿಲಕ್ಷಣವಾಗಿರುವಂಥ ಹೇಳಿಕೆಗಳಿಗೆ ವ್ಯಂಗ್ಯದ ಬಾಣದ ಮೂಲಕ ತಿಳಿಹೇಳುವ ಒಂದು ಸಾಧನವೆಂಬಂತೆ ಟ್ರೋಲ್‌ನ ಬಳಕೆಯಾಗುತ್ತಿತ್ತು. ಕಾಲ ಕಳೆದಂತೆ, ಇದೊಂದು ಚಟವಾಗಿ ತನ್ನ ಮೂಲಸ್ವರೂಪವನ್ನೇ ಕಳೆದುಕೊಂಡಿದೆ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನೇ ಹಾಳುಗೆಡವುತ್ತಿದೆ. ಅಧ್ಯಯನಶೀಲತೆಯಿಲ್ಲದೆ ಮತ್ತು ವಿಷಯದ ಕುರಿತಾದ ಸ್ಪಷ್ಟವಾದ ಜ್ಞಾನವಿಲ್ಲದೆ ಮಾಡಲಾಗುವ ಇಂಥ ಟ್ರೋಲ್‌ಗಳನ್ನು ಗಂಭೀರವಾಗಿ ತೆಗೆದುಕೊಂಡರೆ, ಟ್ರೋಲಿಗರಿಗೆ ಇನ್ನಷ್ಟು ಉತ್ತೇಜನ ಮತ್ತು ಆದ್ಯತೆಯನ್ನು ನೀಡಿದಂತಾಗುತ್ತದೆ. ಅದರ ಬದಲಾಗಿ ಟ್ರೋಲ್‌ಗಳನ್ನು ನಿರ್ಲಕ್ಷಿಸಿಬಿಟ್ಟರೆ ಅವು ತಂತಾನೇ ಮೂಲೆಗುಂಪಾಗುತ್ತವೆ. ಜೀವನದಲ್ಲಿ ನಾವು ಎಲ್ಲಕ್ಕೂ, ಎಲ್ಲರಿಗೂ ಉತ್ತರಿಸಲೇಬೇಕು ಎಂಬ ನಿಯಮವೇನಿಲ್ಲ ಎಂಬುದನ್ನು ನಾವು ಮೊದಲು ಅರಿಯಬೇಕು.

- ಸುರೇಂದ್ರ ಪೈ, ಭಟ್ಕಳ

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಸಿದ್ದೇಶ ಕೊಟ್ರಬಾಗಿ, ಗುಬ್ಬಿ**
ಭಟ್ರೇ, ನಿದ್ದೆ ಬಂದಾಗ ಯಾರ ಸಾಹಿತ್ಯವನ್ನು ಓದಬೇಕು?
– ಬರಗೂರರನ್ನು ಓದು, ಸಮಾಧಾನವಾಗದಿದ್ದರೆ ದೇವನೂರರನ್ನು ಓದಬಹುದು!

- **ವಿದ್ಯಾ ಶ್ರೀಧರ, ತುರುವೇಕೆರೆ**
ಭಟ್ರೇ, ಆಕೆ ಮತ್ತು ಆತ ಇಪ್ಪತ್ತು ವರ್ಷ ಖುಷಿಯಿಂದ ಇದ್ದರು, ನಂತರ ಏನಾಯ್ತು?
– ನಂತರ ಅವರಿಬ್ಬರಿಗೂ ಮದುವೆಯಾಯ್ತು, ಸಮಸ್ಯೆ ಶುರುವಾಯ್ತು!

- **ವಿಜೇತ್ ಪಂಡಿತ್, (ಇಮೇಲ್ ಮೂಲಕ)**
ಭಟ್ರೇ, ಗಂಡ ಹೆಂಡತಿಯ ಮಾತನ್ನು ಕೇಳಿದರೆ ಏನಾಗುತ್ತದೆ?
– ಸಂಸಾರದಲ್ಲಿ ನೆಮ್ಮದಿ, ಸಾಮರಸ್ಯ!

- **ಸುಮಲತಾ ಕೆ., ಗುಡಿಬಂಡೆ**
ಭಟ್ರೇ, ಮದುವೆ ಅಂದ್ರೆ ಪಾರ್ಕಿನಲ್ಲಿ ನಡೆದಂತೆ ಅಂತಾರಲ್ಲ?
– ನಿಜ, ಜುರಾಸಿಕ್ ಪಾರ್ಕಿನಲ್ಲಿ ಅಂತ ಸೇರಿಸಿಕೊಳ್ಳಿ!

- **ವಾಸು, ಹೆಬ್ಬಗೋಡಿ**
ಭಟ್ರೇ, ನನ್ನ ಹೆಂಡತಿಯನ್ನು ಕೇಳಿ ಹೇಳ್ತೀನಿ ಅಂತ ಯಾವ ಗಂಡಸೂ ಹೇಳುವುದಿಲವಲ್ಲ?
– ಗೊತ್ತಿರಲಿ, ಅಸಲಿಗೆ ಹೆಂಡತಿಯನ್ನು ಕೇಳದೇ ಏನನ್ನೂ ಮಾಡುವುದಿಲ್ಲ!

- **ವಿನೋದ ಡಿಸೋಜ, ಮಂಗಳೂರು**
ಭಟ್ರೆ, ಸ್ಯಾಮ್ ಹಾಡಿದರೆ ಏನಂತೀರಿ?
– ಸ್ಯಾಮ್ ಸಂಗ್!

- **ವಿ.ಕೆ.ಆರಾಧ್ಯ, ಹಾಸನ**
ಭಟ್ರೇ, ಮನುಷ್ಯನ ಬುದ್ಧಿಮತ್ತೆಯನ್ನು ತಲೆಗೂದಲಿನಿಂದ ಅಳೆಯುವಂತಿದ್ದರೆ ?
– ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದ್ರಾಜು ಆರ್.ಜಿ ಹಳ್ಳಿ ನಾಗರಾಜನಿಗೆ 'ಸಾಹಿತ್ಯಶ್ರೀ' ಪ್ರಶಸ್ತಿ ಕೊಡ್ತಾ ಇದ್ದ!

- **ಹನುಮಂತು, ಅಕ್ಕಿ ಆಲೂರು**
ಭಟ್ರೇ, ವಾಟ್ಸಾಪ್ ಪ್ರೀತಿ ಲೈಫ್ ಲಾಂಗ್ ತಾಳಿಕೆ ಬರುತ್ತಾ?
– ಅದು ಬ್ಲೂ ಟಿಕ್‌ನಷ್ಟೇ ಹಸಿರು!

- **ರಮ್ಯಾ, ಸರ್ಜಾಪುರ**
ಭಟ್ರೇ, ಈಗ ಯಾರೂ ಮಿಸ್ಡ್ ಕಾಲ್ ಕೊಡುವುದಿಲ್ಲವಲ್ಲ?
– ಹೂಂ... ಮೆಸೇಜ್ ಕಳಿಸಿ ಡಿಲೀಟ್ ಮಾಡಿಬಿಡ್ತಾರೆ!

ಸರ್ವರೋಗಕ್ಕೂ ಇವೇ ಕಾರಣ: ಆಗಬೇಕು ಇವುಗಳ ನಿಯಂತ್ರಣ

ಆಯುರ್ವೇದದ ಸಿದ್ಧಾಂತವು ಹಂತ ಹಂತದಲ್ಲಿಯೂ ತ್ರಿದೋಷಗಳನ್ನು ಹೇಗೆ ಸದಾ ಸಾಮ್ಯಾವಸ್ಥೆಯಲ್ಲಿ ಇಟ್ಟುಕೊಳ್ಳಬಹುದು ಎಂಬ ವಿಷಯವನ್ನು ಪ್ರಸ್ತಾಪಿಸಿದೆ. ದಿನಚರ್ಯೆಯಿರಬಹು, ಋತುಚರ್ಯೆಯಾಗಿರಬಹುದು, ಆಹಾರ ವಿಜ್ಞಾನವೇ ಇರಬಹುದು ಅಥವಾ ಯಾವುದೇ ಚಿಕಿತ್ಸೆಯೇ ಆಗಿರಬಹುದು, ಅವುಗಳ ಏಕೈಕ ಗುರಿ– ಏರುಪೇರಾಗಿರುವ ದೋಷಗಳನ್ನು 'ಸಮ ಅವಸ್ಥೆ'ಗೆ ತರುವುದು, ತನ್ಮೂಲಕ ರೋಗ ಶಮನ ಮತ್ತು ಸ್ವಾಸ್ಥ್ಯ ಸಾಧನ.



ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಯಥಾ ಪಿಂಡೆ, ತಥಾ ಬ್ರಹ್ಮಾಂಡೆ' ಎಂಬ ವಾಕ್ಯವನ್ನು ಇಂದಿನ ಸಂಚಿಕೆಯ ಮೂಲವಿಷಯವಾಗಿ ಆಯ್ದುಕೊಂಡಿದ್ದೇನೆ. ಈ ಸೂತ್ರವು ಹೇಳುವಂತೆ ಬ್ರಹ್ಮಾಂಡದಂತೆ ಪಿಂಡಾಂಡ. ಅಂದರೆ, ಬ್ರಹ್ಮಾಂಡದಲ್ಲಿರುವ ಸೃಷ್ಟಿಯ ಎಲ್ಲ ರಹಸ್ಯಗಳನ್ನೂ ಈ ಒಂದು ಪುಟ್ಟ ಪಿಂಡಾಂಡದಲ್ಲಿಯೂ ಕಾಣಬಹುದು. ಅಂತೆಯೇ ಪಿಂಡಾಂಡದಲ್ಲಿರುವ ಎಲ್ಲಾ ವಿಷಯಗಳು ಸಹ ಆ ಬ್ರಹ್ಮಾಂಡದ ಪ್ರತಿರೂಪ. ಸಂಪೂರ್ಣ ಸೃಷ್ಟಿಯು ಪಂಚ ಮಹಾಭೂತಗಳಿಂದ ಕೂಡಿದೆ ಎಂದರೆ ತಪ್ಪಾಗಲಾರದು. ಈ ಜಗತ್ತಿನ ಯಾವ ವಸ್ತುವನ್ನು ನಾವು ಉದಾಹರಣೆಯಾಗಿ ತೆಗೆದುಕೊಂಡರೂ ಅದು ಪಂಚ ಮಹಾಭೂತಗಳಿಂದ ಆಗಿರುವಂಥದ್ದು. ಆ ವಸ್ತುವಿಗೆ ತಕ್ಕಂತೆ ಈ ಪಂಚ ಮಹಾಭೂತಗಳ ಪ್ರಮಾಣ ಏರುಪೇರು ಆಗುತ್ತದೆ. ಉದಾಹರಣೆಗೆ, ಒಂದು ಕಲ್ಲನ್ನು ತೆಗೆದುಕೊಂಡರೆ ಅದು ಐದೂ ಮಹಾಭೂತಗಳಿಂದ ಕೂಡಿದೆ. ಆದರೆ, ಅದರಲ್ಲಿ ಪೃಥ್ವಿಯ ತತ್ವದ ಪ್ರಮಾಣ ಹೆಚ್ಚಾಗಿರುವುದರಿಂದ ಅದು ಸ್ಥಿರವಾಗಿ/ಗಟ್ಟಿಯಾಗಿ ಇರುವ ಪದಾರ್ಥವಾಗಿದೆ.

ಇದೇ ತತ್ವವನ್ನು ನಾವು ಮಾನವನ ಶರೀರದಲ್ಲಿಯೂ ಗಮನಿಸಬಹುದು. ನಮ್ಮ ಶರೀರವೂ ಪಂಚ ಮಹಾಭೂತಗಳ ಪ್ರತಿರೂಪವೇ ಹೌದು. ಈ ಪಂಚ ಮಹಾಭೂತಗಳು ನಮ್ಮ ಶರೀರದಲ್ಲಿ ಒಂದು ವಿಶಿಷ್ಟ ರೀತಿಯಲ್ಲಿ ಸಂಯೋಜನೆಗೊಂಡಿವೆ. ಈ ಮಹಾಭೂತಗಳು ದೇಹದಲ್ಲಿ ಒಂದು ನಿರ್ದಿಷ್ಟ ರೀತಿಯಲ್ಲಿ ಬೆರೆತು, ಅವುಗಳಿಗೆ ಒಂದು ನಿರ್ದಿಷ್ಟ ಗುಣ ಮತ್ತು ಕರ್ಮಗಳು ಬಂದಾಗ ಅವುಗಳನ್ನೇ ನಮ್ಮ ದೇಹದಲ್ಲಿ ದೋಷಗಳೆಂದು ಕರೆಯಬಹುದು. ಮೂರು ರೀತಿಯ ದೋಷಗಳಿರುವ ಕಾರಣ ಅವುಗಳನ್ನು ತ್ರಿದೋಷಗಳೆಂದು ಸಂಬೋಧಿಸಲಾಗಿದೆ. ಅವುಗಳು ವಾತ, ಪಿತ್ತ ಮತ್ತು ಕಫ. ಪ್ರಪಂಚದಲ್ಲಿನ ವಾಯು ಮತ್ತು ಆಕಾಶ ಮಹಾಭೂತದ ಸಂಯೋಜನೆಯಿಂದ ಅದು ನಮ್ಮ ದೇಹದಲ್ಲಿ ವಾತ ದೋಷವಾಗಿ ಪರಿಣಾಮಗೊಂಡರೆ, ಅಗ್ನಿ ಮತ್ತು ಜಲ ಮಹಾಭೂತದ ಸಂಯೋಜನೆಯಿಂದ ಪಿತ್ತ ದೋಷದ ಉತ್ಪತ್ತಿಯಾಗುತ್ತದೆ. ಕಫ ದೋಷವು ಪೃಥ್ವಿ ಮತ್ತು ಜಲ ಮಹಾಭೂತದ ಫಲಿತಾಂಶ. ಈ ಮೂರು ದೋಷಗಳು ನಮ್ಮ ದೇಹದಲ್ಲಿ ನಡೆಯುವ ಎಲ್ಲಾ ಕಾರ್ಯಗಳ ಹಿಂದಿರುವ ಸಂಚಾಲಕ ಶಕ್ತಿ. ಮಾನವನ ವ್ಯಕ್ತಿತ್ವವು ಶರೀರ, ಮನಸ್ಸು, ಇಂದ್ರಿಯ ಮತ್ತು ಆತ್ಮ ಎಂಬ ನಾಲ್ಕರ ಸಂಯೋಗ. ಈ ಸಂಯೋಗವನ್ನು ನಿಯಂತ್ರಿಸುವ ಚಾಲಕ ವರ್ಗವೇ ವಾತ, ಪಿತ್ತ ಮತ್ತು ಕಫ.

ಸಂಕ್ಷಿಪ್ತವಾಗಿ ಈ ದೋಷಗಳನ್ನು ನಿಮಗೆ ಪರಿಚಯಿಸಬೇಕೆಂದರೆ, ಬದುಕಿನಲ್ಲಿ ನಡೆಯುವ ಎಲ್ಲಾ ಚಲನೆಗೆ ಸಂಬಂಧಿಸಿದ ಅಂಶಗಳನ್ನು ವಾತ ಎಂದು ಕರೆಯಲಾಗಿದೆ. ನಾವು ಪ್ರತಿನಿತ್ಯವೂ ಸೇವಿಸುವ ಆಹಾರ ಅಥವಾ ಔಷಧಿಯು ಬಾಯಿಂದ ಶರೀರಕ್ಕೆ ಸೇರುವ ಚಲನೆ ಇರಬಹುದು, ಮುಂದೆ ಇವುಗಳು ಹಲವಾರು ಕ್ರಿಯೆಗಳಿಗೆ ಒಳಪಡುವ ಕ್ರಿಯೆ ಇರಬಹುದು, ಮಲ-ಮೂತ್ರಗಳ ವಿಸರ್ಜನೆ, ದೇಹದ ಅಂಗಾಂಗಗಳಲ್ಲಿ ಚಲನೆ, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಗೆ ಸಂಬಂಧಿಸಿದ ಇಂದ್ರಿಯಗಳ ಚಟುವಟಿಕೆ– ಹೀಗೆ ಎಲ್ಲಾ ರೀತಿಯ ಚಲನೆ ಅಥವಾ ಗತಿಗೆ ಸಂಬಂಧಿಸಿದ ಎಲ್ಲವನ್ನೂ ವಾತದೋಷ ಎಂಬ ಹೆಸರಿನಿಂದ ಗುರುತಿಸಲಾಗಿದೆ.

ಇನ್ನು, ಪಿತ್ತ ದೋಷದ ಬಗ್ಗೆ ಹೇಳಬೇಕಾದರೆ ಶರೀರದಲ್ಲಿ ನಡೆಯುವ ಎಲ್ಲಾ ಪರಿಪಾಕ ಮತ್ತು ರೂಪಾಂತರಗಳನ್ನು ಪಿತ್ತ ಎಂದು ಗುರುತಿಸಲಾಗಿದೆ. ನಾವು ಸೇವಿಸುವ ಆಹಾರವು ಪಾಕವಾಗಿ, ದೇಹದ ವಿವಿಧ ಅಂಗಗಳಿಗೆ ಸೇರಿ ದೇಹದ ವೃದ್ಧಿಯಾಗುವುದು ಪಿತ್ತದ ಕೆಲಸವೇ. ಈ ಪಿತ್ತದ ಕಾರ್ಯವು ವಾತದ ಗತಿಯಿಂದ ಸದಾ ಸಾಗುತ್ತದೆ.

ಇಡೀ ಶರೀರಕ್ಕೆ ಒಂದು ನಿರ್ದಿಷ್ಟ ಆಕಾರವನ್ನು ನೀಡಿ, ಎಲ್ಲ ಅಂಗಗಳು ಮತ್ತು ಸಂಧಿಗಳನ್ನು ಬಂಧಿಸಿ ಹಿಡಿದುಕೊಂಡಿರುವ, ಬದುಕೆಂಬ ಸಂಯೋಗವನ್ನು ಸದಾ ಕಾಪಾಡುವ ಅಂಶಕ್ಕೆ ಕಫ ಎಂದು ಕರೆಯಲಾಗಿದೆ.

ನಮ್ಮ ದೇಹದಲ್ಲಿ ನಡೆಯುವ ಎಲ್ಲಾ ಪ್ರಾಕೃತಿಕ ಕಾರ್ಯಗಳಿಗೆ ಹೇಗೆ ಈ ತ್ರಿದೋಷಗಳೇ ಕಾರಣವೋ, ಅಂತೆಯೇ ದೇಹದ ಎಲ್ಲಾ ವಿಕೃತಿಗಳಿಗೂ ಈ ತ್ರಿದೋಷಗಳೇ ಕಾರಣ. ಆಯುರ್ವೇದ ಶಾಸ್ತ್ರವು ಹೀಗೆನ್ನುತ್ತದೆ: 'ರೋಗಸ್ತು ದೋಷವೈಷಮ್ಯಂ ದೋಷಸಾಮ್ಯಂ ಅರೋಗತಾ'– ಅಂದರೆ ಆರೋಗ್ಯವು ದೋಷ ಸಾಮ್ಯತೆಯ ಪರಿಣಾಮವಾದರೆ ರೋಗವು ಈ ದೋಷಗಳ ವಿಷಮತೆಯಿಂದಲೇ ದೇಹದಲ್ಲಿ ಉತ್ಪತ್ತಿಯಾಗುತ್ತದೆ.

ಆಯುರ್ವೇದದ ಸಿದ್ಧಾಂತವು ಹಂತ ಹಂತದಲ್ಲಿಯೂ ಈ ದೋಷಗಳನ್ನು ಹೇಗೆ ಸದಾ ಸಾಮ್ಯಾವಸ್ಥೆಯಲ್ಲಿ ಇಟ್ಟುಕೊಳ್ಳಬಹುದು ಎಂಬ ವಿಷಯವನ್ನು ಪ್ರಸ್ತಾಪಿಸಿದೆ. ದಿನಚರ್ಯೆಯಿರಬಹು, ಋತುಚರ್ಯೆಯಾಗಿರಬಹುದು, ಆಹಾರ ವಿಜ್ಞಾನವೇ ಇರಬಹುದು ಅಥವಾ ಯಾವುದೇ ಚಿಕಿತ್ಸೆಯೇ ಆಗಿರಬಹುದು, ಅವುಗಳ ಏಕೈಕ ಗುರಿ– ಏರುಪೇರಾಗಿರುವ ದೋಷಗಳನ್ನು 'ಸಮ ಅವಸ್ಥೆ'ಗೆ ತರುವುದು, ತನ್ಮೂಲಕ ರೋಗ ಶಮನ ಮತ್ತು ಸ್ವಾಸ್ಥ್ಯ ಸಾಧನ. ಹಾಗಾಗಿ ಪ್ರತಿದಿನವೂ ನಮ್ಮ ಆರೋಗ್ಯವನ್ನು ನಾವು ಸಮತೋಲನದಲ್ಲಿ ಇಟ್ಟುಕೊಳ್ಳಬೇಕಾದರೆ, ಈ ದೋಷಗಳನ್ನು ಸರಿದೂಗಿಸಿಕೊಂಡು ಹೋಗುವುದೇ ಅದರ ಹಿಂದಿರುವ ಗುಟ್ಟು! ಈ ದೋಷಗಳು ನಮ್ಮ ಆಹಾರ, ವಿಹಾರ ಮತ್ತು ವಿಚಾರಗಳಲ್ಲಿ ಆಗುವ ವ್ಯತ್ಯಾಸಗಳಿಂದ ವಿಕೃತಿಗೊಂಡು ದೇಹದ ಸಮ ಅವಸ್ಥೆಯನ್ನು ಹಾಳುಮಾಡುತ್ತವೆ. ಹಾಗಾಗಿ, ಇಂದಿನ ಈ ಸಂಚಿಕೆಯಲ್ಲಿ ವಿಶೇಷವಾಗಿ ಈ ತ್ರಿದೋಷಗಳನ್ನು ಹಾಳು ಮಾಡುವ ಕಾರಣಗಳನ್ನು ನೋಡೋಣ. ಇವುಗಳು ಸಾಮಾನ್ಯ ಕಾರಣಗಳಲ್ಲ. ಇವೇ ಸರ್ವರೋಗಗಳಿಗೂ ಕಾರಣ ಎಂಬುದು ಶಾಸ್ತ್ರವಾಕ್ಯ.

ನಮ್ಮ ದೇಹದಲ್ಲಿ ವಾತದೋಷವು ಈ ಕೆಳಕಂಡ ಕಾರಣಗಳಿಂದ ಪ್ರಕುಪಿತಗೊಂಡು ರೋಗಗಳನ್ನು ಉತ್ಪತ್ತಿ ಮಾಡುತ್ತದೆ:

- ಆಹಾರದಲ್ಲಿ ಹೆಚ್ಚಾಗಿ ಖಾರ, ಕಹಿ ಮತ್ತು ಕಷಾಯ ರಸಗಳನ್ನು ಸೇವಿಸುವುದು.
- ಸ್ವಲ್ಪ ಪ್ರಮಾಣದಲ್ಲಿ (ನಮ್ಮ ಜೀರ್ಣಶಕ್ತಿಗಿಂತ ಕಡಿಮೆ) ಆಹಾರವನ್ನು ಸೇವಿಸುವುದು.
- ಯಾವುದೇ ಸ್ನಿಗ್ಧಾಂಶವಿಲ್ಲದ/ಒಳ್ಳೆಯ ಜಿಡ್ಡಿರದ ಆಹಾರವನ್ನು ನಿತ್ಯವೂ ಸೇವಿಸುವುದು.
- ಆಹಾರದಲ್ಲಿ ಅತಿಯಾಗಿ ಒಣ ಕಾಳು, ಮೊಳಕೆ ಕಾಳು, ಸೊಪ್ಪು ಮತ್ತು ಒಣ ತರಕಾರಿಗಳನ್ನು ಬಳಸುವುದು.
- ಹಸಿವೆಯನ್ನು ತಡೆದು ತಡೆದು ಬಹಳ ಹೊತ್ತಿನ ನಂತರ ಆಹಾರವನ್ನು ಸೇವಿಸುವುದು.
- ಅತಿಯಾದ ಶೀತಲ ಪದಾರ್ಥಗಳು ಸಹ ವಾತವನ್ನು ಹೆಚ್ಚು ಮಾಡುತ್ತವೆ.
- ದೇಹದಲ್ಲಿನ ನೈಸರ್ಗಿಕ ವೇಗಗಳಾದ ಮಲ, ಮೂತ್ರ, ಹಸಿವು, ನಿದ್ದೆ, ಬಾಯಾರಿಕೆ, ಸೀನು, ಕೆಮ್ಮು, ಹೂಸು ಇತ್ಯಾದಿಗಳನ್ನು ಬಲವಂತವಾಗಿ ತಡೆಯುವುದು ಅಥವಾ ವಿಕೃತವಾಗಿ ಉತ್ತೇಜಿಸುವುದು ಸಹ ವಾತವನ್ನು ಕೆಡಿಸುತ್ತದೆ.
- ಸರಿಯಾದ ಸಮಯಕ್ಕೆ ನಿದ್ದೆ ಮಾಡದೆ ರಾತ್ರಿ ಜಾಗರಣೆ ಮಾಡುವುದು.
- ದೈಹಿಕ ಸಾಮರ್ಥ್ಯವನ್ನು ಗಮನಿಸದೇ ಅತಿಯಾಗಿ ಶ್ರಮವಾಗುವ ಕೆಲಸ/ವ್ಯಾಯಾಮವನ್ನು ಮಾಡುವುದು.
- ಅತಿಯಾದ ಪ್ರಯಾಣ ಅಥವಾ ಓಡಾಟ.
- ಮಾನಸಿಕ ಕಾರಣಗಳಲ್ಲಿ ಭಯ, ಚಿಂತಾ ಮತ್ತು ಶೋಕಗಳು ವಾತವನ್ನು ಹೆಚ್ಚಿಸುತ್ತವೆ.
- ಕ್ರಮ ರಹಿತವಾದ ಮೈಥುನ/ಅತಿಯಾದ ಮೈಥುನವು ಸಹ ವಾತಪ್ರಕೋಪಕವೇ.
- ಅಂತೆಯೇ, ಪ್ರಾಕೃತಿಕವಾಗಿ ವಾತದೋಷವು ಗ್ರೀಷ್ಮ ಋತುವಿನಲ್ಲಿ, ದಿನದ ಕೊನೆಯ ಭಾಗದಲ್ಲಿ, ರಾತ್ರಿಯ ಕೊನೆಯ ಭಾಗದಲ್ಲಿ, ಜೀರ್ಣಕ್ರಿಯೆಯ ಕೊನೆಯ ಭಾಗದಲ್ಲಿ ಮತ್ತು ನಮ್ಮ ಜೀವನದ ಕೊನೆಯ ಭಾಗ ಅಂದರೆ ವೃದ್ಧಾಪ್ಯದಲ್ಲಿ ಹೆಚ್ಚಾಗುತ್ತದೆ.

ಈ ಕೆಳಕಂಡ ಕಾರಣಗಳು ದೇಹದಲ್ಲಿರುವ ಪಿತ್ತ ದೋಷವನ್ನು ಹಾಳುಮಾಡುತ್ತವೆ:

- ಖಾರ, ಆಮ್ಲ ಮತ್ತು ಉಪ್ಪು ಹೆಚ್ಚಿರುವ ಪದಾರ್ಥಗಳನ್ನೇ ಸದಾ ಅತಿಯಾಗಿ ಸೇವಿಸುವುದು.
- ಸ್ಪರ್ಶಕ್ಕೆ ಉಷ್ಣವಿರುವ ಮತ್ತು ದೇಹದಲ್ಲಿ ಜೀರ್ಣವಾದ ನಂತರ ಉಷ್ಣತೆಯನ್ನು ಹೆಚ್ಚು ಮಾಡುವ ಪದಾರ್ಥಗಳನ್ನು ಅತಿಯಾಗಿ ಸೇವಿಸುವುದು ಪಿತ್ತಕಾರಕ.
- ಮಾನಸಿಕವಾಗಿ ಸದಾ ಕೋಪದ ಸ್ಥಿತಿಯಲ್ಲಿ ಇರುವುದು ಸಹ ಪಿತ್ತವನ್ನು ಹೆಚ್ಚು ಮಾಡುತ್ತದೆ.
- ಪ್ರಾಕೃತಿಕವಾಗಿ ಪಿತ್ತವು ಶರತ್ ಋತುವಿನಲ್ಲಿ ಹೆಚ್ಚಾಗುವುದನ್ನು ಕಾಣಬಹುದು. ಅಂತೆಯೇ, ದಿನದ ಮಧ್ಯೆಯಲ್ಲಿ, ರಾತ್ರಿಯ ಮಧ್ಯೆಯಲ್ಲಿ, ಜೀರ್ಣಕ್ರಿಯೆಯ ಮಧ್ಯೆಯಲ್ಲಿ ಮತ್ತು ನಮ್ಮ ಜೀವನದ ಮಧ್ಯಭಾಗದಲ್ಲಿ ಅಂದರೆ ಯೌವನಾವಸ್ಥೆಯಲ್ಲಿ ಪ್ರಾಕೃತವಾಗಿ ಪಿತ್ತವು ಹೆಚ್ಚಾಗುತ್ತದೆ.

ದೇಹದಲ್ಲಿ ಕಫ ದೋಷವು ಈ ಕೆಳಕಂಡ ಕಾರಣಗಳಿಂದ ಹೆಚ್ಚಾಗುತ್ತದೆ:

- ಮಧುರ, ಆಮ್ಲ ಮತ್ತು ಲವಣ ರಸಗಳು ಅಧಿಕವಾಗಿರುವ ಆಹಾರವನ್ನೇ ಸದಾ ಸೇವಿಸುವುದು.
- ಅತಿಯಾಗಿ ಸ್ನಿಗ್ಧ ಅಥವಾ ಜಿಡ್ಡಿನಂಶದಿಂದ ಕೂಡಿದ ಆಹಾರವನ್ನು ಸೇವಿಸುವುದು.
- ಜೀರ್ಣಕ್ರಿಯೆಗೆ ಜಡವಾದ ಅಥವಾ ಹೆಚ್ಚು ಸಮಯ ತೆಗೆದುಕೊಳ್ಳುವ ಆಹಾರವನ್ನೇ ಸೇವಿಸುವುದು.
- ದೇಹದ ವಿವಿಧ ರೀತಿಯ ಸ್ರೋತಸ್ಸು/ಮಾರ್ಗಗಳಲ್ಲಿ ತೇವದ ಅಂಶವನ್ನು ಹೆಚ್ಚಾಗಿ ಸ್ರವಿಸುವಂಥ ಆಹಾರಗಳನ್ನು ಸೇವಿಸುವುದು.
- ಶೀತಲ ಪದಾರ್ಥಗಳು ಸಹ ಕಫವನ್ನು ಹೆಚ್ಚು ಮಾಡುತ್ತವೆ.
- ಕ್ರಮರಹಿತವಾದ ನಿದ್ದೆ ಅಥವಾ ಅತಿಯಾದ ನಿದ್ದೆಯೂ ಕಫ ಕಾರಕ.
- ವ್ಯಾಯಾಮ ಮಾಡದೆ, ದೈಹಿಕ ಶ್ರಮವನ್ನು ಪಡೆಯದೆ, ಹೆಚ್ಚಾಗಿ ಕುಳಿತ ಸ್ಥಿತಿಯಲ್ಲೇ ದಿನವನ್ನು ಕಳೆಯುವುದು ಸಹ ದೇಹದಲ್ಲಿ ಕಫದ ವಿಕೃತಿಗೆ ಕಾರಣ.
- ಕ್ರಮರಹಿತ ನೀರಿನ ಸೇವನೆಯೂ ಕಫದ ವಿಕೃತಿಗೆ ಕಾರಣವಾಗುತ್ತದೆ.
- ದೇಹಕ್ಕೆ ಅತಿಯಾಗಿ ಪೋಷಣೆ ನೀಡುವಂಥ ಆಹಾರವನ್ನೇ ಪದೇಪದೆ ಸೇವಿಸುವುದು.
- ಶೋಧನ ಕ್ರಿಯೆಗಳಾದ ವಮನ/ವಿರೇಚನಾದಿಗಳನ್ನು ಮಾಡಿಸಿಕೊಳ್ಳದೆ ಇರುವುದು.
- ಅಂತೆಯೇ, ವಸಂತ ಋತುವಿನಲ್ಲಿ ಪ್ರಾಕೃತಿಕವಾಗಿ ಕಫ ಉಲ್ಬಣವಾಗುತ್ತದೆ. ಜತೆಗೆ ಜೀರ್ಣಕ್ರಿಯೆಯ ಮೊದಲ ಭಾಗದಲ್ಲಿ, ದಿನದ ಮೊದಲ ಭಾಗದಲ್ಲಿ, ರಾತ್ರಿಯ ಮೊದಲ ಭಾಗದಲ್ಲಿ ಮತ್ತು ನಮ್ಮ ಜೀವನದ ಮೊದಲ ಭಾಗ ಅಂದರೆ ಬಾಲ್ಯಾವಸ್ಥೆಯಲ್ಲಿ ಕಫದೋಷವೂ ಹೆಚ್ಚಾಗಿರುತ್ತದೆ.

ಸರ್ವದೋಷ ವೃದ್ಧಿ ಕಾರಣ– ನಮ್ಮ ಶಾಸ್ತ್ರದಲ್ಲಿ ಹೇಳಿರುವಂತೆ ಕೆಲವು ಕಾರಣಗಳು ದೇಹದ ಮೂರು ದೋಷಗಳನ್ನು ಏಕಕಾಲದಲ್ಲಿ ವೃದ್ಧಿ ಮಾಡಿ ಸಾಮ್ಯತೆಯನ್ನು ಹಾಳು ಮಾಡುತ್ತವೆ. ಉದಾಹರಣೆಗೆ:

- ಸಂಕೀರ್ಣವಾದ ಆಹಾರವನ್ನು ಸೇವಿಸುವುದು– ಅಂದರೆ ಹಲವಾರು ಬೇರೆ ಬೇರೆ ಗುಣಗಳುಳ್ಳ ಪದಾರ್ಥಗಳನ್ನು ಒಟ್ಟಿಗೆ ಸೇರಿಸಿ ಒಂದೇ ಆಹಾರದಲ್ಲಿ ಸೇವಿಸುವುದು.
- ವಿರುದ್ಧ ಆಹಾರಗಳು ಸಹ ಏಕಕಾಲದಲ್ಲಿ ಮೂರು ದೋಷಗಳನ್ನು ಹಾಳುಮಾಡುತ್ತದೆ (ವಿರುದ್ಧ ಆಹಾರಗಳ ಒಂದು ದೊಡ್ಡ ಪಟ್ಟಿಯನ್ನೇ ನಾವು ಹಿಂದಿನ ಸಂಚಿಕೆಗಳಲ್ಲಿ ದೀರ್ಘವಾಗಿ ಚರ್ಚಿಸಿದ್ದೇವೆ).
- ಹಿಂದೆ ಸೇವಿಸಿದ ಆಹಾರವು ಇನ್ನೂ ಜೀರ್ಣಗೊಳ್ಳುತ್ತಿರುವಾಗ/ಜೀರ್ಣವಾಗದೆ ಇರುವಾಗ ಮತ್ತೊಮ್ಮೆ ಆಹಾರವನ್ನು ಸೇವಿಸುವುದು.
- ಕಾಲದ ಅರಿವಿಲ್ಲದೆ, ಪ್ರಮಾಣದ ಅರಿವಿಲ್ಲದೆ, ನಮ್ಮ ಜೀರ್ಣಶಕ್ತಿಯ ಅರಿವಿಲ್ಲದೆ ಮನಸ್ಸಿಗೆ ಬಂದಂತೆ ಸೇವಿಸುವ ಆಹಾರವು ಸಹ ತ್ರಿದೋಷ ಪ್ರಕೋಪಕ.
- ಜತೆಗೆ ಅತಿಯಾದ ಮದ್ಯ ಸೇವನೆ, ಕರಿದ ಪದಾರ್ಥಗಳು, ಕಂದ–ಶಾಕಗಳನ್ನು ಬೇಯಿಸದೇ ಹಾಗೆಯೇ ಸೇವಿಸುವುದು, ಹಳಸಿದ ಆಹಾರ, ಒಣಗಿಸಿದ ಮಾಂಸ, ಶರೀರಕ್ಕೆ ಒಗ್ಗದ ಅಭ್ಯಾಸವಿರದ ಆಹಾರ ಸೇವನೆ– ಇಂಥ ಕಾರಣಗಳಿಂದ ಏಕಕಾಲದಲ್ಲಿ ಮೂರು ದೋಷಗಳು ಹದಗೆಡುವುದನ್ನು ಗಮನಿಸಬಹುದು.

ಇವಿಷ್ಟು ಆಯುರ್ವೇದ ಶಾಸ್ತ್ರದ ಪ್ರಕಾರ ಸರ್ವರೋಗಕ್ಕೂ ಕಾರಣ. ನಿಮ್ಮ ಮನಸ್ಸಿನಲ್ಲಿ ಒಂದು ಪ್ರಶ್ನೆ ಬರಬಹುದು– 'ಅರೆ! ಮಾನವನ ಶರೀರವನ್ನು ಹಾಳು ಮಾಡುವಂಥ ಸಾವಿರಾರು ರೋಗಗಳಿವೆ, ಪ್ರತಿಯೊಂದು ರೋಗಕ್ಕೂ ಹಲವಾರು ಕಾರಣಗಳಿವೆ. ಆದರೆ, ಆಯುರ್ವೇದದಲ್ಲಿ ಒಂದೇ ಪುಟದಲ್ಲಿ ಎಲ್ಲ ರೋಗಗಳ ಕಾರಣಗಳನ್ನು ಪಟ್ಟಿ ಮಾಡಿಬಿಟ್ಟಿದ್ದಾರಲ್ಲ. ಅದು ಹೇಗೆ ಸಾಧ್ಯ?' ಅಂತ. ಅದೇ ನಮ್ಮ ಶಾಸ್ತ್ರದ ವೈಶಿಷ್ಟ್ಯ ಮತ್ತು ಸೊಬಗು. ಜಗತ್ತಿನ ಎಲ್ಲ ರಹಸ್ಯಗಳನ್ನು ಸೂತ್ರದ ರೂಪದಲ್ಲಿ ಸಂಕ್ಷಿಪ್ತವಾಗಿ ಈ ವೇದಗಳಲ್ಲಿ ಅಡಗಿಸಿಟ್ಟಿದ್ದಾರೆ. ಮೇಲೆ ಪಟ್ಟಿ ಮಾಡಿದ ಕಾರಣಗಳನ್ನೇ ನಾವು ಗಮನಿಸಿದರೆ, ಜಗತ್ತಿನಲ್ಲಿರುವ ಎಲ್ಲಾ ರೋಗಕಾರಕ ಕಾರಣಗಳೂ ಈ ಮೇಲೆ ಹೇಳಿದ ಕಾರಣಗಳ ಅಡಿಯಲ್ಲೇ ಬರುತ್ತವೆ. ಇದರ ಹೊರತಾಗಿ ಬೇರಾವ ಹೊಸ ಕಾರಣಗಳು ನಮಗೆ ಸಿಗಲು ಸಾಧ್ಯವಿಲ್ಲ. ಇದು ಆಪ್ತವಚನದ ವ್ಯಾಪ್ತಿ. ಹಾಗಾಗಿ, ಹೆಚ್ಚು ಯೋಚಿಸದೆ ನಮ್ಮ ದಿನನಿತ್ಯದ ಆಹಾರ–ವಿಹಾರ–ವಿಚಾರಗಳಲ್ಲಿ ಈ ಮೇಲೆ ಹೇಳಿದ 'ಸರ್ವರೋಗ ಕಾರಣ'ಗಳನ್ನು ತ್ಯಜಿಸಿ, ದೋಷದ ಸಾಮ್ಯತೆಯನ್ನು ಸದಾ ಸಾಧಿಸುವ ಪ್ರಯತ್ನದಲ್ಲಿದ್ದರೆ ಸ್ವಾಸ್ಥ್ಯ ನಮ್ಮ ಸಂಪತ್ತಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಇದೇ ನಮ್ಮ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಏಕೈಕ ಮಾರ್ಗ! ದೋಷಗಳ ಸಾಮ್ಯತೆಯನ್ನು ಪರಿಪಾಲಿಸಿ– ಸ್ವಾಸ್ಥ್ಯವನ್ನು ಬೆಳೆಸಿ!

ಭಾವನೆಗಳು ಮತ್ತು ನಿರ್ಧಾರಗಳ ಮೂಲ ನಿಮ್ಮ ಕರುಳೋ ಅಥವಾ ಮಿದುಳೋ?

ಭಾವವೈದ್ಯ

ಡಾ. ರೋಹಿತ್‌ಕುಮಾರ್ ಎಚ್.ಜಿ.
vveditoped@gmail.com

ನೀವು ಪ್ರತಿದಿನ ಕಚೇರಿಗೆ ಹೋಗುವಾಗ ಒಂದೇ ದಾರಿಯನ್ನು ಬಳಸಿ ಹೋಗುತ್ತಿರುತ್ತೀರಿ. ಅದೇನೋ ಅಂದು ನಿಮಗೆ ಬೇರೆ ದಾರಿಯಲ್ಲಿ ಹೋಗಬೇಕು ಅನ್ನಿಸುತ್ತದೆ. ಹಾಗೆಯೇ ನೀವು ದಾರಿ ಬದಲಿಸಿ ಪ್ರಯಾಣ ಪೂರ್ಣಗೊಳಿಸಿ, ಕಚೇರಿ ತಲುಪುತ್ತೀರಿ. ಆನಂತರ ನಿಮಗೆ, ನೀವು ಪ್ರತಿದಿನ ಬರುತ್ತಿದ್ದ ದಾರಿಯಲ್ಲಿ ಪ್ರತಿದಿನಕ್ಕಿಂತಲೂ ಹೆಚ್ಚು ಸಂಚಾರ ದಟ್ಟಣೆಯಿಂದ ಎಲ್ಲಾ ವಾಹನಗಳು ಒಂದು ಗಂಟೆಗೂ ಹೆಚ್ಚಿನ ಕಾಲ ನಿಂತಲ್ಲೇ ನಿಂತಿದ್ದವು ಎಂಬುದು ಅದೇ ದಾರಿಯಲ್ಲಿ ನಿತ್ಯವೂ ಪ್ರಯಾಣಿಸುವ ನಿಮ್ಮ ಸಹೋದ್ಯೋಗಿಯೊಬ್ಬರಿಂದ ತಿಳಿಯುತ್ತದೆ. ಹೀಗಾಗಬಹುದು ಎನ್ನುವ ಬಗ್ಗೆ ನಿಮಗೆ ಸ್ವಲ್ಪವೂ ಅರಿವಿಲ್ಲದಿದ್ದರೂ, ನಿಮ್ಮ ಅಂತಃಪ್ರಜ್ಞೆ ದಾರಿ ಬದಲಿಸುವ ನಿರ್ಧಾರಕ್ಕೆ ದೂಡಿರುತ್ತದೆ. ಅಬ್ಬಾ! ದಾರಿ ಬದಲಾಯಿಸಲು ಮನಸಿಗೆ ತೋಚಿದ್ದು ಒಳ್ಳೆಯದೇ ಆಯಿತು ಅಂತಂದುಕೊಳ್ಳುತ್ತೀರಿ.

ನಿಮ್ಮ ಸ್ನೇಹಿತರೊಬ್ಬರು ಅವರಿಗೆ ಪರಿಚಯವಿದ್ದ ಆರ್ಥಿಕ ಸಲಹೆಗಾರರೊಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಆ ಸಲಹೆಗಾರರು ನಿಮಗೆ ಕಡಿಮೆ ಅವಧಿಯಲ್ಲೇ ಹೆಚ್ಚು ಲಾಭ ಬರುವ ಒಂದೊಳ್ಳೆಯ ಹೂಡಿಕೆಯ ಬಗ್ಗೆ ತಿಳಿಸುತ್ತಾರೆ. ನಿಮ್ಮ ಸ್ನೇಹಿತರೂ, ''ಈ ಹೂಡಿಕೆಯಿಂದ ನಾನೂ ಹೆಚ್ಚು ಲಾಭ ಮಾಡಿಕೊಂಡಿದ್ದೇನೆ, ನೀನು ನಿಸ್ಸಂದೇಹವಾಗಿ ಹೂಡಿಕೆ ಮಾಡಬಹುದು'' ಎಂದು ನಿಮಗೆ ಹೇಳುತ್ತಾರೆ. ಹಣವನ್ನು ಹೂಡಿ ಲಾಭವನ್ನು ಎಣಿಸುವ ಆಸೆ ನಿಮಗೂ ಬರುತ್ತದೆ. ಆದರೆ, ಏನೋ ಸರಿಯಿಲ್ಲ ಎಂದು ನಿಮ್ಮ ಕರುಳು ಹೇಳುತ್ತದೆ. ನಿಮ್ಮ ದೇಹ ಮತ್ತು ಮನಸ್ಸಿಗೆ ಅದೇನೋ ಕಸಿವಿಸಿ, ತಳಮಳದ ಭಾವ. 'ಮುಂದೆ ನೋಡೋಣ, ಸದ್ಯಕ್ಕೆ ಅವಸರ ಮಾಡುವುದು ಬೇಡ' ಎಂದುಕೊಂಡು ಸುಮ್ಮನಾಗುತ್ತೀರಿ. ಅದಾದ ಕೆಲವೇ ತಿಂಗಳಲ್ಲಿ ಆ ಸಲಹೆಗಾರ ನಿಮ್ಮ ಸ್ನೇಹಿತನಿಗೆ ವಂಚಿಸಿರುವುದು ತಿಳಿಯುತ್ತದೆ. ನಿಮ್ಮ ಆ ಕರುಳ ಭಾವಕ್ಕೆ ಮನಸಲ್ಲೇ ಧನ್ಯವಾದ ಹೇಳುತ್ತಾ, ನಿಟ್ಟುಸಿರಿಡುತ್ತೀರಿ.

ಈ ರೀತಿಯ ಸಂದರ್ಭಗಳು ನಮ್ಮ ಬದುಕಲ್ಲಿ ಹಲವು ಬಾರಿ ಆಗಿರುತ್ತವೆ. ಪ್ರತಿ ಬಾರಿ ಹೀಗಾದಾಗ ''ನನ್ನ 'ಗಟ್ ಫೀಲಿಂಗ್' (ಕರುಳ ಭಾವ ಅಥವಾ ಅಂತಃಪ್ರಜ್ಞೆ) ಇಂದ ಸಮಸ್ಯೆ ತಪ್ಪಿತು'' ಎಂದು ನಮಗೆ ನಾವು ಅಥವಾ ಇತರರ ಮುಂದೆ ಹೇಳಿಕೊಂಡಿರುತ್ತೇವೆ. ಆದರೆ, ಈ ಭಾವನೆಗಳು ಮತ್ತು ಯೋಚನೆಗಳು ಹುಟ್ಟುವುದು ಮಿದುಳಿನಲ್ಲಿ ತಾನೇ? ಅದ್ಯಾಕೆ ಈ ಭಾವಕ್ಕೆ ಗಟ್ (ಕರುಳ) ಫೀಲಿಂಗ್ ಅನ್ನುತ್ತೇವೆ? ''ಅವರ ಕಷ್ಟ ನೋಡಿ ನನ್ನ ಕರುಳು ಚುರ್ ಅಂತು'' ಅಂತ ಹೇಳುವಾಗ ಆ ಸಂಕಟದ ಭಾವನೆ ಹುಟ್ಟಿದ್ದು ಮಿದುಳಿನಲ್ಲಾ ಅಥವಾ ಕರುಳಿನಲ್ಲಾ? ಆಹಾರ ಜೀರ್ಣಕ್ರಿಯೆಯಲ್ಲಿ ಸಹಾಯವಾಗೋ ಕರುಳಿಗೂ ಈ ಫೀಲಿಂಗ್‌ಗೂ ಎತ್ತಣಿಂದೆತ್ತ ಸಂಬಂಧ? ಇದನ್ನು ವಿವರಿಸಬೇಕು ಎಂದರೆ ಸ್ವಲ್ಪ ಹೆಚ್ಚೇ ಹಿಂದಕ್ಕೆ ಹೋಗಬೇಕಾಗುತ್ತದೆ.

ದೇಹ ವರ್ಸಸ್ ಮಿದುಳು ಸಿದ್ಧಾಂತಗಳು

1880ರ ದಶಕದಲ್ಲಿ ವಿಲಿಯಂ ಜೇಮ್ಸ್ ಮತ್ತು ಕಾರ್ಲ್ ಲ್ಯಾಂಗ್ ಎಂಬ ಇಬ್ಬರು ವಿಜ್ಞಾನಿಗಳು, ಭಯ ಮತ್ತು ಕೋಪದ ಭಾವನೆ ಉಂಟಾಗುವಲ್ಲಿ ಮಿದುಳಿಗಿಂತ ದೇಹವೇ ಮೊದಲು ಪ್ರತಿಕ್ರಿಯಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು. ಉದಾಹರಣೆಗೆ ಹಾವನ್ನು ಕಂಡಾಕ್ಷಣ ನಾವು ಭಯಕ್ಕೊಳಗಾದಾಗ ಸಾಮಾನ್ಯವಾಗಿ ಹೃದಯಬಡಿತ ಹೆಚ್ಚಾಗಿ, ಉಸಿರಾಟ ವೇಗಗೊಂಡು, ಉದರದಲ್ಲಿ ತಳಮಳವಾದಂತಾಗುತ್ತದೆ. ದೇಹವು ಈ ರೀತಿ ಭಯಪಟ್ಟಂತೆ ಪ್ರತಿಕ್ರಿಯಿಸುವುದನ್ನು ಗಮನಿಸಿ ನಾವು ಭಯದ ಭಾವನೆಯನ್ನು ಅನುಭವಿಸುತ್ತೇವೆ ಎನ್ನುವುದು ಈ ಇಬ್ಬರು ವಿಜ್ಞಾನಿಗಳ ವಾದ. ಆದರೆ ಇವರ ಸಿದ್ಧಾಂತವನ್ನು ಎಲ್ಲರೂ ಒಪ್ಪಿರಲಿಲ್ಲ.

1920ರಲ್ಲಿ ಇನ್ನೊಬ್ಬ ವಿಜ್ಞಾನಿ ವಾಲ್ಟರ್ ಕ್ಯಾನನ್ ಇದರ ಬಗ್ಗೆ ವಿಶ್ಲೇಷಿಸುತ್ತಾ ''ನಮ್ಮ ಭಾವನೆಗಳು ಮಿದುಳಿನಿಂದ ನೇರವಾಗಿ ಬರುತ್ತವೆಯೇ ಹೊರತು, ದೇಹದ ಬದಲಾವಣೆಗಳನ್ನು ನಾವು ಗ್ರಹಿಸುವುದರಿಂದಲ್ಲ'' ಎಂದು ವಾದಿಸುತ್ತಾರೆ. ಭಯ ಅಥವಾ ಕೋಪವನ್ನು ಮಿದುಳು ಅನುಭವಿಸಿದ ನಂತರ ಅದರ ಅಡ್ಡಪರಿಣಾಮವಾಗಿ ದೇಹವು ಪ್ರತಿಕ್ರಿಯಿಸುತ್ತದೆ. ಆದ್ದರಿಂದಲೇ ಈ ಎಲ್ಲ ದೈಹಿಕ ಬದಲಾವಣೆಗಳು, ಭಾವನೆಗಳು ಪ್ರಕಟಗೊಳ್ಳುವುದಕ್ಕಿಂತ ಬಹಳ ನಿಧಾನವಾಗಿ ಸಂಭವಿಸುತ್ತವೆ ಎಂಬುದು ಇವರ ಅಭಿಪ್ರಾಯ.

ಇದಾದ ಹಲವು ವರ್ಷಗಳ ನಂತರ ಬಂದ ವಿಜ್ಞಾನಿಗಳು ಈ ಎರಡು ಸಿದ್ಧಾಂತಗಳೂ ಭಾಗಶಃ ಸರಿಯಾಗಿರಬಹುದು ಎಂದರು. ಅವರಲ್ಲಿ ಪ್ರಮುಖರು ಸಂಶೋಧಕರಾದ ಆಂಟೋನಿಯೊ ಡಮಾಸಿಯೊ ಮತ್ತು ಎ.ಡಿ. ಕ್ರೇಗ್. ಇವರಿಬ್ಬರು ನಮ್ಮ ದೇಹದ ಆಂತರಿಕ ಸಂಕೇತಗಳು ನಮ್ಮ ಭಾವನೆಗಳಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ ಎಂಬುದನ್ನು ವಿಸ್ತೃತವಾಗಿ ಅರ್ಥೈಸಿದರು. ಡಮಾಸಿಯೊ ಅವರ 'ಸೊಮಾಟಿಕ್ ಮಾರ್ಕರ್' (ಅರ್ಥ: ದೈಹಿಕ ಗುರುತು) ಸಿದ್ಧಾಂತದ ಪ್ರಕಾರ ನಮ್ಮ ಹಿಂದಿನ ಭಾವನಾತ್ಮಕ ಅನುಭವಗಳು ದೇಹದಲ್ಲಿ ನೆನಪುಗಳನ್ನು ಬಿಟ್ಟುಹೋಗುತ್ತವೆ. ಇವುಗಳನ್ನು ದೈಹಿಕ ಗುರುತುಗಳು ಎಂದು ಕರೆಯಲಾಗುತ್ತದೆ. ಆದ್ದರಿಂದ, ನೀವು ಹೊಸ ಪರಿಸ್ಥಿತಿಗೆ ಎದುರಾದಾಗ, ಇದೇ ರೀತಿಯ ಸಂದರ್ಭದಲ್ಲಿ ಈ ಹಿಂದೆ ನಿಮ್ಮ ದೇಹ ಹೇಗೆ ಪ್ರತಿಕ್ರಿಯಿಸಿತ್ತು ಎಂಬುದನ್ನು ನಿಮ್ಮ ಮಿದುಳು ನೆನಪಿಸಿಕೊಳ್ಳುತ್ತದೆ. ಆ ಮೂಲಕ ನಿಮಗೆ ಆ ಕ್ಷಣದಲ್ಲಿ ನಿರ್ಧಾರ ಕೈಗೊಳ್ಳಲು ನೆರವಾಗುತ್ತದೆ. ಉದಾಹರಣೆಗೆ, ಹಿಂದೆ ಯಾವುದಾದರೊಂದು ಕಾರ್ಯಕ್ರಮದಲ್ಲಿ ಭಾಷಣ ಮಾಡುವಾಗ ನೀವು ಆತಂಕಕ್ಕೆ ಒಳಗಾಗಿದ್ದರೆ, ಮುಂದೆ ಮತ್ತೊಮ್ಮೆ ಭಾಷಣಕ್ಕೆ ಆಹ್ವಾನ ಸಿಕ್ಕಾಗಲೇ ನಿಮ್ಮ ದೇಹ ಭಯಕ್ಕೊಳಗಾಗಬಹುದು. ಈ ಆತಂಕವು ಮುಂಚಿತವಾಗಿಯೇ ಭಾಷಣಕ್ಕೆ ಉತ್ತಮವಾಗಿ ತಯಾರಾಗುವಂತೆ ನಿಮ್ಮನ್ನು ಪ್ರೇರೇಪಿಸಬಹುದು.

ಇನ್ನು ಕ್ರೇಗ್‌ರವರು 'ಹೋಮಿಯೋಸ್ಟಾಟಿಕ್ ಎಮೋಷನ್' (ದೇಹದ ಎಲ್ಲಾ ವ್ಯವಸ್ಥೆಗಳ ನಡುವಿನ ಸಮತೋಲನದ ಸ್ಥಿತಿಯನ್ನು ಹೋಮಿಯೋಸ್ಟಾಸಿಸ್ ಎನ್ನುವರು) ಎಂಬ ಸಿದ್ಧಾಂತವನ್ನು ಮುಂದಿಟ್ಟರು. ಈ ಸಿದ್ಧಾಂತವು ಹೃದಯಬಡಿತ, ದೇಹದ ತಾಪಮಾನ, ಕರುಳಿನಲ್ಲಾಗುವ ಚಟುವಟಿಕೆಗಳಂಥ ದೇಹದ ಆಂತರಿಕ ಸ್ಥಿತಿಯನ್ನು ನಮ್ಮ ಮಿದುಳು ಹೇಗೆ ಗ್ರಹಿಸುತ್ತದೆ ಎನ್ನುವುದರ ಮೇಲೆ ಬೆಳಕು ಚೆಲ್ಲಿತು. ಅದರಂತೆ, ಮಿದುಳಿನಲ್ಲಿರುವ 'ಇನ್ಸುಲಾ' ಎಂದು ಕರೆಯಲ್ಪಡುವ ಭಾಗವು ನಮ್ಮ ದೇಹವು ಹೇಗೆ ಕಾರ್ಯನಿರ್ವಹಿಸುತ್ತಿದೆ ಎನ್ನುವ ಬಗ್ಗೆ ಒಂದು ಆಂತರಿಕ ನಕ್ಷೆಯನ್ನು ತಯಾರಿಸುತ್ತದೆ. ದೇಹದ ವಿವಿಧ ಭಾಗಗಳಲ್ಲಿರುವ ನರಗಳಿಂದ ಬರುವ ಸಂಕೇತಗಳಿಂದ ಈ ನಕ್ಷೆಯು ನಿರಂತರವಾಗಿ ನವೀಕರಿಸಲ್ಪಡುತ್ತದೆ. ದೇಹದಿಂದ ಬರುವ ಈ ಸಂಕೇತಗಳ ಮಾಹಿತಿಯನ್ನು ಮಿದುಳಿನ ನಿರ್ಧಾರ ಕೈಗೊಳ್ಳುವ ಪ್ರದೇಶದಿಂದ ಬರುವ ಮಾಹಿತಿಯೊಂದಿಗೆ ಸಂಯೋಜಿಸಿ, ನಮ್ಮೊಳಗೇ ಯಾವ ಭಾವನೆ ಹುಟ್ಟಬೇಕು ಎಂದು ನಿರ್ಧಾರವಾಗುತ್ತದೆ. ಹೀಗೆ ಭಾವನೆಗಳ ಜನನದಲ್ಲಿ ದೇಹ–ಮಿದುಳು ಎರಡೂ ಭಾಗವಹಿಸುತ್ತವೆ ಎಂಬುದು ಈ ಸಿದ್ಧಾಂತದ ಸಾರಾಂಶ.

ಹಾಗಿದ್ದರೆ ಮಿದುಳು ಮತ್ತು ಕರುಳಿನ ಸಂಬಂಧ ಹೇಗೆ ಬೆಸೆದುಕೊಂಡಿದೆ? ಕರುಳಿನಿಂದ ಭಾವನೆಗಳ ಉಗಮ ಸಾಧ್ಯವೇ? ಮಿದುಳು ಮತ್ತು ಕರುಳು ಹಲವು ರೀತಿಯಲ್ಲಿ ಒಂದಕ್ಕೊಂದು ಬೆಸೆದುಕೊಂಡಿದ್ದು, ಈ ಸಂಪರ್ಕ ಸಾಧನಗಳು ಎರಡು ಅಂಗಗಳ ನಡುವಿನ ಸಂವಹನದ ಸೇತುವೆಗಳಾಗಿವೆ.

ಕರುಳಲ್ಲಿದೆ ಎರಡನೇ ಮಿದುಳು!

ಮೊದಲಿಗೆ, ಕರಳು ಮತ್ತು ಮಿದುಳು ನರ ವ್ಯವಸ್ಥೆಯ ವೇಗಸ್ ಮತ್ತು ಬೆನ್ನುಮೂಳೆಯ ನರಗಳ ಮೂಲಕ ನೇರವಾಗಿ ಸಂಪರ್ಕಿಸಲ್ಪಟ್ಟಿದೆ. ಇವು ಕರುಳಿನಲ್ಲಿ ಏನಾಗುತ್ತಿದೆ ಎಂಬ ಮಾಹಿತಿ ಹೊತ್ತ ಇಂದ್ರಿಯ ಸಂಕೇತಗಳನ್ನು ಕರುಳಿನಿಂದ ಮಿದುಳಿಗೆ, ಹಾಗೂ ಕರುಳಿನಲ್ಲಿ ಯಾವ ಕ್ರಿಯೆ ನಡೆಯಬೇಕೆಂಬ ಸೂಚನೆ ನೀಡುವ ಮೋಟಾರ್ ಅಥವಾ ಚಲನ ಸಂಕೇತಗಳನ್ನು ಮಿದುಳಿನಿಂದ ಕರುಳಿಗೆ ತಲುಪಿಸುತ್ತವೆ.

ಅಷ್ಟೇ ಅಲ್ಲದೆ, ಕರುಳು ತನ್ನದೇ ಆದ ಆಂತರಿಕ ನರವ್ಯೂಹವನ್ನೂ ಹೊಂದಿದೆ. ಈ ವ್ಯವಸ್ಥೆಯಲ್ಲಿ 50 ಕೋಟಿಗೂ ಹೆಚ್ಚಿನ ನ್ಯೂರಾನ್ (ನರಕೋಶ) ಗಳಿವೆ. ಇದು ಅಂದಾಜು 8600 ಕೋಟಿ ನರಕೋಶಗಳನ್ನು ಹೊಂದಿರುವ ಮಿದುಳೊಂದನ್ನು ಹೊರತುಪಡಿಸಿ, ಬೆನ್ನುಹುರಿ (ಅಂದಾಜು 6.9 ಕೋಟಿ) ಸೇರಿದಂತೆ ಇತರೆಲ್ಲಾ ಅಂಗಗಳಿಗಿಂತ ಹೆಚ್ಚು! ಆದ್ದರಿಂದಲೇ ಕರುಳಲ್ಲಿನ ನರವ್ಯವಸ್ಥೆಯನ್ನು ಎರಡನೇ ಮಿದುಳು ಎಂದು ಕರೆಯಲಾಗುತ್ತದೆ. ಸಂಕೀರ್ಣವಾದ ಚಿಂತನೆ ಅಥವಾ ಸೃಜನಶೀಲ ಅಭಿವ್ಯಕ್ತಿಗಳನ್ನು ಹೊರಹಾಕಲು ಈ ಮಿದುಳಿಗೆ ಸಾಮರ್ಥ್ಯವಿಲ್ಲ. ಆದರೆ, ಇದರಿಂದ ಕರುಳಿಗೆ ಸ್ವತಂತ್ರವಾಗಿ ಜೀರ್ಣಕ್ರಿಯೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಆಹಾರವನ್ನು ನುಂಗುವುದು, ಜೀರ್ಣಕ್ರಿಯೆಗೆ ಅವಶ್ಯವಾದ ಕಿಣ್ವಗಳನ್ನು ಬಿಡುಗಡೆಗೊಳಿಸುವುದು, ಪೋಷಕಾಂಶಗಳನ್ನು ಹೀರಿಕೊಳ್ಳಲು ರಕ್ತದ ಹರಿವಿನ ನಿಯಂತ್ರಣ ಮಾಡುವುದು ಹಾಗೂ ಆಹಾರವನ್ನು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಕಳಿಸುವುದು ಸೇರಿದಂತೆ ಜೀರ್ಣಕ್ರಿಯೆಯ ಎಲ್ಲಾ ಹಂತಗಳನ್ನು ಈ ಕರುಳ ಮಿದುಳು ಸ್ವಾಯತ್ತವಾಗಿ ನಿಯಂತ್ರಿಸುತ್ತದೆ. ಜತೆಗೆ, ತನ್ನಲ್ಲಿ ನಡೆಯುತ್ತಿರುವ ಕ್ರಿಯೆಗಳ ಬಗ್ಗೆ (ಕರುಳ ಹಿಗ್ಗುವಿಕೆ, ಆಹಾರದ ಚಲನವಲನ ಮತ್ತು ರಾಸಾಯನಿಕ ಕ್ರಿಯೆ) ಮಿದುಳಿನೊಂದಿಗೆ ಸಂವಹಿಸಲು ಸಹ ಇದು ನೆರವಾಗುತ್ತದೆ.



ಹಾರ್ಮೋನುಗಳ ಪಾತ್ರ

ಹಾರ್ಮೋನುಗಳು ಸಹ ಮಿದುಳು ಮತ್ತು ಕರುಳ ನಡುವೆ ಸಂಪರ್ಕ ಸಾಧಿಸುವಲ್ಲಿ ಪಾತ್ರ ವಹಿಸುತ್ತವೆ. ಕರುಳಿನಲ್ಲಿರುವ ವಿಶೇಷ ಜೀವಕೋಶಗಳು ಅನೇಕ ವಿಭಿನ್ನ ಹಾರ್ಮೋನುಗಳನ್ನು ಉತ್ಪಾದಿಸುತ್ತವೆ. ಹೊಟ್ಟೆ ಖಾಲಿಯಿದ್ದಾಗ ಜಠರದಲ್ಲಿ ಉತ್ಪತ್ತಿಯಾಗೋ 'ಘ್ರೆಲಿನ್' ಎಂಬ ಹಾರ್ಮೋನು, 'ಇದು ಊಟದ ಸಮಯ' ಎಂದು ಮಿದುಳಿಗೆ ನೆನಪಿಸುತ್ತದೆ. ಆ ಮೂಲಕ ನಿಮಗೆ ಹಸಿವಾಗುವಂತೆ ಮಾಡುತ್ತದೆ.

ಇನ್ನು ನೀವು ಸೇವಿಸಿದ ಆಹಾರ ಜೀರ್ಣಗೊಂಡಾಗ ಬರುವ ಪ್ರೋಟೀನ್ ಮತ್ತು ಕೊಬ್ಬಿನಂಶಗಳು ಸಣ್ಣ ಕರುಳಿನ ಮೊದಲ ಭಾಗವಾದ ಡ್ಯುವೋಡೆನಮ್‌ಗೆ ಸಿಕ್ಕಾಗ, ಅಲ್ಲಿ ಕೋಲೆಸಿಸ್ಟೊಕಿನಿನ್ ಹಾರ್ಮೋನು ಉತ್ಪತ್ತಿಯಾಗುತ್ತದೆ. ಇದರ ಜತೆಗೆ ಆಹಾರ ಸೇವಿಸಿದ ನಂತರ ಉತ್ಪತ್ತಿಯಾಗುವ 'ಪೆಪ್ಟೈಡ್ YY' ಹಾರ್ಮೋನು ಸೇರಿ, ನಿಮಗೆ ಹೊಟ್ಟೆ ತುಂಬಿದ ಭಾವನೆ ಮೂಡಿಸುತ್ತವೆ. ಅಲ್ಲದೆ, ಈ ಎರಡು ಹಾರ್ಮೋನುಗಳು ಹೊಟ್ಟೆ ತುಂಬಿದೆ ಎಂಬ ಸಂಕೇತವನ್ನು ಮಿದುಳಿಗೆ ತಲುಪಿಸಿ, ಆಹಾರ ಸೇವಿಸುವುದನ್ನು ಕಡಿಮೆ ಮಾಡಲು ಸೂಚಿಸುತ್ತವೆ.

ಮಿದುಳು ಸಹ ಒತ್ತಡದ ಸಮಯದಲ್ಲಿ ಕಾರ್ಟಿಸೋಲ್‌ನಂಥ ತನ್ನದೇ ಆದ ಹಾರ್ಮೋನುಗಳನ್ನು ಬಿಡುಗಡೆ ಮಾಡುವ ಮೂಲಕ ಪ್ರತಿಕ್ರಿಯಿಸುತ್ತದೆ. ಈ ಹಾರ್ಮೋನು, ನಿಮ್ಮ ಕರುಳಿನ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರಬಹುದು. ಉದಾಹರಣೆಗೆ, ಹೆಚ್ಚು ಒತ್ತಡದಲ್ಲಿರುವ ವ್ಯಕ್ತಿಗಳಲ್ಲಿ ಕಾರ್ಟಿಸೋಲ್‌ನ ಪರಿಣಾಮವಾಗಿ ಕರುಳಲ್ಲಿ ಆಹಾರ/ತ್ಯಾಜ್ಯ ಕಣಗಳ ಚಲನೆಯಲ್ಲಿ ವ್ಯತ್ಯಾಸವಾಗಿ ಮಲಬದ್ಧತೆ ಅಥವಾ ಅತಿಸಾರವಾಗಬಹುದು. ಹೀಗೆ ಈ ಎಲ್ಲಾ ಹಾರ್ಮೋನುಗಳಿಂದ ಮಿದುಳು ಮತ್ತು ಕರುಳಿನ ನಡುವೆ ನಡೆಯುವ ಸಂವಹನವು ನಿಮ್ಮ ದೇಹದೊಳಗಿನ ಅಗತ್ಯಗಳಿಗೆ ಮತ್ತು ನಿಮ್ಮ ಸುತ್ತಮುತ್ತಲಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ಎರಡೂ ಅಂಗಗಳು ಒಟ್ಟಾಗಿ ಕಾರ್ಯನಿರ್ವಹಿಸುವುದಕ್ಕೆ ಅನುವು ಮಾಡಿಕೊಡುತ್ತವೆ.

ರೋಗನಿರೋಧಕ ವ್ಯವಸ್ಥೆ ಮತ್ತು ಸೈಟೊಕಿನ್ ಸಂಕೇತಗಳು

ನಿಮ್ಮ ದೇಹದ ರೋಗನಿರೋಧಕ ವ್ಯವಸ್ಥೆಯ ದೊಡ್ಡ ಭಾಗವು ಕರುಳಿನಲ್ಲಿರುತ್ತದೆ. ದೇಹದಲ್ಲಿ ಹಾನಿಕಾರಕ ಸೂಕ್ಷ್ಮಜೀವಿಗಳು ಸೇರಿದಾಗ, ಒತ್ತಡಕ್ಕೊಳಗಾದಾಗ ಅಥವಾ ಕರುಳಿನಲ್ಲಿರುವ ಸ್ನೇಹಪರ ಬ್ಯಾಕ್ಟೀರಿಯಗಳ ಮಟ್ಟದಲ್ಲಿ ಬದಲಾವಣೆಗಳಾದಾಗ ಅಲ್ಲಿನ ಪ್ರತಿರಕ್ಷಣಾ ಜೀವಕೋಶಗಳು ಸೈಟೊಕಿನ್ ಎಂಬ ವಿಶೇಷ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತವೆ. ಈ ರಾಸಾಯನಿಕಗಳು ನಿಮ್ಮ ಮಿದುಳಿಗೆ ಪ್ರಯಾಣಿಸಿ ಭಾವನೆಗಳ ಮೇಲೆ ಪರಿಣಾಮ ಬೀರಬಹುದು. ಅಲ್ಲದೆ, ನಿಮ್ಮ ಮನಸ್ಥಿತಿ ಮತ್ತು ನಡವಳಿಕೆಯನ್ನು ಪ್ರಭಾವಿಸಬಹುದು. ಉದಾಹರಣೆಗೆ, ಕರುಳಿನಲ್ಲಿನ ನಿರಂತರ ಉರಿಯೂತವು ಖಿನ್ನತೆ ಮತ್ತು ಆತಂಕದಂಥ ಪರಿಸ್ಥಿತಿಗಳಿಗೆ ಕಾರಣವಾಗಬಹುದು. ಮತ್ತೊಂದೆಡೆ, ನಿಮ್ಮ ಮಿದುಳು ಒತ್ತಡಕ್ಕೆ ಒಳಗಾದಾಗ ಅಥವಾ ಅಸಮಾಧಾನಗೊಂಡಾಗ, ಅದು ಕರುಳಿನ ರಕ್ಷಣೆಯನ್ನು ದುರ್ಬಲಗೊಳಿಸಬಹುದು ಮತ್ತು ನೀವು ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆಯನ್ನು ಹೆಚ್ಚಿಸಬಹುದು.

ಸೂಕ್ಷ್ಮಜೀವಿಗಳ ಪ್ರಭಾವ

ಡೋಪಮೈನ್ ಮತ್ತು ಗಾಮಾ ಅಮೈನೋ ಬ್ಯುಟಿರಿಕ್ ಆಸಿಡ್ (GABA–ಗಾಬಾ) ಎಂಬ ಮಿದುಳಿನ ಎರಡು ಸಂದೇಶವಾಹಕಗಳು ನಿಮ್ಮ ಮನಸ್ಥಿತಿ, ಆಲೋಚನೆ ಮತ್ತು ದೇಹದ ಚಲನೆಯನ್ನು ನಿಯಂತ್ರಿಸುತ್ತವೆ. ಡೋಪಮೈನ್, ನೀವು ಏನಾದರೂ ಸಾಧಿಸಿದಾಗ ನಿಮ್ಮೊಳಗೆ ಉತ್ತಮ ಭಾವನೆ ಮೂಡಿಸಿ, ನಿಮ್ಮನ್ನು ಪ್ರೇರಿತರಾಗಿರುವಂತೆ ಮಾಡುತ್ತದೆ ಮತ್ತು ನೀವು ಸಲೀಸಾಗಿ ಚಲಿಸಲು ಸಹಕರಿಸುತ್ತದೆ. ಗಾಬಾ, ಮಿದುಳಿನಲ್ಲಿ ಬ್ರೇಕ್‌ನಂತೆ ಕಾರ್ಯನಿರ್ವಹಿಸಿ, ನರಕೋಶಗಳು ಹೆಚ್ಚು ಪ್ರಚೋದನೆಗೆ ಒಳಗಾಗದಂತೆ ನೋಡಿಕೊಂಡು ನಿಮ್ಮನ್ನು ಶಾಂತವಾಗಿರಿಸುತ್ತದೆ.

ಅಂದಾಜು 100 ಟ್ರಿಲಿಯನ್ (1 ಟ್ರಿಲಿಯನ್ ಅಂದರೆ 1 ಲಕ್ಷ ಕೋಟಿ!) ಸೂಕ್ಷ್ಮಜೀವಿಗಳು ಸಾಮಾನ್ಯವಾಗಿ ಕರುಳಿನಲ್ಲಿರುತ್ತವೆ. ಈ ಸೂಕ್ಷ್ಮಜೀವಿಗಳು ಡೋಪಮೈನ್ ಮತ್ತು ಗಾಬಾಗಳಿಗೆ ಹೋಲುವ ಅನೇಕ ರಾಸಾಯನಿಕಗಳ ಜತೆಗೆ ಕೊಬ್ಬಿನಾಮ್ಲಗಳನ್ನು (ಶಾರ್ಟ್–ಚೈನ್ ಫ್ಯಾಟಿ ಆಸಿಡ್) ತಯಾರಿಸುತ್ತವೆ. ಇವು ಕರುಳಿನ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರಬಹುದು, ನಿಮ್ಮ ಪ್ರತಿರಕ್ಷಣಾ ವ್ಯವಸ್ಥೆಯನ್ನು ನಿಯಂತ್ರಿಸಲು ನೆರವಾಗಬಹುದು, ನರಗಳ ಮೂಲಕ ಅಥವಾ ಇತರ ಮಾರ್ಗಗಳ ಮೂಲಕ ಮಿದುಳಿಗೆ ಸಂಕೇತಗಳನ್ನು ಕಳುಹಿಸಬಹುದು.

ಮುಂದುವರಿದು, ಕರುಳಿನ ಸೂಕ್ಷ್ಮಜೀವಿಗಳು 'ಒಳ್ಳೆಯ ಭಾವನೆಗಳ ರಾಸಾಯನಿಕ' ಎಂದೇ ಖ್ಯಾತವಾದ ಸಿರೊಟೋನಿನ್ ಹಾರ್ಮೋನನ್ನು ತಯಾರಿಸಲು ಸಹಾಯ ಮಾಡುತ್ತವೆ. ವಾಸ್ತವವಾಗಿ, ದೇಹದಲ್ಲಿನ ಶೇ. 90ರಷ್ಟು ಸಿರೊಟೋನಿನ್ ಕರುಳಿನಲ್ಲಿಯೇ ಉತ್ಪತ್ತಿಯಾಗುತ್ತದೆ! ಹಾಗಾಗಿ, ಈ ಸೂಕ್ಷ್ಮಜೀವಿಗಳ ಸಮತೋಲನವು ತೊಂದರೆಗೊಳಗಾದಾಗ (ಒತ್ತಡ, ಕಳಪೆ ಆಹಾರ ಅಥವಾ ಪ್ರತಿಜೀವಕಗಳಿಂದಾಗಿ), ಅದು ಆತಂಕ ಮತ್ತು ಖಿನ್ನತೆಯಂಥ ಸಮಸ್ಯೆಗಳಿಗೆ ಕಾರಣವಾಗಬಹುದು. ಇದು ಪ್ರತಿರಕ್ಷಣಾ ವ್ಯವಸ್ಥೆ ಅತಿಯಾಗಿ ಸಕ್ರಿಯಗೊಂಡು ಉರಿಯೂತಗಳಂಥ ಸಮಸ್ಯೆಗೆ ಕಾರಣವಾದಾಗ ಸಂಭವಿಸುವ ಸಾಧ್ಯತೆ ಹೆಚ್ಚು. ಇಂಥ ಸಂದರ್ಭಗಳಲ್ಲಿ ಕರುಳಿನ ಕೆಲವು ಬ್ಯಾಕ್ಟೀರಿಯಾಗಳು ಈ ಉರಿಯೂತವನ್ನು ಕಡಿಮೆ ಮಾಡಿ, ಮಿದುಳನ್ನು ಒತ್ತಡದಿಂದ ರಕ್ಷಿಸಲು ಸಹಾಯ ಮಾಡಬಲ್ಲವು.

ಪ್ರಾಣಿಗಳ ಮೇಲೆ ನಡೆದ ಒಂದು ಅಧ್ಯಯನದಲ್ಲಿ ಕಂಡುಬಂದ ಅಚ್ಚರಿಯ ಫಲಿತಾಂಶದಲ್ಲಿ ಪ್ರಾಣಿಗಳ ಕರುಳಿನ ಬ್ಯಾಕ್ಟೀರಿಯಾಗಳು ಬದಲಾದಾಗ, ಅವುಗಳ ನಡವಳಿಕೆಯೂ ಬದಲಾಗಿದೆ. ಹೆಚ್ಚು ಆತಂಕ ಅಥವಾ ಖಿನ್ನತೆಗೆ ಒಳಗಾದ ಪ್ರಾಣಿಗಳಿಗೆ ಕೆಲವು ಉತ್ತಮ ಬ್ಯಾಕ್ಟೀರಿಯಾಗಳನ್ನು (ಪ್ರೋಬಯಾಟಿಕ್) ನೀಡಿದಾಗ, ಅವುಗಳ ಮನಸ್ಥಿತಿ ಸುಧಾರಿಸಿದೆ. ಇದರಿಂದ ಕರುಳಿನಲ್ಲಿರುವ ಸೂಕ್ಷ್ಮಜೀವಿಗಳು ನಮ್ಮ ಭಾವನೆಗಳನ್ನು ರೂಪಿಸುವಲ್ಲಿ ಪ್ರಭಾವ ಬೀರುತ್ತವೆ ಎನ್ನುವುದು ದೃಢವಾಗಿದೆ.

ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ವಿಜ್ಞಾನಿಗಳ ತಂಡವು, ಭಾವನೆಗಳು ಮತ್ತು ಅವುಗಳ ನಿಯಂತ್ರಣದಲ್ಲಿ ಸೂಕ್ಷ್ಮಜೀವಿಗಳ ಪಾತ್ರದ ಬಗ್ಗೆ ಸಂಶೋಧನೆ ನಡೆಸಿದೆ. ಇನ್ನೂರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ, 2023ರಲ್ಲಿ ಪ್ರಕಟಗೊಂಡ ಈ ವರದಿ, ಸಕಾರಾತ್ಮಕ (ಸಂತೋಷ ಮತ್ತು ಆಶಾವಾದ) ಮತ್ತು ನಕಾರಾತ್ಮಕ (ದುಃಖ, ಭಯ, ಚಿಂತೆ, ನಿರಾಶಾದಾಯಕ ಸ್ಥಿತಿ, ಖಿನ್ನತೆ ಅಥವಾ ಒಂಟಿತನ) ಭಾವನೆಗಳು ಮತ್ತು ಕರುಳ ಸೂಕ್ಷ್ಮಜೀವಿಗಳ ನಡುವಿನ ಸಂಬಂಧದ ಬಗ್ಗೆ ವಿವರ ನೀಡಿದೆ. ನಕಾರಾತ್ಮಕ ಮತ್ತು ಸಕಾರಾತ್ಮಕ ಭಾವನೆಗಳ ಸಂದರ್ಭಗಳಲ್ಲಿ ಕರುಳಲ್ಲಿನ ಕೆಲವು ಬ್ಯಾಕ್ಟೀರಿಯಾಗಳ ಮಟ್ಟದಲ್ಲಿ ಬದಲಾವಣೆ ಕಾಣಿಸಿದೆ. ಪ್ರಮುಖವಾಗಿ, ನಕಾರಾತ್ಮಕ ಭಾವನೆಗಳನ್ನು ಹೊಂದಿದ್ದ ಜನರಲ್ಲಿ ಕೆಲವು ನಿರ್ದಿಷ್ಟ ಬ್ಯಾಕ್ಟೀರಿಯಾಗಳ (ಫರ್ಮಿಕ್ಯುಟ್ಸ್ ಬ್ಯಾಕ್ಟೀರಿಯಂ CAG 94 ಮತ್ತು ರುಮಿನೊಕೊಕೇಸಿ ಬ್ಯಾಕ್ಟೀರಿಯಂ D16) ಸಂಖ್ಯೆ ಹೆಚ್ಚಿದೆ. ಸಂತೋಷದ ಭಾವನೆಗಳನ್ನು ವರದಿ ಮಾಡಿದ ಜನರಲ್ಲಿ ಈ ಎರಡು ಸೂಕ್ಷ್ಮಜೀವಿಗಳ ಸಂಖ್ಯೆ ಕಡಿಮೆಯಾಗಿದೆ. ಅಲ್ಲದೆ, ತಮ್ಮ ಭಾವನೆಗಳನ್ನು ನಿಗ್ರಹಿಸಿದ ಅಥವಾ ಹಿಡಿದಿಟ್ಟುಕೊಂಡ ಜನರಲ್ಲಿನ ಕರುಳಿನ ಸೂಕ್ಷ್ಮಜೀವಿಗಳ ವೈವಿಧ್ಯವೇ ಕಡಿಮೆಯಾಗಿದೆ.

ಇದೇ ರೀತಿಯ ಹಲವು ಅಧ್ಯಯನಗಳು ಕರುಳ ಸೂಕ್ಷ್ಮಜೀವಿಗಳು ಮತ್ತು ಮಾನಸಿಕ ಆರೋಗ್ಯದ ನಡುವೆ ಸಂಬಂಧವಿದೆ ಎನ್ನುವುದನ್ನು ತಿಳಿಸಿವೆ. ಉತ್ತಮ ಆಹಾರ ಮತ್ತು ಪ್ರೋಬಯಾಟಿಕ್‌ಗಳ ಮೂಲಕ ಕರುಳನ್ನು ಆರೋಗ್ಯಕರವಾಗಿಟ್ಟರೆ, ಮನಸ್ಥಿತಿ ಮತ್ತು ಒತ್ತಡದ ಮಟ್ಟವನ್ನು ನಿರ್ವಹಿಸಬಹುದು ಎಂದು ಸೂಚಿಸಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನಿಮ್ಮ ಕರುಳು ಆಹಾರವನ್ನು ಜೀರ್ಣಿಸುವುದಲ್ಲದೆ, ನಿಮ್ಮ ಭಾವನೆಯನ್ನು ರೂಪಿಸಲು ಕೂಡ ಸಹಾಯ ಮಾಡುತ್ತದೆ. ಅದಕ್ಕಾಗಿಯೇ, ಲಂಡನ್ ವಿಶ್ವವಿದ್ಯಾಲಯದ ವಿಜ್ಞಾನಿಯಾದ ಆಂಟನ್ ಇಮ್ಯಾನುಯೆಲ್‌ರವರು 'ಕರುಳು ಭಾವನೆಗಳ ಬಾಗಿಲು' ಎಂದು ನಂಬುತ್ತಾರೆ. ಆದರೆ, ಇದು ಒಂದೇ ದಿಕ್ಕಿನಲ್ಲಿ ನಡೆಯುವ ಪ್ರಕ್ರಿಯೆಯಲ್ಲ ಎಂಬುದು ಸತ್ಯ. ಕರುಳಿನ ಮೇಲೆ ಮಿದುಳು, ಮಿದುಳಿನ ಮೇಲೆ ಕರುಳು, ಒಂದರ ಮೇಲೊಂದು ಪರಿಣಾಮ ಬೀರುತ್ತವೆ. ಈ ಪರಿಣಾಮಗಳು ಒಟ್ಟು ಸೇರಿ ನೀವು ಭಾವನೆಗಳನ್ನು ಅನುಭವಿಸುವಂಥದ್ದು. ಹಾಗಾಗಿ, ಭಾವನೆಗಳು ಮತ್ತು ನಿರ್ಧಾರಗಳಲ್ಲಿ ಕರುಳಿನ ಪಾತ್ರವಿದೆ ಎಂದು ಹೇಳಬಹುದೇ ಹೊರತು ಇದು ಸಂಪೂರ್ಣ ಕರುಳಿನದೇ ಕೆಲಸ ಎಂದು ಹೇಳಲಾಗದು. ಇದೇ ಕಾರಣಕ್ಕೆ, ಈ ವಿಷಯದ ಬಗ್ಗೆ ಎಲ್ಲಾ ವಿಜ್ಞಾನಿಗಳ 'ಗಟ್ ಫೀಲಿಂಗ್' ಒಂದೇ ರೀತಿಯಲ್ಲಿ ಇಲ್ಲ ಎನ್ನಬಹುದು!

ಕೊನೆಯದಾಗಿ ಒಂದು ಪ್ರಶ್ನೆ. ನಾಳೆ ನೀವು ಕಚೇರಿಗೆ ಹೋಗುವಾಗ ನಿತ್ಯ ಬಳಸುತ್ತಿದ್ದ ದಾರಿಯನ್ನು ಬದಲಿಸಿ, ಬೇರೆ ದಾರಿಯಲ್ಲಿ ಹೋಗಬೇಕು ಎಂದು ನಿಮ್ಮ ಕರುಳು ಸೂಚಿಸಿದರೆ ಏನು ಮಾಡುತ್ತೀರಿ?

(ಲೇಖಕರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರ್ಯಾಂಟ್ಸ್ ಮ್ಯಾನೇಜರ್)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:200

ಸಮಾಚಾರ ಸಣ್ಣದಲ್ಲ

ಸದನದಲ್ಲಿ ರಮ್ಮಿ: ಸಚಿವಗೆ ಖಾತೆ ಕಮ್ಮಿ

ಮುಂಬೈ: 'ಮೊಬೈಲ್‌ನಲ್ಲಿ ರಮ್ಮಿ ಆಡಿದರೆ ದೊಡ್ಡ ನಷ್ಟ ಕಟ್ಟಿಟ್ಟ ಬುತ್ತಿ' ಎಂಬುದನ್ನು ಮಹಾರಾಷ್ಟ್ರ ಸಚಿವರೊಬ್ಬರು ಖುದ್ದಾಗಿ ಅನುಭವದ ಮೂಲಕ ಕಂಡುಕೊಂಡಿದ್ದಾರೆ. ವಿಧಾನಸಭೆಯಲ್ಲಿ ಕಲಾಪ ನಡೆಯುತ್ತಿದ್ದಾಗ ಮೊಬೈಲಿನಲ್ಲಿ ರಮ್ಮಿ ಆಡುತ್ತಿದ್ದ ಮಾಣಿಕ್ ರಾವ್ ಕೊಕಾಟೆ ಕೃಷಿ ಖಾತೆ ಕಳೆದುಕೊಂಡಿದ್ದಾರೆ. ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಶಿಸ್ತುಕ್ರಮ ಕೈಗೊಂಡು, ಕೊಕಾಟೆ ನಿರ್ವಹಿಸುತ್ತಿದ್ದ ಕೃಷಿ ಖಾತೆಯನ್ನು ಎನ್‌ಸಿಪಿ ಸಚಿವ ದತ್ತಾತ್ರೇಯ ಭರ್ನೆ ಅವರಿಗೆ ವಹಿಸಿದ್ದಾರೆ. ಭರ್ನೆಯವರ ಕ್ರೀಡೆ, ಯುವಜನ ಕಲ್ಯಾಣ, ಅಲ್ಪಸಂಖ್ಯಾತರ ಅಭಿವೃದ್ಧಿ ಹಾಗೂ ವಕ್ಫ್ ಖಾತೆಗಳನ್ನು ಕೊಕಾಟೆಗೆ ನೀಡಿದ್ದಾರೆ. ಕೊಕಾಟೆ ವಿವಾದಾತ್ಮಕ ಹೇಳಿಕೆಗಳಿಂದ ಸದಾ ಸುದ್ದಿಯಲ್ಲಿರುತ್ತಾರೆ. ಅವರ ವಿವಾದಾತ್ಮಕ ಹೇಳಿಕೆಗಳಿಂದ ಸರಕಾರಕ್ಕೆ ಹಾನಿ ಆಗುವುದನ್ನು ತಪ್ಪಿಸಲು ಕೊಕಾಟೆ ವಿರುದ್ಧ ಕ್ರಮಕ್ಕೆ ಸಿಎಂ ದೇವೇಂದ್ರ ಫಡ್ನವೀಸ್ ಈ ಹಿಂದೆ ಆಗ್ರಹಿಸಿದ್ದರು.

ಖುಷ್ಬೂ ತ.ನಾಡು ಬಿಜೆಪಿ ಉಪಾಧ್ಯಕ್ಷೆ

ಚೆನ್ನೈ: ಬಿಜೆಪಿ ತಮಿಳುನಾಡು ಘಟಕ ಉಪಾಧ್ಯಕ್ಷೆಯಾಗಿ ಖ್ಯಾತ ಚಿತ್ರನಟಿ, ರಾಜಕಾರಣಿ ಖುಷ್ಬೂ ಸುಂದರ್ ನೇಮಕಗೊಂಡಿದ್ದಾರೆ. ಮಾಜಿ ಸಂಸದರಾದ ವಿ.ಪಿ.ದೊರೈಸಾಮಿ, ಕೆ.ಪಿ.ರಾಮಲಿಂಗಂ, ಶಶಿಕಲಾ ಪುಷ್ಪಾ ಮತ್ತು ಎಂ.ಚಕ್ರವರ್ತಿ ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ ಮುಂದುವರಿದಿದ್ದಾರೆ. ಖುಷ್ಬೂ ಅವರ ನೇಮಕ ವಿಚಾರವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅನುಮೋದಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕ ಅಧ್ಯಕ್ಷ ನಯನಾರ್ ನಾಗೇಂದ್ರನ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಉಪಾಧ್ಯಕ್ಷೆಯಾಗಿ ನೇಮಕಗೊಂಡಿರುವುದಕ್ಕೆ ಖುಷ್ಬೂ ಸಂತಸ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಧನ್ಯವಾದ ಅರ್ಪಿಸಿ 'ಎಕ್ಸ್; ಖಾತೆಯಲ್ಲಿ ಸಂದೇಶ ಬರೆದಿದ್ದಾರೆ.

ಫಾಸ್ಟ್ಯಾಗ್ ವಹಿವಾಟು: ತ.ನಾಡು ಮುಂಚೂಣಿ

ದೆಹಲಿ: ಕಳೆದ ಮೂರೂವರೆ ವರ್ಷಗಳಲ್ಲಿ ದೇಶಾದ್ಯಂತ ಫಾಸ್ಟ್‌ಟ್ಯಾಗ್ ವಹಿವಾಟಿನಲ್ಲಿ ತಮಿಳುನಾಡು ಮುಂಚೂಣಿಯಲ್ಲಿದೆ. 2022 ಮತ್ತು 2025ರ ಜೂನ್ ನಡುವಿನ ಅವಧಿಯಲ್ಲಿ 126 ಕೋಟಿ ರು. ವಹಿವಾಟು ನಡೆಯುವುದರೊಂದಿಗೆ ತಮಿಳುನಾಡು ಫಾಸ್ಟ್‌ಟ್ಯಾಗ್ ಬಳಕೆಯಲ್ಲಿ ಅಗ್ರ ಸ್ಥಾನ ಉಳಿಸಿಕೊಂಡಿದೆ ಎಂದು ಲೋಕಸಭೆಗೆ ಮಾಹಿತಿ ನೀಡಲಾಗಿದೆ. ವಾಹನ ಸಂಚಾರ ಹೆಚ್ಚಿರುವ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳನ್ನು ತಮಿಳುನಾಡು ಮೀರಿಸಿದೆ. ಪ್ರತಿ ವರ್ಷವೂ ಪಾಸ್ಟ್‌ಟ್ಯಾಗ್ ಬಳಕೆಯಲ್ಲಿ ತಮಿಳುನಾಡು ಅಗ್ರಸ್ಥಾನ ಕಾಯ್ದುಕೊಂಡು ಬಂದಿದೆ. **ಕರ್ನಾಟಕ:** ಇದೇ ಅವಧಿಯಲ್ಲಿ ಉತ್ತರ ಪ್ರದೇಶ 119 ಕೋಟಿ ಮತ್ತು ಕರ್ನಾಟಕ 112 ಕೋಟಿ ರು. ಹೆದ್ದಾರಿ ಶುಲ್ಕ ಸಂಗ್ರಹ ದಾಖಲಾಗಿದೆ. ರಾಜಸ್ಥಾನ 100 ಕೋಟಿ ಮತ್ತು ಮಹಾರಾಷ್ಟ್ರ 91.9 ಕೋಟಿ ರು. ಶುಲ್ಕ ಸಂಗ್ರಹ ಆಗಿದೆ. ರಸ್ತೆ ಶುಲ್ಕ ಸಂಗ್ರಹ ಡಿಜಿಟಲ್ ವ್ಯವಸ್ಥೆಯಾದ ಫಾಸ್ಟ್‌ಟ್ಯಾಗ್ 2021ರ ಫೆಬ್ರವರಿಯಿಂದ ರಾಷ್ಟ್ರವ್ಯಾಪಿ ತ್ವರತಗತಿಯಲ್ಲಿ ಜಾರಿಯಾಗಿದೆ. ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ಶೇ.98ಕ್ಕಿಂತ ಹೆಚ್ಚು ಟೋಲ್ ಸಂಗ್ರಹ ಆಗುತ್ತಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.

ಸೌರಶಕ್ತಿ ಉತ್ಪಾದನೆ: 3ನೇ ಸ್ಥಾನಕ್ಕೆ ಭಾರತ

ದೆಹಲಿ: ಸೌರಶಕ್ತಿ ಉತ್ಪಾದನೆಯಲ್ಲಿ ಭಾರತ ಜಪಾನ್‌ಗಿಂತ ಈಗ ಮುಂದಿದೆ. ಸೂರ್ಯನ ಶಾಖದಿಂದಲೇ ಒಟ್ಟಾರೆ 1,08,494 ಗಿಗಾವಾಟ್ ವಿದ್ಯುತ್ ಉತ್ಪಾದಿಸುತ್ತಿದೆ. ಪಳೆಯುಳಿಕೆಯೇತರ ವಿದ್ಯುತ್ ಉತ್ಪಾದನೆ ಸಾಮರ್ಥ್ಯದ ಶೇ.50ರಷ್ಟನ್ನು ಭಾರತ ಆಗಲೇ ಸಾಧಿಸಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ದೆಹಲಿಯಲ್ಲಿ ಶುಕ್ರವಾರ ಹೇಳಿದ್ದಾರೆ. ಜಪಾನ್ ಸದ್ಯ 96,459 ಗಿಗಾವಾಟ್ ವಿದ್ಯುತ್ ಉತ್ಪಾದಿಸುತ್ತಿದೆ ಎಂದರು. ಸೌರಶಕ್ತಿ ಉತ್ಪಾದನೆಯಲ್ಲಿ ಜಪಾನ್ ದೇಶವನ್ನು ಹಿಂದಿಕ್ಕಿರುವ ಭಾರತಮ ಈಗ ಈ ವಲಯದಲ್ಲಿ 3ನೇ ಅತಿದೊಡ್ಡ ದೇಶವಾಗಿದೆ. ಚೀನಾ ಮತ್ತು ಅಮೆರಿಕ ನಂತರದ ಸ್ಥಾನದಲ್ಲಿ ಭಾರತ ಸೂರ್ಯನ ಜತೆ ರಾರಾಜಿಸುತ್ತಿದೆ. ಪ್ಯಾರಿಸ್ ಒಪ್ಪಂದಕ್ಕೆ ಅನುಗುಣವಾಗಿ ಭಾರತ ತನ್ನ ವಿದ್ಯುತ್ ಸಾಮರ್ಥ್ಯದ ಶೇ.50ರಷ್ಟನ್ನು ಪಳೆಯುಳಿಕೆಯೇತರ ಮೂಲಗಳಿಂದ 5 ವರ್ಷ ಮೊದಲೇ ಸಾಧಿಸಿದೆ ಎಂದರು.

ಅಮೆರಿಕ ಅಧ್ಯಕ್ಷ ಟ್ರಂಪ್ ವಿಧಿಸಿದ ಶೇ.25 ಪ್ರತಿಸುಂಕಕ್ಕೆ ತಿರುಗೇಟು | ದೇಶಗಳ ಸಂಬಂಧ ಉಳಿಸಿಕೊಳ್ಳುವ ನಿಟ್ಟಿನಲ್ಲಿಯೂ ಯತ್ನ

ಎಫ್-35 ವಿಮಾನ ಖರೀದಿ ಇಲ್ಲ: ಭಾರತ ಗುದ್ದು

ದೆಹಲಿ: ಅಮೆರಿಕ ನಿರ್ಮಿತ ಎಫ್-35 ಯುದ್ಧ ವಿಮಾನಗಳನ್ನು ಖರೀದಿಸದೇ ಇರಲು ಭಾರತ ನಿರ್ಧರಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಶೇ.25ರಷ್ಟು ತೆರಿಗೆ ಹೇರಿದ ಬೆನ್ನಲ್ಲೇ ಭಾರತ ತನ್ನ ನಿರ್ಧಾರ ಪ್ರಕಟಿಸಿದೆ. 5ನೇ ತಲೆಮಾರಿನ ಅತ್ಯಾಧುನಿಕ ಯುದ್ಧ ವಿಮಾನ ಎನ್ನಿಸಿಕೊಂಡಿರುವ ಎಫ್-35 ಯುದ್ಧ ವಿಮಾನ ಖರೀದಿಸಲು ಆಸಕ್ತಿ ತೋರಿದ್ದ ಭಾರತ, ಈಗ ನಿರ್ಧಾರ ಬದಲಿಸಿದೆ. ಫೆಬ್ರವರಿಯಲ್ಲಿ ಮೋದಿ ಅವರ ಅಮೆರಿಕ ಪ್ರವಾಸದ ಸಮಯದಲ್ಲಿ ಟ್ರಂಪ್, ಭಾರತಕ್ಕೆ ಎಫ್-35 ಯುದ್ಧ ವಿಮಾನ ನೀಡುವುದಾಗಿ ಹೇಳಿದ್ದರು. ನಂತರ ಭಾರತ ಎಫ್-35 ಖರೀದಿ ಸಂಬಂಧ ಮಾತುಕತೆ ನಡೆಸಿತ್ತು. ಆದರೆ ಈಗ ಅಮೆರಿಕಕ್ಕೆ ಆಮದಾಗುವ ಭಾರತದ ಸರಕುಗಳ ಮೇಲೆ ಟ್ರಂಪ್ ಭಾರೀ ತೆರಿಗೆ ವಿಧಿಸಿದ್ದರಿಂದ ಭಾರತ ಎಫ್-35 ಯುದ್ಧ ವಿಮಾನ ಖರೀದಿಸದೇ ಇರಲು ತೀರ್ಮಾನಿಸಿದೆ.

ಈ ವಿಷಯವನ್ನು ಅಮೆರಿಕಕ್ಕೂ ಆದಾಗಲೇ ಭಾರತ ತಿಳಿಸಿದೆ ಎಂದು ಬ್ಲೂಮ್‌ಬರ್ಗ್ ಮಾಧ್ಯಮ ವರದಿ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತ ಸರಕಾರ ದೇಶದಲ್ಲೇ ತನಗೆ ಬೇಕಾದ ರಕ್ಷಣಾ ಉಪಕರಣಗಳನ್ನು ತಯಾರಿಸಿಕೊಳ್ಳಲು ಆಸಕ್ತಿ ವ್ಯಕ್ತಪಡಿಸಿದೆ. ಅದೇ ದಿಸೆಯಲ್ಲಿ ಹಲವು ಜಂಟಿ ಕಾರ್ಯಯೋಜನೆಗಳನ್ನೂ ಜಾರಿಯಲ್ಲಿಟ್ಟಿದೆ ಎಂದು ಬ್ಲೂಮ್‌ಬರ್ಗ್ ವರದಿ ವಿವರಿಸಿದೆ. ಆದರೆ, ಈ ವರದಿಯ ಬಗ್ಗೆ ಭಾರತ, ಅಮೆರಿಕ ಸರಕಾರ ಪ್ರತಿಕ್ರಿಯೆ ನೀಡಿಲ್ಲ. ಭಾರತ ಸದ್ಯ ಮೊದಲಾದ ಮಧ್ಯಮ ಶ್ರೇಣಿಯ ಯುದ್ಧ ವಿಮಾನ(ಎಎಂಸಿಎ) ಗಳನ್ನು ತಯಾರಿಸುತ್ತಿದೆ. 2028ರ ವೇಳೆಗೆ ಈ ವಿಮಾನಗಳ ತಯಾ ರಿಕಾ ಕಾರ್ಯ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಈ ಪ್ರಯೋಗ ಯಶಸ್ವಿಯಾದರೆ 2034ರ ವೇಳೆಗೆ ಭಾರತೀಯ ವಾಯುಪಡೆಗೆ ಎಎಂಸಿಎ ಶ್ರೇಣಿ ಯುದ್ಧ ವಿಮಾನಗಳು ಹಸ್ತಾಂತರವಾಗಲಿವೆ. ಬೆಂಗಳೂರಿನ ಏರ್‌ಶೋನಲ್ಲಿ 'ಎಎಂಸಿಎ' ವಿಮಾನದ ಮಾದರಿ ಅನಾವರಣಗೊಳಿಸಲಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಭಾರತದ ವಾಯುಪಡೆ ಬಳಿ ಇರುವ ಫ್ರಾನ್ಸ್‌ನ ಡಸಾಲ್ಟ್ ಕಂಪನಿ ನಿರ್ಮಿತ ಶಕ್ತಿಶಾಲಿ ರಫೇಲ್

ಅಮೆರಿಕದ ಬಲಿಷ್ಠ ಯುದ್ಧ ವಿಮಾನ ಎನಿಸಿಕೊಂಡಿರುವ 'ಎಫ್-34'

ಐದನೇ ತಲೆಮಾರು ಯುದ್ಧ ವಿಮಾನವಿಲ್ಲ

ಎಫ್-35 ಮತ್ತು ಎಸ್‌ಯು-57 ಐದನೇ ತಲೆಮಾರಿನ ಯುದ್ಧ ವಿಮಾನಗಳಾಗಿದ್ದು, ಬಹಳ ಬಲಿಷ್ಠವಾಗಿವೆ. 5ನೇ ತಲೆಮಾರಿನ ಯುದ್ಧ ವಿಮಾನಗಳು ಭಾರತದ ಬಳಿ ಇಲ್ಲ. ಸದ್ಯ ಭಾರತದಲ್ಲಿ ರಫೇಲ್ ಮತ್ತು ತೇಜಸ್ ಯುದ್ಧ ವಿಮಾನಗಳಿವೆ. ಅವು 5ನೇ ತಲೆಮಾರಿನ ಯುದ್ಧ ವಿಮಾನಗಳಿ ಗಿಂತು ತುಸು ಕಡಿಮೆ ಶ್ರೇಣಿಯವಾಗಿವೆ. ಸದ್ಯ ಭಾರತದಲ್ಲಿ 600 ಫೈಟರ್ ಜೆಟ್ ವಿಮಾನಗಳು ಸೇರಿದಂತೆ ಒಟ್ಟು 2,229 ಸಂಖ್ಯೆಯ ಯುದ್ಧ ವಿಮಾನಗಳಿವೆ.

ಭಾರತದ ವಿದೇಶಾಂಗ ಸಚಿವಾಲಯ ಸುದ್ದಿಗೋಷ್ಠಿ-ಸ್ಪಷ್ಟನೆ

ಸಂಬಂಧದಲ್ಲಿ ಬದಲಾವಣೆ, ಸವಾಲು!

ದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟೀಕೆ, ನಿಂದನೆಗಳನ್ನು ತಳ್ಳಿಹಾಕಿರುವ ಭಾರತ, ಎರಡೂ ದೇಶಗಳ ನಡುವಿನ ಪಾಲುದಾರಿಕೆ ಹಲವು ಪರಿವರ್ತನೆ ಮತ್ತು ಸವಾಲುಗಳನ್ನು ಎದುರಿಸಿ ಮುಂದುವರಿದಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.

ಭಾರತದ ಆಮದು ಸರಕುಗಳ ಮೇಲೆ ಶೇ.25ರಷ್ಟು ಹೆಚ್ಚುವರಿ ಸುಂಕ ವಿಧಿಸಿದ ಟ್ರಂಪ್, 'ಭಾರತದ ಆರ್ಥಿಕತೆ ಸತ್ತುಹೋಗಿದೆ' ಎಂದು ಕಟುವಾಗಿ ಟೀಕಿಸಿದ್ದರು. ಟ್ರಂಪ್ ಅವರ ಮಾತುಗಳನ್ನೇ ಬಲವಾಗಿ ಆಧರಿಸಿ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷ ಗಳು ಕೇಂದ್ರ ಸರಕಾರವನ್ನು ತೀವ್ರವಾಗಿ ಟೀಕಿಸಲಾ ರಂಭಿಸಿದ್ದವು. ಈ ಹಿನ್ನೆಲೆಯಲ್ಲಿ ವಿದೇಶಾಂಗ ಸಚಿವಾಲಯದ ಪ್ರತಿಕ್ರಿಯೆ ಹೊರಬಿದ್ದಿದೆ.

ಪರಸ್ಪರ ಹಿತಾಸಕ್ತಿ, ಪ್ರಜಾಪ್ರಭುತ್ವ ಮೌಲ್ಯ ಮತ್ತು ಎರಡೂ ದೇಶಗಳ ಜನರ ಬಲವಾದ ಸಂಬಂಧಗಳ ಆಧಾರದಲ್ಲಿ ಜಾಗತಿಕ ಕಾರ್ಯತಂತ್ರದ ಪಾಲುದಾರಿ ಕೆಯನ್ನು ಭಾರತ-ಅಮೆರಿಕ ಹಂಚಿಕೊಂಡಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಸಾಪ್ತಾಹಿಕ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಭಾರತ-ಅಮೆರಿಕದ ದ್ವಿಪಕ್ಷೀಯ ಪಾಲುದಾರಿಕೆ ಬಹು ಪರಿವರ್ತನೆ ಮತ್ತು ಸವಾಲುಗಳನ್ನು ಸಹಿಸಿಕೊಂಡಿದೆ. ಪ್ರಮುಖ ಕಾರ್ಯಸೂಚಿಯನ್ನು ಮುಂದುವರಿಸಲು ಭಾರತ ಬದ್ಧವಾಗಿದೆ. ಎರಡೂ ದೇಶಗಳ ಸಂಬಂಧ ಹಿಂದಿನಂತೆಯೇ ಮುಂದುವರಿಯುತ್ತದೆ ಎಂಬ ವಿಶ್ವಾಸವಿದೆ ಎಂದರು.

ಭಾರತ- ಅಮೆರಿಕ ರಕ್ಷಣಾ ಸಂಬಂಧಗಳ ದೃಢ ಸ್ವರೂಪವನ್ನು ಎತ್ತಿ ತೋರಿಸಿದ ಜೈಸ್ವಾಲ್ ರಕ್ಷಣಾ ಸಹಕಾರ ಕುರಿತ ಪ್ರಶ್ನೆಗಳಿಗೆ ಉತ್ತರಿಸಿದರು. ಇತ್ತೀಚಿನ ವರ್ಷಗಳಲ್ಲಿ ಭಾರತ-ಅಮೆರಿಕ ರಕ್ಷಣಾ ಸಹಕಾರ ಬಹಳ ಆಳವಾಗಿದೆ, ಪಾಲುದಾರಿಕೆ ಮತ್ತಷ್ಟು ವಿಸ್ತರಿಸಲು ಸಾಕಷ್ಟು ಅವಕಾಶಗಳಿವೆ ಎಂದರು.

ಶಾರುಖ್‌ಗೆ ಮೊದಲ ರಾಷ್ಟ್ರ ಪ್ರಶಸ್ತಿ

ದೆಹಲಿ: ಬಾಲಿವುಡ್ ಬಾದ್‌ಶಾ ಎಂಬ ಹೆಗ್ಗಳಿಕೆ ಹೊಂದಿರುವ ಶಾರುಖ್ ಖಾನ್ ಚಿತ್ರರಂಗದಲ್ಲಿ 33 ವರ್ಷಗಳ ಸುದೀರ್ಘ ನಟನೆಯ ಬಳಿಕ ಮೊದಲ ಬಾರಿಗೆ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶಾರುಖ್ ಅವರ ಹಲವು ಚಿತ್ರಗಳು ಇತ್ತೀಚೆಗೆ ಸೋಲು ಕಂಡಿದ್ದವು. ಆದರೆ ದಕ್ಷಿಣ ಭಾರತದ ನಿರ್ದೇಶಕ ಅಟ್ಲೀ ನಿರ್ದೇಶನ ಮಾಡಿದ ಜವಾನ್ ಚಿತ್ರದಲ್ಲಿ ಬಾಕ್ಸ್ ಆಫೀಸ್‌ನಲ್ಲಿ ಗೆಲುವು ಕಂಡಿತ್ತು. ಈ ಚಿತ್ರದಲ್ಲಿ ಶಾರುಖ್ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



ಯಾವ ಚಿತ್ರ, ಯಾರಿಗೆ ಪ್ರಶಸ್ತಿ ?

ಅತ್ಯುತ್ತಮ ಸಿನಿಮಾ - 12th ಫೇಲ್
ಅತ್ಯುತ್ತಮ ಮನರಂಜನಾತ್ಮಕ ಸಿನಿಮಾ - ರಾಕಿ ಔರ್ ರಾಣಿ ಪ್ರೇಮ್ ಕಹಾನಿ
ಅತ್ಯುತ್ತಮ ನಿರ್ದೇಶನ - ಸುದೀಪ್ತೊ ಸೇನ್ (ದಿ ಕೇರಳ ಸ್ಟೋರಿ)
ಅತ್ಯುತ್ತಮ ನಟ - ವಿಕ್ರಾಂತ್ ಮ್ಯಾಸ್ಸೆ (12th ಫೇಲ್)
ಅತ್ಯುತ್ತಮ ನಟ - ಶಾರುಖ್ ಖಾನ್ (ಜವಾನ್)
ಅತ್ಯುತ್ತಮ ನಟಿ- ರಾಣಿ ಮುಖರ್ಜಿ (Mrs. Chatterjee vs Norway)
ಅತ್ಯುತ್ತಮ ಪೋಷಕ ನಟ- ಎಂ ಎಸ್ ಭಾಸ್ಕರ್ (ಪಾರ್ಕಿಂಗ್)
ಅತ್ಯುತ್ತಮ ಪೋಷಕ ನಟಿ- ಊರ್ವಶಿ (Ullozhukku)
ಅತ್ಯುತ್ತಮ ಗಾಯಕ - ಪಿವಿಎನ್ ರೋಹಿತ್ (ಬೇಬಿ)
ಅತ್ಯುತ್ತಮ ಗಾಯಕಿ - ಶಿಲ್ಪಾ ರಾವ್ (ಜವಾನ್)
ಅತ್ಯುತ್ತಮ ಛಾಯಾಗ್ರಹಣ - ದಿ ಕೇರಳ ಸ್ಟೋರಿ
ಅತ್ಯುತ್ತಮ ಸಂಭಾಷಣೆ- ಸಿರ್ಫ್ ಏಕ್ ಕಾಫಿ ಬಂದಾ ಹೈ
ಅತ್ಯುತ್ತಮ ಚಿತ್ರಕಥೆ - ಬೇಬಿ (ತೆಲುಗು) ಪಾರ್ಕಿಂಗ್ (ತಮಿಳು)
ಅತ್ಯುತ್ತಮ ಸಂಕಲನ - ಮಿಥುನ್ ಮುರಳಿ (ಪೂಕಳ್)
ಅತ್ಯುತ್ತಮ ನಿರ್ಮಾಣ ವಿನ್ಯಾಸ - 2018 (ಮಲಯಾಳಂ)
ಅತ್ಯುತ್ತಮ ವಸ್ತ್ರವಿನ್ಯಾಸ - ಸ್ಯಾಮ್ ಬಹದ್ದೂರ್
ಅತ್ಯುತ್ತಮ ಮೇಕಪ್ - ಶ್ರೀಕಾಂತ್ ದೇಸಾಯಿ (ಸಿನಿಮಾ: ಸ್ಯಾಮ್ ಬಹದ್ದೂರ್)
ಅತ್ಯುತ್ತಮ ಹಿನ್ನೆಲೆ ಸಂಗೀತ ನಿರ್ದೇಶನ- ಹರ್ಷವರ್ಧನ್ ರಾಮೇಶ್ವರ್ (ಸಿನಿಮಾ: ಅನಿಮಲ್ ಸಿನಿಮಾ)
ಅತ್ಯುತ್ತಮ ಸಂಗೀತ ನಿರ್ದೇಶನ- ಜಿ ವಿ ಪ್ರಕಾಶ್ ಕುಮಾರ್ (ಸಿನಿಮಾ: ವಾಥಿ)
ಅತ್ಯುತ್ತಮ ಗೀತ ಸಾಹಿತ್ಯ - ಬಲಗಂ (ತೆಲುಗು)
ಅತ್ಯುತ್ತಮ ನೃತ್ಯ ನಿರ್ದೇಶನ - ರಾಕಿ ಔರ್ ರಾಣಿ ಪ್ರೇಮ್ ಕಹಾನಿ (ಹಿಂದಿ)
ಅತ್ಯುತ್ತಮ ಸಾಹಸ ನಿರ್ದೇಶನ - ಹನುಮಾನ್ (ತೆಲುಗು)

ರೈತನ ಕಥಾಚಿತ್ರ ಕಂದೀಲು

ಬೆಂಗಳೂರು: ಕೊಡಗು ಜಿಲ್ಲೆ ಮಡಿಕೇರಿಯ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರು ನಿರ್ಮಿಸಿ, ನಿರ್ದೇಶಿಸಿರುವ 'ಕಂದೀಲು' ಚಿತ್ರವು ಫೀಚರ್ ಫಿಲ್ಮ್ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ ಗೆದ್ದಿದೆ. ಮಡಿಕೇರಿ ನಿವಾಸಿಯಾಗಿರುವ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರು ಕೊಡಗಿನ ಮೊದಲ ಮಹಿಳಾ ಚಿತ್ರ ನಿರ್ದೇಶಕರಾಗಿದ್ದಾರೆ. ಇಲ್ಲಿಯವರೆಗೂ ಅನೇಕ ಸಿನಿಮಾಗಳ ನಿರ್ದೇಶನ ಹಾಗೂ ನಿರ್ಮಾಣವನ್ನು ಅವರು ಮಾಡಿದ್ದಾರೆ. ಕನ್ನಡ ಚಿತ್ರೋದ್ಯಮದಲ್ಲಿ ಸಕ್ರಿಯರಾಗಿರುವ ಅವರು, ಅನೇಕ ಉತ್ತಮ ಚಿತ್ರಗಳನ್ನು ನಿರ್ಮಿಸಿದ್ದಾರೆ. 'ಕಂದೀಲು' ಗ್ರಾಮವೊಂದರ ಕಥೆಯಾ ಗಿದ್ದು, ರೈತ ಹಾಗೂ ಆತನ ಕುಟುಂಬದ ಸುತ್ತ ಸುತ್ತುತ್ತದೆ. ಈ ಸಿನಿಮಾ ಹಲವರ ಜೀವನಾಧಾರಿತ ಕಥೆಯಿಂದ ಪ್ರೇರಣೆ ಪಡೆದಿದೆ. ಅನೇಕ ಸವಾಲುಗಳ ನಡುವೆ ಬದುಕು ಎಷ್ಟು ಮಹತ್ವದ್ದು ಎಂಬುದನ್ನು ಅನೇಕ ಆಯಾಮಗಳಲ್ಲಿ ಚಿತ್ರ ವಿವರಿಸಲಿದೆ.

ಅಜ್ಜಿಯ ಹುಂಜ ಬೆಸ್ಟ್ ಸ್ಕ್ರಿಪ್ಟ್

ಮೈಸೂರು: ಮೈಸೂರಿನ ವೈದ್ಯ ಚಿದಾನಂದ ಎಸ್.ನಾಯ್ಕ್ ಅವರ 'ಸನ್‌ಫ್ಲವರ್ಸ್ ವೇರ್ ದಿ ಫಸ್ಟ್ ಒನ್ಸ್ ಟು ನೋ' ಬೆಸ್ಟ್ ಸ್ಕ್ರಿಪ್ಟ್ ವಿಭಾಗದಲ್ಲಿ ಪ್ರಶಸ್ತಿ ಪಡೆದುಕೊಂಡಿದೆ. ಈ ಚಿತ್ರ ಪ್ರತಿಷ್ಠಿತ ಕೇನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ 'ಲಾ ಸಿನೆಫ್ ಪ್ರಶಸ್ತಿ' ಮುಡಿಗೇರಿಸಿಕೊಂಡಿತ್ತು. ವೈದ್ಯರಾದ ಚಿದಾನಂದ ಎಸ್.ನಾಯ್ಕ್ ಸಿನಿಮಾದೆಡೆಗೆ ಆಕರ್ಷಿತರಾಗಿ ಪುಣೆಯ ಫಿಲ್ಮ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಸೇರಿದ್ದರು. ಅಲ್ಲಿರುವಾಗಲೇ ಕನ್ನಡ ಜಾನಪದ ಕಥೆಯನ್ನು ಒಳಗೊಂಡ ಈ ಚಿತ್ರವನ್ನು ನಿರ್ದೇಶಿಸಿದ್ದರು. ಅಜ್ಜಿಯೊಬ್ಬಳು ಹಳ್ಳಿಯಲ್ಲಿದ್ದ ಹುಂಜ ಕದಿಯುತ್ತಾಳೆ. ಆ ಬಳಿಕ ಆ ಊರಿನಲ್ಲಿ ಸೂರ್ಯೋದಯವೇ ಆಗುವುದಿಲ್ಲ. ಆಗ ಆ ಊರಿನವರು ಏನು ಮಾಡುತ್ತಾರೆ ಎಂಬುದೇ ಚಿತ್ರದ ಕಥೆಯಾಗಿದೆ.

ಭಾರತಕ್ಕೆ ಶೇ.25, ಪಾಕ್ ಗೆ ಶೇ.19 ಸುಂಕ | 70 ದೇಶಗಳಿಗೆ ಹೆಚ್ಚುವರಿ ಸುಂಕ

ಭಾರತಕ್ಕೆ ಅಧಿಕ, ಪಾಕ್‌ಗೆ ಕಡಿಮೆ: ಟ್ರಂಪ್ ಕಿತಾಪತಿ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದಕ್ಕೆ ನೀಡಿದ್ದ ಗಡುವಿಗೆ ಮುಂಚೆಯೇ 70 ವ್ಯಾಪಾರ ಪಾಲುದಾರ ದೇಶಗಳ ಮೇಲೆ ಹೆಚ್ಚುವರಿ ಸುಂಕದ ಬರೆ ಹಾಕಿದ್ದಾರೆ. ಹೆಚ್ಚುವರಿ ಆಮದು ಸುಂಕ ವಿಧಿಸುವ ಹೊಸ ಕಾರ್ಯಕಾರಿ ಆದೇಶಕ್ಕೆ ಟ್ರಂಪ್ ಶುಕ್ರವಾರ ಸಹಿ ಹಾಕಿದ್ದಾರೆ ಎಂದು ವರದಿಯಾಗಿದೆ.

70 ವ್ಯಾಪಾರ ಪಾಲುದಾರ ದೇಶಗಳ ಮೇಲೆ ಶೇ.10ರಿಂದ 41ರವರೆಗೂ ವಿವಿಧ ಪ್ರಮಾಣಗಳ ಲೆಕ್ಕ ದಲ್ಲಿ ಆಮದು ವಹಿವಾಟು ಹೆಚ್ಚುವರಿ ಸುಂಕ ವಿಧಿಸಲಾಗಿದೆ. ಮುಂದಿನ 7 ದಿನಗಳಲ್ಲಿ ಹೊಸ ಸುಂಕ ನೀತಿ ಜಾರಿಗೆ ಬರುತ್ತದೆ ಎಂದು ಶ್ವೇತಭವನ ತಿಳಿಸಿದೆ.

ಅಮೆರಿಕದಲ್ಲಿ ಭಾರತ ಸರಕು ದುಬಾರಿ: ಭಾರತದಿಂದ ಆಮದಾಗುವ ವಸ್ತುಗಳಿಗೆ ಅಮೆರಿಕದಲ್ಲಿ ಶೇ.25ರಷ್ಟು ಹೆಚ್ಚುವರಿ ಆಮದು ಸುಂಕ ಬೀಳಲಿರುವುದರಿಂದ ಆ.7ರಿಂದ ಅಮೆರಿಕ ಜನರಿಗೆ ಭಾರತದ ಉತ್ಪನ್ನಗಳು ದುಬಾರಿಯಾ ಗಲಿವೆ. ಇದೆಲ್ಲದರ ಪರಿಣಾಮವಾಗಿ ಅಮೆರಿಕದಲ್ಲಿ ಭಾರತದ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗಲಿದೆ. ಅದರಿಂದ ಭಾರತದ ಆರ್ಥಿಕತೆ ಮೇಲೆ ನಕಾರಾತ್ಮಕ ಪರಿಣಾಮವಾಗುವ ಸಾಧ್ಯತೆ ಇದೆ.

ಕೆಲಕಾಲ ವಿನಾಯಿತಿ: ಭಾರತದ ಜತೆಗಿನ ವ್ಯಾಪಾರ ಒಪ್ಪಂದ ಮಾತುಕತೆ ನಿರೀಕ್ಷಿತ ಪ್ರಗತಿ ಸಾಧಿಸದ ಹಿನ್ನೆಲೆಯಲ್ಲಿ ಶೇ.25 ಪ್ರಮಾಣದ ಸುಂಕ ವಿಧಿಸುವ ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ, ಇಲ್ಲಿ ಕೆಲವು ವಿನಾಯಿತಿಗಳನ್ನು ನೀಡಲಾಗಿದ್ದು. ಆ. 7 ರೊಳಗೆ ಹಡಗುಗಳಿಗೆ ಲೋಡ್ ಮಾಡಲಾದ ಮತ್ತು ಅ.5 ರೊಳಗೆ ಅಮೆರಿಕ ತಲುಪುವ ಸರಕುಗಳು ಹೊಸ ಸುಂಕ ದರಗಳಿಗೆ ಒಳಪಡುವುದಿಲ್ಲ ಎಂದು ಶ್ವೇತಭವನ ಪ್ರಕಟಿಸಿದೆ.

ಈ ಆದೇಶದಲ್ಲಿ ಹೆಸರಿಸದ ದೇಶಗಳು ನಿಗದಿತ ಶೇಕಡ 10ರ ಸುಂಕ ಎದುರಿಸಲಿವೆ. ಕೆನಡಾ ಮೇಲೆ ಸದ್ಯ ಶೇ.25ರಷ್ಟು ಸುಂಕ ವಿಧಿಸಲಾಗುತ್ತಿದ್ದು, ಅದನ್ನು ಶೇ.35ಗೆ ಹೆಚ್ಚಿಸಲಾಗುತ್ತದೆ ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ. ಈ ಮಧ್ಯೆ, ಚೀನಾ ಜತೆಗಿನ ವ್ಯಾಪಾರ ಒಪ್ಪಂದ ಇನ್ನೂ ಅಂತಿಮಗೊಂಡಿಲ್ಲ ಎಂದು ತಿಳಿದುಬಂದಿದೆ.

ಯುರೋಪ್‌ಗೆ ವಿನಾಯಿತಿ: ಶೇ.15ಕ್ಕಿಂತ ಹೆಚ್ಚಿನ ಅಮೆರಿಕ ಸುಂಕ ದರ ಇರುವ ಯುರೋಪಿಯನ್ ಒಕ್ಕೂಟ ದೇಶಗಳ ಉತ್ಪನ್ನಗಳಿಗೆ ಸುಂಕಗಳಿಂದ ವಿನಾಯಿತಿ ನೀಡಲಾಗುತ್ತದೆ. ಆದರೆ, ಶೇ.15ಕ್ಕಿಂತ ಕಡಿಮೆ ಸುಂಕ ದರಗಳನ್ನು ಹೊಂದಿರುವ ಸರಕುಗಳ ತೆರಿಗೆಗಳನ್ನು ಪ್ರಸ್ತುತ ಸುಂಕ ದರದಿಂದ ಶೇ.15ರಷ್ಟು ಕಡಿಮೆ ಮಾಡಲು ಸರಿ ಹೊಂದಿಸಲಾಗುತ್ತದೆ. ಯೂರೋಪಿಯನ್ ಒಕ್ಕೂಟದ 27 ಸದಸ್ಯ ದೇಶಗಳಿಗೆ ಅನ್ವಯವಾಗಲಿದೆ ಎಂದು ಶ್ವೇತಭವನ ತಿಳಿಸಿದೆ. ಹೊಸ ಸುಂಕ ನೀತಿ ಜಾರಿಗೂ ಮುನ್ನ ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಲು ಅಧ್ಯಕ್ಷ ಟ್ರಂಪ್ ಆ.1ರವರೆಗೂ ಅವಕಾಶ ನೀಡಿದ್ದರು.

ಯಾವ ಸರಕು ದುಬಾರಿ?

ಭಾರತದ ಮೇಲೆ ಶೇ.25 ತೆರಿಗೆ ವಿಧಿಸಿರುವ ಅಮೆರಿಕದ ಕ್ರಮದಿಂದ ಭಾರತದಿಂದ ರವಾನೆಯಾದ ಎಲೆಕ್ಟ್ರಾನಿಕ್ ಉಪಕರಣ, ವಾಹನ, ಬಿಡಿಭಾಗಗಳು, ರತ್ನಗಳು, ಜವಳಿ, ಕಬ್ಬಿಣ, ಸ್ಟೀಲ್, ಕೃಷಿ ಮತ್ತು ಸಾಗರ ಉತ್ಪನ್ನ ಸೇರಿದಂತೆ ಭಾರತದ ಹಲವು ಉತ್ಪನ್ನಗಳಿಗೆ ಹೆಚ್ಚುವರಿ ಸುಂಕದ ಬಿಸಿ ತಟ್ಟಲಿದೆ. ಈವರೆಗೆ ಅಮೆರಿಕದಲ್ಲಿ ಶೇ.8ರಷ್ಟು ತೆರಿಗೆ ಇದ್ದ ಭಾರತದ ಜವಳಿ ಉತ್ಪನ್ನಗಳ ಸುಂಕ ಇನ್ನು ಮುಂದೆ ಶೇ.33ಕ್ಕೆ ಏರಲಿದೆ. ಜತೆಗೆ, ರಷ್ಯಾದಿಂದ ಭಾರತ ಶಸ್ತ್ರಾಸ್ತ್ರ ಮತ್ತು ತೈಲವನ್ನು ತರಿಸಿಕೊಳ್ಳುತ್ತಿರುವುದಕ್ಕೆ ದಂಡ ವಿಧಿಸುವುದಾಗಿಯು ಟ್ರಂಪ್ ಘೋಷಿಸಿದ್ದಾರೆ. ಆದರೆ, ಅದರ ಪ್ರಮಾಣ ಎಷ್ಟು ಇರಲಿದೆ ಎಂದು ಇನ್ನೂ ಘೋಷಿಸಿಲ್ಲ.

ದೇಶ	ಸುಂಕ(ಶೇ.)
ಸಿರಿಯಾ	41
ಲಾವೋಸ್	40
ಮ್ಯಾನ್ಮಾರ್	40
ಸ್ವಿಜರ್ಲೆಂಡ್	39
ಇರಾಕ್	35
ಸೆರ್ಬಿಯಾ	35
ಅಲ್ಜೀರಿಯಾ	30
ಬೋಸ್ನಿಯಾ	30
ಲಿಬಿಯಾ	30
ದಕ್ಷಿಣ ಆಫ್ರಿಕಾ	30
ಬ್ರೂನಿ	25
ಕಝಾಕಿಸ್ತಾನ್	25
ಮೊಲ್ಡೊವಾ	25
ಟುನೀಶಿಯ	25
ಬಾಂಗ್ಲಾದೇಶ	20
ಶ್ರೀಲಂಕಾ	20
ತೈವಾನ್	20
ವಿಯೆಟ್ನಾಂ	20
ಮಲೇಷ್ಯಾ	19
ಇಂಡೋನೇಷ್ಯಾ	19
ಕಾಂಬೋಡಿಯ	19
ಫಿಲಿಪೈನ್ಸ್	19
ಥಾಯ್ಲೆಂಡ್	19
ನಿಕರಾಗುವಾ	18
ಇಸ್ರೇಲ್	15
ಜಪಾನ್	15
ಟರ್ಕಿ	15
ನೈಜೀರಿಯ	15
ಘಾನಾ	15

ಮಸ್ಸೂರಿ ಭೇಟಿಗೆ ನೋಂದಣಿ ಕಡ್ಡಾಯ

ಡೆಹರಾಡೂನ್: 'ಗಿರಿಧಾಮಗಳ ರಾಣಿ' ಮಸ್ಸೂರಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಇದೇ ಮೊದಲ ಬಾರಿಗೆ ಆನ್‌ಲೈನ್ ನೋಂದಣಿ ಕಡ್ಡಾಯಗೊಳಿಸಲಾಗಿದೆ.

ದಿನೇ ದಿನೇ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿರುವುದರಿಂದ, ಪ್ರವಾಸೋದ್ಯಮ ಉತ್ತಮವಾಗಿ ನಿರ್ವಹಿಸಲು ಮತ್ತು ಮಸ್ಸೂರಿ ನಗರದ ವಾಹನ ಸಂಚಾರ ದಟ್ಟಣೆ ತಗ್ಗಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರಾಖಂಡ ರಾಜ್ಯ ಪ್ರವಾಸೋದ್ಯಮ ಇಲಾಖೆ ಹೇಳಿದೆ. ಮಸ್ಸೂರಿಗೆ ಭೇಟಿ ನೀಡಲು ಬಯಸುವ ಪ್ರವಾಸಿಗರು ಮುಂಚಿತವಾಗಿಯೇ ಆಧಾರ್ ಕಾರ್ಡ್ ಬಳಸಿ ಪ್ರವಾಸೋದ್ಯಮ ಇಲಾಖೆ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿ ಕೊಳ್ಳಬೇಕಿದೆ. ಈ ಕ್ರಮ ಆ.1 ರಿಂದಲೇ ಜಾರಿಗೆ ಬಂದಿದೆ. ಈ ಕ್ರಮ ಪ್ರವಾಸಿಗರು ಮಸ್ಸೂರಿಗೆ ಬರುವುದನ್ನು ತಡೆಯುವ ಉದ್ದೇಶ ಹೊಂದಿಲ್ಲ. ಬದಲಾಗಿ, ಹೆಚ್ಚು ಸಂಘಟಿತ ರೀತಿಯ ಮತ್ತು ಸುಸ್ಥಿರ ಪ್ರವಾಸೋದ್ಯಮ ಉತ್ತೇಜಿಸುವತ್ತ ಮೊದಲ ಹೆಜ್ಜೆಯಾಗಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ನಿರ್ದೇಶನಗಳನ್ವಯ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಧೀರಜ್ ಗಾರ್‌ಬ್ಯಾಲ್ ಹೇಳಿದ್ದಾರೆ. ರಾಜ್ಯದ ಇತರೆ ಗಿರಿಧಾಮಗಳಿಗೂ ಭವಿಷ್ಯದಲ್ಲಿ ಆನ್‌ಲೈನ್ ನೋಂದಣಿ ಕಡ್ಡಾಯ ನಿಯಮ ಜಾರಿಗೆ ತರುವ ಸಾಧ್ಯತೆ ಇದೆ ಎಂದಿದ್ದಾರೆ.

ಚು.ಆಯೋಗದಿಂದ ವೇಳಾಪಟ್ಟಿ | ಧನಕರ್ ಸ್ಥಾನಕ್ಕೆ ಬರುವವರಾರು?

ಸೆ.9ಕ್ಕೆ ಉಪ ರಾಷ್ಟ್ರಪತಿ ಚುನಾವಣೆ- ಫಲಿತಾಂಶ

ದೆಹಲಿ: ದೇಶದ ಉಪ ರಾಷ್ಟ್ರಪತಿ ಆಯ್ಕೆಗೆ ಭಾರತ ಚುನಾವಣಾ ಆಯೋಗ ದಿನಾಂಕ ಘೋಷಿಸಿದ್ದು, ಸೆ.9ರಂದು ಚುನಾವಣೆ ನಡೆಯಲಿದೆ. ಜಗದೀಪ್ ಧನಕರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಯಾರು ಬರಲಿದ್ದಾರೆ? ಈ ಬಗ್ಗೆ ದೇಶದ ಜನರಲ್ಲಿ ಭಾರೀ ಕುತೂಹಲವಿದೆ.

ಉಪ ರಾಷ್ಟ್ರಪತಿ ಆಯ್ಕೆಗೆ ಸೆ.9ರಂದು ಮತದಾನ, ಅಂದೇ ಫಲಿತಾಂಶ ಪ್ರಕಟ. ಆ.7ರಂದು ಅಧಿಸೂಚನೆ ಪ್ರಕಟ, ಆ.21ರಂದು ನಾಮ ನಿರ್ದೇಶನ ಸಲ್ಲಿಕೆಗೆ ಕಡೆದಿನ. ಆ.22ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಆ.25 ಉಮೇದುವಾರಿಕೆ ಹಿಂಪಡೆಯಲು ಕಡೆದಿನ ಎಂದು ಆಯೋಗ ತಿಳಿಸಿದೆ. 17ನೇ ಉಪ ರಾಷ್ಟ್ರಪತಿ ಚುನಾವಣೆ 1952ರ ರಾಷ್ಟ್ರಪತಿ ಮತ್ತು ಉಪ ರಾಷ್ಟ್ರಪತಿ ಚುನಾವಣಾ ಕಾಯಿದೆಯ ನಿಯಮಗಳಡಿ ನಡೆಯಲಿದೆ. ಸೆ.9ರಂದು ಆಯ್ಕೆಯಾಗಿ ಉಪ ರಾಷ್ಟ್ರಪತಿ ಹುದ್ದೆ ವಹಿಸಿಕೊಂಡ ವರಿಗೆ 5 ವರ್ಷ ಪೂರ್ಣ ಅವಧಿ ಇರಲಿದೆ.

ಬಲಾಬಲ: ಲೋಕಸಭೆ-ರಾಜ್ಯಸಭೆ ಸದಸ್ಯ ಬಲ 782. ಉಪ ರಾಷ್ಟ್ರಪತಿ ಚುನಾವಣೆ ಗೆಲ್ಲಲು 392 ಮತಗಳ ಅಗತ್ಯವಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಎರಡೂ ಸದನಗಳಲ್ಲಿ ಒಟ್ಟು 422 ಸದಸ್ಯ ಬಲದೊಂದಿಗೆ ಬಹುಮತ ಹೊಂದಿದೆ. ಪ್ರತಿಪಕ್ಷಗಳ 'ಇಂಡಿ' ಒಕ್ಕೂಟದಲ್ಲಿ 313 ಸದಸ್ಯರಿದ್ದು, ಪ್ರತಿಪಕ್ಷಗಳು ಒಮ್ಮತದ ಅಭ್ಯರ್ಥಿ ಕಣಕ್ಕಿಳಿಸುವ ಸಾಧ್ಯತೆಯಿದೆ. ಸದನಗಳ ನಾಮನಿರ್ದೇಶಿತ ಸದಸ್ಯರೂ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಲಿದ್ದಾರೆ.

ಆಯ್ಕೆ ಹೇಗೆ?

ಪಕ್ಷಗಳ ವಿಪ್ ಅಗತ್ಯವಿಲ್ಲದೆ ಗೌಪ್ಯ ಮತದಾನ ನಡೆಯುತ್ತದೆ. ರಾಷ್ಟ್ರಪತಿ ಚುನಾವಣೆಯಂತೆಯೇ ವಿಧಾನಸಭೆ ಸದಸ್ಯರಿಗೆ ಮತದಾನ ಅವಕಾಶ ವಿಲ್ಲ. ಏಕಮತದಾನ ವರ್ಗಾವಣೆ ವಿಧಾನದಲ್ಲಿ ಪ್ರತಿ ಮತದಾರ ಅಭ್ಯರ್ಥಿಗಳನ್ನು ಪ್ರಾಶಸ್ತ್ಯ ಕ್ರಮದಲ್ಲಿ ಶ್ರೇಣೀಕರಿಸುತ್ತಾರೆ. ಪ್ರಾಶಸ್ತ್ಯವನ್ನು ಸಂಖ್ಯೆ (ಮೊದಲ ಪ್ರಾಶಸ್ತ್ಯಕ್ಕೆ 1, 2ನೇ ಪ್ರಾಶಸ್ತ್ಯಕ್ಕೆ 2) ರೀತಿ ಗುರುತಿಸುತ್ತಾರೆ. ಮತಪತ್ರವು ಮಾನ್ಯ ವಾಗಲು ಮೊದಲ ಪ್ರಾಶಸ್ತ್ಯ ಗುರುತಿಸುವುದು ಕಡ್ಡಾಯ. ನಂತರದ ಆದ್ಯತೆ ಐಚ್ಛಿಕ. ಎಣಿಕೆ ವೇಳೆ ಎಲ್ಲಾ ಅಭ್ಯರ್ಥಿಗಳಿಗೆ ಸಿಗುವ ಮೊದಲ ಪ್ರಾಶಸ್ತ್ಯದ ಮತಗಳನ್ನು ಮೊದಲಿಗೇ ಎಣಿಸಲಾಗುತ್ತದೆ. ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ಬಹುಮತ ದೊರೆಯದಿದ್ದರೆ 2ನೇ ಪ್ರಾಶಸ್ತ್ಯದ ಮತ ಪರಿಗಣಿಸಲಾಗುತ್ತದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203

ಸಂ.: DPA/TP/CLU/09/2025-26 ದಿನಾಂಕ: 31.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಸರ್ಕಾರದ ಅಧಿಸೂಚನೆಯಂತೆ ಪರಿಗಣಿಸಲಾದ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಹೊನ್ನಪ್ಪ ವೆಂಕಪ್ಪ ಬಂಡಿ ಬಿನ್	ದೊಡ್ಡಬಳ್ಳಾಪುರ	ಮಧುರೆ	ರಾಮದೇವನಹಳ್ಳಿ	162/2	1-32	ವ್ಯವಸಾಯ	ವಸತಿ
2.	ಲೇಟ್ ವೆಂಕಪ್ಪ ಹೊನ್ನಪ್ಪ ಬಂಡಿ,	ದೊಡ್ಡಬಳ್ಳಾಪುರ	ಮಧುರೆ	ರಾಮದೇವನಹಳ್ಳಿ	162/4	1-26	ವ್ಯವಸಾಯ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ದಿನನಿತ್ಯ ಆರೋಪ ನಿರ್ಲಕ್ಷಿಸಿ: ಚುನಾವಣೆ ಆಯೋಗ

ದೆಹಲಿ: ಬಿಹಾರ ವಿಧಾನಸಭಾ ಚುನಾವಣೆ ಸಮೀಪದಲ್ಲಿರುವಾಗ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪದೇ ಪದೇ ಮಾಡುತ್ತಿರುವ ಮತ ಕಳವು ಆರೋಪಕ್ಕೆ ಚುನಾವಣಾ ಆಯೋಗ, ಇವೆಲ್ಲಾ ಅಧಾರ ರಹಿತ ಮತ್ತು ಬೇಜವಾಬ್ದಾರಿ ಆರೋಪಗಳು ಎಂದು ಪ್ರತಿಕ್ರಿಯೆ ನೀಡಿದೆ. ದಿನನಿತ್ಯವೂ ಇಂತಹ ಆರೋಪಗಳು ಮತ್ತು ಬೆದರಿಕೆಗಳು ಕೇಳಿ ಬರುತ್ತ ಲೇ ಇರುತ್ತವೆ. ಅವುಗಳಿಗೆಲ್ಲಾ ಗಮನ ಕೊಡಬಾರದು ಎಂದು ಚುನಾವಣಾ ಅಧಿಕಾರಿಗಳಿಗೆ ಆಯೋಗ ಸಲಹೆ ನೀಡಿದೆ. ಚುನಾವಣಾ ಅಧಿಕಾರಿಗಳು ನಿಷ್ಪಕ್ಷಪಾತವಾಗಿ, ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ಕೆಲಸ ಮಾಡುವುದನ್ನು ಮುಂದುವರಿಸಬೇಕು. ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯುವುದು, ದೇಶಾದ್ಯಂತ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಯುವಂತೆ ಖಚಿತಪಡಿಸುವುದು ನಮ್ಮ ಆದ್ಯತೆಯಾಗಿದೆ ಎಂದೂ ಆಯೋಗ ಹೇಳಿದೆ. 2023ರ ಮಧ್ಯಪ್ರದೇಶ ವಿಧಾನಸಭಾ ಚುನಾವಣೆ, ನಂತರ ಲೋಕಸಭಾ ಚುನಾವಣೆ ಮತ್ತು 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ಅಕ್ರಮಗಳ ಬಗ್ಗೆ ತಮ್ಮ ಪಕ್ಷಕ್ಕೆ ಅನುಮಾನಗಳಿವೆ ಎಂದು ರಾಹುಲ್ ಹೇಳಿದ್ದರು.

ಸೈಬರ್ ಕ್ರೈಂ: ಭಾರತೀಯರಿಗೆ ರು.23,000 ಕೋಟಿ ವಂಚನೆ

ದೆಹಲಿ: ಇತ್ತೀಚೆಗೆ ದೇಶಾದ್ಯಂತ ಸೈಬರ್ ಕ್ರೈಂ ಪ್ರಕರಣಗಳು ಹೆಚ್ಚುತ್ತಿವೆ. ಸೈಬರ್ ವಂಚಕರಿಂದ ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆಯಲ್ಲಿ ಭಾರೀ ಏರಿಕೆ ಕಂಡು ಬಂದಿದೆ.ಬ್ಯಾಂಕ್ ಮ್ಯಾನೇಜರ್, ವೈದ್ಯರು, ಉಪನ್ಯಾಸಕರು ಸೇರಿದಂತೆ ವಿದ್ಯಾವಂತರೆ ಸೈಬರ್ ವಂಚಕರಿಂದ ಹೆಚ್ಚಾಗಿ ಮೋಸಕ್ಕೆ ಒಳಗಾಗುತ್ತಿದ್ದಾರೆ. 2024ರಲ್ಲಿ ದೇಶದ ಜನರು 22,842 ಕೋಟಿ ರು.ಗಳನ್ನು ಸೈಬರ್ ಅಪರಾಧಿಗಳ ಚಾಲಾಕಿತನದಿಂದಾಗಿ ಕಳೆದುಕೊಂಡಿದ್ದಾರೆ.2023ರಲ್ಲಿ 15.6 ಲಕ್ಷ ಮತ್ತು 2024ರಲ್ಲಿ 20 ಲಕ್ಷ ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. 2019ರಲ್ಲಿ ಅಂಕಿ ಅಂಶಕ್ಕೆ ಹೋಲಿಸಿದರೆ 2024ರ ವೇಳೆಗೆ ಸೈಬರ್ ಅಪರಾಧಗಳ ಪ್ರಮಾಣ ಹತ್ತು ಪಟ್ಟು ಹೆಚ್ಚಾಗಿದೆ. ಡಿಜಿಟಲೀಕರಣ ಬಳಿಕ ಹಣ ಕಳೆದುಕೊಳ್ಳುವವರ ಸಂಖ್ಯೆಯೂ ಹೆಚ್ಚಾಗಿದೆ ಎಂದು ವರದಿ ಹೇಳಿದೆ. ಡಿಜಿಟಲ್ ಅರೆಸ್ಟ್ 2024ರಲ್ಲಿ ಬಹು ದೊಡ್ಡ ಸೈಬರ್ ಅಪರಾಧ ಎನಿಸಿಕೊಂಡಿದೆ. ಆ ವರ್ಷದ ಸೈಬರ್ ವಂಚ ನೆಯ 22,842 ಕೋಟಿ ರು.ಗಳಲ್ಲಿ ಶೇ.50ರಷ್ಟು ಹಣವನ್ನು ಜನರು ಡಿಜಿಟಲ್ ಅರೆಸ್ಟ್ ಭಯದಲ್ಲೇ ಕಳೆದುಕೊಂಡಿದ್ದಾರೆ. ಉಳಿದಂತೆ ಷೇರು ಮಾರುಕಟ್ಟೆ ಮೋಸ, ಡೀಪ್ ಸೀಕ್, ಹನಿಟ್ರ್ಯಾಪ್ ವಂಚಕರ ಬಲೆಗೆ ಬಿದ್ದು ಜನರು ಹಣ ಕಳೆದುಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಚೇಂಜ್ ಆಫ್ ಗಾರ್ಡ್ 3 ದಿನ ಅಲ್ಪವಿರಾಮ

ದೆಹಲಿ: ರಾಷ್ಟ್ರಪತಿ ಭವನದಲ್ಲಿ ಆ.2 ಮತ್ತು 9 ಹಾಗೂ 16ರಂದು 'ಚೇಂಜ್ ಆಫ್ ಗಾರ್ಡ್' ಕಾರ್ಯಕ್ರಮ ಇರುವುದಿಲ್ಲ ಎಂದು ರಾಷ್ಟ್ರಪತಿ ಭವನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಚೇಂಜ್ ಆಫ್ ಗಾರ್ಡ್ ಸೇನಾ ಸಂಪ್ರದಾಯವಾಗಿದ್ದು, ಅಧ್ಯಕ್ಷರ ಅಂಗರಕ್ಷಕರ ಹೊಸ ಗುಂಪು ಅಧಿಕಾರ ವಹಿಸಿಕೊಳ್ಳಲು ಪ್ರತಿವಾರ ನಡೆಯುತ್ತದೆ. ಮುಂಬರುವ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ 'ಗಾರ್ಡ್ ಆಫ್ ಆನರ್' ತಂಡ ಪೂರ್ವಾಭ್ಯಾಸದಲ್ಲಿ ತೊಡಗಲಿದೆ. ಹಾಗಾಗಿ ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ವಾರಕ್ಕೊಮ್ಮೆ ಜರುಗುವ ಕಾರ್ಯಕ್ರಮ ನಡೆಯುವುದಿಲ್ಲ ಎಂದು ರಾಷ್ಟ್ರಪತಿ ಭವನ ಹೇಳಿಕೆಯಲ್ಲಿ ತಿಳಿಸಿದೆ.

ಫಿಲಿಪೈನ್ ಅಧ್ಯಕ್ಷ ಭಾರತ ಪ್ರವಾಸ

ದೆಹಲಿ: ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡೊ ಆರ್. ಮಾರ್ಕೋಸ್ ಜೂನಿಯರ್ ಅವರು ಆ.4ರಿಂದ 8ರವರೆಗೆ ಭಾರತ ಪ್ರವಾಸ ಹಮ್ಮಿಕೊಂಡಿದ್ದಾರೆ. ಈ ಸಂದರ್ಭ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ. ನಂತರ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಕೇರಳ ಸ್ಟೋರಿ ಚಿತ್ರಕ್ಕೆ ಪ್ರಶಸ್ತಿ: ಸಿ.ಎಂ ಟೀಕೆ

ತಿರುವನಂತಪುರಂ: ಸುದೀಪ್ತೋ ಸೇನ್ ನಿರ್ದೇಶನದ 'ದಿ ಕೇರಳ ಸ್ಟೋರಿ' ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ನೀಡುವ ನಿರ್ಧಾರವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶುಕ್ರವಾರ ತೀವ್ರವಾಗಿ ಟೀಕಿಸಿದ್ದಾರೆ, ತೀರ್ಪುಗಾರರು ಭಾರತೀಯ



ಚಿತ್ರರಂಗದ ಹೆಮ್ಮೆಯ ಸಂಪ್ರದಾಯಕ್ಕೆ ದ್ರೋಹ ಬಗೆದಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ ಸತೀಶನ್ ಸಹ 'ದಿ ಕೇರಳ ಸ್ಟೋರಿ' ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ನೀಡುವ ನಿರ್ಧಾರವನ್ನು ಟೀಕಿಸಿದ್ದು, ಬಿಜೆಪಿ ಸರ್ಕಾರ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ದ್ವೇಷ ಅಭಿಯಾನದ ಭಾಗವಾಗಿ ಬಳಸುತ್ತಿದೆ ಎಂದು ಆರೋಪಿಸಿದ್ದಾರೆ. ಚಲನಚಿತ್ರ ನಿರ್ಮಾಪಕ ಸುದೀಪ್ತೋ ಸೇನ್ ಅವರ 'ದಿ ಕೇರಳ ಸ್ಟೋರಿ' ಚಿತ್ರಕ್ಕೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ದೊರೆತಿದ್ದು, ಈ ಚಿತ್ರಕ್ಕೆ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿಯೂ ಸಿಕ್ಕಿದೆ. ಚಿತ್ರವು ಕೇರಳದಲ್ಲಿ ಮಹಿಳೆಯರನ್ನು ಭಯೋತ್ಪಾದಕ ಗುಂಪು ಇಸ್ಲಾಮಿಕ್, ಬಲವಂತವಾಗಿ ಮತಾಂತರಿಸಿ ನೇಮಕ ಮಾಡಿಕೊಳ್ಳುತ್ತಿರುವುದನ್ನು ಚಿತ್ರಿಸಿದ್ದಕ್ಕಾಗಿ ಸುದ್ದಿಯಾಗಿತ್ತು.

ಚು. ಆಯೋಗ ವಿರುದ್ಧ ರಾಹುಲ್ ಮತ್ತೆ ವಾಗ್ದಾಳಿ

ದೆಹಲಿ: ಕಾಂಗ್ರೆಸ್ ಸಂಸದ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಭಾರತೀಯ ಚುನಾವಣಾ ಆಯೋಗದ ಮೇಲಿನ ತಮ್ಮ ಟೀಕೆಯನ್ನು ತೀವ್ರಗೊಳಿಸಿದ್ದಾರೆ, ಬಿಜೆಪಿಗಾಗಿ ಚುನಾವಣಾ ಆಯೋಗ ಮತ ಕಳ್ಳತನದಲ್ಲಿ ತೊಡಗಿದೆ ಎಂದು ಆರೋಪಿಸಿದ್ದಾರೆ. ಸಂಸತ್ತಿನ ಆವರಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ, ಚುನಾವಣೆ ನಡೆಯಲಿರುವ ಬಿಹಾರದಲ್ಲಿ ವಿವಾದಾತ್ಮಕ ವಿಶೇಷ ತೀವ್ರ ಪರಿಷ್ಕರಣೆ ಅಭಿಯಾನ ಬಗ್ಗೆ ಕೇಳಿದಾಗ, ಚುನಾವಣಾ ಆಯೋಗ ಮತ ಕಳ್ಳತನದಲ್ಲಿ ಭಾಗಿಯಾಗಿರುವುದಕ್ಕೆ ನಮ್ಮ ಬಳಿ ಸ್ಪಷ್ಟವಾದ ನೇರ ಸಾಕ್ಷಿಯಿದೆ ಎಂದು ಹೇಳಿದ್ದಾರೆ. 'ಮತ ಕಳ್ಳತನ ನಡೆಯುತ್ತಿದೆ ಎಂದು ನಾವು ಹೇಳಿದ್ದೇವೆ, ಚುನಾವಣಾ ಆಯೋಗವು ಮತ ಕಳ್ಳತನದಲ್ಲಿ ಭಾಗಿಯಾಗಿದೆ ಎಂಬುದಕ್ಕೆ ನಮ್ಮ ಬಳಿ ಸ್ಪಷ್ಟ ಪುರಾವೆಯಿದೆ. ನೂರಕ್ಕೆ ನೂರರಷ್ಟು ಪುರಾವೆಗಳೊಂದಿಗೆ ಹೇಳುತ್ತಿದ್ದೇನೆ. ಪುರಾವೆಗಳನ್ನು ಬಿಡುಗಡೆ ಮಾಡಿದ ತಕ್ಷಣ, ಚುನಾವಣಾ ಆಯೋಗವು ಬಿಜೆಪಿಗೆ ಹೇಗೆ ಮತ ಕಳ್ಳತನ ಮಾಡಲು ಕೆಲಸ ಮಾಡುತ್ತಿದೆ ಎಂದು ಇಡೀ ರಾಷ್ಟ್ರಕ್ಕೆ ಗೊತ್ತಾಗುತ್ತದೆ' ಎಂದರು. ಚುನಾವಣಾ ಆಯೋಗದ ದುಷ್ಕೃತ್ಯದ ಪುರಾವೆಗಳನ್ನು ತನಿಖೆ ಮಾಡಿದ ಕಾಂಗ್ರೆಸ್ ಆಟಂಬಾಬ್‌ನ್ನು ಸಿಡಿಸಿದೆ, ಟೀಕೆಯನ್ನು ದೇಶದ್ರೋಹದ ಕೃತ್ಯ ಎಂದು ಕರೆಯುತ್ತಾರೆ ಎಂದು ರಾಹುಲ್ ಗಾಂಧಿ ಎಂದು ಗುಡುಗಿದರು.

ರಾಜ್ಯಸಭೆಯಲ್ಲೇಕೆ ಸಿಐಎಸ್ಎಫ್

ಪ್ರತಿಪಕ್ಷ ನಾಯಕ ಖರ್ಗೆ ತೀವ್ರ ಆಕ್ಷೇಪ | ರಕ್ಷಣೆಯ ಭಾಗ ಎಂದ ಸರಕಾರ

ದೆಹಲಿ: ರಾಜ್ಯಸಭೆ ಸದನದ ಬಾವಿಯಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್ಎಫ್) ಸಿಬ್ಬಂದಿ ನಿಯೋಜನೆ ವಿರುದ್ಧ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಕಲಾಪ ವೇಳೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಕೆಲವು ಪ್ರಮುಖ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸದಂತೆ ಪ್ರತಿಪಕ್ಷಗಳ ಸಂಸದರನ್ನು ತಡೆಯಲಾಗುತ್ತಿದೆ ಎಂದು ಆರೋಪಿಸಿದರು.

ರಾಜ್ಯಸಭೆ ಕಲಾಪಕ್ಕೆ ಅಡ್ಡಿಪಡಿಸಲು ಕೆಲ ಸಂಸದರು ಆಕ್ರಮಣಕಾರಿಯಾಗಿ ವರ್ತಿಸಿದ್ದರು. ಸಂಸದರು ಸದನದೊಳಗೆ ಸೆಕ್ರೆಟರಿಯೇಟ್ ಮೇಜಿನ ಮೇಲೂ ಜಿಗಿದ ಪ್ರಕರಣಗಳಿವೆ. ಕೆಲ ಸಂಸದರು ಕಲಾಪಕ್ಕೆ ಅಡ್ಡಿಪಡಿಸಲು ಆಕ್ರಮಣಕಾರಿಯಾಗಿ ವರ್ತಿಸಿದ ಮಾಹಿತಿಯೂ ಇದೆ. ಆಗೆಲ್ಲಾ ಸದಸ್ಯರನ್ನು ಮಾರ್ಷಲ್‌ಗಳು ತಡೆಯಲು ಬಹಳ ಕಷ್ಟ ಪಡಬೇಕಾಯಿತು. ಅಲ್ಲದೇ, ಯುವಕರಿಬ್ಬರು ಲೋಕಸಭೆ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ನುಸುಳಿಕೊಂಡು ಬಂದು ಸಂಸದರತ್ತ ಹೊಗೆ ಬಾಂಬ್ ಸಿಡಿಸಿದ ಘಟನೆ ನಂತರ ಸಿಐಎಸ್ಎಫ್ ಸಿಬ್ಬಂದಿ ನಿಯೋಜನೆ ಅನಿವಾರ್ಯವಾಯಿತು. ಅವರು ಈಗ ಸದನದ ಭದ್ರತೆಯ ಭಾಗವಾಗಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿವರಿಸಿದರು.

ಅಲ್ಲದೇ, ಇದೇನೂ ಸರಕಾರದ ಕ್ರಮವಲ್ಲ, ಉಭಯ ಸದನಗಳ ಅಧ್ಯಕ್ಷರು ತೆಗೆದುಕೊಂಡ ನಿರ್ಧಾರ ಎಂದು ಸಚಿವರು ಖರ್ಗೆ ಆರೋಪಕ್ಕೆ ಪ್ರತಿಕ್ರಿಯಿಸಿದರು. ನಿರ್ದಿಷ್ಟವಾಗಿ ಏನು ನಿರ್ಧಾರವಾಗಿದೆ ಎಂಬ ಬಗ್ಗೆ ರಾಜ್ಯಸಭೆಯಿಂದ ಮಾಹಿತಿ ಪಡೆಯುತ್ತಿದ್ದೇನೆ. ಪ್ರತಿಪಕ್ಷಗಳಿಗೆ ಯಾವುದೇ ಸಮಸ್ಯೆಯಿದ್ದರೆ ಸಭಾಧ್ಯಕ್ಷರ ಜತೆ ಸಮಾಲೋಚಿಸುವೆ ಎಂದು ಸಚಿವರು ಸದನಕ್ಕೆ ಭರವಸೆ ನೀಡಿದರು.

2023ರ ಡಿಸೆಂಬರ್‌ನಲ್ಲಿ ಅಪರಿಚಿತರಿಬ್ಬರು ಲೋಕಸಭೆಗೆ ನುಗ್ಗಿದ ನಂತರ ಸಂಸತ್ತಿನ ಸಮಗ್ರ ಭದ್ರತಾ ವ್ಯವಸ್ಥೆಯಲ್ಲಿ ಬದಲಾವಣೆ ತಂದು ಕೇಂದ್ರ ಸಶಸ್ತ್ರ ಪಡೆ(ಸಿಐಎಸ್ಎಫ್) ನಿಯೋಜಿಸಲಾಗಿದೆ. ಸಂಸತ್ತಿನ ಆವರಣದೊಳಗಿನ ಆಡಳಿತ ಕಾರ್ಯವಿಧಾನ ಕೇಂದ್ರ ಸರಕಾರದಡಿ ಬರುವುದಿಲ್ಲ. ಆದ್ದರಿಂದ ಈ ಕುರಿತು ನಾನು ನಿಖರವಾಗಿ ಪ್ರತಿಕ್ರಿಯಿಸಲು ಸಾಧ್ಯವಿಲ್ಲ ಎಂದರು.

ಸಂಸದರು ತಮ್ಮ ಹಕ್ಕು ಬಳಸಿಕೊಳ್ಳುವ ಹಾದಿ ಅಥವಾ ಅವರು ಪ್ರಶ್ನೆ ಕೇಳುವುದಕ್ಕೆ ಅಡ್ಡಿಯಾಗುವಂತೆ ಸರಕಾರ ಏನನ್ನೂ ಮಾಡುವುದಿಲ್ಲ. ಆದರೆ ಇತರರು ಮಾತನಾಡುವುದನ್ನು ತಡೆಯುವ ಮತ್ತು ಇತರ ಸದಸ್ಯರ ಹಕ್ಕುಗಳನ್ನು ಕಸಿದುಕೊಳ್ಳುವ ಹಕ್ಕು ಅವರಿಗೆ ಇಲ್ಲ. ಸಂಸತ್ತಿನ ಭದ್ರತೆ ಗಂಭೀರ ಸಮಸ್ಯೆಯಾಗಿದೆ. ರಾಜ್ಯಸಭೆ ಸದನವನ್ನು ಸಭಾಪತಿ, ಉಪ ಸಭಾಪತಿ ಮೇಲ್ವಿಚಾರಣೆ ಮಾಡುತ್ತಾರೆಯೇ ಹೊರತು ಸರಕಾರವಲ್ಲ.

–ಕಿರಣ್ ರಿಜಿಜು ಕೇಂದ್ರ ಸಚಿವ

ರಾಜ್ಯಸಭೆಯಲ್ಲಿ ಸದಸ್ಯರು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕೇಳುತ್ತಿರುವಾಗ ಸದನದಲ್ಲಿ ಸಿಐಎಸ್ಎಫ್ ಸಿಬ್ಬಂದಿ ಕಂಡು ಆಘಾತವಾಗಿದೆ ಎಂದು ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ರಾಜ್ಯಸಭಾ ಉಪಸಭಾಪತಿ ಹರಿವಂಶ್ ಅವರಿಗೆ ಪತ್ರ ಬರೆದಿದ್ದಾರೆ.

ಮಡಿಕೇರಿಯ ಯಶೋಧ ಪ್ರಕಾಶ್ ನಿರ್ದೇಶನದ 'ಕಂದೀಲು' ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಚಿತ್ರ ರಾಷ್ಟ್ರಪ್ರಶಸ್ತಿ ಗರಿ

ಉತ್ತಮ ಕಥೆಯೇ ಕಂದೀಲು ಚಿತ್ರದ ಯಶಸ್ಸಿಗೆ ಕಾರಣ

ಅನಿಲ್ ಎಚ್.ಟಿ., ಮಡಿಕೇರಿ

ದೆಹಲಿ: 2023 ನೇ ಸಾಲಿನ 71 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಪೈಕಿ ಈ ಬಾರಿ ಕನ್ನಡದ 'ಕಂದೀಲು' ಚಿತ್ರಕ್ಕಾಗಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ಅತ್ಯುತ್ತಮ ಪ್ರಾದೇಶಿಕ ಚಿತ್ರಕ್ಕಾಗಿ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಕೊಡಗಿನ ಮಹಿಳಾ ನಿರ್ದೇಶಕಿ, ನಿರ್ಮಾಪಕಿ ಎಂಬ ಹಿರಿಮೆಗೆ ಯಶೋಧ ಪಾತ್ರರಾಗಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿ ದೊರಕಿರುವ ಬಗ್ಗೆ ವಿಶ್ವವಾಣಿಯೊಂದಿಗೆ ಹರ್ಷ ವ್ಯಕ್ತಪಡಿಸಿದ ಯಶೋಧ ಪ್ರಕಾಶ್, 'ಇಂಥ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದ್ದು ಬಹಳ ಸಂತೋಷವಾಗುತ್ತಿದೆ. ನನ್ನ ನಿರ್ಮಾಣ, ನಿರ್ದೇಶನದಲ್ಲಿ ಕೌಮುದಿ ಚಿತ್ರದ ಬಳಿಕ ನಿರ್ಮಿಸಿ, ನಿರ್ದೇಶಿಸಿದ್ದ ಎರಡನೇ ಸಿನಿಮಾ ಇದಾಗಿದ್ದು, ಉತ್ತಮ ಕಥೆ ಹೊಂದಿದೆ. ಹೀಗಾಗಿ ಕಂದೀಲು ಇಂಥದ್ದೊಂದು ಸಾಧನೆ ಮಾಡಬಹುದು ಎಂಬ ನಿರೀಕ್ಷೆ ಇತ್ತು ಎಂದು ಹೇಳಿದರು.

ಬೆಂಗಳೂರು ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿಯೂ ಪ್ರಶಸ್ತಿ ಪಡೆದಿತ್ತು. ಕೊಡವ ಮಹಿಳಾ ನಿರ್ದೇಶಕರ ಪ್ರಥಮ ಚಿತ್ರ ಎಂಬ ಹೆಗ್ಗಳಿಕೆಗೂ ಕಂದೀಲು ಭಾಜನವಾಗಿತ್ತು ಎಂದೂ ಅವರು ಮಾಹಿತಿ ನೀಡಿದರು.

ಸಾಕಷ್ಟು ಸಿನಿಮಾಗಳ ಪೈಪೋಟಿ ನಡುವೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡ ಕಂದೀಲು ಚಿತ್ರದ ಎಲ್ಲಾ ಕಲಾವಿದರು, ತಂಡಕ್ಕೆ ಯಶಸ್ಸು ಸಲ್ಲುತ್ತದೆ ಎಂದು ಹೇಳಿದ ಯಶೋಧ ಪ್ರಕಾಶ್, ತನ್ನ ತಂದೆ ದಿ. ಮಂದೆಯಂಡ ಅಯ್ಯಪ್ಪ ಮತ್ತು ಮಂದೆಯಂಡ ರಾಧಾ ಅಯ್ಯಪ್ಪ ಅವರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ ಎಂದು ಭಾವುಕರಾಗಿ ನುಡಿದರು. ಅಂತೆಯೇ ಪತಿ ಕೊಟ್ಟುಕತ್ತೀರ ಪ್ರಕಾಶ್ ಪ್ರೋತ್ಸಾಹಕ್ಕೆ ಋಣಿ ಎಂದೂ ಯಶೋಧ ಹೇಳಿದರು.

ಕೊಡವ ಆಚಾರ ವಿಚಾರವನ್ನೂ ಚಿತ್ರ ಒಳಗೊಂಡಿದೆ. 'ಕಂದೀಲು' ಚಿತ್ರ ಇನ್ನೂ ಸಿನಿಮಾ ಮಂದಿರಗಳಲ್ಲಿ ತೆರೆಕಂಡಿಲ್ಲ, ಆದರೂ ಅಂತಾರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಚಿತ್ರೋತ್ಸವಗಳಲ್ಲಿ ಪ್ರದರ್ಶಿತಗೊಂಡು ವಿಮರ್ಶಕರಿಂದ ಅತ್ಯುತ್ತಮ ಸ್ಪಂದನ ಪಡೆದಿತ್ತು. ಮುಂದಿನ 2–3 ತಿಂಗಳಲ್ಲಿ 'ಕಂದೀಲು' ಚಿತ್ರ ಎಲ್ಲೆಡೆ ತೆರೆಕಾಣಲಿದೆ ಎಂದೂ ಯಶೋಧ ಪ್ರಕಾಶ್ 'ವಿಶ್ವವಾಣಿ'ಗೆ ಮಾಹಿತಿ ನೀಡಿದರು.

ಚಿತ್ರದಲ್ಲಿ ಬಾಲ ಪ್ರತಿಭೆ ಈರಮಂಡ ಖುಷಿ ಕಾವೇರಮ್ಮ ಮುಖ್ಯ ಪಾತ್ರದಲ್ಲಿದ್ದರೆ, ಪ್ರಭಾಕರ್ ಕುಂದರ್, ಈರಮಂಡ ಹರಿಣಿ ವಿಜಯ್, ವನಿತಾ ರಾಜೇಶ್, ಮತ್ತಿತರರು ಕಂದಿಲು ತಾರಾಗಣದಲ್ಲಿದ್ದಾರೆ.

ಚಿತ್ರದ ಕಥಾ ಹಂದರ

ಈ ಸಲ ರಾಷ್ಟ್ರೀಯ ಪ್ರಶಸ್ತಿ ವಿಭಾಗದಲ್ಲಿ 'ಕಂದೀಲು' ಚಿತ್ರ ಮಾತ್ರ ಪ್ರಶಸ್ತಿಯನ್ನು ಪಡೆದ ಕನ್ನಡ ಚಿತ್ರವಾಗಿರುವುದು ವಿಶೇಷವಾಗಿದೆ. ಜಮೀನು ಉಳಿಸಿಕೊಳ್ಳುವ ತಂದೆ ಪಾತ್ರವು ಚಿತ್ರದಲ್ಲಿ ಪ್ರಮುಖ ಕಥಾ ಪಾತ್ರವಾಗಿದೆ. ಸೌದಿಯಲ್ಲಿ ಮರಣವನ್ನಪ್ಪಿದ ಮಗನ ಕಥೆಯೂ ಇಲ್ಲಿದೆ. ಜಮೀನು ಉಳಿಸಿಕೊಳ್ಳುವುದೋ, ಮಗನ ಪಾರ್ಥಿವ ಶರೀರ ಮರಳಿ ಸ್ವಗ್ರಾಮಕ್ಕೆ ತರುವುದೋ ಎಂಬ ಗೊಂದಲದಲ್ಲಿನ ಅಪ್ಪನ ಪಾತ್ರವೂ ಮನೋಜ್ಞವಾಗಿ 'ಕಂದೀಲು' ಚಿತ್ರದಲ್ಲಿ ಮೂಡಿಬಂದಿದೆ.

ಮಹಾರಾಷ್ಟ್ರ ತಗಾದೆಗೆ ಅರ್ಥವಿಲ್ಲ

ಪ್ರವಾಹ ಉಂಟಾಗುತ್ತದೆ ಎನ್ನುವ ಮಾತು ಸರಿಯಲ್ಲ: ಎಂಬಿಪಿ

ಬೆಂಗಳೂರು: ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವುದರಿಂದ ಮಹಾರಾಷ್ಟ್ರದ ಜಿಲ್ಲೆಗಳಿಗೆ ಪ್ರವಾಹ ಉಂಟಾಗುತ್ತದೆ ಎನ್ನುವ ಮಾತಿನಲ್ಲಿ ಅರ್ಥವಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಈಗಿರುವ 519.60 ಮೀ.ನಿಂದ 524.256 ಮೀ.ಗೆ ಎತ್ತರಿಸುವುದರಿಂದ ಸಾಂಗ್ಲಿ ಮತ್ತು ಕೊಲ್ಲಾಪುರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗುತ್ತದೆ ಎನ್ನುವ ಮಹಾರಾಷ್ಟ್ರದ ತಕರಾರಿಗೆ ಅರ್ಥವಿಲ್ಲ. ಇಂಥ ವಾದ ಈಗಾಗಲೇ ನ್ಯಾಯಾಧೀಕರಣ, ಸುಪ್ರೀಂ ಕೋರ್ಟ್ ಮತ್ತು ಲೋಕಸಭೆಗಳಲ್ಲಿ ತಿರಸ್ಕೃತವಾಗಿದೆ ಎಂದರು.

ಆಲಮಟ್ಟಿ ಅಣೆಕಟ್ಟೆಯನ್ನು ನಾವು ಕಟ್ಟುವುದಕ್ಕೂ ಮೊದಲೇ ಸಾಂಗ್ಲಿಯಲ್ಲಿ 1964, 1976, 1994 ಮತ್ತು 1997ರಲ್ಲಿ ಭೀಕರ ಪ್ರವಾಹ ಸೃಷ್ಟಿಯಾಗಿತ್ತು. ಸುಪ್ರೀಂ ಕೋರ್ಟ್ ಕೂಡ ಅಣೆಕಟ್ಟೆಯ ಎತ್ತರವನ್ನು 524.256 ಮೀ.ಗೆ ನಾವು ಏರಿಸಬಹುದು ಎಂದು 2000ನೇ ಇಸವಿಯಲ್ಲೇ ಹೇಳಿದೆ. ಇದಾದ ಮೇಲೂ ಮಹಾರಾಷ್ಟ್ರವು ನಮಗೆ ವಿರುದ್ಧವಾಗಿ 2005ರಲ್ಲಿ ನ್ಯಾಯಾಧೀಕರಣದ ಮೊರೆ ಹೋಯಿತು. ಆದರೆ ಅದರ ಮಧ್ಯಂತರ ಮನವಿಯು ಅಲ್ಲೂ ತಿರಸ್ಕೃತಗೊಂಡಿದೆ ಎಂದರು.

ಆಲಮಟ್ಟಿ ಅಣೆಕಟ್ಟೆಯ ಕಾರಣದಿಂದಾಗಿಯೇ ಮಹಾರಾಷ್ಟ್ರದ ಸಾಂಗ್ಲಿ ಮತ್ತು ಕೊಲ್ಲಾಪುರ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗುತ್ತದೆ ಎಂಬ ವಾದವನ್ನು ನ್ಯಾಯಮಂಡಳಿಯು ಪುರಸ್ಕರಿಸಿಲ್ಲ. ಈ ಸಂಬಂಧವಾಗಿ ನ್ಯಾಯಾಧೀಕರಣವು 2010 ಮತ್ತು 2013ರಲ್ಲಿ ಕೂಡ ವರದಿ ನೀಡಿದೆ. ಈ ವಿಚಾರದಲ್ಲಿ ಅದು ಹಿಪ್ಪರಗಿ ಜಲಾಶಯವನ್ನೂ ಪರಿಗಣಿಸಿದೆ. ಜತೆಗೆ, ಕೃಷ್ಣಾ ನೀರು ಹಂಚಿಕೆ ಸಂಬಂಧ ರಚಿಸಲಾದ ಎರಡನೆಯ ನ್ಯಾಯಾಧೀಕರಣವು ನೀಡಿರುವ ತೀರ್ಪನ್ನು ಇದುವರೆಗೂ ಯಾವ ರಾಜ್ಯಗಳೂ ಪ್ರಶ್ನಿಸಿಲ್ಲ. ಹೀಗಿರುವಾಗ, ಈಗ ಇದ್ದಕ್ಕಿದ್ದಂತೆ ತಕರಾರು ತೆಗೆಯುವುದರ ಹಿಂದಿನ ಉದ್ದೇಶ ಯಾರಿಗಾದರೂ ಅರ್ಥವಾಗುತ್ತದೆ ಎಂದು ಟೀಕಿಸಿದರು.

ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸಿದರೆ ತನಗೆ ನೀರು ಬರುವುದಿಲ್ಲ ಎಂದು ಆಂಧ್ರಪ್ರದೇಶ ಕೂಡ (ವಿಭಜನೆಗೂ ಮುನ್ನ) ಆಕ್ಷೇಪಣೆ ತೆಗೆದಿತ್ತು. ಆದರೆ, ಅದರ ವಾದ ಕೂಡ ಬಿದ್ದು ಹೋಗಿದೆ. ಮಹಾರಾಷ್ಟ್ರವು ಈಗ ನಾವು ಅಣೆಕಟ್ಟೆಯ ಎತ್ತರಕ್ಕೆ ಮುಂದಾಗಿರುವುದನ್ನು ಮರುಪರಿಶೀಲಿಸಲು ಆಗ್ರಹಿಸಿರುವುದು ರಾಜಕೀಯ ದುರುದ್ದೇಶದಿಂದ ಕೂಡಿದೆ. ಐದು ವರ್ಷಗಳ ಕಾಲ ನೀರಾವರಿ ಸಚಿವನಾಗಿದ್ದ ನನಗೆ ಇದರ ಬಗ್ಗೆ ಸ್ಪಷ್ಟ ತಿಳಿವಳಿಕೆ ಇದೆ ಎಂದು ಹೇಳಿದ್ದಾರೆ.

ಸಾಂಗ್ಲಿ ಜಿಲ್ಲೆಯಲ್ಲಿ ಜಲಾನಯನ ಪ್ರದೇಶಗಳು ವಿಪರೀತ ಒತ್ತುವರಿಯಾಗಿವೆ. ಇದಕ್ಕೆ ಸಂಬಂಧಿಸಿದ ವರದಿ ನನ್ನ ಬಳಿ ಇದೆ. ಅಲ್ಲಿನ ಸರಕಾರ ಈ ಸಮಸ್ಯೆಯನ್ನು ಬಗೆಹರಿಸುವ ಕಡೆಗೆ ಗಮನ ಕೊಡಬೇಕು. ಅದನ್ನು ಬಿಟ್ಟು ನಮಗೆ ಅಡ್ಡಗಾಲು ಹಾಕಬಾರದು. ನನ್ನಲ್ಲಿರುವ ದಾಖಲೆಗಳನ್ನು ನಾನು ಜಲಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಅವರಿಗೂ ಕೊಡುತ್ತೇನೆ. ನಾವು ಇದಕ್ಕೆ ವಿವರವಾಗಿ ತಕ್ಕ ಉತ್ತರ ಕೊಡುತ್ತೇವೆ.

– ಎಂ.ಬಿ. ಪಾಟೀಲ್ ಕೈಗಾರಿಕಾ ಸಚಿವ

ಬಿಹಾರ: ಮತದಾರರ ಪಟ್ಟಿ ಪ್ರಕಟ

ದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಶೀಲನೆ' (ಎಸ್ಐಆರ್) ಪ್ರಕ್ರಿಯೆ ಪೂರ್ಣಗೊಳಿಸಿರುವ ಚುನಾವಣಾ ಆಯೋಗ, ಪರಿಷ್ಕೃತ ಮತದಾರರ ಪಟ್ಟಿಯ ಕರಡು ಪ್ರತಿಯನ್ನು ಶುಕ್ರವಾರ ಪ್ರಕಟಿಸಿದೆ. ಕೇಂದ್ರ ಚುನಾವಣಾ ಆಯೋಗ ಕೈಗೊಂಡ, ಎಸ್ಐಆರ್ ಪ್ರಕ್ರಿಯೆ ವಿರುದ್ಧ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಇದರ ಮಧ್ಯೆಯೇ, ಪರಿಷ್ಕೃತ ಮತದಾರರ ಪಟ್ಟಿಯ ಕರಡು ಪ್ರತಿ ಪ್ರಕಟಿಸಿರುವ ಚುನಾವಣಾ ಆಯೋಗ, ಆಕ್ಷೇಪಣೆಗಳಿದ್ದರೆ ಮತದಾರರು ಒಂದು ತಿಂಗಳೊಳಗೆ ಆಯೋಗಕ್ಕೆ ಸಲ್ಲಿಸಬಹುದು ಎಂದು ತಿಳಿಸಿದೆ. ಮತದಾರರ ಪಟ್ಟಿ ಪರಿಷ್ಕರಣೆಗೂ ಮುನ್ನ ಬಿಹಾರ ರಾಜ್ಯದಲ್ಲಿ ಒಟ್ಟು 7.93 ಕೋಟಿ ನೋಂದಾಯಿತ ಮತದಾರರಿದ್ದರು. 'ಎಸ್ಐಆರ್' ಪ್ರಕ್ರಿತೆ ಬಳಿಕ ಎಷ್ಟು ಮತದಾರರು ಇದ್ದಾರೆ ಎನ್ನುವುದು ಗೊತ್ತಾಗಬೇಕಿದೆ. ಪಟ್ಟಿಯಿಂದ ಅರ್ಹ ಮತದಾರರ ಹೆಸರೇನಾದರೂ ತಪ್ಪಾಗಿ ಕೈಬಿಟ್ಟು ಹೋಗಿದ್ದರೆ ಮರು ಸೇರ್ಪಡೆಗೆ ಅವಕಾಶವಿದೆ ಎಂದು ಚುನಾವಣಾ ಆಯೋಗ ಹೇಳಿದೆ. ವರ್ಷಾಂತ್ಯದಲ್ಲಿ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲೇ ಮತದಾರರ ಪಟ್ಟಿ ವಿಶೇಷ ಕ್ಷಿಪ್ರ ಪರಿಷ್ಕರಣೆ ನಡೆಸುತ್ತಿರುವುದನ್ನು ವಿರೋಧಿಸಿ ಪ್ರತಿಪಕ್ಷಗಳು ಸಂಸತ್ತಿನ ಒಳ–ಹೊರಗೆ ಪ್ರತಿಭಟನೆ ನಡೆಸುತ್ತಿವೆ.

ವಿಕಾಸ್ ಮರುನೇಮಕ: ಹೈಕೋರ್ಟ್‌ಗೆ ಸರಕಾರ ಮಾಹಿತಿ

ಬೆಂಗಳೂರು: ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಆಂತರಿಕ ಭದ್ರತಾ ವಿಭಾಗದ ಐಜಿಪಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯ ಸರಕಾರವು ಹೈಕೋರ್ಟ್‌ಗೆ ಶುಕ್ರವಾರ ತಿಳಿಸಿತು.

ಇದನ್ನು ಪರಿಗಣಿಸಿದ ನ್ಯಾಯಾಲಯವು ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರ ಅಮಾನತನ್ನು ಬದಿಗೆ ಸರಿಸಿದ್ದ ಕೇಂದ್ರೀಯ ಆಡಳಿತಾತ್ಮಕ ನ್ಯಾಯ ಮಂಡಳಿ (ಸಿಎಟಿ) ಆದೇಶ ಪ್ರಶ್ನಿಸಿ ರಾಜ್ಯ ಸರಕಾರ ಮತ್ತು ಸಿಎಟಿ ಆದೇಶದಲ್ಲಿ ಆಕ್ಷೇಪಾರ್ಹವಾದ ಅಂಶಗಳನ್ನು ತೆಗೆಯುವಂತೆ ಬೆಂಗಳೂರು ರಾಯಲ್ ಚಾಲೆಂಜರ್ಸ್ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಎಸ್.ಜಿ. ಪಂಡಿತ್, ಟಿ.ಎಂ. ನದಾಫ್ ಅವರ ವಿಭಾಗೀಯ ಪೀಠ ಇತ್ಯರ್ಥಪಡಿಸಿತು. ವಿಚಾರಣೆ ಆರಂಭವಾಗುತ್ತಿದ್ದಂತೆ ನ್ಯಾ. ಪಂಡಿತ್ ಅವರು ಪೊಲೀಸ್ ಅಧಿಕಾರಿಗಳ ಮನವಿಯ ಕುರಿತು ಯಾವ ಆದೇಶ ಮಾಡಲಾಗಿದೆ ಎಂದು ಸರಕಾರವನ್ನು ಪ್ರಶ್ನಿಸಿತು. ಸರಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ್ ಅವರು ಅಮಾನತು ಆದೇಶ ಸರಕಾರ ಹಿಂಪಡೆದಿದ್ದು, ಅವರಿಗೆ ಹುದ್ದೆ ತೋರಿಸಲಾಗಿದೆ. ಆಗ ಮಧ್ಯಪ್ರವೇಶಿಸಿದ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ಅವರು, ವಿಕಾಸ್ ಕುಮಾರ್ ಅವರನ್ನು ಬೆಂಗಳೂರು ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಹುದ್ದೆಗೆ ನೇಮಕ ಮಾಡುತ್ತಾರೆ ಎಂದು ನಿರೀಕ್ಷೆ ಹೊಂದಿದ್ದೆವು ಎಂದರು. ಆಗ ರಾಜಗೋಪಾಲ್ ಅವರು ನಿಮ್ಮ ನಿರೀಕ್ಷೆಗಳು ಅಪ್ರಾಯೋಗಿಕವಾಗಿವೆ, ಇದಕ್ಕೆ ಪೀಠವು ಅಧಿಕಾರಿಗಳು ಎಂದರೆ ನಿರೀಕ್ಷೆ ಇಟ್ಟುಕೊಂಡಿರುತ್ತಾರೆ, ಅವರನ್ನು ನಿಂದಿಸಲಾಗದು ಎಂದರು. ಸರಕಾರ ಆದೇಶ ಮಾಡಿರುವುದರಿಂದ ರಿಟ್ ಅರ್ಜಿಯಲ್ಲಿ ಏನು ಉಳಿಯಿತು ಎಂದು ಪೀಠ ಕೇಳಿದಾಗ ಧ್ಯಾನ್ ಚಿನ್ನಪ್ಪ ಅವರು ಅರ್ಜಿಯನ್ನು ಮುಕ್ತಾಯಗೊಳಿಸಬಹುದು ಎಂದರು. ಈ ನಡುವೆ ರಾಜಗೋಪಾಲ್ ಅವರು ಸರಕಾರದ ಅಮಾನತು ಆದೇಶ ಸಿಎಟಿ ಬದಿಗೆ ಸರಿಸಿದೆ. ಆದರೆ ಆಕ್ಷೇಪಾರ್ಹವಾದ ಆದೇಶದಲ್ಲಿ ಮಾಡಿರುವ ಕೆಲವು ಅಂಶಗಳು ಇಲಾಖಾ ವಿಚಾರಣೆ ಮೇಲೆ ಪರಿಣಾಮ ಉಂಟು ಮಾಡುತ್ತವೆ ಎಂದರು. ಆಗ ಪೀಠವು ಸಿಎಟಿ ಆದೇಶದಲ್ಲಿನ ಅಭಿಪ್ರಾಯಗಳು ಅಮಾನತು ಪರಿಗಣಿಸುವುದಕ್ಕೆ ಸಂಬಂಧಿಸಿದ್ದಾಗಿವೆ, ಅದಕ್ಕೆ ಸೀಮಿತವಾಗಿ ಆದೇಶದಲ್ಲಿ ಸ್ಪಷ್ಟಪಡಿಸಲಾಗುವುದು ಎಂದರು.

ನಿವೃತ್ತ ಬ್ಯಾಂಕ್ ನೌಕರರಿಂದ ಉಪವಾಸ ಸತ್ಯಾಗ್ರಹ ಇಂದು

ಬೆಂಗಳೂರು: ಬಾಕಿ ಇರುವ ಪಿಂಚಣಿ ಸೇರಿ ನಾನಾ ಬೇಡಿಕೆಗಳಿಗೆ ಆಗ್ರಹಿಸಿ ಆ.2 ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹವನ್ನು ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತಿ ವೇತನದಾರರ ಸಂಘಟನೆಗಳ ಸಮನ್ವಯ ಸಮಿತಿ ಹೋರಾಟ ನಡೆಸಲಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸಿಬಿಪಿಆರ್‌ಒ ಆಯೋಜಕರಾದ ಕೆ.ವಿ ಆಚಾರ್ಯ ಹಾಗೂ ಎ. ಎನ್. ಕೃಷ್ಣ ಮೂರ್ತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನಿವೃತ್ತ ಬ್ಯಾಂಕ್ ನೌಕರರಿಗೆ ಮನವಿ ಮಾಡಿದ್ದಾರೆ.

ಬ್ಯಾಂಕ್ ಪಿಂಚಣಿದಾರರು ಮತ್ತು ನಿವೃತ್ತಿ ವೇತನದಾರರ ಸಂಘಟನೆಗಳ ಒಕ್ಕೂಟ ದೇಶಾದ್ಯಂತ ಧರಣಿ ಪ್ರಾರಂಭಿಸಿದೆ. ಈ ಪೈಕಿ ರಾಜ್ಯದಲ್ಲೂ ಹೋರಾಟ ನಡೆಯಲಿದೆ. ವೇತನದಲ್ಲಿನ ವಿಶೇಷ ಭತ್ಯೆಯನ್ನು ಪಿಂಚಣಿನ್ನಾಗಿ ಪರಿಗಣಿಸುತ್ತಿಲ್ಲ. ಈ ಕಾರಣದಿಂದ ಪಿಂಚಣಿಯು ಸಂಬಳದಲ್ಲಿ ಶೇಕಡಾ 50ರಿಂದ 30ಕ್ಕೆ ಕಡಿತಗೊಳಿಸಲಾಗಿದೆ. ಹಣಕಾಸು ಸಚಿವಾಲಯದ ಸಲಹೆಯಂತೆ 2012ರಲ್ಲಿ ನೀಡಲಾಗಿರುವ ವೈದ್ಯಕೀಯ ವಿಮಾ ಯೋಜನೆ ಮಾರ್ಗದರ್ಶನಗಳನ್ನು ಕಾರ್ಯಗತಗೊಳಿಸಲಾಗಿಲ್ಲ. ಆರೋಗ್ಯ ವಿಮೆಯ ಪ್ರೀಮಿಯಂನ್ನು ಸರಕಾರದ ಮಾರ್ಗದರ್ಶನದ ವಿರುದ್ಧ ನಿವೃತ್ತಿ ಹೊಂದಿದವರ ಮೇಲೆ ಹೇರಲಾಗಿದೆ.ಬ್ಯಾಂಕ್ ಪೆನ್ಷನ್ದಾರರಿಗೆ ಕೊಡಬೇಕಾದ ಮೂಲ ವೇತನದ ಶೇಕಡಾ 50ರಷ್ಟು ಪಿಂಚಣಿಯನ್ನು ಪೂರ್ವಾನ್ವಯಗೊಳಿಸಿ ನಿಗದಿ ಮಾಡಬೇಕು. ನಿವೃತ್ತ ಬ್ಯಾಂಕ್‌ನೌಕರರು ಈ ಹಿಂದೆ ಪಿಂಚಣಿ ಆಯ್ಕೆ ಮಾಡದ ಕಾರಣ ಪಿಂಚಣಿಯಿಂದ ವಂಚಿತರಾಗಿದ್ದಾರೆ. ಅಂತಹ ಪ್ರಕರಣಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಪರಿಗಣಿಸಲಾಗಿದೆ. ಆದರೆ ಬ್ಯಾಂಕ್ ನಿವೃತ್ತರಿಗೆ ಇದನ್ನು ನಿರಾಕರಿಸಲಾಗಿದೆ. ಇದನ್ನು ಸರಿಪಡಿಸುವುದು ಸೇರಿದಂತೆ ನಾನಾ ಬೇಡಿಕೆಗಳಿಗೆ ಒತ್ತಾಯಿಸಿ ಇಂದು ಫ್ರೀಡಂಪಾರ್ಕ್‌ನಲ್ಲಿ ಹೋರಾಟ ನಡೆಯಲಿದೆ.

ನಾವು ಬೀದಿಗಿಳಿದರೆ ಕಾಂಗ್ರೆಸ್ ಅನ್ನು ಮನೆಗೆ ಕಳುಹಿಸಲು ಗೊತ್ತಿದೆ | ಪಕ್ಷಭೇದ ಮರೆತು ಹೋರಾಟ

ಮಾದಿಗರಿಂದ ಅಸಹಕಾರ ಚಳವಳಿ: ನಾರಾಯಣ ಸ್ವಾಮಿ

ಬೆಂಗಳೂರು: ಕೂಡಲೇ ಒಳಮೀಸಲಾತಿ ಜಾರಿ ಮಾಡದೆ ಇದ್ದಲ್ಲಿ ರಾಜ್ಯ ಸರಕಾರದ ವಿರುದ್ಧ ಮಾದಿಗರಿಂದ ಅಸಹಕಾರ ಚಳವಳಿ ನಡೆಸಲಿದ್ದೇವೆ ಎಂದು ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಎಚ್ಚರಿಸಿದ್ದಾರೆ.

ಒಳಮೀಸಲಾತಿ ಜಾರಿ ಮಾಡಲು ಆಗ್ರಹಿಸಿ ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಫ್ರೀಡಂಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, ಮಾದಿಗರು ಇನ್ನು ಕಾಯುವುದಿಲ್ಲ, ಓಲೈಕೆಗೆ ಬಗ್ಗುವುದಿಲ್ಲ. ಮುಂದಿನ ಚುನಾವಣೆ ವರೆಗೆ ಕಾಯುವುದಿಲ್ಲ ಎಂದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪಕ್ಷಭೇದ ಮರೆತು ಹೋರಾಟ ನಡೆಯುತ್ತಿದೆ, ಇದು ಬಿಜೆಪಿ ಹೋರಾಟವಲ್ಲ. ಕಾಂಗ್ರೆಸ್ ಸರಕಾರಕ್ಕೆ ಕುರ್ಚಿ ಪ್ರಮುಖವೇ ಅಥವಾ ಸಮಸ್ಯೆಗಳು ಮುಖ್ಯವೇ? ಮಾದಿಗರಿಗೆ ನ್ಯಾಯ ಲಭಿಸಿಲ್ಲ; ನಮ್ಮ ಸಹನೆಯ ಕಟ್ಟೆ ಒಡೆದಿದೆ. ಇನ್ನು ಕಾಯಲಾಗದು. ನಾವು ಬೀದಿಗಿಳಿದರೆ ನಿಮ್ಮನ್ನು ಮನೆಗೆ ಕಳುಹಿಸಲು ನಮಗೆ ಗೊತ್ತಿದೆ. ಕೇವಲ ಜನಸಂಖ್ಯೆ ಆಧರಿಸಿ ಮೀಸಲಾತಿ ಕೊಡುವುದಲ್ಲ. 40 ವರ್ಷದಿಂದಾದ ಅನ್ಯಾಯ ಪರಿಗಣಿಸಿ ಮೀಸಲಾತಿ ಕೊಡಬೇಕಿದೆ ಎಂದರು ಆಗ್ರಹಿಸಿದರು.

ಮುಖ್ಯಮಂತ್ರಿಗಳ ಸಮಾಜವಾದ ಎಲ್ಲಿದೆ?: ಎಲ್ಲರಿಗೂ ನ್ಯಾಯ ಕೊಡುವುದಾಗಿ ಹೇಳುವ ಸಮಾಜವಾದಿ ಮುಖ್ಯಮಂತ್ರಿ ಯಾವುದರ ಚಾಂಪಿಯನ್? ಎಲ್ಲ ರಂಗಗಳಲ್ಲೂ ಹಿಂದುಳಿದ ಮಾದಿಗರಿಗೆ ಒಂದೇ ಒಂದು ಯೋಜನೆ ನೀಡಿಲ್ಲ, ಮಾದಿಗರು ಎಲ್ಲ ಕಡೆ ಹಿಂದುಳಿದಿದ್ದಾರೆ. ಎಲ್ಲಿ ಹೋಗಿದೆ ನಿಮ್ಮ ಸಮಾಜವಾದ? ಎಂದು ಪ್ರಶ್ನಿಸಿದರು.

ಶಾಸಕ ಬಸವರಾಜ ಮತ್ತಿಮಡು, ಬಿಜೆಪಿಯ ಎಚ್. ವೆಂಕಟೇಶ್ ದೊಡ್ಡೇರಿ, ಹೂಡಿ ಮಂಜುನಾಥ್ ಸಮಾಜದ ಮುಖಂಡರು ಮತ್ತು ಸಂಘಟನೆಗಳ ಪದಾಧಿಕಾರಿಗಳು ಇದ್ದರು.

ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆಯಲ್ಲಿ ನಡೆಯಿತು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಆಂಧ್ರದ ಪುಟ್ಟಪರ್ತಿಯಲ್ಲಿ ನವೆಂಬರ್‌ನಲ್ಲಿ ನಡೆಯಲಿರುವ ಶ್ರೀ ಸತ್ಯ ಸಾಯಿ ಶತಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಯಿತು. ಈ ವೇಳೆ ಶ್ರೀ ಸತ್ಯಸಾಯಿ ಟ್ರಸ್ಟಿ ಆರ್.ಜೆ ರತ್ನಾಕರ್, ನ್ಯಾಯಮೂರ್ತಿ ವಿ. ರಾಮಸುಬ್ರಮಣಿಯನ್, ಹಿರಾ, ಎಸ್. ಎಸ್. ನಾಗಾನಂದ್, ಅಖಿಲ ಭಾರತ ಎಸ್ಎಸ್ಎಸ್ಒ ಅಧ್ಯಕ್ಷ ನಿಮಿಷ್ ಪಾಂಡ್ಯ ಸಚಿವ ಜಿ. ಕಿಶನ್ ರೆಡ್ಡಿ ಇದ್ದರು.

ಪಾದಚಾರಿ ಮಾರ್ಗದಲ್ಲಿ ಬೇಲಿ ಅಳವಡಿಸಿದವರಿಗೆ 1 ಲಕ್ಷ ದಂಡ

ಬೆಂಗಳೂರು: ನಗರದಲ್ಲಿ ಕಂಡ ಕಂಡ ಕಡೆಗಳಲ್ಲಿ ಕಟ್ಟಡ ನಿರ್ಮಾಣ ಮಾಡುವವರಿಗೆ ಬಿಬಿಎಂಪಿಯು ಎಚ್ಚರಿಕೆ ನೀಡಿದ್ದು, ದಂಡ ಪ್ರಯೋಗವನ್ನೂ ಮಾಡಿದೆ.

ಬೆಂಗಳೂರಿನಲ್ಲಿ ನಿಯಮ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡುವವರ ಮೇಲೆ ಬಿಬಿಎಂಪಿ ಕಣ್ಣೇರಿಸಿದ್ದು, ದಕ್ಷಿಣ ವಲಯ ಬಸವನಗುಡಿ ವ್ಯಾಪ್ತಿಯ ಎಂ.ಎನ್ ಕೃಷ್ಣರಾವ್ ರಸ್ತೆಯಲ್ಲಿ ಕಟ್ಟಡ ನಿರ್ಮಾಣದ ಮುಂಭಾಗದಲ್ಲಿರುವ ಪಾದಾಚಾರಿ ಮಾರ್ಗದಲ್ಲಿ ಸಾರುವೆ (ಅಡ್ಡಗೋಡೆ ಮಾದರಿ) ಅಳವಡಿಸಿ ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಮಾಡಿದವರಿಗೆ ಬರೋಬ್ಬರಿ 1 ಲಕ್ಷ ರುಪಾಯಿ ದಂಡ ವಿಧಿಸಲಾಗಿದೆ ಎಂದು ಬಿಬಿಎಂಪಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ದಕ್ಷಿಣ ವಲಯ ಎಂ.ಎನ್ ಕೃಷ್ಣರಾವ್ ರಸ್ತೆ ಸ್ವತ್ತಿನ ಸಂಖ್ಯೆ 16ರಲ್ಲಿ ಕಟ್ಟಡ ನಿರ್ಮಿಸುತ್ತಿದ್ದು, ಪಾದಚಾರಿ ಮಾರ್ಗದಲ್ಲಿ ಸಾರುವೆ ಅಳವಡಿಸಿ ಅದಕ್ಕೆ ಗ್ರೀನ್ ನೆಟ್ ಹಾಕಿ ಸಂಪೂರ್ಣವಾಗಿ ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ. ಈ ಪೈಕಿ ಸಂಬಂಧಪಟ್ಟ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಿ ದುಪ್ಪಟ್ಟು ದಂಡ ವಿಧಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದ್ದಾರೆ.

ವಲಯ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳ ಪರಿಶೀಲನೆ ನಡೆಸಲು ಸೂಚಿಸಿದ್ದು, ಪರಿಶೀಲನೆಯ ವೇಳೆ ಪಾದಚಾರಿ ಮಾರ್ಗದಲ್ಲಿ ಸಾರುವೆ ಅಳವಡಿಸಿ, ಅದಕ್ಕೆ ಗ್ರೀನ್ ನೆಟ್ ಹಾಕಿ ಜನರು ಓಡಾಡುವುದಕ್ಕೆ ಸಮಸ್ಯೆ ಎದುರಾಗುವ ಪರಿಸ್ಥಿತಿ ಉಂಟಾಗಿದೆ. ಪಾದಚಾರಿ ಮಾರ್ಗದಲ್ಲಿ ಸಾರುವೆ ಅಳವಡಿಸಿರುವ ಪರಿಣಾಮ ಸಾರ್ವಜನಿಕರ ಓಡಾಟಕ್ಕೆ ಅನಾನುಕೂಲವಾಗಿರುತ್ತದೆ. ಪಾಲಿಕೆಯಿಂದ ಯಾವುದೇ ಅನುಮತಿ ಪಡೆಯದೆ ರಸ್ತೆ/ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಸಾರುವೆ ಅಳವಡಿಸಿ ಸಾರ್ವಜನಿಕರಿಗೆ ಸಮಸ್ಯೆ ಉಂಟಾಗಿರುತ್ತದೆ. ಆದ್ದರಿಂದ ಕಟ್ಟಡ ಮಾಲೀಕರಾದ ರಾಜೇಂದ್ರ ಕುಮಾರ್ ಅವರಿಗೆ ಸೂಚನಾ ಪತ್ರ ನೀಡಿ ಪಾದಚಾರಿ ಮಾರ್ಗ ಒತ್ತುವರಿ ಮಾಡಿರುವುದಕ್ಕೆ 1 ಲಕ್ಷ ರು. ದಂಡವನ್ನು ಪಾವತಿಸಲು ಸೂಚಿಸಲಾಗಿರುತ್ತದೆ ಎಂದು ಬಿಬಿಎಂಪಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

- ಇದು ಯುದ್ಧದ ಸಮಯವಲ್ಲ, ಅಭಿವೃದ್ಧಿಯ ಕಾಲ ಎನ್ನುವ ಮೋದಿ
- ಕದನ ವಿರಾಮ ಘೋಷಣೆಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಬಲು ಉತ್ಸುಕ

ವಿಶ್ವದಲ್ಲೇಕೆ ಯುದ್ಧ ನಡೆಯುತ್ತಿದೆ?

ಬಿ.ವಿ.ಮಹೇಶ್ ಚಂದ್ರ

'ಇದು ಯುದ್ಧದ ಸಮಯವಲ್ಲ, ಅಭಿವೃದ್ಧಿಯ ಕಾಲ' ಎಂದು ಭಾರತ ಹೇಳುತ್ತಲೇ ಇದೆ. ಎಲ್ಲೆಲ್ಲಿ ಯುದ್ಧವಾಗುತ್ತಿದೆಯೋ ಅಲ್ಲೆಲ್ಲ ಮಧ್ಯಪ್ರವೇಶಿಸಿ 'ಕದನ ವಿರಾಮ' ಘೋಷಣೆ ಮಾಡಿಸುವುದಕ್ಕೆ ಅಮೆರಿಕ ಉತ್ಸುಕವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗಂತೂ ಹೇಗಾದರೂ ಮಾಡಿ ಈ ಬಾರಿ ತಾವೇ 'ಶಾಂತಿ ನೊಬೆಲ್' ಪುರಸ್ಕಾರ ಪಡೆದು ಕೊಳ್ಳಬೇಕೆಂಬ ಹಪಾಹಪಿ.

ವಿಪರ್ಯಾಸ ಎಂದರೆ, 3 ವರ್ಷಗಳಿಂದ ಯುದ್ಧದಲ್ಲಿ ತೊಡಗಿರುವ ರಷ್ಯಾ ಕೂಡಾ ಇರಾನ್-ಇಸ್ರೇಲ್ ನಡುವಿನ ಯುದ್ಧ ನಿಲ್ಲಿಸಲು ಸಂಧಾನ ನಡೆಸಲು ನಾನೂ ಬರುವೆ ಎಂದು ಹೇಳಿತ್ತು. ತನ್ನ ಗಡಿ ಗಳನ್ನು ಇನ್ನಷ್ಟು ಮತ್ತಷ್ಟು ವಿಸ್ತರಿಸುತ್ತಾ 'ವಿಸ್ತರಣಾ ವಾದ'ದ ಭೂತವನ್ನು ಮೈಮೇಲೆ ಆವಾಹಿಸಿಕೊಂಡಿ ರುವ, ತೈವಾನ್ ಮೇಲೆ ಕಾಲು ಕೆದರಿ ಜಗಳಕ್ಕೆ ಮುಂದಾಗಿ ರುವ ಕಡುಗೆಂಪು ದೇಶ ಚೀನಾ ಕೂಡಾ ಬೇರೆ ದೇಶಗಳ ನಡುವಿನ ಯುದ್ಧ ನಿಲ್ಲಿಸುವುದಕ್ಕೆ ಆಸಕ್ತಿ ತೋರುತ್ತದೆ.

ಪರಿಸ್ಥಿತಿ ಸರಿಯಿಲ್ಲ

ಆದರೆ, ಜಗತ್ತಿನ ವಿವಿಧೆಡೆಯ ಪರಿಸ್ಥಿತಿ 'ಶಾಂತಿ ಮಂತ್ರ' ಪಠಿಸುವುದಕ್ಕೆ ತಕ್ಕದಾಗಿ ಇಲ್ಲವೇ ಇಲ್ಲ. 'ವಸುದೈವ ಕುಟುಂಬಕಂ' ಮತ್ತು 'ಜಾಗತಿಕ ಶಾಂತಿ' ಮಂತ್ರ ಪಠಿಸುವ ಭಾರತದ ಪ್ರಧಾನಿ ನರೇಂದ್ರ ಮೋದಿ

ಅವರೂ ಏ.22ರ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಮಂದಿ ಹತರಾಗಿದ್ದು ಕಂಡು ಪಾಕ್ ವಿರುದ್ಧ 'ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆ ನಡೆಸಬೇಕಾಯಿತು. ಹಾಗಾಗಿ, ಒಂದಲ್ಲಾ ಒಂದು ಕಡೆ ಯುದ್ಧ, ಸೇನಾ ಸಂಘರ್ಷಗಳು ನಡೆಯುತ್ತಲೇ ಇವೆ. ಸದ್ಯ ಜಗತ್ತಿನಲ್ಲಿ ಎಲ್ಲೆಲ್ಲಿ ಯುದ್ಧ, ಸೇನಾ ಸಂಘರ್ಷ ನಡೆಯುತ್ತಿದೆ ಎಂಬುದರತ್ತ ಒಮ್ಮೆ ಕಣ್ಣು ಹಾಯಿಸೋಣ...

ಗಾಜಾ ಸಮರ

ಇಸ್ರೇಲ್ ಮತ್ತು ಗಾಜಾ ಸ್ಟ್ರಿಪ್‌ನಲ್ಲಿ ಎಲ್ಲವೂ ಸರಿಯಿತ್ತು. ಜನ-ಜೀವನ ಸಹಜವಾಗಿತ್ತು. ಗಾಜಾ ಭಾಗದಲ್ಲಿದ್ದ ಲಕ್ಷಕ್ಕೂ ಅಧಿಕ ಪ್ಯಾಲೆಸ್ತೀನ್ ಪ್ರಜೆಗಳಿಗೆ ಇಸ್ರೇಲ್‌ನ ಕಟ್ಟಡ ನಿರ್ಮಾಣ, ಗೃಹ ನಿರ್ವಹಣೆ ಕ್ಷೇತ್ರಗಳಲ್ಲಿ ಭರ್ತಿ ಕೆಲಸವಿತ್ತು, ಕೈತುಂಬಾ ಸಂಬಳವೂ ಸಿಗುತ್ತಿತ್ತು. ಆದರೆ, ಗಾಜಾ ಭಾಗದಲ್ಲಿ ಸೃಷ್ಟಿಯಾಗಿರುವ 'ಹಮಾಸ್' ಎಂಬ ಉಗ್ರ ಸಂಘಟನೆಯವರಿಗೆ ಸುಮ್ಮನಿರಲಾಗಲಿಲ್ಲ. 2023ರ ಅಕ್ಟೋಬರ್ 7ರಂದು ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ನಡೆಯುತ್ತಿದ್ದ ಸಂಗೀತ ರಸಸಂಜೆ ಕಾರ್ಯಕ್ರಮದ ಮೇಲೆ ಹಮಾಸ್ ಉಗ್ರರು ದಾಳಿ ನಡೆಸಿ 1200ಕ್ಕೂ ಅಧಿಕ ಜನರನ್ನು ಕೊಂದು 250ಕ್ಕೂ ಅಧಿಕ ಮಹಿಳೆಯರು, ಮಕ್ಕಳನ್ನು ಹೊತ್ತೊಯ್ದು ಒತ್ತೆಯಾಳಾಗಿರಿಸಿಕೊಂಡರು.

ಅಂದು ಹಮಾಸ್ ನಡೆಸಿದ ಭಯೋತ್ಪಾದಕ ದಾಳಿಯಲ್ಲಿ ಇಸ್ರೇಲ್‌ನವರು ಮಾತ್ರವಲ್ಲದೇ, ಅಮೆರಿಕ, ಜರ್ಮನಿ ಸೇರಿದಂತೆ ವಿವಿಧ ದೇಶಗಳ ಸಂಗೀತ ರಸಸಂಜೆ ಕಾರ್ಯಕ್ರಮ ಪ್ರಿಯರೆಲ್ಲರೂ ಹತರಾದರು. ಇಸ್ರೇಲ್ ಮತ್ತು ಅಮೆರಿಕ ಪ್ರಜೆಗಳ

ಇಸ್ರೇಲ್‌ನ ಕ್ಷಿಪಣಿಗಳ ದಾಳಿಯಿಂದ ಧ್ವಂಸಗೊಂಡಿರುವ ಗಾಜಾ ಪ್ರದೇಶದ ಒಂದು ಚಿತ್ರ.

ಅಪಹರಣವಾಯಿತು.

ಮರುಕ್ಷಣವೇ ಗಾಜಾ ಸ್ಟ್ರಿಪ್ ಮೇಲೆ ಇಸ್ರೇಲ್‌ನ ಸೇನಾಪಡೆಗಳು ಮುಗಿಬಿದ್ದವು. ಭಾರೀ ಪ್ರಮಾಣದಲ್ಲಿ ವೈಮಾನಿಕ ದಾಳಿಯಾಯಿತು. ಕ್ಷಿಪಣಿಗಳೂ ಗಾಜಾದಲ್ಲಿನ ಹಮಾಸ್ ಉಗ್ರರ ನೆಲೆಗಳ ಮೇಲೆ ಅಪ್ಪಳಿಸಿದವು. ಹಮಾಸ್ ಉಗ್ರರೂ ಸೇರಿದಂತೆ ಸಾವಿರಾರು ಜನರು ಹತರಾದರು. ಇಸ್ರೇಲ್ ಸೇನಾಪಡೆ-ಹಮಾಸ್ ಉಗ್ರ ಸಂಘಟನೆ ನಡುವೆ 2023ರ ಅಕ್ಟೋಬರ್ 7ರಂದು ಶುರುವಾದ 'ಗಾಜಾ ಯುದ್ಧ' 22 ತಿಂಗಳುಗಳೇ ಕಳೆದರೂ ನಿಲ್ಲುವ ಲಕ್ಷಣವೇ ಕಾಣುತ್ತಿಲ್ಲ.

ಗಾಜಾ ಯುದ್ಧದ ಪರಿಣಾಮ, ಈವರೆಗೆ(ಜು.29) ಸಾವಿರಾರು ಹಮಾಸ್ ಉಗ್ರರು, ಉಗ್ರ ಸಂಘಟನೆಗಳ ನಾಯಕರು ಸೇರಿದಂತೆ, 60,034ಪ್ಯಾಲೆಸ್ತೀನ್ ಜನರು ಸಾವಿಗೀಡಾಗಿದ್ದಾರೆ. 1,45,870 ಮಂದಿ ಗಾಯಗೊಂಡು ದೇಹದ ಅವಯವಗಳನ್ನು ಕಳೆದುಕೊಂಡಿದ್ದಾರೆ. ಗಾಜಾ ಭಾಗದಲ್ಲಿನ ಎಲ್ಲಾ ನಗರ-ಪಟ್ಟಣಗಳಲ್ಲಿನ ಸಾವಿರಾರು ಬಹುಮಹಡಿ ಕಟ್ಟಡಗಳು ಕ್ಷಿಪಣಿ ದಾಳಿ, ವೈಮಾನಿಕ ಬಾಂಬ್ ದಾಳಿಯಲ್ಲಿ ಧ್ವಂಸಗೊಂಡಿವೆ. ಮನೆಗಳು ನಾಶವಾಗಿದ್ದರಿಂದ ಲಕ್ಷಾಂತರ ಜನರು ತಾತ್ಕಾಲಿಕ ಡೇರೆಗಳಲ್ಲಿಯೇ ಬದುಕು ಸಾಗಿಸುತ್ತಿದ್ದಾರೆ.

ಸದ್ಯ ವಿಶ್ವಸಂಸ್ಥೆ ಗಾಜಾದಲ್ಲಿ ಪರಿಹಾರ ಕಾರ್ಯಗಳನ್ನು ನಡೆಸುತ್ತಿದೆ. ಹಸಿದ ಮಕ್ಕಳು, ಮಹಿಳೆಯರು ಸೇರಿದಂತೆ ಲಕ್ಷಾಂತರ ಮಂದಿಗೆ ಆಹಾರ ವಿತರಣೆ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಆಹಾರದ ಕೊರತೆಯಾಗಿ ಹಸಿವಿನಿಂದಲೂ ಮಕ್ಕಳು ಅಸುನೀಗುತ್ತಿದ್ದಾರೆ. ಈವರೆಗೆ 130ಕ್ಕೂ ಅಧಿಕ ಮಂದಿ ಹಸಿವಿನಿಂದಲೇ ಸಾವಿಗೀಡಾಗಿದ್ದಾರೆ ಎಂದು ಹಮಾಸ್ ನಿಯಂತ್ರಣದ ಆರೋಗ್ಯ ಸಂಸ್ಥೆ ಮೂಲಗಳು ಹೇಳಿಕೊಂಡಿವೆ. ಗಾಜಾದಲ್ಲಿನ ಆರೋಗ್ಯ ಸಚಿವಾಲಯಕ್ಕೆ ಮೃತದೇಹಗಳನ್ನು, ಗಾಯಾಳುಗಳನ್ನು ಎಣಿಸುವುದೇ ಕೆಲಸವಾಗಿದೆ.

ಇನ್ನೊಂದೆಡೆ, ಇಸ್ರೇಲ್‌ನಲ್ಲಿಯೂ ಭಾರೀ ಪ್ರಮಾಣದಲ್ಲಿ ಜೀವಹಾನಿಯಾಗಿದೆ. ಈವರೆಗೆ 829 ಇಸ್ರೇಲ್ ಯೋಧರು, 887 ನಾಗರಿಕರು ಹಮಾಸ್ ಉಗ್ರರ ಪ್ರತಿದಾಳಿಯಲ್ಲಿ ಮಡಿದಿದ್ದಾರೆ.

ಗಾಜಾದ ಹಮಾಸ್ ಉಗ್ರರು, ಯೆಮೆನ್ ದೇಶದ ಹೌತಿ ಉಗ್ರರು, ನೆರೆಯ ಲೆಬನಾನ್, ಇರಾನ್, ಟರ್ಕಿ ಸೇನೆ ಪ್ಯಾಲೆಸ್ತೀನ್ ಪರವಾಗಿ ಇಸ್ರೇಲ್ ಮೇಲೆ ಕೆಲವು ಬಾರಿ ದಾಳಿ ನಡೆಸಿವೆ.

ತೈವಾನ್-ಚೀನಾ

ಅತಿದೊಡ್ಡ ದೇಶವೇ ಆಗಿದ್ದರೂ ಕಮ್ಯುನಿಸ್ಟ್ ದೇಶ ಚೀನಾ ಮತ್ತಷ್ಟು ವಿಸ್ತಾರಗೊಳ್ಳಬೇಕೆಂಬ ಹಪಾಹಪಿ. 6 ದಶಕಗಳ ಹಿಂದೆಯೇ ಭಾರತದ ಭುಜದ ಮೇಲಿನ ಟಿಬೆಟ್ ದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡ ಚೀನಾಕ್ಕೆ ಇನ್ನೂ ಸಮಾಧಾನವಾಗಿಲ್ಲ. ದೇಶವನ್ನು ಇನ್ನಷ್ಟು ವಿಸ್ತರಿಸುವ ಉಮೇದಿನಲ್ಲಿರುವ ಚೀನಾ, ಈಗ ನೆರೆಯ ಥೈವಾನ್ ದೇಶದತ್ತ ಕಣ್ಣು ನೆಟ್ಟಿದೆ. ಆಗ್ಗಾಗ್ಗೆ ಥೈವಾನ್ ದೇಶದತ್ತ ತನ್ನ ಯುದ್ಧ ವಿಮಾನಗಳನ್ನು ಹಾರಿಸುತ್ತದೆ. ನೌಕಾಪಡೆಯ ಯುದ್ಧ ವಿಮಾನಗಳನ್ನು ಥೈವಾನ್ ಕಡಲ ತೀರಕ್ಕೆ ಕೊಂಡೊಯ್ದು ಭಯ ಹುಟ್ಟಿಸುತ್ತಿದೆ. ಚೀನಾ ಸರಕಾರದ ಕೆಲವು ಹಿರಿಯ ಅಧಿಕಾರಿಗಳು, 'ಥೈವಾನ್ ನಮ್ಮ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. 2027ರ ವೇಳೆಗೆಲ್ಲಾ ಥೈವಾನ್ ಚೀನಾದಲ್ಲಿ ವಿಲೀನವಾಗಲಿದೆ' ಎಂದೇ ಹೇಳಲಾರಂಭಿಸಿದ್ದಾರೆ.

ಸುಡಾನ್ ಆಂತರಿಕ ಸಂಘರ್ಷ

ಆಫ್ರಿಕಾ ಖಂಡದ ಸುಡಾನ್ ದೇಶದಲ್ಲಿ ಸೇನಾಪಡೆ ಮತ್ತು ಅರೆ ಸೇನಾಪಡೆ ನಡುವೆಯೇ ಆಂತರಿಕ ಸಂಘರ್ಷ ನಡೆಯುತ್ತಿದೆ. 2023ರ ಏಪ್ರಿಲ್‌ನಲ್ಲಿ ಸುಡಾನ್ ಸೇನಾಪಡೆ(ಎಸ್‌ಎಫ್) ಮತ್ತು ರ‍್ಯಾಪಿಡ್ ಸಪೋರ್ಟ್ ಫೋರ್ಸ್(ಆರ್‌ಎಸ್‌ಎಫ್) ನಡುವೆ ಶುರುವಾದ ಸಶಸ್ತ್ರ ಹೋರಾಟ-ಸಂಘರ್ಷ ಈವರೆಗೂ ನಿಂತಿಲ್ಲ.

ಜನರಲ್ ಅಬ್ದೆಲ್ ಫತಾಹ್ ಅಲ್ ಬುರ್ಹಾನ್ ನೇತೃತ್ವದ ಎಸ್‌ಎಫ್ ಮತ್ತು ಕಮಾಂಡರ್ ಮೊಹಮ್ಮದ್ ಹಮ್ದಾನ್ ಡಗಾಲೊ ನೇತೃತ್ವದ ಪ್ಯಾರಾ ಮಿಲಿಟರಿ(ಅರೆ ಸೇನಾಪಡೆ) ನಡುವೆಯೇ ಹೊಡಬಡಿ ಸಂಘರ್ಷ ನಡೆಯುತ್ತಿದೆ. ಈವರೆಗೂ ಎರಡೂ ಕಡೆ ಸಾವಿರಾರು ಮಂದಿ ಸಾವಿಗೀಡಾಗಿದ್ದಾರೆ.

ಅಸಂಖ್ಯ ಯೋಧರು, ಅರೆ ಸೇನಾಪಡೆ ಸೈನಿಕರು, ಸಾಮಾನ್ಯ ನಾಗರಿಕರು ಗಾಯಗೊಂಡಿದ್ದಾರೆ.

ಸಹೇಲ್ ವಲಯ ಕದನ

ಅಲ್ ಖೈದಾ ಮತ್ತು ಇಸ್ಲಾಮಿಕ್ ಸ್ಟೇಟ್‌ನ ಬೆಂಬಲ ಪಡೆದ ಸಶಸ್ತ್ರ ಹೋರಾಟಗಾರರು ಮಾಲಿ, ಬುರ್ಕಿನಾಫಾಸೋ, ನೈಗರ್ ಪ್ರದೇಶಗಳ ಮೇಲೆ ದಾಳಿ ಮಾಡುತ್ತಾ ಆಫ್ರಿಕಾ ಖಂಡದ ಪಶ್ಚಿಮ ಭಾಗದಲ್ಲಿ ಅಶಾಂತ ಪರಿಸ್ಥಿತಿ ಸೃಷ್ಟಿಸಿದ್ದಾರೆ.

ಸಿರಿಯಾ ದಂಗೆ

ಷರಿಯಾ ಆಡಳಿತದ ಪೂರ್ಣ ಮುಸ್ಲಿಂ ರಾಷ್ಟ್ರವೇ ಆಗಿರುವ ಸಿರಿಯಾದಲ್ಲಿ ಈಗ ಆಂತರಿಕ ಸಂಘರ್ಷ ನಡೆಯುತ್ತಿದೆ. ದೇಶದ ವಿವಿಧೆಡೆಗೂ ಈ ಸಂಘರ್ಷ ವಿಸ್ತರಿಸಿದ್ದು, ಸಿರಿಯಾ ಅಶಾಂತ ಪರಿಸ್ಥಿತಿಯಲ್ಲಿದೆ.

ಮ್ಯಾನ್ಮಾರ್ ಸೇನಾ ದಂಗೆ

ಬೌದ್ಧ ಧರ್ಮೀಯರ ನಾಡು ಮ್ಯಾನ್ಮಾರ್‌ನಲ್ಲಿಯೂ 2021ರಲ್ಲಿ ಸೇನಾ ದಂಗೆ ನಡೆದಿದ್ದು, ಅದೀಗ ನಾಗರಿಕ ಹೋರಾಟಕ್ಕೆ, ಆಂತರಿಕ ಸಂಘರ್ಷಕ್ಕೆ ಪ್ರೇರಣೆ ನೀಡಿದೆ. ಜುಂಟಾ ಬಣದ ಹಿಡಿತದಲ್ಲಿದ್ದ ಹಲವಾರು ಪ್ರದೇಶಗಳು ಬಂಡುಕೋರರ ವಶವಾಗಿದೆ. ಆಂತರಿಕ ಸಂಘರ್ಷ ಮುಂದುವರಿದಿದೆ.

ಕಾಂಗೊ ಸಶಸ್ತ್ರ ಸಂಘರ್ಷ

ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೊ ದೇಶದಲ್ಲಿಯೂ ಆಂತರಿಕ ಸಂಘರ್ಷ ನಡೆಯುತ್ತಿದೆ. ಎಂ23 ಬಂಡುಕೋರರ ಗುಂಪು ಸೇರಿದಂತೆ ಹಲವಾರು ಸಶಸ್ತ್ರ ಹೋರಾಟದ ಬಣಗಳು ದೇಶದೊಳಗೇ ಬಡಿದಾಟ ನಡೆಸುತ್ತಾ ಕಾಂಗೊ ದೇಶವನ್ನು ಅಶಾಂತಿಯ ನಾಡಾಗಿಸಿವೆ.

ಮೆಕ್ಸಿಕೊ ಡ್ರಗ್ಸ್ ವಾರ್

ಅಮೆರಿಕದ ನೆರೆಯ ದೇಶವಾದ ಮೆಕ್ಸಿಕೊದಲ್ಲಿಯೂ ಹಿಂಸಾಚಾರ, ದಂಗೆ ನಡೆಯುತ್ತಿದೆ. ಕಾರಣ ಮಾದಕದ್ರವ್ಯ ಜಾಲ. ಮಾದಕ ದ್ರವ್ಯಗಳ ತಯಾರಿಕೆ, ಸಾಗಣೆ, ಮಾರಾಟ ಜಾಲದಲ್ಲಿ ತೊಡಗಿರುವ ಹತ್ತಾರು ಗುಂಪುಗಳ ನಡುವೆಯೇ ಆಗ್ಗಾಗ್ಗೆ ಬಂದೂಕುಗಳ ಗರ್ಜಿಸುತ್ತವೆ. ನಾಗರಿಕರು, ಪೊಲೀಸರೂ ಸೇರಿದಂತೆ ನೂರಾರು ಮಂದಿಯ ಜೀವ ಹರಣವಾಗುತ್ತಿದೆ.

ಇರಾನ್-ಇಸ್ರೇಲ್ ಕದನ ವಿರಾಮ

ಇಸ್ರೇಲ್ ಸೇನೆ ಗಾಜಾ ಮೇಲೆ ಯುದ್ಧ ಮುಂದುವರಿಸಿರುವ ಸಂದರ್ಭದಲ್ಲೇ ಪ್ಯಾಲೆಸ್ತೀನ್ ಬೆಂಬಲಕ್ಕೆ ಇರಾನ್ ಮುಂದಾಯಿತು. ನೂರಾರು ಕ್ಷಿಪಣಿಗಳನ್ನು ಬಳಸಿಕೊಂಡು ಇಸ್ರೇಲ್ ಮೇಲೆ ಇರಾನ್ ಸೇನೆ ದಾಳಿ ಮಾಡಿತು. ಇಸ್ರೇಲ್ ಸೇನೆ ಕೂಡಾ ಇರಾನ್ ಮೇಲೆ ತೀವ್ರ ಸ್ವರೂಪದ ದಾಳಿ ನಡೆಸಿತು. ಇರಾನ್ ಅಣ್ವಸ್ತ್ರಗಳನ್ನು ಪ್ರಯೋಗಿಸಲು ಸಜ್ಜಾಗಿದೆ ಎಂಬ ಗುಪ್ತಚರ ವರದಿ ಬಂದ ಬಳಿಕವಂತೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಿಟ್ಟಿನಿಂದ ಖುದ್ದು ಹೋದರು. ಖಂಡಾಂತರ ಕ್ಷಿಪಣಿಗಳನ್ನು ಬಳಸಿ ಇರಾನ್ ಪರಮಾಣು ಘಟಕಗಳ ಮೇಲೆಯೇ ಇಸ್ರೇಲ್ ದಾಳಿ ನಡೆಸಿತು. ಇಸ್ರೇಲ್ ಬಲಿಷ್ಠ ಕ್ಷಿಪಣಿಗಳ ದಾಳಿಗೆ ಇರಾನ್ ತತ್ತರಿಸಿತು. ಕಡೆಗೆ ಅಮೆರಿಕ ಮೂಲಕ ಇಸ್ರೇಲ್ ಸೇನೆಯ ದಾಳಿ ತಗ್ಗುವಂತೆ ಮಾಡಿಸಿತು. ಕಡೆಗೆ ಎರಡೂ ದೇಶಗಳು ಅಮೆರಿಕ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಘೋಷಿಸಿದವು.

ಜೂನ್ 13ರಂದು ಶುರುವಾದ ಇಸ್ರೇಲ್-ಇರಾನ್ ನಡುವಿನ ಯುದ್ಧ, ಒಟ್ಟು 12 ದಿನಗಳ ಕಾಲ ನಡೆಯಿತು. ಪರಿಣಾಮ ಇರಾನ್ ಭಾಗದಲ್ಲಿ 950ಕ್ಕೂ ಅಧಿಕ ಜನರು ಸಾವಿಗೀಡಾದರು. ಇಸ್ರೇಲ್ ಕಡೆ 28 ಜೀವಹಾನಿಯಾಯಿತು.

ರಷ್ಯಾ-ಉಕ್ರೇನ್ ಯುದ್ಧ

ಯೂರೋಪ್ ಖಂಡದ ದೇಶಗಳನ್ನೊಳಗೊಂಡ 'ನ್ಯಾಟೊ' ಒಕ್ಕೂಟ ಸೇರುವುದಕ್ಕೆ ಉಕ್ರೇನ್ ಮುಂದಾಗಿದ್ದೇ ಕಾರಣವಾಗಿ ರಷ್ಯಾ ಸಿಟ್ಟಿಗೆದ್ದಿತು. ಉಕ್ರೇನ್‌ನ ಕೆಲವು ಭಾಗಗಳನ್ನು ಆಕ್ರಮಿಸಿಕೊಳ್ಳಲು ಮೊದಲಿಟ್ಟಿತು. ಪ್ರತಿಯಾಗಿ ಉಕ್ರೇನ್ ಕೂಡಾ ಮಾಸ್ಕೊ ಮೇಲೆ ಡ್ರೋಣ್‌ಗಳ ಮೂಲಕ ದಾಳಿ ಆರಂಭಿಸಿತು. ಪರಿಣಾಮವಾಗಿ 'ರಷ್ಯಾ-ಉಕ್ರೇನ್' ನಡುವೆ 2022ರಲ್ಲಿ ಯುದ್ಧ ಆರಂಭಗೊಂಡಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆ, ಮಿತ್ರ ದೇಶವಾದ ಭಾರತದ ಮಾತಿಗೂ ರಷ್ಯಾ-ಉಕ್ರೇನ್ ಕಿವಿಗೊಡಲಿಲ್ಲ. ಪರಮಾಪ್ತ ಮಿತ್ರ ಪ್ರಧಾನಿ ನರೇಂದ್ರ ಮೋದಿ ಅವರ 'ಇದು ಯುದ್ಧದ ಸಮಯವಲ್ಲ, ಅಭಿ ವೃದ್ಧಿಯ ಯುವ' ಎಂಬ ಹಿತವಚನಕ್ಕೂ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಕಿವಿಗೊಟ್ಟಿಲ್ಲ. 3 ವರ್ಷಗಳೇ ಕಳೆದರೂ ಯುದ್ಧ ಕೊನೆಗೊಂಡಿಲ್ಲ. ಮುಂದುವರಿದೇ ಇದೆ. ರಷ್ಯಾ-ಉಕ್ರೇನ್ ನಡುವಿನ ಕದನದ ಪರಿಣಾಮವಾಗಿ ಉಕ್ರೇನ್ ಭಾಗದಲ್ಲಿ 2022ರ ಫೆಬ್ರವರಿಯಿಂದ 2025ರ ಜೂನ್‌ವರೆಗೆ 13,580 ಜನರು ಸಾವಿಗೀಡಾಗಿದ್ದಾರೆ. 34,115 ನಾಗರಿಕರು ಗಾಯ ಗೊಂಡಿದ್ದಾರೆ ಎಂಬ ಅಂಕಿ ಅಂಶವನ್ನು ವಿಶ್ವಸಂಸ್ಥೆ ಪ್ರಕಟಿಸಿದೆ. 16 ಸಾವಿರ ಜನರನ್ನು ರಷ್ಯಾ ಸೇನೆ ಬಂಧಿಸಿದ ಎಂದು ಉಕ್ರೇನ್ ಸರಕಾರ ಹೇಳುತ್ತಿದೆ. ರಷ್ಯಾ ಭಾಗದಲ್ಲಿ 621 ನಾಗರಿಕರು ಹತರಾಗಿದ್ದಾರೆ. 789 ಜನರು ಕಣ್ಮರೆ ಯಾಗಿದ್ದಾರೆ ಎಂದು ರಷ್ಯಾ ಸರಕಾರ ಹೇಳಿಕೊಂಡಿದೆ. ಅಮೆರಿಕದ ವಾಲ್ ಸ್ಟ್ರೀಟ್ ಜರ್ನಲ್ ಪತ್ರಿಕೆ ಮಾತ್ರ, 2022ರಲ್ಲಿ ಶುರುವಾದ ಉಕ್ರೇನ್-ರಷ್ಯಾ ಯುದ್ಧದಿಂದಾಗಿ ಉಕ್ರೇನ್ ಸೇನೆಯ 80 ಸಾವಿರ ಯೋಧರು ಸಾವಿಗೀ ಡಾಗಿದ್ದಾರೆ. 4 ಲಕ್ಷ ಸೈನಿಕರು ಗಾಯಗೊಂಡಿದ್ದಾರೆ ಎಂದು ವರದಿ ಪ್ರಕಟಿಸಿದೆ. ರಷ್ಯಾ ರಕ್ಷಣಾ ಸಚಿವಾಲಯದ ಅಂಕಿ ಅಂಶ ಪ್ರಕಾರ ಉಕ್ರೇನ್ ಸೇನೆಯ 1 ಲಕ್ಷಕ್ಕೂ ಅಧಿಕ ಸೈನಿಕರು ರಷ್ಯಾ ದಾಳಿಯಿಂದ ಹತರಾಗಿದ್ದಾರೆ. ಬಿಬಿಸಿ ಸುದ್ದಿಸಂಸ್ಥೆ ಪ್ರಕಾರ, ಉಕ್ರೇನ್ ಸೇನೆಯ ದಾಳಿಯಿಂದಾಗಿ ರಷ್ಯಾ ಸೇನಾಪಡೆಗಳಲ್ಲಿ ಕನಿಷ್ಠ 1.85 ಲಕ್ಷ - ಗರಿಷ್ಠ 2.67 ಲಕ್ಷ ಸೈನಿಕರು ಹತರಾಗಿದ್ದಾರೆ.

ರಷ್ಯಾ ದಾಳಿಗೆ ನಲುಗಿದ ಉಕ್ರೇನ್‌ನ ಒಂದು ನಗರದ ಚಿತ್ರ.

▶▶ 6 ತಿಂಗಳಲ್ಲಿ 10511 ಬೀದಿ ನಾಯಿ ಕಡಿತ ▶▶ ತುಮಕೂರು ಸಿಟಿ, ಗ್ರಾಮಾಂತರದಲ್ಲೂ ದಂಡು

ಕಲ್ಪತರು ನಾಡಿನಲ್ಲಿ ಬೀದಿ ನಾಯಿಗಳ ಹಾವಳಿ

ಜಿಲ್ಲಾ ನೋಟ

ರಂಗನಾಥ ಕೆ. ಹೊನ್ನಮರಡಿ

ತುಮಕೂರು: ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಗಿಂತ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿದ್ದು ಮಕ್ಕಳು, ವೃದ್ಧರು ಸೇರಿದಂತೆ ಸಾರ್ವಜನಿಕರು ಒಂಟಿಯಾಗಿ ಸಂಚರಿಸಲು ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಜನವರಿ ತಿಂಗಳಿಂದ ಜೂನ್ ವರೆಗೆ ಜಿಲ್ಲೆಯಲ್ಲಿ ಹತ್ತುವರೆ ಸಾವಿರದಷ್ಟು ಅಂದರೆ 10,511 ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ. ಈ ಘಟನೆಯಲ್ಲಿ ಐದು ಮಂದಿ ಸಾವಿಗೀಡಾಗಿದ್ದಾರೆ..!

ನಾಯಿಗಳ ದಂಡು

ಬೀದಿಗಳಲ್ಲಿ ಹಗಲು ರಾತ್ರಿ ಎನ್ನದೇ ಗುಂಪು ಗುಂಪಾಗಿ ಓಡಾಡುವ ಬೀದಿ ನಾಯಿಗಳನ್ನು ನೋಡಿದರೆ ಬೆಚ್ಚಿ ಬೀಳುವಂಥ ಆತಂಕದ ಸ್ಥಿತಿ ಉಂಟಾಗಿದೆ. ಒಂಟಿಯಾಗಿ ಸಂಚರಿಸಿದರೆ ಮನುಷ್ಯರ ಮೇಲೆ ಅಟ್ಯಾಕ್ ಮಾಡಿ ದುರಂತ ಸೃಷ್ಟಿಸುತ್ತವೆ. ಬೀದಿ ನಾಯಿಗಳ ಹಾವಳಿಯಿಂದ ರಾತ್ರಿ ವೇಳೆ ಸಾರ್ವಜನಿಕರು ಜೀವ ಬಿಗಿ ಹಿಡಿದುಕೊಂಡು ಸಂಚರಿಸಬೇಕಾಗುತ್ತದೆ. ಎಷ್ಟೋ ಬಾರಿ ಹಗಲು ವೇಳೆಯೂ ನಾಯಿಗಳು ಮನುಷ್ಯರ ಮೇಲೆ ದಾಳಿ ನಡೆಸಿದ ಉದಾರಣೆಗಳು ಸಾಕಷ್ಟಿವೆ.

ಮಾಂಸ ತ್ಯಾಜ್ಯ ಅಸಮರ್ಪಕ ವಿಲೇವಾರಿ

ಜಿಲ್ಲೆಯಲ್ಲಿ ಕೆಲವು ಮಾಂಸದ ಅಂಗಡಿಗಳು ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುತ್ತಿಲ್ಲ ಇದರಿಂದಾಗಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಮಾಂಸದ ರುಚಿ ಕಂಡುಕೊಂಡ ನಾಯಿಗಳು ಮನುಷ್ಯರ ಮೇಲೆ ದಾಳಿ ಮಾಡುತ್ತಿವೆ. ಮಾಂಸ ತ್ಯಾಜ್ಯ ಅಸಮರ್ಪಕ ವಿಲೇವಾರಿಗೆ ಜಿಲ್ಲಾಡಳಿತ, ಸ್ಥಳೀಯ ಸಂಸ್ಥೆಗಳು ಕಡಿವಾಣ ಹಾಕಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಬೇಕಾಗಿದೆ.

ಬೈಕು ಸವಾರರನ್ನೂ ಬಿಟ್ಟಿಲ್ಲ

ದ್ವಿಚಕ್ರವಾಹನದಲ್ಲಿ ಸಂಚರಿಸುವ ಸವಾರರ ಮೇಲೆ ಭಯವಿಲ್ಲದೆ ನುಗ್ಗುವ ಬೀದಿ ನಾಯಿಗಳಿಂದ ಪ್ರಾಣ ಹಾನಿ ಉಂಟಾಗಿರುವ ನಿದರ್ಶನಗಳಿವೆ. ಮನುಷ್ಯರು ಅಷ್ಟೇ ಅಲ್ಲದೆ ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡುವ ಚಾಳಿಯನ್ನು ಬೀದಿ ನಾಯಿಗಳು ರೂಢಿ ಮಾಡಿಕೊಂಡಿವೆ. ಕಳೆದ ಆರು ತಿಂಗಳಲ್ಲಿ 9910 ಬೀದಿ ನಾಯಿ ಕಡಿತದ ಪ್ರಕರಣ ದಾಖಲಾಗಿರುವುದು ಆತಂಕ ಮೂಡಿಸಿದೆ. ಸ್ಥಳೀಯ ಸಂಸ್ಥೆ ಆಡಳಿತ ವ್ಯವಸ್ಥೆ ಈ ಬೀದಿ ನಾಯಿಗಳಿಗೆ ಕಡಿವಾಣ ಹಾಕಬೇಕಾಗಿದೆ. ಇನ್ನಷ್ಟು ಮಂದಿ ಈ ನಾಯಿಗಳಿಗೆ ಬಲಿಯಾಗುವ ಮುನ್ನ ತುರ್ತು ಕ್ರಮ ವಹಿಸಬೇಕಾಗಿದೆ.

ನಾಯಿ ಕಡಿತಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಉಚಿತ ಔಷಧಿ ದೊರೆಯುತ್ತದೆ. ನಾಯಿ ಕಡಿತಕ್ಕೆ ಒಳಗಾದವರು ಕೂಡಲೇ ಸಮೀಪದ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದುಕೊಳ್ಳಿ.

-**ಚಂದ್ರಶೇಖರ್**, ಡಿಎಚ್‌ಒ, ತುಮಕೂರು

ಕಳೆದ ಆರು ತಿಂಗಳ ನಾಯಿ ಕಡಿತ ಪ್ರಕರಣ

ತುಮಕೂರು	2013
ಗುಬ್ಬಿ	1281
ಕೊರಟಗೆರೆ	1224
ಮಧುಗಿರಿ	1214
ತಿಪಟೂರು	1169
ಪಾವಗಡ	938
ತುರುವೇಕೆರೆ	917
ಕುಣಿಗಲ್	843
ಚಿ.ನಾ.ಹಳ್ಳಿ	601
ಶಿರಾ	311

ಗ್ರಾಮಾಂತರದಲ್ಲೂ ಹಾವಳಿ

ಕಳೆದ 6 ತಿಂಗಳಲ್ಲಿ ತುಮಕೂರು ನಗರ ಹಾಗೂ ತುಮಕೂರು ಗ್ರಾಮಾಂತರ ಪ್ರದೇಶದಲ್ಲಿ 2013 ನಾಯಿ ಕಡಿತ ಪ್ರಕರಣಗಳು ದಾಖಲಾ ಗಿದ್ದು ಮೊದಲ ಸ್ಥಾನದಲ್ಲಿವೆ. ನಾಯಿ ಹಾವಳಿಗೆ ಒಬ್ಬರು ಮೃತಪಟ್ಟಿರುವ ಪ್ರಕರಣ ದಾಖಲಾಗಿದೆ. ಬೀದಿ ನಾಯಿ ಕಡಿತದಲ್ಲಿ ಗುಬ್ಬಿ ತಾಲೂಕು ಎರಡನೇ ಸ್ಥಾನದಲ್ಲಿದೆ. ತಾಲೂಕಿನೊಳಗೆ 1281 ಪ್ರಕರಣ ವರದಿಯಾಗಿದ್ದು ಒಂದು ಸಾವು ಸಂಭವಿಸಿದೆ.

ಉಳಿದ ತಾಲೂಕು ಎಷ್ಟು

2ನೇ ಸ್ಥಾನದ ಗುಬ್ಬಿ ಬಿಟ್ಟರೇ ಮೂರನೇ ಸ್ಥಾನದಲ್ಲಿ ಕೊರಟಗೆರೆ ಇದೆ. ಈ ತಾಲೂಕಿನೊಳಗೆ 1224 ಪ್ರಕರಣಗಳು ವರದಿಯಾಗಿವೆ. ಮಧುಗಿರಿ ಯಲ್ಲಿ 1214 ಪ್ರಕರಣ, ತಿಪಟೂರಿನಲ್ಲಿ 1169, ಪಾವಗಡದಲ್ಲಿ 938 ಹಾಗೂ ಒಂದು ಸಾವು ಸಂಭವಿಸಿದೆ. ತುರುವೇಕೆರೆ- 917, ಕುಣಿಗಲ್- 843, ಚಿಕ್ಕನಾಯಕನಹಳ್ಳಿ - 601 ಹಾಗೂ ಶಿರಾ- 311 ಪ್ರಕರಣಗಳು ವರದಿಯಾಗಿವೆ. ಶಿರಾ ತಾಲೂಕಿನಲ್ಲಿ ನಾಯಿ ಕಡಿತಕ್ಕೆ ಕಳೆದ ಆರು ತಿಂಗಳಲ್ಲಿ ಇಬ್ಬರು ಬಲಿಯಾಗಿದ್ದಾರೆ.

ಯಾರನ್ನೂ ಬಿಡುತ್ತಿಲ್ಲ

ಕಾಡು ಪ್ರಾಣಿಗಳಿಗಿಂತ ಬೀದಿ ನಾಯಿಗಳಿಗೆ ಹೆದರಬೇಕಾದ ಪರಿಸ್ಥಿತಿ ಜಿಲ್ಲೆಯಲ್ಲಿ ಉಂಟಾಗಿದೆ. ಮಕ್ಕಳು, ವೃದ್ಧರು, ಮಹಿಳೆಯರ ಮೇಲೆ ಹಗಲಿ ನಲ್ಲಿಯೇ ಭಯವಿಲ್ಲದೆ ದಾಳಿ ಮಾಡುವ ಬೀದಿ ನಾಯಿಗಳಿಂದ ಅವಾಂತರ ಸೃಷ್ಟಿಯಾಗುತ್ತಿದೆ. ಜಿಲ್ಲಾಡಳಿತ ಬೀದಿ ನಾಯಿಗಳಿಗೆ ಕಡಿವಾಣ ಹಾಕ ಬೇಕು ಎನ್ನುತ್ತಾರೆ ತುಮಕೂರಿನ ಯುವ ಮುಖಂಡ ಶಶಿಕಿರಣ್. ಜಿಲ್ಲೆಯಲ್ಲಿ ಬೀದಿ ನಾಯಿ ಗಳ ಸಂತಾನೋತ್ಪತ್ತಿ ಅಧಿಕವಾಗುತ್ತಿದ್ದು ನಿಯಂತ್ರಿಸುವುದು ಕಷ್ಟವಾಗುತ್ತಿದೆ. ಜಿಲ್ಲಾಡಳಿತ ನಾಯಿ ಹಾವಳಿಗೆ ಕಡಿವಾಣ ಹಾಕಿ ಮನುಷ್ಯರ ಪ್ರಾಣ ಹಾನಿಯನ್ನು ತಪ್ಪಿಸ ಬೇಕಾಗಿದೆ. ಇದಕ್ಕೆ ಸಂಬಂಧಿ ಸಿದ ಇಲಾಖೆಗಳಿಗೆ ಸೂಚನೆ ನೀಡಬೇಕಿದೆ.

ಬೇರೆ ಕಡೆಯ ನಾಯಿಗಳು ತುಮಕೂರಿಗೆ ಶಿಫ್ಟ್

ಬೆಂಗಳೂರು, ನೆಲಮಂಗಲ ಹಾಗೂ ಜಿಲ್ಲೆಯ ಸುತ್ತಮುತ್ತ ಹಿಡಿದ ನಾಯಿಗಳನ್ನು ರಾತ್ರೋರಾತ್ರಿ ತುಮಕೂರಿಗೆ ತಂದು ಬಿಟ್ಟು ಹೋಗುತ್ತಿದ್ದಾರೆ. ಇದರಿಂದ ಬೆಳಗ್ಗೆಯಾದರೆ ಬೀದಿಯಲ್ಲಿ ನಾಯಿಗಳ ಗುಂಪು ಕಾಣುತ್ತದೆ. ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳು ಬೇರೆ ಕಡೆಯಿಂದ ಬಿಟ್ಟು ಹೋಗುತ್ತಿರುವ ನಾಯಿಗಳು ಸೇರಿಕೊಂಡು ಮನುಷ್ಯರು, ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡಿ ದೊಡ್ಡ ಆತಂಕ ಸೃಷ್ಟಿಸುತ್ತಿವೆ..!

▶▶ ರೈತರಿಗೆ ಬೆಳೆ ಇಳುವರಿ ಕುಸಿತದ ಆತಂಕ ▶▶ ಗೊಬ್ಬರದ ಬಗ್ಗೆ ಆತಂಕ ಬೇಡವೆಂದ ಡಿಸಿ

ನಿಲ್ಲದ ಗೊಬ್ಬರ ಗದ್ದಲ, ನೀಗದ ಯೂರಿಯಾ ಕೊರತೆ

ಜಿಲ್ಲಾ ನೋಟ

ಗಣೇಶ್ ಕಮ್ಮಾಪುರ

ದಾವಣಗೆರೆ: ಮೆಕ್ಕೆಜೋಳ ಇನ್ನಿತರ ಬೆಳೆಗೆ ಮೇಲು ಗೊಬ್ಬರವಾಗಿ ಹಾಗೂ ಭತ್ತಕ್ಕೆ ತಳಗೊಬ್ಬರವಾಗಿ ಬಳಸುವ ಯೂರಿಯಾ ಗೊಬ್ಬರದ ಅಭಾವದಿಂದ ರೈತರು ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮೆಕ್ಕೆಜೋಳ, ಬಿಳಿಜೋಳ, ತೊಗರಿ ಸೇರಿ ಇತರೆ ಬೆಳೆಗಳ ಬಿತ್ತನೆಯಾಗಿದ್ದು, ಈಗ ಈ ಬೆಳೆಗಳಿಗೆ ಮೇಲು ಗೊಬ್ಬರವಾಗಿ ಯೂರಿಯಾ ಬೇಕಿದೆ. ಜತೆಗೆ, ಭತ್ತದ ಕೃಷಿ ಚಟುವಟಿಕೆಯೂ ಜಿಲ್ಲೆಯಲ್ಲಿ ಆರಂಭಗೊಂಡಿರುವ ಭತ್ತಕ್ಕೆ ಕೆಳಗೊಬ್ಬರವಾಗಿ ಯೂರಿಯಾ ಬೇಕೇಬೇಕು. ಆದರೆ, ಮಾರುಕಟ್ಟೆಯಲ್ಲಿ ಸಮರ್ಪಕವಾಗಿ ಎಲ್ಲೂ ಯೂರಿಯಾ ರಸಗೊಬ್ಬರ ದೊರೆಯುತ್ತಿಲ್ಲ. ಇದರಿಂದ ಅನ್ನದಾತರಿಗೆ ಮುಂದೇನು? ಎಂಬ ಪ್ರಶ್ನೆ ಮನೆಮಾಡಿದೆ.

ನ್ಯಾನೋ ಯೂರಿಯಾ ಬಳಕೆಗೆ ಹೆಚ್ಚಿನ ಒತ್ತು ನೀಡುವಲ್ಲಿ ಸರಕಾರ ಯೂರಿಯಾ ಗೊಬ್ಬರ ಪೂರೈಕೆ ಕಡಿಮೆ ಮಾಡಿದ್ದು ಅಭಾವ ಸೃಷ್ಟಿಯಾಗಿದೆ ಎನ್ನಲಾಗುತ್ತಿದೆ. ಅಲ್ಲದೆ, ಈ ಬಾರಿ ಎಲ್ಲೆಡೆ ಸಮೃದ್ಧ ಮಳೆಯಾಗಿದ್ದರಿಂದ ರೈತರು ಅದೇ ಖುಷಿಯಲ್ಲಿ ಬಿತ್ತನೆ ಕಾರ್ಯ ಮುಗಿಸಿದ್ದರು. ಆದರೀಗ, ಗೊಬ್ಬರ ಅಭಾವದಿಂದ ಬೆಳೆ ಇಳುವರಿ ಇಳಿಮುಖ ವಾಗುವ ಆತಂಕ ಸೃಷ್ಟಿಯಾಗಿದೆ.

ಹರಳು ಗೊಬ್ಬರಕ್ಕೆ ಬೇಡಿಕೆ

ಈ ಮೊದಲಿನಿಂದಲೂ ರೈತರು ಹರಳು ರೂಪದ ಯೂರಿಯಾ ರಸಗೊಬ್ಬರ ಬಳಸಿದ್ದರಿಂದ ಪ್ರಸ್ತುತ ಮಾರುಕಟ್ಟೆಗೆ ಬಂದಿರುವ ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾದ ದ್ರವ ರೂಪದ ನ್ಯಾನೋ ಯೂರಿಯಾ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ.

ಮನವೊಲಿಕೆಗಿಲ್ಲ ಮನ್ನಣೆ

ದ್ರವ ರೂಪದ ಪರಿಸರಸ್ನೇಹಿ ನ್ಯಾನೋ ದ್ರಾವಣ ಬಳಕೆಯಿಂದ ಅನಗತ್ಯ ವೆಚ್ಚಕ್ಕೆ ಕಡಿವಾಣ ಬೀಳಲಿದೆ. ಸಾಗಣೆ ವೆಚ್ಚ, ಕೂಲಿಯಾಳು ಹಾಗೂ ಕೃತಕ ಅಭಾವದಿಂದ ಹೆಚ್ಚಿನ ದರ ಸೇರಿದಂತೆ ಹಲವು ಹೊರೆಗಳು ತಪ್ಪುತ್ತದೆ. ಜತೆಗೆ, ನ್ಯಾನೋ ಯೂರಿಯಾ ಡ್ರೋನ್ ಮೂಲಕ ಸಿಂಪಡಿಸುವುದರಿಂದ ಎಲ್ಲ ಎಲೆಗಳಿಗೆ ನೇರವಾಗಿ ಬೀಳುವುದರಿಂದ ಇಳುವರಿಗೆ ಹೆಚ್ಚು ಸಹಕಾರಿ. ಹಾಗಾಗಿ, ನ್ಯಾನೋ ಯೂರಿಯಾ ಬಳಕೆಗೆ ಮುಂದಾಗುವಂತೆ ಅಧಿಕಾರಿಗಳು ಪ್ರಚಾರದ ಜತೆ ಮನವೊಲಿಸುವ ಯತ್ನ ಮಾಡುತ್ತಿದ್ದರೂ ರೈತರು ಮಾತ್ರ ಇನ್ನೂ ಯೂರಿಯಾ ರಸಗೊಬ್ಬರವೇ ಬೇಕೆಂದು ಕೇಳುತ್ತಿದ್ದಾರೆ.

15 ಎಕರೆ ಹೊಲದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿ ಎಡೆಕುಂಟೆ ಸಹ ಹೊಡೆದಿರುವೆ. ಈಗ ಯೂರಿಯಾ ಗೊಬ್ಬರ ಹಾಕಲೇಬೇಕು. ಆದರೆ, ಎಲ್ಲೂ ರಸಗೊಬ್ಬರ ಸಿಗುತ್ತಿಲ್ಲ. ಆದರೆ, ಅಂಗಡಿಯವರು ಯೂರಿಯಾ ಬದಲು ನ್ಯಾನೋ ಯೂರಿಯಾ ಇದೆ. ಇದನ್ನೇ ಬಳಸಿ ಎನ್ನುತ್ತಾರೆ. ಆದರೆ, ಹೊಸದಾಗಿ ಬಂದಿರುವ ನ್ಯಾನೋ ಬಳಸಿ ಬೆಳೆಗೆ ಏನಾದರೂ ತೊಂದರೆಯಾದರೆ ಯಾರು ಜವಾಬ್ದಾರಿ?

-**ಕುಬೇರಪ್ಪ**, ರೈತ ಮಾಯಕೊಂಡ

ಕಳೆದ ಬಾರಿ ದರ ಕುಸಿತ ಹಾಗೂ ಇತರೆ ಸಮಸ್ಯೆಯಿಂದ ರೈತರು ನಷ್ಟಕ್ಕೀಡಾಗಿದ್ದಾರೆ. ಈ ಬಾರಿ ಉತ್ತಮ ಮಳೆಯಿಂದ ಮೆಕ್ಕೆ ಜೋಳ, ತೊಗರಿ ಮತ್ತಿತರ ಬೆಳೆ ಬಿತ್ತನೆ ಮಾಡಿದ್ದಾರೆ. ಆದರೆ ಯೂರಿಯಾ ಕೊರತೆಯಾಗಿ ಬೆಳೆಗೆ ಅಡಚಣೆ ಯಾಗುತ್ತಿದೆ. ಇದರಿಂದ ರೈತರು ಮತ್ತೆ ಸಂಕಷ್ಟಕ್ಕೆ ಸಿಲುಕಿದ್ದು, ಜಿಲ್ಲಾಧಿಕಾರಿ, ಕೃಷಿ ಇಲಾಖೆ ಜಂಟಿ ನಿರ್ದೇಶಕರು ಕೂಡಲೇ ಕ್ರಮಕೈಗೊಂಡು ಸಮರ್ಪಕ ಯೂರಿಯಾ ಒದಗಿಸಬೇಕು.

-**ಸತೀಶ್ ಕೊಳೆನಹಳ್ಳಿ**, ರೈತ ಮುಖಂಡರು

ಮಾರಾಟಗಾರರು ಅನವಶ್ಯಕವಾಗಿ ಗೊಬ್ಬರ ದಾಸ್ತಾನಿಟ್ಟಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತದೆ. ರೈತರೂ ಕೂಡ ನ್ಯಾನೋ ಯೂರಿಯಾ ಬಳಕೆಗೆ ಮುಂದಾಗಬೇಕು. ಕೆಲವು ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿರುವ ಬಗ್ಗೆ ವರದಿ ಬಂದಿದೆ. ಅಂಥವರ ಬಗ್ಗೆ ದೂರು ನೀಡಿದರೆ ಕ್ರಮ ವಹಿಸಲಾಗುವುದು.

-**ಗಂಗಾಧರಸ್ವಾಮಿ**, ಜಿಲ್ಲಾಧಿಕಾರಿ

ರೈತರು ಫಸಲಿನ ಹೆಚ್ಚು ಇಳುವರಿ ತೆಗೆಯಲು ಬೆಳೆ ಪರಿವರ್ತನೆ ಪದ್ಧತಿ ಅನುಸರಿಸಬೇಕು. ದ್ವಿದಳಧಾನ್ಯ ಬೆಳೆದರೆ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಇದರಿಂದ ರಸಗೊಬ್ಬರದ ಮೇಲಿನ ಅವಲಂಬನೆ ತಪ್ಪುತ್ತದೆ. ಅಲ್ಲದೆ, ಅಗತ್ಯವಿದ್ದಲ್ಲಿ ನ್ಯಾನೋ ಯೂರಿಯಾ ಬಳಸಬಹುದು. ಇದು ನೇರವಾಗಿ ಗಿಡಗಳಿಗೆ ಸೇರುತ್ತದೆ. ಇದರಿಂದ ಉತ್ತಮ ಇಳುವರಿ ಸಾಧ್ಯ.

- **ಶ್ರೀಧರಮೂರ್ತಿ**, ಸಹಾಯಕ ನಿರ್ದೇಶಕ (ಕೃಷಿ)

ಅಂಗಡಿಗಳಿದ್ದರೂ ಅಲಭ್ಯ

ದಾವಣಗೆರೆ ಜಿಲ್ಲೆಯಲ್ಲಿ ಕೃಷಿ ಇಲಾಖೆ ಹಾಗೂ ಖಾಸಗಿ ಮಳಿಗೆ ಸೇರಿ 3 ಸಾವಿರಕ್ಕೂ ಅಧಿಕ ಹೆಚ್ಚು ಬಿತ್ತನೆ ಬೀಜ ಮತ್ತು ರಸಗೊಬ್ಬರ ಮಾರಾಟಗಾರರ ಅಂಗಡಿಗಳಿವೆ. ಈ ವಾರದಲ್ಲೇ 2 ಸಾವಿರ ಮೆಟ್ರಿಕ್ ಟನ್ ಯೂರಿಯಾ ಜಿಲ್ಲೆಗೆ ಪೂರೈಕೆಯಾಗಲಿದೆ ಎಂದು ಸ್ವತಃ ಜಿಲ್ಲಾಧಿಕಾರಿಗಳೇ ತಿಳಿಸಿದ್ದಾರೆ. ಆದರೂ, ಅನೇಕ ಅಂಗಡಿ ಅಲೆದರೂ ಯೂರಿಯಾ ರಸಗೊಬ್ಬರ ಮಾತ್ರ ಸಿಗುತ್ತಿಲ್ಲ ಎನ್ನುತ್ತಾರೆ ಖರೀದಿಗೆ ಬಂದ ರೈತರು.

ದುಬಾರಿ ಬೆಲೆಗೆ ಮಾರಾಟ

ಸರಕಾರ 267 ರೂ.ಗೆ 45 ಕೆಜಿಯ ರಸಗೊಬ್ಬರ ಚೀಲ ಪೂರೈಸುತ್ತಿದೆ. ಆದರೆ, ಅನೇಕ ಮಾರಾಟಗಾರರು ಯೂರಿಯಾ ಗೊಬ್ಬರ ಇಲ್ಲವೆನ್ನುತ್ತಿದ್ದಾರೆ. ಗೊಬ್ಬರ ಸಿಗುತ್ತೋ ಇಲ್ಲವೋ ಎಂಬ ಆತಂಕದಲ್ಲಿ ಹೆಚ್ಚಿನ ಬೆಲೆ ತೆತ್ತಾದರೂ ಖರೀದಿಸುವ ಧಾವಂತದಲ್ಲಿದ್ದಾರೆ ರೈತರು. ಇದನ್ನೇ ಬಂಡವಾಳವಾಗಿಸಿಕೊಂಡ ಕೆಲ ಮಾರಾಟಗಾರರು 350 ರೂ. ನಿಂದ 450 ರೂ. ವರೆಗೆ ದುಪ್ಪಟ್ಟು ದರಕ್ಕೆ ಮಾರುತ್ತಿದ್ದಾರೆ ಎಂದು ರೈತ ಮುಖಂಡ ಸತೀಶ್ ಕೊಳೆನಹಳ್ಳಿ ಆರೋಪಿಸುತ್ತಾರೆ.

ಆತಂಕ ಬೇಡ

ಜಿಲ್ಲೆಗೆ ಅಗತ್ಯಕ್ಕೆ ತಕ್ಕ ರಸಗೊಬ್ಬರ ಪೂರೈಕೆಯಾಗುತ್ತಿದೆ. ನೀರಾವರಿ ಭತ್ತದ ಬೆಳೆಗೆ ರಸಗೊಬ್ಬರ ಮಾರಾಟಗಾರರು ಗೊಬ್ಬರವನ್ನು ದಾಸ್ತಾನಿಟ್ಟಿದ್ದಾರೆ. ಹೀಗಾಗಿ ಗೊಬ್ಬರ ಇಲ್ಲವೆಂದು ರೈತರನ್ನು ಸಾಗ ಹಾಕುತ್ತಿದ್ದಾರೆ. ಮಾರಾಟಗಾರರು ರೈತರಿಗೆ ಗೊಬ್ಬರ ಮಾರಾಟ ಮಾಡದೇ ದಾಸ್ತಾನಿಟ್ಟುಕೊಳ್ಳುವಂತಿಲ್ಲ. ದಾಸ್ತಾನಿಟ್ಟಿರುವ ಗೋದಾಮುಗಳನ್ನು ತಹಸೀಲ್ದಾರ್‌ಗಳು, ಉಪ ವಿಭಾಗಾಧಿಕಾರಿಗಳು, ಕೃಷಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಅಭಯ ನೀಡಿದ್ದಾರೆ.

ಬೇಕೇ ಬೇಕು ಯೂರಿಯಾ

ರೈತರ ಸಂಕಷ್ಟ ಮುಂದಿಟ್ಟುಕೊಂಡು ಬಿಜೆಪಿ ರಾಜ್ಯಾದ್ಯಂತ ಹೋರಾಟಕ್ಕಿಳಿದಿದ್ದು, ಸಮಯಕ್ಕೆ ಸರಿಯಾಗಿ ಗೊಬ್ಬರ ಕೊಡದೇ ರೈತರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕುತ್ತಿರುವ ರಾಜ್ಯ ಸರಕಾರದ ನಡೆ ಖಂಡನೀಯ. ತನ್ನ ತಪ್ಪನ್ನು ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸುತ್ತಲೇ ಇದೆ.

ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ರವಿಹಾರ

ಸಿದ್ದಿಗೆ ತಡೆಯಾಗ ಬಲ್ಲ ಪ್ರಸಿದ್ಧಿ

ಸೋಲನ್ನು ಒಪ್ಪಿಕೊಂಡಾಗ ಮಾತ್ರ ಅದು ನಿಜವಾದ ಸೋಲು ಎನ್ನುವುದನ್ನು ಕೇಳಿದ್ದೇವೆ. ಸೋತಾಗ ಸಂಭಾಳಿಸಿ ಕೊಳ್ಳುವ ಸಾಮರ್ಥ್ಯ ಗಳಿಸುವುದೇ ನಿಜವಾದ ಗೆಲುವು ಎನ್ನುವುದನ್ನು ಸಹ ಕೇಳುತ್ತಲೇ ಇರುತ್ತೇವೆ. ಹಾಗಾದರೆ ಗೆಲುವನ್ನು ಒಪ್ಪಿಕೊಂಡರೆ ಅದು ನಿಜವಾದ ಗೆಲುವೇ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಗೆಲುವನ್ನು ಒಪ್ಪಿಕೊಂಡು, ಅದನ್ನೇ ಅಪ್ಪಿಕೊಂಡುಬಿಟ್ಟರೆ ಮುಂದಿನ ನಡೆ ಹೇಗೆ ಸಾಧ್ಯ? ಮುಂದೆ ಗೆಲುವನ್ನು ಕಾಣುವುದು ಕೇವಲ ಕನಸಾಗಿಯೇ ಉಳಿದುಬಿಡುತ್ತದೆ. ಪಡೆದದ್ದೇ ಅಂತಿಮ ಗೆಲುವಾಗಿ ಬಿಡುತ್ತದೆ. ಯಶಸ್ಸಿನ ಸಂದರ್ಭದಲ್ಲಿ ಸಂಭ್ರಮಿಸುವುದಕ್ಕಿಂತ, ಸಂಭಾಳಿಸಿಕೊಳ್ಳುವ ಅಗತ್ಯವೇ ಅವಶ್ಯವಾಗಿರುತ್ತದೆ.

ಯಶಸ್ಸಿನಿಂದ ಗಳಿಸಬಹುದಾದದ್ದು ಹಣ, ಅಧಿಕಾರ, ಪ್ರಭಾವ, ಕೀರ್ತಿ ಮುಂತಾದವುಗಳು. ಇವೆಲ್ಲವನ್ನೂ ಸಂಭಾಳಿಸಲು ಸ್ಥಿತಪ್ರಜ್ಞತೆ ಬಹು ಮುಖ್ಯ. ಯಶಸ್ಸಿನ ಸಂದರ್ಭದಲ್ಲಿ ಬಹಳ ವಾಗಿಯೇ ವಿಚಲಿತ ಗೊಳಿಸುವಂಥದ್ದು ಕೀರ್ತಿ. ಅದರಲ್ಲೂ ಜನ ಮನ್ನಣೆ ಅತಿಯಾಗಿ ದೊರೆತಾಗ, ಅದನ್ನು ಸ್ವೀಕರಿಸುವಲ್ಲಿ ಜಾಣತನ ತೋರದಿದ್ದಲ್ಲಿ, ಮುಂದಿನ ದಾರಿ ಖಂಡಿತವಾಗಿಯೂ ಅಧಃಪತನ ದೆಡೆಗೆ ಕರೆದುಕೊಂಡು ಹೋಗಿ ಬಿಡುತ್ತದೆ.

'ಅನ್ನದಾತರಿಂತ ಚಿನ್ನದಾತರ ತೀಕ್ಷ್ಣ, ಚಿನ್ನದಾತರಿಂತ ಹೆಣ್ಣು ಗಂಡೋಲುವ, ಮನ್ನಣೆಯ ದಾಹವದು ಎಲ್ಲದಕು ತೀಕ್ಷ್ಣತಮ, ತಿನ್ನುವುದ ದಾತ್ಮವನೆ ಮಂಕುತಿಮ್ಮ' ಎನ್ನುವ ಡಿವಿಜಿಯವರ ಕಗ್ಗವನ್ನು ಇಲ್ಲಿ ನೆನೆಯಬಹುದು.

ಜನ ಮನ್ನಣೆಗೆ ಅತಿಯಾಗಿ ಅಂಟಿಕೊಂಡರೆ, ಅದೇ ಗೀಳಾಗಿ ಪರಿವರ್ತಿತವಾಗಿ ಬಿಡುತ್ತದೆ. ಮೆಚ್ಚುಗೆ, ಮನ್ನಣೆ, ಶ್ಲಾಘನೆ ಎಲ್ಲವೂ ಸಹ ಯಶಸ್ಸು ಪಡೆದ ಸಂದರ್ಭದಲ್ಲಿ, ಒಬ್ಬರಿಂದ, ಒಂದು ಗುಂಪಿನಿಂದ ಅಥವಾ ಒಂದು ಸಮುದಾಯದಿಂದ ವ್ಯಕ್ತವಾಗುವ ತಾತ್ಕಾಲಿಕ ಪ್ರತಿಕ್ರಿಯೆ ಅಷ್ಟೇ ಎನ್ನುವುದು ಗಮನದಲ್ಲಿದ್ದರೆ, ಅಹಂ ಭಾವ ಹೆಡೆ ಎತ್ತಲಾರದು. ಇಲ್ಲವಾದಲ್ಲಿ ಪಡೆದ ಯಶಸ್ಸು ಮುಂದೆ ಪಡೆಯಬಹುದಾದ ಯಶಸ್ಸಿನ ದಾರಿಗೆ ಅಡ್ಡವಾಗಿ ನಿಂತುಬಿಡುತ್ತದೆ. ಒಮ್ಮೆ ಮನ್ನಣೆಯ ಅಡಿಯಾಳಾದರೆ, ಅದು ಸಾಧಕರ ಗಮನವನ್ನು ಸಂಪೂರ್ಣ ತನ್ನೆಡೆಗೆ ಸೆಳೆದುಕೊಂಡು, ಅವರ ಕ್ರಿಯಾಶೀಲತೆಯನ್ನು ಕ್ಷಯಿಸುವಂತೆ ಮಾಡಿ, ಸಾಧನೆಯ ಮಾರ್ಗದಿಂದ ವಿಮುಖಗೊಳಿಸಿಬಿಡುತ್ತದೆ. ಪಡೆಯುವ ಯಶಸ್ಸು ಸ್ವಸ್ವಸ್ತೆ ಹಾಗೂ ಸಮಷ್ಟಿಯ ಉದ್ಧಾರಕ್ಕಾಗಿಯೇ ಹೊರತು ಜನಪ್ರಿಯತೆ ಗಳಿಸಲು ಎನ್ನುವ ಭಾವ ಅಭಿವೃದ್ಧಿ ಪಥದೆಡೆಗೆ ಕೊಂಡೊಯ್ಯುತ್ತದೆ.

'ಸಂಶೋಧನೆಯಲ್ಲಿ ಸಿಕ್ಕ ಯಶಸ್ಸು ತಂದ ಸಂತೋಷ, ಯಾವುದೇ ಪಾರಿತೋಷಕಗಳಿಗೆ ಸಮನಲ್ಲ' ಎಂದು ಹೇಳಿದ ನೊಬೆಲ್ ಪುರಸ್ಕೃತ ಸರ್ ಸಿ ವಿ ರಾಮನ್ ಅವರನ್ನು ಇಲ್ಲಿ ಸ್ಮರಿಸಬಹುದು. ಸಂಶೋಧನೆಯ ಫಲಿತಾಂಶವಷ್ಟೇ ಜಗದ ಉದ್ಧಾರಕ್ಕೆ ಅವಶ್ಯ, ಪುರಸ್ಕಾರವಲ್ಲ ಎಂಬ ವಿಶಾಲ ಚಿಂತನೆ ಅವರದಾಗಿತ್ತು. ಸಿದ್ಧಿಯ ದಾರಿಯಲ್ಲಿ ಸಾಗುವಾಗ, ಪ್ರಸಿದ್ಧಿಯ ಪ್ರಭಾವಕ್ಕೆ ಬೀಳಬಾರದೆಂಬ ಜಾಗೃತಿ ಬಹಳ ಅವಶ್ಯ.

• ಮಾಯಾ ಬಾಲಚಂದ್ರ

ಹನಿಮಳೆ

ಗೊಬ್ಬರ

ಗೊಬ್ಬರ ಪಡೆಯಲು
ಅಂಗಡಿಯಿಂದ ಅಂಗಡಿಗೆ
ಅನ್ನದಾತರ ಸುತ್ತಾಟ
ಸಮಸ್ಯೆ ಬಗೆಹರಿಸದೆ
ವಾದಗಳ ಸರಪಣಿಗೆ
ರಾಜಕಾರಣಿಗಳ ಕಿತ್ತಾಟ!

• ಪತ್ತಂಗಿ ಎಸ್ ಮುರಳಿ

ಅರಸಿಕೆರೆ ತಾಲೂಕಿನಲ್ಲಿರುವ ಈ ಬೆಟ್ಟ ಶ್ರೇಣಿಯ ತುದಿಯಲ್ಲಿ ಸಾಕಷ್ಟು ಕಾಡು ಇನ್ನೂ ಉಳಿದುಕೊಂಡಿದೆ; ಈ ಶ್ರೇಣಿಯುದ್ದಕ್ಕೂ ಹಲವು ಪುಟ್ಟ ಪುಟ್ಟ ದೇಗುಲ ಗಳಿರುವುದು ವಿಶೇಷ!

ಹಿರೇಕಲ್ಲು ಗುಡ್ಡದಲ್ಲೊಂದು ಚಾರಣ

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಇತ್ತೀಚೆಗೆ ಸ್ನೇಹಿತರೊಡನೆ ಅರಸೀಕೆರೆ ತಾಲೂಕಿನ ಹಿರೇಕಲ್ಲು ಗುಡ್ಡದ ರಾಮೇನಹಳ್ಳಿ ಅರಣ್ಯ ಪ್ರದೇಶದಲ್ಲಿರುವ ಹಿರೇಕಲ್ಲು ಬೆಟ್ಟದ ಸಿದ್ದೇಶ್ವರ ಸ್ವಾಮಿಯ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಅರಣ್ಯ ಪ್ರದೇಶ ನೋಡುವ ಅವಕಾಶ ಒದಗಿಬಂದಿತು. ಹಿರೇಕಲ್ಲು ಬೆಟ್ಟಗಳ ಸಾಲು ಸುಮಾರು 25 ಕಿ.ಮೀ. ಗಿಂತಲೂ ಹೆಚ್ಚು ಉದ್ದವಿದೆ. ನಾನಾ ವಿನ್ಯಾಸದ ಕಲ್ಲುಗಳು ಇಲ್ಲಿನ ವಿಶೇಷತೆ. ಈ ಬೆಟ್ಟಗಳ ಸಾಲಿನುದ್ದಕ್ಕೂ ಸಾಕಷ್ಟು ಕಾಡು ಇನ್ನೂ ಉಳಿದುಕೊಂಡಿದೆ. ಈ ಬೆಟ್ಟ ಸಾಲಿನಲ್ಲಿ ಹಲವು ದೇಗುಲಗಳೂ ಇವೆ! ಮಾಲೇಕಲ್ಲು ಲಕ್ಷ್ಮಿ ವೆಂಕಟರಮಣ ಸ್ವಾಮಿ, ಕೆಂಗಲ್ಲು ಸಿದ್ದೇಶ್ವರ ಸ್ವಾಮಿ, ನಾಗಪುರಿ ಶಂಕರೇಶ್ವರ ಸ್ವಾಮಿ, ಹಿರೇಕಲ್ಲು ಕೊಟ್ಟೂರೇಶ್ವರ ಸ್ವಾಮಿ, ಹೀಗೆ ಅಲ್ಲಲ್ಲಿ ದೇವರುಗಳ ಪುಣ್ಯಕ್ಷೇತ್ರದ ಇತಿಹಾಸವು ಇದೆ. ಹಿರಿಯ ಕಲ್ಲು ಬೆಟ್ಟದ ಸಿದ್ದೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಬಾಧೆ ಬಸವೇಶ್ವರ, ರಾಮೇಶ್ವರ, ಚನ್ನಬಸವೇಶ್ವರ ಕುಪ್ಪೂರು ಮರುಳಪ್ಪ, ದೋಣಿ ಶಿವ ಪಾರ್ವತಿ ನಾಟ್ಯಾಧಾರಿ. ಮಜ್ಜಿಗೆ ಹಳ್ಳ - ಈ ರೀತಿಯಲ್ಲಿ ನೋಡುವಂತಹ ಹಲವುಸ್ಥಳಗಳು ಈ ಗುಡ್ಡದಲ್ಲಿವೆ.



ನಾಗಪುರಿ ಕೋಟೆ

ಅರಸಿಕೆರೆ ಪಟ್ಟಣದಿಂದ ಪೂರ್ವದಿಕ್ಕಿನಲ್ಲಿ ಕಾಣಿಸುವ ಈ ಗಿರಿಶ್ರೇಣಿಯ ಮಧ್ಯದಲ್ಲಿ ನಾಗಪುರಿ ಎಂಬ ಸ್ಥಳವಿದೆ; ಬಹುಹಿಂದೆ ಇಲ್ಲಿ ನಿರ್ಮಿಸಲಾಗಿರುವ ಕೋಟೆಯ ಅವಶೇಷಗಳು ಕುತೂಹಲ ಹುಟ್ಟಿಸುತ್ತವೆ. ಅದನ್ನು ಆಳುತ್ತಿದ್ದವನೇ ತಿಮ್ಮಪ್ಪ ನಾಯಕ ಎಂಬ ಪಾಳೆಗಾರ; ಇದು ಶಂಕರೇಶ್ವರನ ದೇವಾಲಯದ ದಕ್ಷಿಣಕ್ಕೆ ಇದೆ. ತಿಮ್ಮಪ್ಪ ನಾಯಕನು ದೈವ ಭಕ್ತ.

ಹಿರೇಕಲ್ ಸಿದ್ದರ ಕ್ಷೇತ್ರವು ರಾಮನಹಳ್ಳಿ ಗ್ರಾಮದಿಂದ ಸುಮಾರು ಐದು ಕಿಲೋಮೀಟರ್ ದೂರದಲ್ಲಿದೆ. ಈ ಗುಡ್ಡದಲ್ಲಿ ರಮಣೀಯವಾದ ಕ್ಷೇತ್ರಗಳು ನೋಡಲು ಬಲು ಸುಂದರವಾಗಿವೆ. ಬೈಕನ್ನೇರಿ ಅರಸೀಕೆರೆಯಿಂದ ಹುಳಿಯಾರು ಮಾರ್ಗದಲ್ಲಿ ಸುಮಾರು 15 ಕಿ.ಮೀ. ದೂರ ಸಾಗಿ ರಾಮೇನಹಳ್ಳಿ ಗ್ರಾಮ ಪ್ರವೇಶಿಸುತ್ತಿದ್ದಂತೆ ಬೃಹತ್ ಕಮಾನು ಸ್ವಾಗತ ಕೋರಿತು. ಮುಂದೆ ಹೋದಂತೆಲ್ಲಾ ಕಲ್ಲುಮಣ್ಣಿನಿಂದ ಕೂಡಿದ ಎತ್ತರದ ರಸ್ತೆ, ನಡುವಲ್ಲೊಂದು ಕೆರೆ, ಸುತ್ತಲೂ ಹಚ್ಚ ಹಸುರಿನ ಸಿರಿ. ವಾಹನಗಳ ಭರಾಟೆ ಇಲ್ಲದ ಅರಣ್ಯ ಪ್ರದೇಶದಲ್ಲಿ ಹೋಗುತ್ತಿದ್ದರೆ ಆಹ್ಲಾದಕರ ಗಾಳಿ ಬೀಸಿ ಮನಸಿಗೆ ಉಲ್ಲಾಸ ನೀಡುತ್ತಿತ್ತು. ವಾಹನಗಳನ್ನು ಪಾರ್ಕ್ ಮಾಡಿ ಚಾರಣಕ್ಕೆ ಅನುವಾದೆವು.

ಬೆಳಗಿನಲ್ಲಿ ಚಾರಣ ಶುರು ಮಾಡಿ ಹೊರಟ ನಮಗೆ ಅಲ್ಲಿನ ವಾತಾವರಣ ಕೈ ಬೀಸಿ ಕರೆಯುತ್ತಿತ್ತು. ದೂರದಿಂದಲೇ ಕಾಣುವ ಸಿದ್ದೇಶ್ವರ ಸ್ವಾಮಿಯ ದೇವಸ್ಥಾನ ಇಲ್ಲೇ ಹತ್ತಿರ ಇರಬೇಕೆಂದುಕೊಂಡು ಹೊರಟರೆ ಸುಮಾರು 5 ಕಿ.ಮೀ. ನಷ್ಟು ದೂರ ಬೆಟ್ಟ ಗುಡ್ಡಗಳನ್ನು ದಾಟಿಕೊಂಡು ಸಾಗಬೇಕಾದ ಅನಿವಾರ್ಯತೆ. ಅದರಿಂದ ಬೇಸರವಿಲ್ಲ, ಬದಲಿಗೆ ಗಿಡ ಮರಗಳನ್ನು ನೋಡುವ ಅವಕಾಶ; ಅಲ್ಲೆಲ್ಲಾ ಹರಡಿದ್ದ ನಾನಾ ವಿನ್ಯಾಸದ ಕಲ್ಲುಗಳನ್ನು ನೋಡುವ ಅವಕಾಶ. ದಾರಿಯಲ್ಲಿ ಮೊದಲು ಕಂಡಿದ್ದು ನಂದಿ ದೇಗುಲ.



ಹಸಿರಿನ ಸುಂದರ ದೃಶ್ಯ

ಅಲ್ಲಿಂದ ಮುಂದೆ ನಡೆಯುತ್ತಾ ಹೊರಟ ನಮಗೆ ಸುತ್ತಮುತ್ತಲಿನ ಹಚ್ಚ ಹಸಿರಿನ ವನಸಿರಿ, ಮಧ್ಯ ಮಧ್ಯದಲ್ಲಿ ಬರುತ್ತಿದ್ದ ಮಳೆ, ಮಂಜು ಮುಸುಕಿದ ವಾತಾವರಣ ಇವುಗಳನ್ನು ಆಸ್ವಾದಿಸುತ್ತಾ ಮುನ್ನಡೆದಾಗ ಚಾರಣ ಮಾಡಿದ ಸುಸ್ತು, ಆಯಾಸ ಯಾವುದೂ ನೆನಪಾಗಲಿಲ್ಲ. ಸುಮಾರು ಒಂದೂವರೆ ಗಂಟೆ ಚಾರಣದ ನಂತರ ಸಿದ್ದೇಶ್ವರ ಸ್ವಾಮಿಯ ದೇವಸ್ಥಾನವನ್ನು ತಲುಪಿದಾಗ ಮಧ್ಯಾಹ್ನ 3 ಗಂಟೆ ಆಗಿತ್ತು. ಅಂದು ದೇಗುಲದಲ್ಲಿ ಸ್ವಾಮಿಯ ಪೂಜೆ ಇದ್ದುದರಿಂದ ಅಲ್ಲಿ ದಾಸೋಹ ಕೂಡಾ ಇತ್ತು. ಪೂಜೆ ಮುಗಿಸಿ ದಾಸೋಹ ಪ್ರಸಾದ ಸ್ವೀಕರಿಸಿದೆವು. ನಂತರ ಪಕ್ಕದಲ್ಲೇ ಇದ್ದ ಗಂಗಮ್ಮ ದೇವಿಯ ಹತ್ತಿರ ಹೋಗಿ ಅಲ್ಲಿ ಪೂಜೆ ಸಲ್ಲಿಸಿದೆವು. ಇಲ್ಲಿ ಪೂಜೆ ಮಾಡಿದರೆ, ಸಂತಾನ ಭಾಗ್ಯವಾಗುವುದೆಂಬ ನಂಬಿಕೆಯಿದೆ.

ಹೆಜ್ಜೆ ಗುರುತುಗಳು

ಅಲ್ಲಿಂದ ಮತ್ತೆ ನಮ್ಮ ಚಾರಣ ಶುರುವಾಗಿದ್ದು ಬೆಟ್ಟದ ತುತ್ತ ತುದಿಯಲ್ಲಿರುವ ಸುಂದರ ತಾಣಕ್ಕೆ. ಆ ಸ್ಥಳದಲ್ಲಿ ಒಂದು ಕಲ್ಲಿನ ಮೇಲೆ, ದೊಡ್ಡ ದೊಡ್ಡ ಗಾತ್ರದ ಹೆಜ್ಜೆ ಗುರುತುಗಳು ನಮ್ಮನ್ನು ಆಶ್ಚರ್ಯಚಕಿತಗೊಳಿಸಿದವು. ಪುರಾತನ ಕಾಲದಲ್ಲಿ ರೂಪುಗೊಂಡ ಇಂತಹ ಹೆಜ್ಜೆಗುರುತುಗಳು ಒಂದು ವಿಸ್ಮಯ. ಈಗಲೂ ಅಲ್ಲೊಂದು ದೇವಸ್ಥಾನವಿದ್ದು ಅದರ ಮುಂದೆ ತ್ರಿಶೂಲವಿದೆ. ಅಲ್ಲಿಂದು ನೋಡಿದರೆ ಸುತ್ತಲೂ ಎತ್ತ ನೋಡಿದರೂ ಅರಣ್ಯ ಪ್ರದೇಶ, ಹಸಿರು ಹೊತ್ತ ಗಿಡಮರಗಳು; ಅಲ್ಲಲ್ಲಿ ಮಳೆ ಬೀಳುವ ದೃಶ್ಯ ಕಾಣಿಸುತ್ತಿತ್ತು! ಒಮ್ಮೆಲೇ ರಭಸದ ಮಳೆ ನಂತರ ಮಂಜು.

ಈ ಎಲ್ಲಾ ದೃಶ್ಯಗಳನ್ನು ಕಣ್ತುಂಬಿಕೊಂಡು ವಾಪಾಸ್ ಕೆಳಗಿಳಿಯುವಾಗ ಭಾರವಾದ ಮನಸ್ಸು, ಏನನ್ನೋ ಕಳೆದುಕೊಂಡ ದುಗುಡ. ಮತ್ತೊಮ್ಮೆ ಸಮಯ ಸಿಕ್ಕರೆ ಮತ್ತೆ ಹೋಗಬೇಕೆಂದೆನಿಸಿದೆ.

ಕೀಟೋ ಡಯಟ್

• ಡಾ. ಶ್ರೀಲತಾ ಪದ್ಯಾಣ

ನಾನು ಇತ್ತೀಚೆಗೆ ತುಂಬಾ ದಪ್ಪಗಾಗಿದ್ದೀನಿ ಕಣೇ.. ಹಾಗಾಗಿ ತಿನ್ನೋದನ್ನೇ ಕಡಿಮೆ ಮಾಡಿದೀನಿ, ಜಿಮ್ ಮಾಡೋಕೆ ಬೇರೆ ಹೋಗ್ತಾ ಇದೀನಿ, ಮನೇಲಿ ಏರೋಬಿಕ್ಸ್ ಮಾಡ್ತೀನಿ, ಬೆಳಿಗ್ಗೆ, ಸಾಯಂಕಾಲ ಪಾರ್ಕ್‌ಲ್ಲಿ ವಾಕ್ ಮಾಡಿ ಬರ್ತೀನಿ , ಆದ್ರೂ ಏನ್ಮಾಡಿದ್ರೂ ಸಣ್ಣನೇ ಆಗ್ತಿಲ್ಲ.. ಎನ್ನುವ ಬಹಳಷ್ಟು ಜನರನ್ನು ನೋಡಿರಬಹುದು. ಆಹಾರದ ಪ್ರಮಾಣ ಕೂಡಾ ಕಡಿಮೆ ಮಾಡಿದ್ರೂ, ವ್ಯಾಯಾಮ ಮಾಡಿದ್ರೂ ದೇಹದ ತೂಕ ಕಡಿಮೆ ಆಗ್ತಿಲ್ಲ! ಯಾಕೆ ಹೀಗಾಯ್ತು? ಇದಕ್ಕೆ ಕಾರಣಗಳು ಹಲವು. ಅದರೊಂದಿಗೆ ಅವು ಚಿರಪರಿಚಿತ! ಕೆಲಸದ ಒತ್ತಡ, ಮನೆಮಂದಿಯೊಂದಿಗೆ ಕೂಡಿ ಸಂತಸಪಡಲು ಸಮಯವಿಲ್ಲದಿರುವುದು, ಮೊಬೈಲ್, ಟಿವಿ, ಕಂಪ್ಯೂಟರ್‌ಗಳನ್ನು ಹೆಚ್ಚಾಗಿ ನೋಡುತ್ತಾ ಕುಳಿತುಕೊಳ್ಳುವುದು, ಜಂಕ್ ಆಹಾರ ಪದಾರ್ಥಗಳ ಸೇವನೆ, ಮಾನಸಿಕ ನೆಮ್ಮದಿಯಿಲ್ಲದಿರುವುದು ಈ ಎಲ್ಲವೂ ಸಮಸ್ಯೆಯನ್ನು ದೊಡ್ಡದಾಗಿಸುತ್ತದೆ. ಸ್ಥೂಲಕಾಯತೆಯಿಂದ ಬರುವ ವಿವಿಧ ರೋಗಗಳು, ವಿಶೇಷವಾಗಿ ತೀವ್ರ ರಕ್ತದೊತ್ತಡ, ಮಧುಮೇಹ 2ನೇ ವಿಧ, ನಿದ್ರೆಯಲ್ಲಿ ಉಸಿರುಕಟ್ಟುವಿಕೆ, ಕೆಲವು ರೀತಿಯ ಕ್ಯಾನ್ಸರ್, ಸಂಧಿವಾತ, ಮೂತ್ರ ನಾಳ ರೋಗ, ಅಸ್ತಮಾ, ಈ ಬಗೆಯ ಅನಾರೋಗ್ಯದ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಆದರೆ ತೂಕ ಇಳಿಸುವ ವಿಚಾರದಲ್ಲಿ ಆಹಾರವೇ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕಾಗಿ ಉಪವಾಸವೇ ಆಗಬೇಕೆಂದೇನಿಲ್ಲ. ಆಹಾರ ಕ್ರಮಗಳನ್ನು ಅನುಸರಿಸುತ್ತಲೂ ಇದು ಸಾಧ್ಯವಾಗುತ್ತದೆ. ಆ ಪರಿಹಾರವೇ ಕೀಟೋ ಡಯಟ್. ಇದನ್ನು ಕಡಿಮೆ ಕಾರ್ಬ್ ಕೀಟೋ ಡಯಟ್ ಅಂತಲೂ ಕರೆಯಲಾಗುತ್ತದೆ.ಇದರಿಂದ ದೇಹದ ಕೊಬ್ಬಿನ ಪ್ರಮಾಣವನ್ನು ಕರಗಿಸುವಲ್ಲಿ ಪರಿಣಾಮಕಾರಿಯಾದಂತಹ ಕೀಟೋನ್ ಉತ್ಪತ್ತಿಯಾಗುತ್ತದೆ. ಇದು ಮೆದುಳು ಮತ್ತು ದೇಹದ ಇತರ ಭಾಗಗಳಿಗೆ ಶಕ್ತಿ ನೀಡುತ್ತದೆ. ಈ ಆಹಾರ ಕ್ರಮದಲ್ಲಿ ಸಂಪೂರ್ಣ ಕೊಬ್ಬಿನ ಆಹಾರಗಳನ್ನೇ ಹೆಚ್ಚು ಸೇವಿಸಲಾಗುತ್ತದೆ (70%)

ಹಾಗೂ ಕಡಿಮೆ ಪ್ರೊಟೀನ್ (25%), ಕಾರ್ಬೋಹೈಡ್ರೇಟ್‌ಗಳನ್ನು (5%) ಸೇವಿಸಲಾಗುತ್ತದೆ.

ಎಚ್ಚರ ಅಗತ್ಯ

ದೇಹಕ್ಕೆ ಆಹಾರವಾಗಿ ಕಾರ್ಬೋಹೈಡ್ರೇಟ್ ಸಿಗದ ಕಾರಣ ಲಿವರ್ ನಲ್ಲಿರುವ ಕೊಬ್ಬನ್ನು ಮತ್ತು ಸೇವಿಸುವ ಆಹಾರ ಪದಾರ್ಥಗಳಲ್ಲಿರುವ ಕೊಬ್ಬನ್ನು ಪರಿಣಾಮಕಾರಿಯಾಗಿ ಕರಗಿಸಲು ದೇಹವು ತೊಡಗುತ್ತದೆ. ಇತರೆ ಡಯಟ್ ಪ್ರಕಾರಗಳಿಗಿಂತ ವೇಗದಲ್ಲಿ ದೇಹವು ತೂಕವನ್ನು ಕಳೆದು ಕೊಳ್ಳುತ್ತಾ ಹೋಗುತ್ತದೆ. ಅಷ್ಟೇ ಅಲ್ಲದೇ ಇದು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ವೈರಸ್ ಸೋಂಕುಗಳ ವಿರುದ್ಧವೂ ಹೋರಾಡುತ್ತದೆ. ಇದು ಪರಿಹಾರ ಒದಗಿಸುವುದಾದರೂ, ದೀರ್ಘ ಕಾಲಗಳವರೆಗೆ ಈ ಪದ್ಧತಿಯನ್ನು ಅನುಸರಿಸುತ್ತಿದ್ದರೆ ಅಷ್ಟೇ ಆರೋಗ್ಯದ ಬಗ್ಗೆ ಜಾಗರೂಕರಾಗಿರಬೇಕು.

ಯಾವ ಆಹಾರ ಸೇವಿಸಬಹುದು?

ಕಿಟೋ ಡಯಟ್ ನಲ್ಲಿ ಆರೋಗ್ಯಯುತ ಕೊಬ್ಬರಿ ಎಣ್ಣೆ, ತೆಂಗಿನ ತುರಿ, ಮೊಸರು, ಬೆಣ್ಣೆ, ತುಪ್ಪ, ಗೋಡಂಬಿ, ಪಿಸ್ತಾ, ಬಾದಾಮಿ, ವಾಲ್ ನಟ್, ಎಣ್ಣೆ ಬೀಜಗಳೇ ಮುಖ್ಯ ವಾಗಿರುತ್ತದೆ. ಎಲ್ಲಾ ರೀತಿಯ ಹಣ್ಣುಗಳನ್ನು ಸೇವಿಸಬಹುದು. ಎಲ್ಲಾ ರೀತಿಯ ಸೊಪ್ಪುಗಳು, ರಸಭರಿತ ತರಕಾರಿಗಳನ್ನು ಸೇವಿಸಬಹುದು. ನಾಟಿ ಮೊಟ್ಟೆ, ಬೇಯಿಸಿದ ಮೀನು ಸೇರಿಸಬಹುದು. ದಿನಕ್ಕೆ 3-4 ಲೀಟರ್ ನೀರು ಕುಡಿಯಬೇಕು. ಎಳನೀರು ಸೇವಿಸಬಹುದು.

ಯಾವ ಆಹಾರ ಸೇವಿಸಬಾರದು?

ಅಧಿಕ ಕಾರ್ಬೋಹೈಡ್ರೇಟ್ ಇರುವ ಆಹಾರಗಳು, ಫಾಸ್ಟ್ ಫುಡ್, ಪಿಜ್ಜಾ, ಬರ್ಗರ್, ಅನ್ನ, ಚಾಕಲೇಟ್, ಕ್ಯಾಂಡಿ, ಸಕ್ಕರೆ, ಓಟ್ಸ್, ಕಾರ್ನ, ಹಾಲು, ಗೆಡ್ಡೆ-ಗೆಣಸು ಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಸೇವಿಸ ಬಹುದು ಅಥವಾ ಸೇವಿಸದಿರ ಬಹುದು. ಈ ಆಹಾರ ವ್ಯವಸ್ಥೆಯನ್ನು ತಜ್ಞ ವೈದ್ಯರ ಮಾರ್ಗ ದರ್ಶನದಲ್ಲಿಯೇ ಪಾಲಿಸಬೇಕು.

ಮನಸ್ಸು ಒಂದು ಅದ್ಭುತ!

ಮನದಿಂದ ಮನಕೆ ಪಾರ್ವುದು
ಬಾಳಿನುರಿಯ ಕಿಡಿ
ಮನೆಯಿಂದ ಮನೆಗಲೆವ ಗಾಳಿ ಹೊಗೆಯಂತೆ
ಮನುಜರ ಪರಸ್ಪರೋದ್ರೇಕ ಜಗದ ವಿಲಾಸ
ಮನವೆ ಪರಮಾದ್ಭುತವೊ - ಮಂಕುತಿಮ್ಮ॥

ಒಂದು ಮನೆಯ ಒಲೆಯಲ್ಲಿ ಬೆಂಕಿ ಹಚ್ಚುವಾಗ ಉಂಟಾಗುವ ಹೊಗೆಯು ಪಕ್ಕದ ಮನೆಗೂ ನುಗ್ಗಿ ವ್ಯಾಪಿಸುವಂತೆ, ಮನುಷ್ಯನ ಬೇಗೆಗಳು, ಕೋಪ ತಾಪಗಳು, ಇಷ್ಟ ಅನಿಷ್ಟಗಳು, ರಾಗ ಮಮತೆಗಳು ಸಹ ಮನದಿಂದ ಮನಕ್ಕೆ ನುಗ್ಗುತ್ತವೆ. ಈ ಮನುಷ್ಯನ ಪರಸ್ಪರವಾದ ಉದ್ರೇಕಗಳು ಈ ಜಗದ ವಿಲಾಸವೇ ಆಗಿದೆ. ಮನುಷ್ಯನ ಮನವೇ ಈ ಜಗದಲ್ಲಿ ಉದ್ರೇಕಿಸುವ ಶಕ್ತಿ ಹೊಂದಿರುವ ಈ ಮನಸ್ಸು ಜಗತ್ತಿನ ಪರಮಾದ್ಭುತವೇ ಆಗಿದೆ ಎಂದು ವಿವರಿಸುತ್ತಾರೆ.

ಈ ಸೃಷ್ಟಿಯಲ್ಲಿ ಮನುಷ್ಯನ ಮನಸ್ಸೇ ಒಂದು ಅದ್ಭುತವಾದ ನಿರ್ಮಾಣದ ಕೊಡುಗೆ. ಈ ಜಗದ ತಂಟೆಗಳಾಗಲಿ, ಭಾವ, ರಾಗ, ದ್ವೇಷ, ಈರ್ಷ್ಯೆಗಳಿಗಾಗಲಿ ಎಲ್ಲಕ್ಕೂ ಮುಖ್ಯವಾಗುವುದೇ ಮನಸ್ಸು. ಈ ಜಗತ್ತಿನ ಸಕಲ ಜೀವ ರಾಶಿಗಳಿಗೂ ಮನಸ್ಸು ಎಂಬುದು ಇದ್ದರೂ ಮನುಷ್ಯನನ್ನು ಹೊರತು ಪಡಿಸಿದ ಜೀವ ರಾಶಿಗಳಲ್ಲಿ ಕೇವಲ ಹಸಿವು, ಬೆದರು, ಬೆದೆಗೆ ಮಾತ್ರವೇ ಸೀಮಿತವಾಗಿ ಜೀವಿಗಳು ಜೀವನವನ್ನು ನಡೆಸುತ್ತಿದ್ದರೆ, ಈ ಮಾನವನ ಹೃದಯದಲ್ಲಿ ಬೆದೆ, ಬೆದರು, ಹಸಿವನ್ನು ಮೀರಿದ ರಾಗ, ದ್ವೇಷಗಳು, ಸ್ವಹಿತ, ಅರಿವು, ಅರಿಕೆ, ಕಲಿಕೆ, ಅನ್ವೇಷಣೆ, ಎಲ್ಲವೂ ನನಗೇ ಬೇಕೆನ್ನುವ ಮನೋಭಿಲಾಷೆ ಹೀಗೆ ಹತ್ತಾರು ಗುಣಗಳನ್ನು ಹೊಂದಿರುವ ಈ ಮನುಷ್ಯನ ಮನಸ್ಸೇ ಒಂದು ಮರ್ಕಟವಿದ್ದಂತೆ. ಮನಸ್ಸಿನಂತೆ ಭಾವ, ಭಾವದಂತೆ ಕಾರ್ಯ, ಕಾರ್ಯದಂತೆ ತಕ್ಕುದಾದ ಫಲ ಪಡೆಯುವ ಈ ಮಾನವನ ಮನಸ್ಸು ಎಂದಿಗೂ ಅವಿರತ. ಸುಮ್ಮನಿರದೆ ಸದಾ ಏನಾದರೂ ಬೇಕು, ಮಾಡಬೇಕು ಎನ್ನುವ ಹಪಾಹಪಿತನದಲ್ಲಿಯೇ ಕಾರ್ಯ ನಿರ್ವಹಿಸುತ್ತಲಿರುತ್ತದೆ. ಹಾಗಾಗಿಯೇ ಈ ಪದ್ಯದಲ್ಲಿ 'ಮನವೇ ಪರಮಾದ್ಭುತವೋ' ಎಂದು ಹೇಳಿರುವುದು. ಇಂಥಹ ಮನಸ್ಸು ಮಾಡುವ ಕಾರ್ಯಗಳು ತನ್ನಷ್ಟಕ್ಕೆ ತನಗೆ ಪರಿಣಾಮ ಬೀರದೆ, ಇತರರ ಮೇಲೂ ಪರಿಣಾಮವನ್ನು ಬೀರುತ್ತವೆ. ಅದು ಹೇಗೆಂದರೆ ಒಂದು ಮನೆಯಲ್ಲಿ ಅಡುಗೆ ಮಾಡಲೋಸುಗ ಹಚ್ಚಿದ ಒಲೆಯಿಂದ ಹೊಗೆಯುಂಟಾಗಿ, ಆ ಉಂಟಾದ ಹೊಗೆಯು ಕೇವಲ ಆ ಮನೆಗೆ ವ್ಯಾಪಿಸದೆ ಪಕ್ಕದ ಮನೆಗೂ ಒಳನುಗ್ಗುವಂತೆ, ಒಬ್ಬ ಮನುಷ್ಯನ ಆಲೋಚನೆಗಳು, ಉದ್ರೇಕಗಳು, ರಾಗ ಭಾವಗಳು, ಹಠಂಗಳು, ದ್ವೇಷಗಳೂ ಸಹ ಬೇರೊಂದು ಮನಗಳಿಗೆ ನುಗ್ಗಿ ಪರಿಣಾಮಗಳನ್ನುಂಟು ಮಾಡುತ್ತವೆ. ಈ ಮಾನವ ಜೀವಿಯು ಹೆಚ್ಚಿನದಾಗಿ ಒಬ್ಬರ ಬಗ್ಗೆ ಒಳ್ಳೆಯ ಸದ್ವಿಚಾರಗಳನ್ನು ಮಾಡುವ ಬದಲಾಗಿ ಬರೀ ಕೆಟ್ಟ ವಿಚಾರಗಳನ್ನೇ ಮಾಡುತ್ತಾ, ದ್ವೇಷವನ್ನೇ ಕಾರುತ್ತಾ, ಸ್ವಾರ್ಥಕ್ಕಾಗಿ ಈ ಜಗತ್ತನ್ನು, ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುತ್ತಲೇ ಇರುತ್ತಾನೆ. ಈ ಮನುಷ್ಯನ ಮನಸ್ಸು ಒಮ್ಮೆ ಇದ್ದ ಹಾಗೆ ಮತ್ತೊಮ್ಮೆ ಇರುವುದಿಲ್ಲ. ಹಾಗಾಗಿಯೇ ಇದೊಂದು ಮರ್ಕಟ ಬುದ್ಧಿಯದು. ಹಾಗಂತ ಇಂತಹ ಬುದ್ಧಿ ಇಲ್ಲದಿದ್ದರೆ ಈ ನರನಿಂದ ಯಾವ ಸಾಧನೆಯೂ ಸಹ ಆಗುತ್ತಲೇ ಇರಲಿಲ್ಲ. ಇಂಥಹ ಬುದ್ಧಿ, ಇಂಥಹ ಉದ್ರೇಕಗಳು ಜಗದವಿಲಾಸವೇ ಆಗಿದೆ. ಹಾಗಾಗಿ ಈ ಮಾನವನ ಹೃದಯವು ಈ ಜಗತ್ತಿನಲ್ಲಿ ಆ ಸೃಷ್ಟಿಕರ್ತನು ನಿರ್ಮಿಸಿದ ಪರಮಾದ್ಭುತವು ಎಂದು ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಮನುಷ್ಯನ ಮನಸ್ಸು ಎಂದಿಗೂ ದ್ವೇಷದಿಂದ, ಅಸೂಯೆಯಿಂದ ಹೆಚ್ಚು ಕೂಡಿರುವುದಲ್ಲದೆ, ಸ್ವಾರ್ಥ, ಕುಟಿಲೋಪತತೆಯ ಅಂಶಗಳಿಂದಲೇ ಕೂಡಿದೆ. ಇಲ್ಲಿ ಕೆಲವೇ ಸಂತರ, ಮಹಾಂತರ, ಆದರ್ಶವಾದಿಗಳ, ನಿಸ್ವಾರ್ಥಿಗಳ ಮನಸ್ಸುಗಳನ್ನು ಹೊರತು ಪಡಿಸಿದರೆ ನಮ್ಮಗಳ ಮನಸ್ಸು ಬರೀ ರಾಗ ದ್ವೇಷಗಳಿಂದಲೇ ಕೂಡಿದೆ. ಈ ಮನಸ್ಸು ಒಂದು ಮರ್ಕಟ. ಇದನ್ನು ತಹಬಂದಿಗೆ ತರುವುದನ್ನೇ ಅಧ್ಯಾತ್ಮ ಎಂದು ಕರೆಯುವುದು. ಸತ್ಯ ಚಿತ್ತವಿಲ್ಲದವರು 'ನೀರೊಳಗಿನ ಮೀನು, ಮೊಸಳೆಯಂತೆ, ಶ್ರೀಶೈಲದ ಕಾಗೆಯಂತೆ' ಎಂದು ದಾಸರುಗಳು ಹಾಡಿರುವುದು.

ಈ ಮನಸ್ಸಿನ ಕಾರ್ಯ, ಚರ್ಯೆಯ ಫಲ ಒಬ್ಬನಿಗೆ ಸೀಮಿತವಾಗದೆ ಅದು ಹಲವರ ಮೇಲೆ ಪರಿಣಾಮ ಬೀರಿ ಕಾಡುತ್ತಲಿರುತ್ತದೆ. ಹಾಗಾಗಿ ತನುವನ್ನ, ಮನಸ್ಸನ್ನ ಶುದ್ಧವಾಗಿಟ್ಟುಕೊಂಡು, ಇನ್ನೊಬ್ಬರ ಮೇಲೆ ಹೇರಿಕೆಯಾಗದಂತೆ ಜೀವನ ಮಾಡುವುದೇ ನಿಜ ಮಾನವ ಧರ್ಮ ಎಂಬುದು ಈ ಪದ್ಯದಲ್ಲಿ ಹೇಳಿದ್ದಾರೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಈಗಿನದ್ದಲ್ಲ, ಹಳೆಯ ಕಾಲದ್ದು (4)
4. ಲೋಪದೋಷಗಳನ್ನು ಸರಿಪಡಿಸುವವನು (4)
6. ಕೈವಶ ಎಂದರ್ಥ (4)
9. ಆಣತಿಯಿಲ್ಲದೆ ಮಾಡಿದ ಅಪಹಾಸ್ಯ (3)
11. ರೋಗದೊಂದಿಗೆ ಬರುವ ಜೋಡಿಪದ (3)
12. ತೀಕ್ಷ್ಣವಾಗಿರುವ ತುದಿಯೊಂದಿಗೆ ಬಂದಿರುವ ಹುಲ್ಲು (2)
13. ಗಾಳಿಗೆ ಮತ್ತೊಂದು ಹೆಸರಿದು (2)
14. ದೋಸೆ ಹುಯ್ಯುವ ಹೆಂಚು (3)
16. ಅಮಾಯಕವಾದ ಜೋಡಿ (3)
18. ಮೋಹಕ ನಡೆಯುಳ್ಳ ನಟಿ (4)
21. ಮನೆಯ ಮುಖ್ಯಸ್ಥ (4)
22. ಮೂಗನ್ನು ಸೆಳೆದ ಸುವಾಸನೆ (4)

ಮೇಲಿಂದ ಕೆಳಕ್ಕೆ

2. ದಶರಥ ನಂದನನ ಕಥೆ (4)
3. ಸ್ವರ್ಗದ ವಿರೋಧ ಪದ (3)
4. ಭೂಮಿಯನ್ನು ಕೊರೆದು ಮಾಡಿದ ದಾರಿ (3)
5. ಸಾಕ್ಷಿ ಹೇಳಲು ನ್ಯಾಯಾಲಯದಲ್ಲಿರುವ ಕಟ್ಟೆ (4)
7. ಹಗ್ಗದ ಇನ್ನೊಂದು ಹೆಸರು (2)
8. ಆ ಬಳಿಕ ಎನ್ನುವ ಪದ (4)
10. ಅಲುಗಾಡಿಸು ಎನ್ನುವ ಪದ (4)
14. ಗಣೇಶನ ಸಹೋದರ (4)
15. ಸೇವಕಿ (2)
17. ಮನಸ್ಸಿಗೆ ಖುಷಿಯನ್ನು ಕೊಡುವ (4)
19. ನಗುವಿನೊಂದಿಗೆ ಬಂದಿರುವ ಜಿಲ್ಲಾ ಕೇಂದ್ರ (3)
20. ಆಜ್ಞೆ ಅಥವಾ ಅಪ್ಪಣೆ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಪುರಾತನ 4. ಸುಧಾರಕ
6. ಕರಗತ 9. ಅಣಕ 11. ರುಜಿನ
12. ದರ್ಭೆ 13. ಹವಾ 14. ಕಾವಲಿ
16. ಯಮಕ 18. ಸುಹಾಸಿನಿ
21. ಯಜಮಾನ 22. ಪರಿಮಳ

ಮೇಲಿಂದ ಕೆಳಕ್ಕೆ
2. ರಾಮಾಯಣ 3. ನರಕ 4. ಸುರಂಗ
5. ಕಟಾಂಜನ 7. ರಜ್ಜು 8. ತರುವಾಯ
10. ಕದಲಿಸು 14. ಕಾರ್ತಿಕೇಯ
15. ದಾಸಿ 17. ಮನೋರಮ
19. ಹಾಸನ 20. ನಿರೂಪ

ದೈವತ್ವದ ಅಭಾವವೇ ದೆವ್ವಗಳ ನೆಲೆ, ಬೆಳಕಿನ ಅಭಾವವೇ ಕತ್ತಲೆ

ಒಂದು ಸಲ ಕತ್ತಲೆ ಭಗವಂತನ ಬಳಿಗೆ ಬಂದು, 'ದೇವಾ ನಾನು ಸೂರ್ಯನಿಗೆ ಯಾವ ಕೆಡುಕನ್ನೂ ಉಂಟು ಮಾಡಿಲ್ಲ. ಆದರೆ ಅವನು ಪ್ರತಿ ದಿನ ಬೆಳಗ್ಗೆ ಬಂದು ನನ್ನನ್ನು ಓಡಿಸುತ್ತಾನೆ ಅವನು ಬಂದ ತಕ್ಷಣ ನಾನು ಓಡಬೇಕು. ಇದ್ಯಾವ ನ್ಯಾಯ? ನಿರಂತರವಾಗಿ ಇದು ನಡೆಯುತ್ತಲೇ ಇದೆ, ನಾನು ಮಾಡಿರುವ ತಪ್ಪಾದರೂ ಏನು? ನೀವಾದರೂ ಸೂರ್ಯನಿಗೆ ಸ್ವಲ್ಪ ಬುದ್ಧಿ ಹೇಳಿ' ಎಂದು ದೂರು ಹೇಳಿತು.

ಆಗ ದೇವರು ಸೂರ್ಯನ ಬಳಿಗೆ ಬಂದು 'ಸೂರ್ಯ, ನೀನೇಕೆ ಅನಾವಶ್ಯಕವಾಗಿ ಕತ್ತಲೆಗೆ ತೊಂದರೆ ಕೊಡುತ್ತಿರುವೆ? ನಿರಂತರವಾಗಿ ಅದನ್ನು ಓಡಿಸುವೆಯಲ್ಲಾ ಕತ್ತಲೆ, ನಿನಗೇನು ತೊಂದರೆ ಮಾಡಿತ್ತು?' ಎಂದು ಕೇಳಿದ.

ಆಗ ಸೂರ್ಯನಿಗೆ ಆಶ್ಚರ್ಯವಾಯಿತು! 'ದೇವಾ ನಾನು ಕತ್ತಲೆ ಎಂಬುದನ್ನು ನೋಡಿಯೇ ಇಲ್ಲವಲ್ಲ. ಇನ್ನು ತೊಂದರೆ ಕೊಡುವುದು ಎಲ್ಲಿಂದ ಬಂತು? ಬೇಕಾದರೆ ಅವನನ್ನು ಕರೆಸಿ, ಎಲ್ಲವೂ ನಿಮ್ಮ ಮುಂದೆಯೇ ನಿರ್ಣಯವಾಗಲಿ' ಎಂದ ಸೂರ್ಯ. ದೇವರ ಮುಂದಿಟ್ಟಿರುವ ಇವರಿಬ್ಬರ ನ್ಯಾಯ ಇನ್ನೂ ಇತ್ಯರ್ಥವಾಗಿಲ್ಲ. ದೇವರು ಇಂದಿಗೂ ಪ್ರಯತ್ನಿಸುತ್ತಲೇ ಇದ್ದಾನೆ, ಆದರೆ ಸೂರ್ಯನ ಮುಂದೆ ಕತ್ತಲು ಎಂದೂ ಬಂದೇ ಇಲ್ಲ. ಅದು ಸಾಧ್ಯವೂ ಇಲ್ಲ. ಸೂರ್ಯನಿದ್ದಲ್ಲಿ ಕತ್ತಲು ಎಂದೂ ಬರುವುದಿಲ್ಲ. ಹಾಗೆಯೇ ದೆವ್ವ, ಭೂತ ಪಿಶಾಚಿಗಳೆಂಬ ದುಷ್ಟ ಶಕ್ತಿಗಳೆಲ್ಲಾ ಕತ್ತಲೆ ಇದ್ದಂತೆ. ಅವು ದೇವರ ಅಭಾವದಲ್ಲಿ ಹುಟ್ಟಿಬಿಡುವ ನಕಾರಾತ್ಮಕ ಶಕ್ತಿಗಳು. ಬೆಳಕಿನ ಅಭಾವ ಕತ್ತಲೆ ಹೇಗೋ ಹಾಗೆಯೇ ದೇವರ ಅಭಾವ ದೆವ್ವ ದುಷ್ಟಶಕ್ತಿಗಳು ಎನ್ನುವುದು. ಹೇಗೆ ಬೆಳಕಿದ್ದರೆ ಕತ್ತಲಿಗೆ ಜಾಗವಿಲ್ಲವೋ .. ನಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಯೋಚನೆಗಳು, ದೈವದ ಆಚರಣೆಯ ಒಂದು ಶಿಸ್ತು, ಬದುಕಿನಲ್ಲಿ ಸದಾ ಚಟುವಟಿಕೆಯಿಂದ ಇರುವ ಜೀವನ ಶೈಲಿ ಇದ್ದಾಗ ಅಲ್ಲಿ ಖಿನ್ನತೆಗೆ ಜಾಗವಿರುವುದಿಲ್ಲ. ಪರಮಾತ್ಮ ಎನ್ನುವ ಆಲೋಚನೆಯೇ ನಮ್ಮೊಳಗೊಂದು ಸಕಾರಾತ್ಮಕ ಭರವಸೆಯನ್ನು,

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಆಚಾರ ವಿಚಾರಗಳೆಂಬ ಶಿಸ್ತನ್ನು ನಮಗೆ ನೀಡುತ್ತದೆ. ಭಗವಂತನಲ್ಲಿ ಅಪರಿಮಿತವಾದ ನಂಬಿಕೆ ಮತ್ತು ಸಮರ್ಪಣಾ ಭಾವವಿದ್ದಾಗ ಎಲ್ಲವನ್ನೂ ಅವನಿಗೆ ಅರ್ಪಿಸಿ ಕಷ್ಟ ಸುಖ ಎರಡನ್ನು ಕೂಡ ಸಮಚಿತ್ತದಿಂದ ಸ್ವೀಕರಿಸುವ ಮನೋಭಾವ ರೂಢಿಯಾಗುತ್ತದೆ. ಏನೇ ಕಷ್ಟ ಎದುರಾದರು ಪ್ರಾರ್ಥನೆಯ ಮೂಲಕ ಅವನಿಗೆ ಅರಿಕೆ ಮಾಡಿ ಬಂದದ್ದನ್ನು ಎದುರಿಸುವ ಮಾನಸಿಕ ಧೈರ್ಯ ವನ್ನು ಭಗವಂತನ ಪ್ರಾರ್ಥನೆಯಲ್ಲಿ ಪಡೆದು ಕೊಳ್ಳುತ್ತೇವೆ.

ಪರಿಸ್ಥಿತಿ ಅದೆಷ್ಟೇ ಕೈ ಮೀರಿದರೂ ಎಲ್ಲವನ್ನು ಮೀರಿದ ದೇವರಿದ್ದಾನೆ, ಅವನಿಗೆ ಸೋಲಿಲ್ಲ ಎನ್ನುವ ಆತ್ಮಸ್ಥೈರ್ಯವಿರುತ್ತದೆ. ಇದೇ ಅಲ್ಲವೇ ನಮ್ಮೊಳಗಿರುವ ಬೆಳಕು. ಮಾನಸಿಕವಾಗಿ ಸದೃಢರಾಗಿದ್ದಾಗ ಏನನ್ನಾದರೂ ಸ್ವೀಕರಿಸಿ ನಿಭಾಯಿಸುವ ಶಕ್ತಿ ನಮಗಿರುತ್ತದೆ. ನಮ್ಮೊಳಗೆ ದೈವತ್ವದ ನೆಲೆ ಇಲ್ಲದಿದ್ದಾಗ ಆತಂಕದ ಪರಿಸ್ಥಿತಿಯಲ್ಲಿ, ಕಷ್ಟಗಳನ್ನು ತೋಡಿಕೊಳ್ಳಲು ನಮ್ಮನ್ನು ಸಮರ್ಪಿಸಿಕೊಳ್ಳಲು, ಮಾನಸಿಕವಾಗಿ ಧೈರ್ಯ ತುಂಬಲು ಸಲಹುವ ಶಕ್ತಿಯೇ ಇಲ್ಲದಂತಾಗುತ್ತದೆ. ಯಾರು ಸಲಹಲು ಇಲ್ಲದ ಅನಾಥ ಜೀವದಂತೆ, ಆತ್ಮ ಅನಾಥ ಪ್ರಜ್ಞೆಯಿಂದ ಬಳಲುತ್ತದೆ. ಆಗ ಬೆಳಗ್ಗೆ ಇಲ್ಲದ ಕತ್ತಲಿನಲ್ಲಿ ಸಿಲುಕಿದ ಅನುಭವ. ಕತ್ತಲ ಸಾಮ್ರಾಜ್ಯದಲ್ಲಿ

ನಕಾರಾತ್ಮಕ ಆಲೋಚನೆಗಳು, ಖಿನ್ನತೆ, ಅಪನಂಬಿಕೆ, ಅನುಮಾನ ಇವೆಲ್ಲವುಗಳ ಜನನ. ಇದರಿಂದ ಹೊರಬರಲು ಬೆಳಕಿನೆಡೆಗೆ ನಾವು ಮುಖ ಮಾಡಲೇಬೇಕು. ಬೆಳಕು ಭಗವಂತನ ರೂಪದಲ್ಲಿ ಕೈಹಿಡಿದು ನಮ್ಮನ್ನು ಒಳಿತ ನಡೆಗೆ ನಡೆಸುವ ಸಾಮರ್ಥ್ಯವಿರುವ ಶಕ್ತಿ. ಆದ್ದರಿಂದಲೇ ದೇವಸ್ಥಾನಗಳು, ಮಠ ಮಂದಿರಗಳು ಮನುಷ್ಯರ ಮನಸ್ಸಿಗೆ ಸಾಂತ್ವನ ನೀಡಲು ಇರುವ ಅದ್ಭುತವಾದ ತಾಣಗಳು. ದೇವರಲ್ಲಿ ನನ್ನ ನಂಬಿಕೆ, ಸಮರ್ಪಣಾ ಭಾವ, ಮತ್ತು ಶ್ರದ್ಧೆ ಎಂದಿಗೂ ನಮ್ಮನ್ನು ತಪ್ಪು ದಾರಿಯಲ್ಲಿ ಅಥವಾ ಕೆಟ್ಟ ದಾರಿಯಲ್ಲಿ ನಡೆಸಲು ಸಾಧ್ಯವಿಲ್ಲ.

ಹೇಗೆ ಕತ್ತಲೆ ಬೆಳಕು ಜೊತೆಯಾಗಿರಲಾರವೊ ಹಾಗೆಯೇ ದೇವರು ಮತ್ತು ದೆವ್ವ ಭೂತ ದುಷ್ಟ ಶಕ್ತಿಗಳು ಮುಖಾಮುಖಿಯಾಗಲು ಸಾಧ್ಯವಿಲ್ಲ. ಬೆಳಕು ಬಂದೊಡನೆ ಕತ್ತಲು ಇಲ್ಲವಾಗುವಂತೆ, ನಮ್ಮೊಳಗಿನ ದೈವತ್ವದ ಎದುರು ದೆವ್ವ ಭೂತ ಎನ್ನುವ ದುಷ್ಟಶಕ್ತಿಗಳು ಇಲ್ಲವಾಗುವುದು.

ಸಮಾಚಾರ ಸಣ್ಣದಲ್ಲ

ಗವಾಸ್ಕರ್, ಪವಾರ್ ಪ್ರತಿಮೆ ಸ್ಥಾಪನೆ

ಮುಂಬಯಿ: ಭಾರತೀಯ ಕ್ರಿಕೆಟ್ ದಂತಕತೆ ಸುನಿಲ್ ಗವಾಸ್ಕರ್ ಮತ್ತು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರ ಪ್ರ ತಿಮೆಗಳನ್ನು ಮುಂಬೈ ಕ್ರಿಕೆಟ್ ಅಸೋಸಿಯೇಷನ್ (ಎಂಸಿಎ) ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದಲ್ಲಿ ಸ್ಥಾಪಿಸಲಾಗು ವುದು ಎಂದು ಮುಂಬೈ ಕ್ರಿಕೆಟ್ ಅಸೋಸಿಯೇಷನ್ ಘೋಷಿಸಿದೆ. ಗವಾಸ್ಕರ್ ಮತ್ತು ಅನುಭವಿ ಆಡಳಿತಗಾರ ಶರದ್ ಪವಾರ್ ಅವರನ್ನು ವಾಂಖೆಡೆ ಕ್ರೀಡಾಂಗಣದಲ್ಲಿ ಶೀಘ್ರದಲ್ಲೇ ಉದ್ಘಾಟನೆ ಆಗಲಿರುವ 'ಎಂಸಿಎ ಶರದ್ ಪವಾರ್ ಕ್ರಿಕೆಟ್ ಮ್ಯೂಸಿಯಂ' ಪ್ರವೇಶದ್ವಾರದಲ್ಲಿ ಪ್ರತಿಮೆಗಳೊಂದಿಗೆ ಗೌರವಿಸಲಾಗುವುದು ಎಂದು ಮುಂಬೈ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಅಜಿಂಕ್ಯ ನಾಯಕ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಮಕಾವ್ ಬ್ಯಾಡ್ಮಿಂಟನ್ ಟೂರ್ನಿ: ತರುಣ್, ಲಕ್ಷ್ಯ ಸೇನ್ ಸೆಮೀಸ್‌ಗೆ

ಮಕಾವ್: ಮಕಾವ್ ಓಪನ್ ಬಿಡಬ್ಲ್ಯುಎಫ್ ಸೂಪರ್-300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಯುವ ಆಟಗಾರ ತರುಣ್ ಮನ್ನೇಪಲ್ಲಿ ಹಾಗೂ ಲಕ್ಷ್ಯ ಸೇನ್ ಸೆಮಿಫೈನಲ್‌ಗೆ

ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ವಿಶ್ವ ನಂ.47 ರ್‍ಯಾಂಕ್‌ನ ತರುಣ್, ಚೀನಾದ ಹು ಝು ವಿರುದ್ಧ 21-12, 13-21, 21-18ರ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. 23 ವರ್ಷದ ತರುಣ್ 75 ನಿಮಿಷದ ಹೋರಾಟದ ಅಂತ್ಯದಲ್ಲಿ ಪಂದ್ಯವನ್ನು ಗೆದ್ದುಕೊಂಡರು, ಆ ಮೂಲಕ ಬಿಡಬ್ಲ್ಯುಎಫ್ ಸೂಪರ್-300 ಟೂರ್ನಿಯಲ್ಲಿ ಮೊದಲ ಬಾರಿಗೆ ಸೆಮಿಫೈನಲ್‌ಗೇರಿದ ಸಾಧನೆ ಮಾಡಿದ್ದಾರೆ. ಮತ್ತೊಂದೆಡೆ ಕಾಮನ್‌ವೆಲ್ತ್ ಗೇಮ್ಸ್ ಚಿನ್ನ ವಿಜೇತ ಲಕ್ಷ್ಯ ಸೇನ್, ಚೀನಾದವರೇ ಆದ ಚೆನ್ ಝು ವಿರುದ್ಧ 21-14, 18-21, 21-14ರ ಅಂತರದಲ್ಲಿ ಗೆಲುವು ಸಾಧಿಸಿದರು. ಟೂರ್ನಿಯಲ್ಲಿ ಎರಡನೇ ಶ್ರೇಯಾಂಕಿತರಾಗಿರುವ ಲಕ್ಷ್ಯ, ಒಂದು ತಾಸು ಮೂರು ನಿಮಿಷದಲ್ಲಿ ಪಂದ್ಯ ಗೆದ್ದರು. ಅಂತಿಮ ನಾಲ್ಕರ ಘಟ್ಟದ ಪಂದ್ಯದಲ್ಲಿ ತರುಣ್ ಅವರು ಮಲೇಷ್ಯಾದ ಜಸ್ಟಿನ್ ಹೋ ಸವಾಲನ್ನು ಎದುರಿಸಲಿದ್ದಾರೆ, ಹಾಗೆಯೇ ಲಕ್ಷ್ಯ ಅವರಿಗೆ ಇಂಡೋನೇಷ್ಯಾದ ಅಲ್ವಿ ಫರ್ಹಾನ್ ಸವಾಲು ಎದುರಾಗಲಿದೆ.

ಇಂಗ್ಲೆಂಡ್ 247ಕ್ಕೆ ಆಲೌಟ್ | 2ನೇ ಇನ್ನಿಂಗ್ಸ್‌ನಲ್ಲಿ ಜೈಸ್ವಾಲ್ ಆಕರ್ಷಕ ಬ್ಯಾಟಿಂಗ್

ಕುತೂಹಲ ಘಟ್ಟದಲ್ಲಿ ಟೆಸ್ಟ್

ಲಂಡನ್: ಭಾರತದ ವಿರುದ್ಧ ಇಲ್ಲಿನ ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ಅಂತ್ಯ ಕುತೂಹಲ ಘಟ್ಟ ಪ್ರವೇಶಿಸಿದೆ.

ಇಂಗ್ಲೆಂಡ್ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 23 ರನ್‌ಗಳ ಅಲ್ಪ ಮುನ್ನಡೆ ಗಳಿಸುವಲ್ಲಿ ಯಶಸ್ವಿಯಾಯಿತು. ದ್ವಿತೀಯ ಇನ್ನಿಂಗ್ಸ್ ಆರಂಭಿಸಿದ ಭಾರತವು ದಿನದಾಂತ್ಯಕ್ಕೆ 2 ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿದೆ. 7 ರನ್ ಗಳಿಸಿದ್ದ ಕೆ.ಎಲ್ ರಾಹುಲ್ ಮತ್ತು 11 ರನ್ ಗಳಿಸಿದ್ದ ಸಾಯಿ ಸುದರ್ಶನ್ ವಿಕೆಟ್ ಒಪ್ಪಿಸಿ ಈಗಾಗಲೇ ಪೆವಿಲಿಯನ್‌ಗೆ ಮರಳಿದ್ದು, 51 ರನ್ ಗಳಿಸಿದ್ದ ಯಶಸ್ವಿ ಜೈಸ್ವಾಲ್ ಹಾಗೂ 4 ರನ್ ಗಳಿಸಿದ್ದ ಆಕಾಶ್ ದೀಪ್ ಕ್ರೀಸ್‌ನಲ್ಲಿ ಇದ್ದಾರೆ.

ಭಾರತದ ಮೊದಲ ಇನ್ನಿಂಗ್ಸ್‌ನ 224 ರನ್‌ಗಳಿಗೆ ಉತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಇಂಗ್ಲೆಂಡ್, 247 ರನ್‌ಗಳಿಗೆ ಆಲೌಟ್ ಆಗಿ, 23 ರನ್‌ಗಳ ಮುನ್ನಡೆ ಪಡೆಯಿತು.

ಓಪನರ್‌ಗಳಾದ ಜಾಕ್ ಕ್ರಾಲಿ ಹಾಗೂ ಬೆನ್ ಡಕೆಟ್ ಇಂಗ್ಲೆಂಡ್‌ಗೆ ಬಿರುಸಿನ ಆರಂಭ ಒದಗಿಸಿದರು. ಟಿ20 ಶೈಲಿಯಲ್ಲಿ ಬ್ಯಾಟ್ ಬೀಸಿದ ಕ್ರಾಲಿ ಹಾಗೂ ಡಕೆಟ್ ಅಬ್ಬರಿಸಿದರು. ಕೇವಲ 7 ಓವರ್‌ಗಳಲ್ಲೇ ಇಂಗ್ಲೆಂಡ್ ತಂಡದ ಮೊತ್ತ 50ರ ಗಡಿ ದಾಟಿತು, ಅಲ್ಲಿಂದ ಬಳಿಕವೂ ಆಕ್ರಮಣಕಾರಿ ಆಟವನ್ನು ಮುಂದುವರಿಸಿದರು.

ಕ್ರಾಲಿ ಹಾಗೂ ಡಕೆಟ್ ಮೊದಲ ವಿಕೆಟ್‌ಗೆ 12.5 ಓವರ್‌ಗಳಲ್ಲಿ 92 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಡಕೆಟ್ 38 ಎಸೆತಗಳಲ್ಲಿ 43 ರನ್ ಗಳಿಸಿ (5 ಬೌಂಡರಿ, 2 ಸಿಕ್ಸರ್) ಆಕಾಶ್ ದೀಪ್‌ಗೆ ವಿಕೆಟ್ ಒಪ್ಪಿಸಿದರೆ, ಬಿರುಸಿನ ಆಟ ಮುಂದುವರಿಸಿದ ಕ್ರಾಲಿ, ಆಕರ್ಷಕ ಅರ್ಧಶತಕ ಗಳಿಸಿ, 64 ರನ್ ಗಳಿಸಿದ್ದ ವೇಳೆ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಜಡೇಜಾಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ನಾಯಕ ಒಲಿ ಪೋಪ್ 22 ರನ್ ಗಳಿಸಿ ಸಿರಾಜ್‌ಗೆ ವಿಕೆಟ್ ನೀಡಿದರು. ಬಳಿಕ ಬಂದ ಜೋ ರೂಟ್ 29 ರನ್ ಗಳಿಸಿದ್ದಾಗ ಮೊಹಮ್ಮದ್ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು.

ಈ ಟೆಸ್ಟ್‌ನಲ್ಲಿ ಅವಕಾಶ ಪಡೆದಿದ್ದ ಓವರ್ಟನ್ ಯಾವುದೇ ರನ್ ಗಳಿಸದೆ ಪ್ರಸಿದ್ಧ್ ಕೃಷ್ಣ ಬೌಲಿಂಗ್‌ನಲ್ಲಿ ಔಟ್ ಆದರು.

ಟೆಸ್ಟ್‌ನಿಂದ ಹೊರಬಿದ್ದ ವೋಕ್ಸ್

ಪ್ರಸ್ತುತ ಟೆಸ್ಟ್ ಪಂದ್ಯದ ಮೊದಲ ದಿನದಾಟದ ವೇಳೆ ಎಡ ಭುಜಕ್ಕೆ ಗಾಯ ಮಾಡಿಕೊಂಡಿದ್ದ ಕ್ರಿಸ್ ವೋಕ್ಸ್, ಉಳಿದ ಪಂದ್ಯಗಳಿಂದ ಹೊರಗುಳಿದಿದ್ದಾರೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಶುಕ್ರವಾರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಭಾರತದ ಮೊದಲ ಇನ್ನಿಂಗ್ಸ್‌ನ 57ನೇ ಓವರ್‌ನಲ್ಲಿ ಫೀಲ್ಡಿಂಗ್ ಮಾಡುವಾಗ ವೋಕ್ಸ್ ಗಾಯಗೊಂಡಿದ್ದರು, ತಕ್ಷಣವೇ ಅವರು ನೋವಿನಿಂದ ಮೈದಾನ ತೊರೆದಿದ್ದರು.

ಆದರೆ ಆ ಬಳಿಕ ಬ್ರೂಕ್ ಹೊರತುಪಡಿಸಿ ಯಾರೂ ಪೆವಿಲಿಯನ್‌ನಲ್ಲಿ ಹೆಚ್ಚು ಹೊತ್ತು ಇರಲಿಲ್ಲ. ಬೇಥೆಲ್ ಕೇವಲ 6 ರನ್, ಜೇಮೀ ಸ್ಮಿತ್ 8 ರನ್, ಅಟ್ಕಿನ್ಸನ್ 11 ರನ್ ಗಳಿಸಲಷ್ಟೇ ಶಕ್ತರಾದರು.

ಬ್ರೂಕ್ 66 ರನ್ ಗಳಿಸಿ ಸಿರಾಜ್ ಬೌಲಿಂಗ್‌ಗೆ ಔಟ್ ಆದರೆ, ಟಂಗ್ ಯಾವುದೇ ರನ್ ಗಳಿಸದೆ ಅಜೇಯರಾಗಿ ಉಳಿದರು. ಭಾರತದ ಪರವಾಗಿ ಪ್ರಸಿದ್ಧ್ ಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ತಲಾ 4 ವಿಕೆಟ್ ಗಳಿಸಿ ಮಿಂಚಿದರೆ, ಆಕಾಶ್ ದೀಪ್ 1 ವಿಕೆಟ್ ಗಳಿಸಿದರು.

224ಕ್ಕೆ ಆಲೌಟ್ ಆದ ಭಾರತ: ಮೊದಲ ದಿನದಂತ್ಯಕ್ಕೆ ಭಾರತ 6 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಿ, ದಿನದಾಟದ ಆರಂಭಿಸಿದ ಭಾರತ ಗುರುವಾರದ ಮೊತ್ತಕ್ಕೆ 20 ರನ್ ಪೇರಿಸುವಷ್ಟರಲ್ಲಿ ಉಳಿದ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತು. ಕರುಣ್ ನಾಯರ್ 57 ಹಾಗೂ ವಾಷಿಂಗ್ಟನ್ ಸುಂದರ್ 26 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಇನ್ನುಳಿದಂತೆ ಮೊಹಮ್ಮದ್ ಸಿರಾಜ್ (0) ಹಾಗೂ ಪ್ರಸಿದ್ಧ ಕೃಷ್ಣ (0) ನಿರಾಸೆ ಮೂಡಿಸಿದರು.

ಇಂಗ್ಲೆಂಡ್ ಪರ ಗಸ್ ಅಟ್ಕಿನ್ಸನ್ 33 ರನ್ ತೆತ್ತು ಐದು ವಿಕೆಟ್ ಗಳಿಸಿದರು. ಜೋಶ್ ಟಂಗ್ ಮೂರು ಹಾಗೂ ಕ್ರಿಸ್ ವೋಕ್ಸ್ ಒಂದು ವಿಕೆಟ್ ಗಳಿಸಿದರು.

ಫುಟ್ಬಾಲ್ ತಂಡಕ್ಕೆ ಜಮೀಲ್ ನೂತನ ಕೋಚ್

ಹದಿಮೂರು ವರ್ಷಗಳ ಬಳಿಕ ತಂಡಕ್ಕೆ ಭಾರತೀಯ ತರಬೇತುದಾರ

ದೆಹಲಿ: ಕಳೆದ 16 ತಿಂಗಳುಗಳಿಂದ ಸ್ಪರ್ಧಾತ್ಮಕ ಪಂದ್ಯವನ್ನು ಜಯಿಸುವಲ್ಲಿ ವಿಫಲವಾಗುತ್ತಿರುವ ಭಾರತೀಯ ಪುರುಷರ ಫುಟ್ಬಾಲ್ ತಂಡಕ್ಕೆ ನೂತನ ಕೋಚ್ ಆಗಿ ಪೂರ್ವ ಬಂಗಾಳ ಮತ್ತು ಮೋಹನ್ ಬಗಾನ್ ತಂಡದ ಮಾಜಿ ಮ್ಯಾನೇಜರ್ ಖಾಲಿದ್ ಜಮಿಲ್ ಘೋಷಿಸಲಾಗಿದೆ. ಉಪಖಂಡದಲ್ಲಿ ಮಾನ್ಯತೆ ಪಡೆದ ಫುಟ್ಬಾಲ್ ಮ್ಯಾನೇಜರ್ ಆಗಿರುವ ಜಮೀಲ್‌ಗೆ, ಭಾರತ ತಂಡವನ್ನು ಮತ್ತೆ ಗೆಲುವಿನ ಹಳಿಗೆ ಮರಳಿಸುವ ಸವಾಲು ಇದೆ.

ಜಮೆಶೆಡ್‌ಪುರ ಎಫ್‌ಸಿಗೆ ತರಬೇತುದಾರರಾಗಿರುವ ಜಮೀಲ್, ಭಾರತೀಯ ತಂಡದ ಕೋಚ್ ಆಗಿ ಯಾವಾಗ ಕರ್ತವ್ಯಕ್ಕೆ ಹಾಜರಾಗುತ್ತಾರೆ ಎಂಬುದನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ (ಎಐಎಫ್‌ಎಫ್)

ನಿಖರವಾಗಿ ತಿಳಿಸಿಲ್ಲ. 13 ವರ್ಷಗಳ ಬಳಿಕ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಮೊದಲ ಭಾರತೀಯ ತರಬೇತುದಾರರಾದ ಎಂಬ ಹೆಗ್ಗಳಿಕೆಗೆ ಜಮೀಲ್ ಪಾತ್ರರಾಗಿದ್ದಾರೆ. ರಾಷ್ಟ್ರೀಯ ತಂಡವನ್ನು ಮುನ್ನಡೆಸಿದ ಕೊನೆಯ ಭಾರತೀಯ ತರಬೇತುದಾರ ಸವಿಯೊ ಮೆಡೀರಾ ಆಗಿದ್ದು, ಅವರು ಅಕ್ಟೋಬರ್ 2011ರಿಂದ ಮಾರ್ಚ್ 2012ರ ವರೆಗೆ ಹುದ್ದೆಯಲ್ಲಿದ್ದರು.

ತಾಂತ್ರಿಕ ಸಮಿತಿಯ ಸಮ್ಮುಖದಲ್ಲಿ ಎಐಎಫ್‌ಎಫ್ ಕಾರ್ಯಕಾರಿ ಸಮಿತಿಯು, ಸೀನಿಯರ್ ಇಂಡಿಯಾ ಪುರುಷರ ರಾಷ್ಟ್ರೀಯ ತಂಡದ ಹೊಸ ಮುಖ್ಯ ತರಬೇತುದಾರರಾಗಿ ಖಾಲಿದ್ ಜಮಿಲ್ ಅವರನ್ನು ನೇಮಕ ಮಾಡಲು ಅನುಮೋದನೆ ನೀಡಿದೆ ಎಂದು ಎಐಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ. ಭಾರತದ ಮಾಜಿ ಮಿಡ್‌ಫೀಲ್ಡರ್ ಜಮಿಲ್, ಮಹೀಂದ್ರಾ, ಯುನೈಟೆಡ್, ಏರ್ ಇಂಡಿಯಾ ಮತ್ತು ಮುಂಬೈ ಎಫ್.ಸಿಯಂತಹ ತಂಡಗಳಿಗಾಗಿ ಭಾರತದಲ್ಲಿ ಕ್ಲಬ್ ಫುಟ್ಬಾಲ್ ಆಡಿದ್ದಾರೆ ಮತ್ತು 1998ರಿಂದ 2006 ರವರೆಗೆ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು. ಗಾಯದ ಸಮಸ್ಯೆಯಿಂದ ಅವರು ಬೇಗನೆ ನಿವೃತ್ತಿ ಹೊಂದಬೇಕಾಯಿತು, ಬಳಿಕ ಕೋಚಿಂಗ್ ವೃತ್ತಿಜೀವನ ಆರಂಭಿಸಿದ್ದರು.

ಪಾಕಿಸ್ತಾನ ಕ್ರಿಕೆಟ್ ತಂಡಕ್ಕೆ ಸ್ಪರ್ಧಿಸುವ ಅವಕಾಶ ಕಡಿಮೆ

ಒಲಿಂಪಿಕ್ಸ್: ಪಾಕ್‌ಗೆ ಅರ್ಹತೆ ಕ್ಷೀಣ

ಲಾಸ್ ಏಂಜಲೀಸ್: ಪಾಕಿಸ್ತಾನ ಪುರುಷರ ಕ್ರಿಕೆಟ್ ತಂಡ ಅನಿರೀಕ್ಷಿತ ಹಿನ್ನಡೆಯನ್ನು ಅನುಭವಿಸಿದ್ದು, 2028ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಸಾಧ್ಯತೆ ಕಡಿಮೆ ಎಂದು ವರದಿಯಾಗಿದೆ

ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಇತ್ತೀಚೆಗೆ ಸಿಂಗಾಪುರದಲ್ಲಿ ಸಭೆ ಸೇರಿ, ಹಲವಾರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ, ಅದರ ಭಾಗವಾಗಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅಗತ್ಯವಿರುವ ಅರ್ಹತಾ ಮಾರ್ಗವನ್ನು ಅಂತಿಮಗೊಳಿಸಲಾಗಿದೆ. ಆ ಸಭೆಯಲ್ಲಿ ಪ್ರಾದೇಶಿಕ ಅರ್ಹತೆಗೂ ಒಲಿಂಪಿಕ್ಸ್‌ನಲ್ಲಿ ಪ್ರಾಶಸ್ತ್ಯ ನೀಡಲು ಐಸಿಸಿ ನಿರ್ಧರಿಸಿದೆ.

ಪ್ರಾದೇಶಿಕ ಶ್ರೇಯಾಂಕಗಳಲ್ಲಿ ಅಗ್ರಸ್ಥಾನದಲ್ಲಿರುವ ತಂಡಗಳು ಆ ಪ್ರಕಾರ ಒಲಿಂಪಿಕ್ಸ್‌ಗೆ ಪ್ರವೇಶ ಪಡೆಯುತ್ತದೆ. ಏಷ್ಯಾ, ಓಷಿಯಾನಿಯಾ, ಯುರೋಪ್ ಮತ್ತು ಆಫ್ರಿಕಾದಲ್ಲಿ ಮೊದಲ ಸ್ಥಾನದಲ್ಲಿರುವ ತಂಡಗಳನ್ನು ಆಯ್ಕೆ ಮಾಡಲಾಗುತ್ತದೆ. ಆತಿಥೇಯ ರಾಷ್ಟ್ರವಾದ ಅಮೆರಿಕ ಕ್ರಿಕೆಟ್ ತಂಡಕ್ಕೆ ಸ್ಥಾನ ನೀಡುವ ಸಾಧ್ಯತೆಯಿದೆ.

ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಟೂರ್ನಿ

128 ವರ್ಷಗಳ ನಂತರ 2028ರಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸ್ಥಾನ ಪಡೆದಿದೆ. ಪುರುಷ ಮತ್ತು ಮಹಿಳಾ ತಂಡಗಳು ಟಿ20 ಸ್ವರೂಪದಲ್ಲಿ ಕಣಕ್ಕೆ ಇಳಿಯಲಿವೆ. 1900ರಲ್ಲಿ ಮೊದಲ ಮತ್ತು ಕೊನೆಯ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಟೂರ್ನಿ ನಡೆಯಿತು. ಡೆವೊನ್ ಮತ್ತು ಸೋಮರ್‌ಸೆಟ್ ವಾಂಡರರ್ಸ್ ಕ್ಲಬ್ (ಬ್ರಿಟನ್) ಮತ್ತು ಫ್ರೆಂಚ್ ಅಥ್ಲೆಟಿಕ್ ಕ್ಲಬ್ ಯೂನಿಯನ್ (ಫ್ರಾನ್ಸ್) ನಡುವೆ 2 ದಿನಗಳ ಪಂದ್ಯ ನಡೆದಿತ್ತು.

ಭಾರತವು ಪ್ರಸ್ತುತ ಐಸಿಸಿ ಶ್ರೇಯಾಂಕದಲ್ಲಿ ಏಷ್ಯಾದಲ್ಲಿ ಮೊದಲ ಸ್ಥಾನದಲ್ಲಿದೆ. ಓಷಿಯಾನಿಯಾದಲ್ಲಿ ಆಸ್ಟ್ರೇಲಿಯಾ ನಂಬರ್ 1, ಆಫ್ರಿಕಾದಲ್ಲಿ ದಕ್ಷಿಣ ಆಫ್ರಿಕಾ ಮೊದಲ ಸ್ಥಾನ ಮತ್ತು ಯುರೋಪ್‌ನಲ್ಲಿ ಇಂಗ್ಲೆಂಡ್ ನಂಬರ್ 1 ಸ್ಥಾನದಲ್ಲಿದೆ. ಆತಿಥೇಯ ರಾಷ್ಟ್ರವಾದ ಅಮೆರಿಕಕ್ಕೆ ಕ್ರಿಕೆಟ್‌ನಲ್ಲಿ ಭಾಗವಹಿಸಲು ಅವಕಾಶ ನೀಡಿದರೆ, ವೆಸ್ಟ್ ಇಂಡೀಸ್ ಹೊರಗುಳಿಯುತ್ತದೆ, ಆದರೆ ಆರನೇ ತಂಡವನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಒಲಿಂಪಿಕ್ಸ್ ಜಾಗತಿಕ ಕ್ರೀಡಾಕೂಟವಾಗಿರುವುದರಿಂದ ಎಲ್ಲಾ ಪ್ರದೇಶಗಳಿಂದ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಪ್ರತಿ ಪ್ರದೇಶದಿಂದ ಒಂದು ತಂಡವನ್ನು ಆಯ್ಕೆ ಮಾಡಲು ಐಸಿಸಿ ಸಭೆ ನಿರ್ಧರಿಸಿತ್ತು. ಪ್ರಸ್ತುತ ಟಿ20 ಶ್ರೇಯಾಂಕದಲ್ಲಿ ಪಾಕಿಸ್ತಾನ ಎಂಟನೇ ಸ್ಥಾನದಲ್ಲಿದ್ದರೆ, ಶ್ರೀಲಂಕಾ ಏಳನೇ ಸ್ಥಾನದಲ್ಲಿದೆ. ಓಷಿಯಾನಿಯಾದಲ್ಲಿ ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದೆ. ಐಸಿಸಿಯ ಈ ನಿರ್ಧಾರದಿಂದ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ನಿರಾಶೆಗೊಂಡಿವೆ ಎಂದೂ ಹೇಳಲಾಗುತ್ತಿದೆ. ಆದರೆ ಐಸಿಸಿ ಮಂಡಳಿಯು ಈ ಪ್ರಸ್ತಾಪವನ್ನು ಇನ್ನೂ ಅಧಿಕೃತವಾಗಿ ಅನುಮೋದಿಸಿಲ್ಲ.

ಅಮೆರಿಕ ತಂಡವು ಯು.ಎಸ್ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಸಮಿತಿಯಿಂದ ರಾಷ್ಟ್ರೀಯ ಆಡಳಿತ ಮಂಡಳಿಯ ಮಾನ್ಯತೆಯನ್ನು ಪಡೆಯಲು ವಿಫಲವಾದರೆ ಅಮೆರಿಕನ್ ತಂಡವನ್ನು ಅನರ್ಹಗೊಳಿಸುವ ಸಾಧ್ಯತೆಯಿದೆ. ಒಲಿಂಪಿಕ್ ಚಾರ್ಟರ್ ಪ್ರಕಾರ ಮಾನ್ಯತೆ ಕಡ್ಡಾಯವಾಗಿದೆ. ಮತ್ತೊಂದೆಡೆ ಕ್ರಿಕೆಟ್‌ಗೆ ಇತ್ತೀಚಿನ ವರ್ಷಗಳಿಂದಷ್ಟೇ ಪ್ರವೇಶಿಸಿರುವ ಅಮೆರಿಕ ತಂಡವು ಕಳೆದ ವರ್ಷ ನಡೆದ ಟಿ20 ವಿಶ್ವಕಪ್‌ನ ಸೂಪರ್-8 ಹಂತದಲ್ಲಿ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಭಾರೀ ಸುದ್ದಿ ಮಾಡಿತ್ತು.

ವಿಟಾಕೀಸ್

ಕೊತ್ತಲವಾಡಿಯಲಿ ಸಮಸ್ಯೆಗಳ ಸಾಲು

ಗ್ರಾಮೀಣ ಸೊಗಡಿನ ಕಥೆ ಹೊತ್ತ ಹಲವು ಸಿನಿಮಾಗಳು ತೆರೆಗೆ ಬಂದು ಯಶಸ್ವಿಯಾಗಿವೆ. ಅಂತೆಯೇ ಈಗ ಕೊತ್ತಲವಾಡಿಯೂ ಹಳ್ಳಿಗಾಡಿನ ಸ್ಟೋರಿಯನ್ನೇ ಒಳಗೊಂಡಿದ್ದು, ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕಾಡುತ್ತಿರುವ ಸಮಸ್ಯೆಗಳನ್ನು ಬಿಂಬಿಸುತ್ತಿದೆ. ಅದು ಕೊತ್ತಲವಾಡಿ ಕಾವೇರಿನದಿಯಿಂದ ಸುತ್ತವರಿದಿರುವ ಸುಂದರ ಗ್ರಾಮ. ಹಚ್ಚಹಸಿರಿನ ನಡುವೆ ಗ್ರಾಮದ ಮಂದಿಯೆಲ್ಲಾ ಸಂತೋಷವಾಗಿರುತ್ತಾರೆ. ನಾಯಕ ಊರಿನಲ್ಲಿರುವ ಕೆಲಸಕ್ಕೆ ಜನರನ್ನು ಒಟ್ಟು ಮಾಡಿ ಕಳಿಸುವ ಕಾಯಕ ಮಾಡುತ್ತಿರುತ್ತಾನೆ, ಅವನನ್ನು ಕಂಡರೆ ಎಲ್ಲರಿಗೂ ಅಚ್ಚುಮೆಚ್ಚು. ಇತ್ತ ಗುಜರಿ ಬಾಬು ಕಸವನ್ನು ಸಂಗ್ರಹಿಸಿ ಅದರಲ್ಲಿಯೇ ರಸ ತೆಗೆಯುವ ಚಾಣಾಕ್ಷ. ವ್ಯಾಪಾರವೇ ಅವನ ವೃತ್ತಿಯಾಗಿದ್ದು, ಕುತಂತ್ರದಿಂದಲೇ ಖ್ಯಾತಿ ಪಡೆದಿರುತ್ತಾನೆ. ಹಳ್ಳಿ ಅಂದಮೇಲೆ ಅಲ್ಲಿ ಚುನಾವಣೆ ಅಂತ ಬಂದಾಗ ಅಲ್ಲಿನ ಪರಿಸ್ಥಿತಿಯೇ ಬೇರೆಯಾಗಿರುತ್ತದೆ. ಹೀಗಿರುವಾಗಲೇ ಊರಿನಲ್ಲಿ ದೊಡ್ಡ ಸಮಸ್ಯೆ ಕಾಡಲು ಶುರುವಾಗುತ್ತದೆ. ಆ ಸಮಸ್ಯೆಯ ಹಿಂದೆ ಬಿದ್ದಾಗ, ಕಥೆ ಟ್ವಿಸ್ಟ್ ಪಡೆದುಕೊಳ್ಳುತ್ತಾ ಸಾಗುತ್ತದೆ. ಊರಿನ ಜನರ ಪರವಾಗಿ ನಿಂತ ನಾಯಕ ತನ್ನೂರಿಗೆ ಎದುರಾದ ಗಂಡಾಂತರವನ್ನು ಹೇಗೆ ಪರಿಹರಿಸುತ್ತಾನೆ ಎಂಬುದನ್ನು ಚಿತ್ರ ನೋಡಿ ತಿಳಿದರೆ ಚೆಂದ.

ನಿರ್ದೇಶಕ ಶ್ರೀರಾಜು ಗ್ರಾಮೀಣ ಭಾಗದಲ್ಲಿ ಕಾಡುವ ಸಮಸ್ಯೆಗಳನ್ನು ಹೆಣೆದು ಅದಕ್ಕೆ ಮನರಂಜನೆಯ ಅಂಶಗಳನ್ನು ಬೆರೆಸಿ ಅದನ್ನು ಎಲ್ಲರಿಗೂ ಹಿಡಿಸುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಹಳ್ಳಿಗಳಲ್ಲಿ ತಲೆದೋರುವ ಸಮಸ್ಯೆಗಳು, ಅದರಲ್ಲಿಯೂ ಚುನಾವಣೆಯ ಸಂದರ್ಭದಲ್ಲಿ ಕಾಡುವ ತೊಂದರೆಗಳು, ಅದನ್ನು ನಿರ್ವಹಿಸುವಲ್ಲಿ ವಿಫಲವಾಗುವ ಪೊಲೀಸ್ ವ್ಯವಸ್ಥೆ, ಇದೆಲ್ಲವೂ ಚಿತ್ರದಲ್ಲಿ ಗಮನಸೆಳೆಯುತ್ತದೆ. ಇದೆಲ್ಲವನ್ನೂ ಇನ್ನೊಂದಷ್ಟು ರೋಚಕವಾಗಿ ಕಟ್ಟಿಕೊಡಬೇಕಿತ್ತು ಎನ್ನಿಸುತ್ತದೆ. ಚಿತ್ರದಲ್ಲಿ ನವಿರಾದ ಪ್ರೇಮಕಥನಾ ಮನಸೂರೆಗೊಳ್ಳುತ್ತದೆ.

ಈ ಹಿಂದಿನ ಸಿನಿಮಾಗಳಲ್ಲಿ ಲವ್ವರ್ ಬಾಯ್ ಆಗಿ ಕಾಣಿಸಿಕೊಂಡಿದ್ದ ಪೃಥ್ವಿ ಅಂಬರ್, ಈ ಚಿತ್ರದಲ್ಲಿ ರಗಡ್ ಅವತಾರ ತಾಳಿದ್ದು ಭರ್ಜರಿ ಆ್ಯಕ್ಷನ್‌ನಲ್ಲಿ ಮಿಂಚಿದ್ದಾರೆ. ಹಳ್ಳಿಯ ಹುಡುಗಿಯಾಗಿ ಕಾವ್ಯಾ ಶೈವ ಇಷ್ಟವಾಗುತ್ತಾರೆ, ಮುಗ್ಧತೆಯ ಮೂಲಕ ಮನಗೆಲ್ಲುತ್ತಾರೆ. ಗೋಪಾಲ ಕೃಷ್ಣ ದೇಶಪಾಂಡೆ ಚಿತ್ರದ ಕಥೆಗೆ ತಿರುವು ನೀಡುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಗುಜರಿ ಮಾಲೀಕನಾಗಿ, ಊರಿಗೆ ಬತ್ತಿ ಇಡುವ ಕುತಡಯಾಗಿ, ರಾಜಕೀಯ ವ್ಯಕ್ತಿಯಾಗಿಯೂ ಮೆಚ್ಚುವ ಅಭಿನಯ ತೋರಿದ್ದಾರೆ. ಉಳಿದಂತೆ ಅವಿನಾಶ್, ರಾಜೇಶ್ ನಟರಂಗ, ರಘು ರಾಮನಕೊಪ್ಪ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿದ್ದಾರೆ. ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು, ಸಂಗೀತಕ್ಕೆ ಇನ್ನೂ ಒಂದಷ್ಟು ಒತ್ತು ನೀಡಿದ್ದರೆ ಚೆನ್ನಾಗಿರುತ್ತದೆ ಎನ್ನಿಸುತದೆ. ಗ್ರಾಮೀಣ ಸೊಗಡಿನ ಕಥೆಯಲ್ಲಿ ಪರಿಸರದ ಕಾಳಜಿ ಸಾರುವ ಸ್ಟೋರಿಯೂ ಬೆರೆತಿದೆ. ಹಾಗಾಗಿ ಕೊತ್ತಲವಾಡಿಯನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದಾಗಿದೆ.

ಚಿತ್ರ : ಕೊತ್ತಲವಾಡಿ
ನಿರ್ದೇಶನ : ಶ್ರೀರಾಜು
ನಿರ್ಮಾಣ : ಪುಷ್ಪಾ ಅರುಣ್‌ಕುಮಾರ್
ತಾರಾಗಣ : ಪೃಥ್ವಿ ಅಂಬರ್, ಕಾವ್ಯಾ ಶೈವ, ಅವಿನಾಶ್, ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ಮುಂತಾದವರು.
ರೇಟಿಂಗ್ : ★★★

ಮಹಾಕಾಳಿ ಸನ್ನಿಧಿಯಲಿ ಲೂಸ್‌ಮಾದ

ಲೂಸ್‌ಮಾದ ಯೋಗಿ ಕನ್ನಡಚಿತ್ರರಂಗದ ಪ್ರಸಿದ್ಧ ನಟರಲ್ಲಿ ಒಬ್ಬರು ಈಗ ಲೂಸ್‌ಮಾದ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು, ಮುಹೂರ್ತ ಸಮಾರಂಭ ಕೂಡ ನೆರವೇರಿದೆ. ಲೂಸ್‌ಮಾದ ಯೋಗಿ ಅವರೇ ಚಿತ್ರದ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಬೆಂಗಳೂರಿನ ಬಂಡೆ ಮಹಾಂಕಾಳಿ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನೆರವೇರಿತು. ಯೋಗಿ ಅವರ ತಂದೆ ಸಿದ್ದರಾಜು ಚಿತ್ರದ ಮೊದಲ ಸನ್ನಿವೇಶಕ್ಕೆ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಚಿತ್ರದ ನಿರ್ಮಾಪಕ ಧರ್ಮೇಂದ್ರ ಕ್ಯಾಮೆರಾ ಚಾಲನೆ ಮಾಡಿದರು. ಜಾನಕಿ ಕಂಬೈನ್ಸ್ ಲಾಂಛನದಲ್ಲಿ ಧರ್ಮೇಂದ್ರ ನಿರ್ಮಿಸುತ್ತಿರುವ ಈ ಚಿತ್ರವನ್ನು, ರಂಜಿತ್ ಕುಮಾರ್ ನಿರ್ದೇಶಿಸುತ್ತಿದ್ದಾರೆ.

ಸಿನಿಮಾರಂಗ ನನಗೆ ಹೊಸತು. ಕೆಲವು ಸ್ನೇಹಿತರು ಈ ಚಿತ್ರವನ್ನು ನಿರ್ಮಾಣ ಮಾಡಿ ಅಂತ ಹೇಳಿದರು, ನಿರ್ದೇಶಕರು ಹೇಳಿದ ಕಥೆಯೂ ಇಷ್ಟವಾಯಿತು. ಅದಕ್ಕೂ ವಿಶೇಷವಾಗಿ ನಾನು ಲೂಸ್‌ಮಾದ ಯೋಗಿ ಅವರ ಅಭಿಮಾನಿ. ಅವರೇ ನಮ್ಮ ಚಿತ್ರದ ನಾಯಕರಾಗಿರುವುದು ಖುಷಿಯಾಗಿದೆ ಎಂದು ನಿರ್ಮಾಪಕ ಧರ್ಮೇಂದ್ರ ಹೇಳಿದರು.

ಕರಾವಳಿ ತೀರದಲ್ಲಿ ಸಾಗುವ ಕಥೆಯಲ್ಲಿ ಆ್ಯಕ್ಷನ್ ಜತೆಗೆ ಥ್ರಿಲ್ಲಿಂಗ್ ಅಂಶಗಳು ಬೆರೆತಿವೆ. ಕಿಶೋರ್, ಆದಿ ಲೋಕೇಶ್, ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪ್ರದೀಪ್ ರೆಡ್ಡಿ ಛಾಯಾಗ್ರಹಣ, ರಂಜನ್ ಸಂಕಲನ, ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನ, ವಿನೋದ್ ಸಾಹಸ ನಿರ್ದೇಶನ ಹಾಗೂ ಸಚಿನ್ ಪೂಜಾರಿ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಈ ಶೀರ್ಷಿಕೆಯನ್ನಿಟ್ಟುಕೊಂಡು ಹಿಂದೆ ಸಾಕಷ್ಟು ನಿರ್ಮಾಪಕರು ಚಿತ್ರ ಮಾಡಲು ಮುಂದಾಗಿದ್ದರು. ನಾನೇ ಬೇಡ ಎನ್ನುತ್ತಿದ್ದೆ. ಆದರೆ ಈ ಕಥೆ ಶೀರ್ಷಿಕೆಪೂರಕವಾಗಿದೆ. ದುನಿಯಾ ಸಿನಿಮಾದ ಲೂಸ್ ಮಾದನ ಪಾತ್ರಕ್ಕೂ ಈ ಚಿತ್ರದ ಪಾತ್ರಕ್ಕೂ ಸಂಬಂಧವಿಲ್ಲ. ಕಂಪ್ಲೀಟ್ ಕಮರ್ಷಿಯಲ್ ಆಗಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಭರಪೂರ ಮನರಂಜನೆ ಸಿಗಲಿದೆ.

-ಲೂಸ್‌ಮಾದ ಯೋಗಿ

ಇದೊಂದು ಕರಾವಳಿ ಭಾಗದಲ್ಲಿ ನಡೆಯುವ ಕಥೆ. ಆಗಸ್ಟ್ 25 ರಿಂದ ಚಿತ್ರೀಕರಣ ಆರಂಭವಾಗಲಿದೆ. ಉಡುಪಿ, ಸುರತ್ಕಲ್ ಹಾಗೂ ಮಂಗಳೂರಿನಲ್ಲಿ ಚಿತ್ರೀಕರಣ ನಡೆಯಲಿದೆ. ಎಲ್ಲಾ ಪ್ರಾಣಿಗಳಿಗಿಂತ ತೋಳವನ್ನು ಪಳಗಿಸುವುದು ಸ್ವಲ್ಪ ಕಷ್ಟ. ಅದು ಯಾರ ಮಾತನ್ನು ಕೇಳದ ಪ್ರಾಣಿ, ನಮ್ಮ ಚಿತ್ರದಲ್ಲಿ ನಾಯಕನ ಸ್ವಭಾವವೂ ಇದೇ ರೀತಿ ಇರುತ್ತದೆ. ಯಾವುದಕ್ಕೂ, ಯಾರಿಗೂ ಹೆದರದ ನಾಯಕನ ಅಬ್ಬರ ಚಿತ್ರದಲ್ಲಿರಲಿದೆ.

-ರಂಜಿತ್ ಕುಮಾರ್ ನಿರ್ದೇಶಕ

ಹಿಕೋರ ಟ್ರೇಲರ್ ರಿಲೀಸ್

ನೀನಾಸಂ ಕಿಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಹಿಕೋರ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಹಿರಿಯ ನಟ ಪ್ರಕಾಶ್ ಬೆಳವಾಡಿ ಟ್ರೇಲರ್ ಬಿಡುಗಡೆಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ನಾನು ಕೂಡ ನೀನಾಸಂನಲ್ಲಿ ಅನೇಕ ನಾಟಕಗಳನ್ನು ಆಡಿದ್ದೇನೆ. ನಿರ್ಮಾಪಕಿ ರತ್ನಾ ಶ್ರೀಧರ್ ನೀನಾಸಂನಿಂದ ಪರಿಚಯ. ಸಿನಿಮಾ ಮೇಲಿನ ಪ್ರೀತಿಯಿಂದ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನಾನು ಕೂಡ ಈ ಚಿತ್ರದಲ್ಲಿ ನಟಿಸಿದ್ದೇನೆ. ಟ್ರೇಲರ್ ಗಮನ ಸೆಳೆಯುತ್ತಿದೆ ಚಿತ್ರ ಯಶಸ್ವಿಯಾಗಲಿ ಎಂದು ಪ್ರಕಾಶ್ ಬೆಳವಾಡಿ ಹಾರೈಸಿದರು.

ಚಿತ್ರದಲ್ಲಿ ನವಿರಾದ ಪ್ರೇಮಕಥೆಯೂ ಇದ್ದು ಅದರ ಜತೆಗೆ ಸೈಕಲಾಜಿಕ್ ಸ್ಟೋರಿ ಗಮನ ಸೆಳೆಯುತ್ತದೆ. ನೀನಾಸಂ ಕಿಟ್ಟಿ, ಸ್ಪಂದನಾ, ಪ್ರಕಾಶ್ ಬೆಳವಾಡಿ, ಸರ್ದಾರ್ ಸತ್ಯ, ಲಾವಂತಿ, ಸ್ವಪ್ನಾ, ಅಭಿರಾಮ್ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ನಾವು ನೀನಾಸಂಗೆ ಬಂದಾಗ ದರ್ಶನ್ ಅವರು ಅಲ್ಲಿ ಇದ್ದರು. ನಾವು ನೀನಾಸಂ ಬಿಡುವ ಹೊತ್ತಿನಲ್ಲಿ ನೀನಾಸಂ ಕಿಟ್ಟಿ ಅಲ್ಲಿ ಕಲಿಯುತ್ತಿದ್ದರು. ಪ್ರಕಾಶ್ ಬೆಳವಾಡಿ ಅವರ ನಾಟಕದಲ್ಲಿ ನಾನು ಅಭಿನಯ ಕೂಡ ಮಾಡಿದ್ದೇನೆ. ಹೀಗೆ ಕೆಲವು ಸಮಯದ ನಂತರ ನಾನು ನಿರ್ಮಾಣಕ್ಕೆ ಮುಂದಾದೆ. ಕಿಟ್ಟಿ ಅದ್ಭುತ ಕಥೆ ಬರೆದು ಅದನ್ನು ತೆರೆಯಲ್ಲಿ ಅದ್ಭುತವಾಗಿ ನಿರೂಪಿಸಿದ್ದಾರೆ. ಒಳ್ಳೆಯ ಸಿನಿಮಾ ಮಾಡಿದ ಖುಷಿಯಿದೆ ಎಂದು ನಿರ್ಮಾಪಕಿ ರತ್ನಾ ಶ್ರೀಧರ್ ತಿಳಿಸಿದರು. ಚಿತ್ರಕ್ಕೆ ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ವಿದ್ದು, ನೀನಾಸಂ ಕಿಟ್ಟಿ ಅವರೇ ಸಂಭಾಷಣೆ ರಚಿಸಿದ್ದಾರೆ. ರಮೇಶ್ ಬಾಬು ಛಾಯಾಗ್ರಹಣ, ಕಿರಣ್ ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ರತ್ನಾ ಶ್ರೀಧರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಶಂಖದ ದಂಧೆ ಹಿಂದೆ ಕ್ರೂರತೆ

ಹಣದ ಆಸೆಗೆ ಬಿದ್ದರೆ ಮುಗಿಯಿತು, ನಮ್ಮ ಬದುಕೇ ಮೂರಾಬಟ್ಟೆಯಾಗುತ್ತದೆ, ಹುಟ್ಟಿದ ಮೇಲೆ ಒಂದಲ್ಲಾ ಒಂದು ದಿನ ಸಾಯಲೇಬೇಕು. ಈ ನಡುವೆ ನಮ್ಮ ಜೀವನದಲ್ಲಿ ನಡೆಯುವ ಜಂಟಾಟಗಳನ್ನೆಲ್ಲಾ ಹೇಳುವ ಕಥನವೇ ಎಲ್ಟುಮುತ್ತಾ. ಅದು ಕೊಡಗಿನ ದಟ್ಟಾರಣ್ಯದ ನಡುವೆ ಇರುವ ಊರು. ಎಲ್ಟು ಹಾಗೂ ಮುತ್ತಾ ಬಾಲ್ಯದಿಂದಲೂ ಒಟ್ಟಿಗೆ ಬೆಳೆದವರು, ಒಳ್ಳೆಯ ಸ್ನೇಹಿತರು. ಜೀವನಕ್ಕಾಗಿ ಬೇರೆ ಬೇರೆ ಕಾಯಕದ ಮಾರ್ಗ ಕಂಡುಕೊಂಡಿರುತ್ತಾರೆ. ಸತ್ತವರ ಮನೆಯಲ್ಲಿ ಡೋಲು ಬಡಿಯುವುದು ಎಲ್ಟು ಕಾಯಕವಾದರೆ, ಮುತ್ತಾ ಹೂಮಾರಿ ಜೀವನ ಸಾಗಿಸುವವನು. ಹೀಗೆ ತಾನಾಯಿತು ತನ್ನ ಪಾಡಾಯಿತು ಎಂದು ಜೀವನ ನಡೆಸುತ್ತಿದ್ದ ಮುತ್ತನಿಗೆ ಒಂದು ನದಿಯಲ್ಲಿ ಶಂಖವೊಂದು ಸಿಗುತ್ತದೆ. ಅದು ಪವಾಡದ ಶಂಖ ಎಂದು ತಿಳಿದ ಆತ, ಎಲ್ಟುಗೂ ಹೇಳುತ್ತಾನೆ. ಇದರಿಂದ ಹೆಚ್ಚು ಹಣ ಮಾಡಬಹುದು ಎಂಬ ದುರಾಸೆ ಮೂಡುತ್ತದೆ. ಇದು ಊರಿಗೆಲ್ಲಾ ತಿಳಿಯುತ್ತದೆ. ಮುಂದೆ ಶಂಖಕ್ಕಾಗಿ ಹೋರಾಟ ನಡೆದು ರಕ್ತವೇ ಹರಿಯುತ್ತದೆ. ಅಷ್ಟಕ್ಕೂ ಆ ಶಂಖದ ಹಿಂದೆ ಇರುವ ನಿಗೂಢತೆ ಏನು, ಅದಕ್ಕಾಗಿ ಯಾಕೆ ಎಲ್ಲರೂ ಹೋರಾಡುತ್ತಾರೆ. ಮುಂದೆ ಆ ಶಂಖ ಯಾರಿಗೆ ಧಕ್ಕುತ್ತದೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ನಿರ್ದೇಶಕ ರಾ.ಸೂರ್ಯ ತಾವು ಬಾಲ್ಯದಿಂದಲೂ ಕಂಡು, ಕೇಳಿದ ಘಟನೆಗಳನ್ನೇ ಆಧರಿಸಿ ಈ ಚಿತ್ರದ ಕಥೆ ಹೆಣೆದಿದ್ದು, ಅದನ್ನು ನೈಜತೆಗೆ ಹತ್ತಿರವಾಗುವಂತೆ ತೆರೆಯಲ್ಲಿ ಕಟ್ಟಿಕಟ್ಟಿದ್ದಾರೆ. ದಟ್ಟ ಕಾನನದ ಅಂಚಿನಲ್ಲಿ ಸಾಗುವ ಕಥೆ ಕ್ಷಣಕ್ಕೂ ರೋಚಕ ತಿರುವು ಪಡೆದುಕೊಳ್ಳುತ್ತಾ ಕುತೂಹಲ ಮೂಡಿಸುತ್ತಾ ಸಾಗುತ್ತದೆ. ಸೂರ್ಯ ನಿರ್ದೇಶನದ ಜತೆಗೆ ಎಲ್ಟು ಪಾತ್ರದಲ್ಲಿ ನಟಿಸಿದ್ದು, ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಇನ್ನು ಮುತ್ತನಾಗಿ ಶೌರ್ಯ ಪ್ರತಾಪ್ ಅಬ್ಬರದ ಅಭಿನಯ ತೋರಿದ್ದು, ಇಡೀ ಚಿತ್ರವನ್ನು ಆವರಿಸಿದ್ದಾರೆ. ಪ್ರಿಯಾಂಕಾ ಮಳಲಿ ಹಳ್ಳಿಯ ಹೆಣ್ಣುಮಗಳಾಗಿ ಮನಗೆಲ್ಲುತ್ತಾರೆ. ಉಳಿದಂತೆ ನವೀನ್ ಡಿ ಪಡಿಲ್, ಕಾಕ್ರೋಜ್ ಸುಧಿ ಎಲ್ಲರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಾಡುಗಳ ಮಧುರವಾಗಿ ಮೂಡಿಬಂದಿವೆ. ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಎಲ್ಟುಮುತ್ತಾ ಎಲ್ಲರೂ ಕುಳಿತು ನೋಡಬಹುದಾದ ಸಿನಿಮಾವಾಗಿದೆ.

ಚಿತ್ರ : ಎಲ್ಟುಮುತ್ತಾ
ನಿರ್ದೇಶನ : ರಾ.ಸೂರ್ಯ
ನಿರ್ಮಾಣ : ಸತ್ಯ .ಎಸ್ .ಶ್ರೀನಿವಾಸನ್
ತಾರಾಗಣ : ರಾ.ಸೂರ್ಯ, ಶೌರ್ಯ ಪ್ರತಾಪ್, ಪ್ರಿಯಾಂಕಾ, ನವೀನ್ ಪಡಿಲು, ಬೇಬಿ ಪ್ರಿಯಾ ಮುಂತಾದವರು.
ರೇಟಿಂಗ್ : ★★★